UNIVERSAL
LIBRARY

OU_200296

UNIVERSAL
LIBRARY

ಸತೀಹಿತೈಷಿಣೀ ಗ್ರಂಥಮಾಲಾ ಸಂಖ್ಯೆ ೪.

# ವಿರಾಗಿಣಿ

( ನಭಾ ಭಾಗ II. )

ನಂಜನಗೂಡು

" ಸತೀಹಿತೈಷಿಣಿ " ಮುದ್ರಾಮಂದಿರದಲ್ಲಿ

ಪ್ರಕಟಿತವಾದುದು.

ದ್ವಿತೀಯ ಮುದ್ರಣ ೧,೦೦೦ ಪ್ರತಿಗಳು.

(ಇದರ ಸರ್ವ ಸ್ವಾತಂತ್ರ್ಯವೂ ಸಂಪಾದಿಕೆಯರದಾಗಿರುವುದು.)

ಬೆಲೆ ೧-೮-೦.

# IRAGINI

## (Nabha Part II)

PUBLISHED BY

TIRUMALAMBA

AT THE

SATHI HITAISHINI MATRU MANDIRAM

NANJANGUD.

1923.

PRINTED AT

THE CAXTON PRESS, CHAMARAJPET, BANGALORE.

*(All Rights Reserved)*

ಶ್ರೀಃ.

# ಸಮರ್ಪಣೆ.

ಸರ್ವಸ್ಯ ಲೋಕಸ್ಯ ಸಮಾಹಿತಾನಾಂ |
ಪ್ರದಾನದೀಕ್ಷಾ ವಶತ ಸ್ಸದೈವ ||
ಶ್ರಿಯಾಸಮೇತಂ ಶ್ರಿತದೋಷ ಹಂತ್ರಾ
ಲಕ್ಷ್ಮೀನೃಸಿಂಹಂ ಶರಣಂ ಪ್ರಪದ್ಯೇ ||



ಯಶ್ಶ್ರೀನಿವಾಸಾಖ್ಯ ಮುನೀಂದ್ರ ತೋಮಾಂ|
ಸಮ್ಪ್ರಾಪ್ತ ವೇದಾಂತಯುಗಂ ವ್ಯತಾನೀತ್ ||
ತ್ವದರ್ಪಿತಸ್ಸ್ವೀಕೃತ ಮದ್ಭರಂತಂ |
ಲಕ್ಷ್ಮೀನೃಸಿಂಹಂ ಶರಣಂಪ್ರಪದ್ಯೇ ||

# ಹಿತೈಷಿಣೀ ಸಂದೇಶ.

ಆರ್ಯಭಗಿನಿಯರೇ ! ಆಪದ್ಬಾಂಧವರೇ !!

" ತಾವದ್ಭಯಸ್ಸಭೇತವ್ಯಂ ಯಾವದ್ಭಯಮನಾಗತಂ ।
ಆಗತಂತು ಭಯಂಜ್ಞಾತ್ವಾ ಪ್ರತಿಕುರ್ಯಾದ್ಯಥೋಚಿತಂ ॥ "

(ಎಂದಿನವರೆಗೆ ಭಯವು ಬಾರದಿರುವುದೋ ಅಂದಿನವರೆಗೆ ಭಯ ಪಡಬೇಕು ; ಭಯವು ಬಂದೊದಗಿದಾಗ ಅದನ್ನು ಉಚಿತರೀತಿಯಲ್ಲಿ ನಿವಾರಿಸಬೇಕು ) ಇದೇ ಮಾನವನ ಇತಿ ಕರ್ತವ್ಯ ನಿರೂಪಣವು.

ಸಾಮಾನ್ಯವಾಗಿ, ಮಾನವನು ತನ್ನ ದೇಹವನ್ನು ಇತರ ರೋಗಾದ್ಯುಪದ್ರವಗಳು ಮುಟ್ಟದಿರಬೇಕೆಂದು ಬಯಸುವಂತೆಯೇ ಶೀಲಕ್ಕೆ ಕೊರತೆ ಬಾರದಂತೆ ಯೋಚಿಸುವುದೂ ಸಹಜವಾಗಿದೆ. ಬಂದುವೇಳೆ ಮೀರಿಬರುವ ಕೇಡುಗಳನ್ನೂ ಉಚಿತಮಾರ್ಗದಲ್ಲಿ ತಡೆದು, ದೂರಕ್ಕೆ ಅಟ್ಟಬೇಕೆಂಬ ವಿಚಾರದಲ್ಲಿ ಹಿಂದೆಗೆಯಬಾರದೆಂಬುದೂ ಯುಕ್ತವೇ ಆಗಿದೆ. ಈ ಸೂತ್ರವನ್ನೇ ಅನುಸರಿಸಿ ಸರ್ವದಾ ಜಾಗರೂಕರಾಗಿ ನಡೆಯುತ್ತಿದ್ದುದರಿಂದಲೇ ನಮ್ಮ ಆರ್ಯ ಮಹನೀಯರ ಕೀರ್ತಿಚಂದ್ರಿಕೆ ಈಗಲೂ ಬಗೆಗೊಳ್ಳುತ್ತಿರುವುದು! ಆದರೂ, ಪ್ರಕೃತಸ್ಥಿತಿಯನ್ನು ಕುರಿತು ಹೇಳಬೇಕಾಗಿರುವುದೇನೆಂದರೆ,—ದುರಿತ ಭೀತಿಯೇ ಮಹತ್ತರವಾದ ಭಯವು; ಆ ಭಯವು ತಮ್ಮನ್ನು ಸೇರಗೊಡಬಾರದೆಂಬುದೇ ಇದರ ಮೂಲ ತತ್ತ್ವವು.

ಹಾಗೂ ಒಂದುವೇಳೆ ಕಾರಣಾಂತರಗಳಿಂದ ದುರಿತಭೀತಿ ತಲೆದೋರಿದರೂ,—“ವಿಷಮಸನ್ನಿಪಾತರೋಗವು ತಲೆದೋರಿತೆಂದು ತಿಳಿದಕೂಡಲೇ ಅದನ್ನು ತಕ್ಕ ಚಿಕಿತ್ಸೆಗಳಿಂದ ಮೂಲೋತ್ಪಾಟನ ಮಾಡಬೇಕೆಂದು ಹೇಳುವಂತೆಯೇ ಧರ್ಮಲೋಪಕ್ಕೆ ದಾರಿಯನ್ನುಂಟುಮಾಡುವ ದುರಿತಭೀತಿ ರೋಗವನ್ನೂ ದೂರ ತೊಲಗಿಸಬೇಕಾದುದೇ ಮಾನವನ ಕರ್ತವ್ಯವು. ಈ ದುರಿತಭೀತಿಯೆಂಬುದೇ ಅಂತಸ್ತಾಪದ ಮೂಲವು. ಇಂತಹ ಅಂತಸ್ತಾಪಕ್ಕೆ ಹೇತುವಾಗಿರುವ ದುರಾಶೆಯೇ ಮೊದಲಾದ ದುಷ್ಟರೋಗಗಳನ್ನು ದೂರ ಸಾಗಿಸಬೇಕೆಂಬುದೇ ಸಮಸ್ತ ಪ್ರಾಣಿಗಳ ಸ್ವೀಯತತ್ವವು.

ಸ್ತುತ್ಯರ್ಹವಾದ ಈ ಕರ್ತವ್ಯಜ್ಞಾನವು ಸ್ತ್ರೀಯರಲ್ಲಿ ಬಹು ಭದ್ರವಾಗಿರಬೇಕು. ಹೀಗೆ ಅವರ ಹೃದಯದಲ್ಲಿ ಭದ್ರಪಡಿಸಲ್ಪಟ್ಟ ಕರ್ತವ್ಯಜ್ಞಾನದಲ್ಲಿಯೇ ಸುಖವೂ ನೆಲೆಗೊಂಡಿರುವುದು. ಇಂತಹ ಸುಖದಾಯಕ ಪಾತ್ರವನ್ನು ಹೊಂದುವುದರಿಂದಲೇ ಅವರ ಪತಿರಾಜರೂ ಚಿರಸುಖಿಗಳಾಗುವರು. ಅಂತು ಸುಖಸಂತೋಷಗಳಿಂದೊಡಗೂಡಿರುವ ಸತಿಪತಿಯರಿಂದ ಅವರ ಸಂತಾನಕ್ಕೆ ಕೂಡ ನಿತ್ಯಾನಂದವೇ ಉಂಟಾಗುವುದೆಂದು ಹೇಳಲು ಯಾವ ತಡೆಯೂ ಇರಲಾರದು.

ಆದರೆ, ಮೇಲೆ ಹೇಳಲ್ಪಟ್ಟಿರುವ ಭಯವು, ಸ್ತ್ರೀಯರಲ್ಲಿ ವಿಶೇಷವಾಗಿರುವುದೆಂದು ಹೇಳಬೇಕಾಗಿರುವುದು. ಅವರನ್ನು ಅಂತಸ್ತಾಪಕ್ಕೆ ಗುರಿಮಾಡುವ ವಿಚಾರಗಳು ಹಲವು ಬಗೆಯಾಗಿವೆ. ಅವುಗಳಲ್ಲಿಯೂ, ಶೀಲವನ್ನು ಕೆಡಿಸಬರುವ ದುರಾಶೆಯೇ ಮುಂದಾಗಿ ನಿಂದಿರುವುದು. ಈ ದುರಾಶಾ ಪಿಶಾಚಕ್ಕೆ ತಮ್ಮಲ್ಲಿ ಅವಕಾಶವನ್ನು ಕೊಡದಿರುವಂತೆ ಜಾಗರೂಕರಾಗಿರಬೇಕಾದರೆ ಅವರಲ್ಲಿ

ಕರ್ತವ್ಯಜ್ಞಾನವು ಚೆನ್ನಾಗಿ ಬೇರೂರಿರಬೇಕು. ಕರ್ತವ್ಯಜ್ಞಾನವು ದೃಢಮೂಲವಾಯಿತೆಂದರೆ ಮತ್ತಾವ ಬಾಧೆಗಳಿಗೂ ಅವರಲ್ಲಿ ಸ್ಥಳವು ದೊರೆಯದು. ಒಂದುವೇಳೆ ಬಹು ಪ್ರಯಾಸದಿಂದ ಸ್ಥಾನವನ್ನಾಕ್ರಮಿಸಬೇಕೆಂದು ಬರುವುದೆಂದರೂ, ಆ ದುರಾಶಾ ಪಿಶಾಚಕ್ಕೆ ಹಾನಿಯೂ ಮುಂದಿರುವುದೆಂದೇ ತಿಳಿಯಬೇಕು!

ಕರ್ತವ್ಯಜ್ಞಾನವೇ ಇಲ್ಲದೆಡೆಯಲ್ಲಿ, ಈ ಪಿಶಾಚವು ತನ್ನ ದೌಷ್ಟ್ಯವನ್ನು ಪ್ರದರ್ಶಿಸಿ, ತನ್ನ ಆಕ್ರಮಣಕ್ಕೊಳಪಟ್ಟುದನ್ನು ನಾಶಮಾಡದೆ ಬಿಡದೆಂದು ಹೇಳಲು ಸಂದೇಹವಿಲ್ಲ! ಹಾಗೂ ಈ ಭಯವು ಅನಾಥೆಯರನ್ನು ಶತಸಹಸ್ರರೂಪಗಳಿಂದ ಮುತ್ತಿರುವುದೆಂಬುದನ್ನು ನಮ್ಮ ಕಣ್ಣಮುಂದೆ ಕಾಣುತ್ತಿರುವ ಆ ದೀನ ವಿತಂತುವರ್ಗದವರ ಪರಿತಾಪಸ್ಥಿತಿಯೇ ಹೇಳುತ್ತಿರುವುದಲ್ಲವೆ?

ಆ ನಮ್ಮ ದೀನಸೋದರಿಯರು ತಮ್ಮತಮ್ಮ ಪತಿರಾಜರನ್ನು ಕಳೆದುಕೊಂಡಾಗಲೇ ಸಾರವಿಲ್ಲದ ಸಿಪ್ಪೆಯಂತೆ ನಿಸ್ತೇಜರಾಗಿ ಹೋಗುವುದು ವಿದಿತವಾಗಿದೆಯಷ್ಟೆ? ತಮ್ಮ ಸುಖಭೋಗ ಸಂಪದಾದಿ ಸಮಸ್ತವೂ ಆರಲ್ಲಿ ನೆಲೆಗೊಂಡಿರತಕ್ಕುದೋ, ಆರಿಂದ ಅದರ ಉತ್ಕೃಷ್ಟ ಫಲಾನುಭವವನ್ನು ಹೊಂದಬೇಕಾಗಿದ್ದುದೋ, ಅವರೇ, ಆ ತಮ್ಮ ಜೀವಾನಂದಪ್ರದರೇ ಅದೃಶ್ಯರಾದರೆಂದರೆ, ಉಳಿದುವೆಲ್ಲವೂ ಅವರೊಡನೆಯೇ ಅಂತರ್ಹಿತವಾದಂತಲ್ಲವೆ? ಅವರನ್ನು ಳಿದ ಬಳಿಕ ಇವರಿಗುಳಿದಿರುವ ಸಂತೋಷವಿನ್ನಾವುದು? ಆವುದರಿಂದ ಇವರ ಆತ್ಮಕ್ಕೆ ಸಂತೋಷವುಂಟಾಗುವುದು? ಮುಖ್ಯ ಚೈತನ್ಯವೇ ಕುಂದಿತೆಂದರೆ ಇವರಿಗೆ ಉತ್ಸಾಹಶಕ್ತಿಗಾದರೂ ಅವಕಾಶವೆಲ್ಲಿ? ನೈಜಸುಖಪ್ರಾಪ್ತಿ ಸ್ಥಾನವೆಲ್ಲಿ? ಹೇಳಲಾದೀತೆ? ಅಂತಹರ ಸಂತಾಪವು ಕಟುಕರ ಕಲ್ಲೆದೆಯನ್ನಾದರೂ ಕರಗಿಸುವುದೆಂದರೆ ಅತ್ಯುಕ್ತಿಯಾಗದು! ಅವರನ್ನು ಸುತ್ತಿಮುತ್ತಿ ಕಾಡುವ

ಕಾಡುವ ಸಂಕಟಗಳೂ ಬಂದೆರಡಲ್ಲ! ಎಣಿಸಿ, ಗುಣಿಸಿ ಹೇಳ ತೀರದ ಅಪಾರವಾದ ಸಂಕಟಗಳು ಅವರ ಸುತ್ತಮುತ್ತಲಿರುವುವು.

ಅವರ ರೂಪವೆಷ್ಟು ಸುಸ್ವರೂಪವಾಗಿದ್ದರೂ ಪತಿವಿಯೋಗ ವಾಯ್ತೆಂದರೆ ಸಾಕು; ವಿರೂಪವಾಗುವುದು, ಅಲಂಕಾರಾದಿಗ ಳಿಂದ ಅಧಿಕವಾಗಿ ಶೋಭಿಸುತ್ತಿದ್ದ ಕಮನೀಯಾಂಗವೂ, ಮಲಿನ ವಸ್ತ್ರಾಚ್ಛಾದನೆಯಿಂದ ಮರೆಯಿಸಬೇಕಾಗುವುದು. ಮನೋಲ್ಲಾಸ ಕರಗಳಾದ ಮತ್ತೂ ಮಧುರವಾದ ಆಹಾರಗಳೂ ದೂರೀಕೃತ ವಾಗುವುವು. ಅಲ್ಲದೆ ಅವರ ಜನ್ಮದೊಡನೆಯೇ ಹುಟ್ಟಿಬಳೆದ ಕೇಶರಾಶಿಯೂ, ಸ್ಮರಿಸುವುದಕ್ಕೂ ಯೋಗ್ಯವಲ್ಲದ ಹೇಯವಾದ ಹೃದಯವಿದ್ರಾವಕವಾದ ಘೋರಶಿಕ್ಷೆಗೆ ಗುರಿಯಾಗಿ,... ........... ............. ....ಕೈಸೇರಿಹೋಗುವುವು! (ಇದಕ್ಕೂ ಹೆಚ್ಚಾದ ಅಪ ಮಾನವುಂಟೆ?) ಇದಲ್ಲದೆ ಮತ್ತಾವುದುಳಿದಿರುವುದು?

ಭಗವತ್ಕೃಪೆಯಿಂದ ಬಂದ ಜ್ಞಾನಯೋಗಬಲದಿಂದ ಹೃತ್ಕೋಶ ದಲ್ಲೇನಾದರೂ ವಿವೇಕವಂಕುರಿಸಿ, ಅತ್ಯಾಚಾರಕ್ಕೆಡೆಗೊಡದೆ ಪರಿಮಿತಾಚಾರಬಲದಿಂದ ಸತೀಜನ್ಮ ಸಾರ್ಥಕತೆ ಹೊಂದುವೆವೆಂದು ಸಂಕಲ್ಪಿಸಿ, ಹಟತೊಟ್ಟು ನಿಂದರೆಂದರೆ, ಅಂತಹರ ಮೇಲೆ ಬೀಳ ಬರುವ ಗಂಡಾಂತರಗಳು ಅಷ್ಟಿಷ್ಟೆಂದು ಹೇಳಲಾಗದಂತೆ ಅನೇ ಕಾನೇಕ ಭೀಕರ ಸ್ವರೂಪವನ್ನೇ ಹೊಂದಿ ಮುಂದೆ ನಿಲ್ಲುವುವು! ಅವುಗಳೆಲ್ಲಕ್ಕೂ ಮುಂದಾಗಿ ಸತೀತ್ವ ಹರಣಕ್ಕಾಗಿ ನಿಲ್ಲುವ ದುರಾ ಶಯುವನ್ನು ಕುರಿತು ಎಷ್ಟು ಪ್ರಲಾಪಿಸಿದರೂ ಸ್ವಲ್ಪವೇ!! ಆದರೂ, ಸರ್ವಪ್ರಕಾರದಿಂದಲೂ ಸತೀತ್ವವನ್ನು ಸಂರಕ್ಷಿಸಬೇಕೆಂದು ಧೈರ್ಯಸ್ಥೈರ್ಯದಿಂದ ಪ್ರಯತ್ನಪಟ್ಟದಾದರೂ ಅವರಿಗೆ ಆರ ಸಹಾಯಸಂಪತ್ತಿಯೊದಗಬೇಕು? ಅಡಿಗಡಿಗೂ ಎಡೆಬಿಡದೆಡರು ಗಳೇ ತೊಡರುತ್ತಿರುವುವಾದರೆ ಅವರಿಗೆ ಅದೆಂದು ಬಿಡುವಾಗು

ವುದು? ಇತ್ತ, ದುರಾಶಯರ ದುರ್ಬೋಧೆ-ದುರಭಿಸಂಧಿ-ದ್ರೋಹ-ದಯಾಶೂನ್ಯತೆಯೇ ಮೊದಲಾದುವುಗಳ ಮುತ್ತಿಗೆ; ಅತ್ತ ಸಮಾಜ ಶಾಸನದ ಮುಂಡನ-ವಿಕಾಶನ-ಗುಪ್ತಗೃಹನಿವಸನ-ಮಾಲಿನ್ಯಾದಿಗಳ ನಿಷ್ಠುರತೆ! ಇವೆರಡರಲ್ಲಿ ಯಾವುದನ್ನು ಸೇರಬೇಕು? ಯಾವುದರಿಂದ ಪಾರಾಗಬೇಕು? ವಿಚಾರಮಾಡಿ ಹೇಳಲಾರಿರೆ?

ಅಷ್ಟೇ ಅಲ್ಲ, ಆ ನಿರ್ಭಾಗ್ಯೆಯರು ಮುಟ್ಟಿದುದೂ ನೋಡಿದುದೂ ಕೆಟ್ಟುಹೋಗುವುದಂತೆ! ಅವರನ್ನು ನೋಡಿದವರಿಗಂತೂ ನಷ್ಟವೇ ಮುಂದಿರುವುದಂತೆ. (?) ಕಾರ್ಯಗೌರವದಿಂದ ಹೊರ ಹೊರಟ ವೇಳೆಯಲ್ಲಿ ಆ ಅಭಾಗಿನಿಯರ ಮುಖವು ದೃಷ್ಟಿಗೆ ಬಿದ್ದರೆ ಉದ್ದೇಶಕ್ಕೊಳಪಟ್ಟ ಕಾರ್ಯವೇ ಹಾಳಾಗುವುದಂತೆ! ಅದಾವ ಕ್ರೂರಗ್ರಹವೋ? ಆ ನಿರ್ಭಾಗ್ಯೆಯರಲ್ಲಿ ಆವೇಶಿಸಿ, ಈ ಬಗೆಯ ಹಾನಿಯನ್ನುಂಟುಮಾಡುತ್ತಿರುವುದೇಕೊ? ... .ಅದನ್ನಾರೂ ತಿಳಿದು ಹೇಳುವವರೇ ಕಾಣುತ್ತಿಲ್ಲ. ಇಷ್ಟೇ ಅಲ್ಲ; ವಿವಾಹಾದಿ ಶುಭಕಾರ್ಯಸಂಭ್ರಮದಲ್ಲಿ ಇವರು ತಲೆದೋರಿದರೆ ಹೇಳಬೇಕಾದುದೇ ಇಲ್ಲ! ಅವರಿಂದ ವಧೂವರರಿಗೂ, ಮುಖ್ಯ ಪಾತ್ರಗಳಿಗೂ ಹಾನಿತಟ್ಟುವುದೆಂದು ಮುಂತಾಗಿ ಆಡಿಕೊಳ್ಳುವುದೂ, ಅದಕ್ಕೆಂದೇ ಅವರನ್ನು ಹೊರಗೆ ಬಿಡಗೊಡದೆ ನಿರ್ಬಂಧದಲ್ಲಿಡುವುದೂ ಮರುಳಾಟದ ಮೊದಲನೆಯ ಅಂಕವಾಗಿದೆ. ಇಂತಹದರಲ್ಲಿ ಆ ದೀನಭಗಿನಿಯರಿಗೆ ನೆಲೆಯೆಲ್ಲಿ? ಅಡಿಗೆ ಮನೆಯಲ್ಲಿ-ಬಲೆಯ ಮರೆಯಲ್ಲಿ-ಹಿತ್ತಲ ಕೋಣೆಯಲ್ಲಿಯೇ!!!—ಇಂತಿರುವ ಸಮಾಜದಲ್ಲಿ ಅವರು ಕಲಿಯಬೇಕಾಗಿರುವ ಕಲೆಯೇನು? ಕುಶಲತೆಯಾವುದು? ಅನುಭವಜ್ಞರೇ ಹೇಳಿ ಕೇಳಿ ತಿಳಿಯಬೇಕಲ್ಲದೆ ವಿವರಿಸಲು ನಮ್ಮಿಂದ ಸಾಗದು! ಹೇಗೂ ಆ ಅನಾಥೆಯರಿಗೆ "ಕಣ್ಣೀರ್ಗರೆವುದೊಂದೇ ನಿತ್ಯನೈಮಿತ್ತಿಕವೃತ್ತಿ! ಆಪ್ತರಾಗ

ತೋರುವವರ ಮುಂದೆ ಆತ್ಮಸಂತಾಪಗಳಿಗಾಗಿ ಹಲುಬುವುದೇ ಅವರು ಕಲಿಯಬೇಕಾದ ಕಲೆ ! ಆವಕಾಲಕ್ಕೆ ಆವದೂರು ಮೇಲೆ ಬೀಳುವುದೋ ! ಎಂಬ ಭೀತಿಯಿಂದ ಅಂತರಂಗಕ್ಲೇಶಗಳನ್ನು ಅಡಗಿಸಿ ಬಾಹ್ಯರಂಗದಲ್ಲಿ ಸೌಜನ್ಯವನ್ನು ಹೊರಸೂಸುವುದೇ ಅಧ್ಯವಸಾಯ !" ಇಷ್ಟುಮಾತ್ರ ಹೇಳಬಹುದಲ್ಲದೆ, ಉಳಿದುವನ್ನು ಹೇಳಲಳವಲ್ಲ. ಆದರೂ ಶ್ರೀಮಂತರ ಮತ್ತೂ ಇತರ ಸಹಾಯಸಂಪತ್ತಿಯುಳ್ಳವರ ಸುದ್ದಿಯನ್ನು ಬಿಟ್ಟು ದೀನಸೋದರಿಯರ ಪರಿತಾಪಸ್ಥಿತಿಯನ್ನು ಕುರಿತು ಸಂಗ್ರಹವಾಗಿ ಹೇಳುವುದು ನಮಗೆ ಆವಶ್ಯಕವಾಗಿದೆ.

ಪತಿವಿಯೋಗವಾದೊಡನೆಯೇ ಇವರು ಈ ರೀತಿ ಜೀವನ್ಮೃತೆಯರೆನ್ನಿಸುವುದೇಕೆ ? ಅವರಲ್ಲಿ ಜೀವಾತ್ಮ ಪರಮಾತ್ಮರಿಲ್ಲವೆ ? ಅವರನ್ನು ಪಂಚಭೂತಗಳೂ ಬಿಟ್ಟುಹೋಗುವುವೆ ? ಗುಣಗಳೆಲ್ಲವೂ ಅವರ ಪತಿರಾಜರೊಡನೆ ಅವರನ್ನು ಬಿಟ್ಟು ಹೋಗುವುವೆ ? ಅದೇಕೆ ಅವರಿಗೆ ಅಂತಹ ವಿಪದ್ದಶೆ ? ಹೊತ್ತು-ಹೆತ್ತು-ಸಾಕಿ-ಸಲಹಿ-ಪಡುಪಾಟುಪಟ್ಟು ಅವರನ್ನು ದೊಡ್ಡವರನ್ನಾಗಿ ಮಾಡಿದ ತಾಯ್ತಂದೆಗಳೇ ಆ ತಮ್ಮ ಮಕ್ಕಳಮೇಲೆ ತಿರುಗಿಬೀಳುವುದೆಂದರೆ ಮತ್ತಾರು ಆದರಿಸತಕ್ಕವರು ? ಗರ್ಭಕ್ಲೇಶವನ್ನು ಸಹಿಸಿ, ನಿರ್ವಹಿಸಿದ ತಾಯಿಯರೇ ಆ ನಿರ್ಭಾಗ್ಯೆಯರನ್ನು ಸಮಾಜಶಾಸನವೆಂಬ ಅಪಮೃತ್ಯುವಿಗೊಪ್ಪಿಸಿ, ಘೋರಯಾತನೆಗೆ ಗುರಿಪಡಿಸುವಷ್ಟು ನಿರ್ದಯೆಯರಾದರೆ, ಮತ್ತಿನ ಅಕ್ಕ-ತಂಗಿ, ಅಣ್ಣ-ತಮ್ಮ, ಅತ್ತಿಗೆ-ನಾದುನಿ, ಭಾವ-ಮೈದುನ ಮೊದಲಾದವರ ಮನೋವೃತ್ತಿ ಹೇಗಾಗಬಹುದೋ ಹೇಳಲಾದೀತೆ ? ತಂದೆಗಳೇನುಮಾಡಬಲ್ಲರು ? ಪಾಪ ! ಅವರ ಹೃತ್ಕೋಶದಲ್ಲಿ ಯತ್ಕಿಂಚಿತ್ ಪುತ್ರವಾತ್ಸಲ್ಯ ಅಥವಾ ಭೂತದಯೆ ಇದ್ದರೆ ಕೂಡ ಅವರು ಅದನ್ನು ಪ್ರದರ್ಶಿಸುವಷ್ಟರ

ಧೈರ್ಯಸ್ಥೈರ್ಯ ಸಾಹಸಗಳನ್ನು ಎಲ್ಲಿಂದ ಹೇಗೆ ಹೊಂದಬೇಕು? ಮನದಲ್ಲಿಯೇ ಮರುಮರುಗುವುದೊಂದಲ್ಲವೇ ಅವರಿಗುಳಿದುದು? ಹೆತ್ತವರ ಸ್ಥಿತಿಯೇ ಹೀಗಾದಲ್ಲಿ ಅವರ ಶೋಕಕ್ಕೆ ಹೆರವರೇಕೆ ಹೊಣೆಯಾದಾರು? ಒಂದುವೇಳೆ ಅವರ ಶೋಕಸಂಗತಿಯನ್ನು ನೋಡಿ ಸಹಿಸಲಾರದ ದಯಾರ್ದ್ರ ಹೃದಯರೂ, ಧರ್ಮೈಕದೃಕ್ಕುಗಳೂ, ದೇಶವತ್ಸಲರೂ ಆದ ಸುಹೃದರಾರಾದರೂ ಮರುಕದಿಂದ ಮುಂದೆ ಬಂದು, ಆ ದೀನಸೋದರಿಯರಿಗೆ ಉಚಿತರೀತಿಯಿಂದ ಉತ್ತೇಜನವನ್ನು ಕಲ್ಪಿಸಿ, ಸಾರಾಸಾರ ವಿವೇಚನೆಯಿಂದ ಅವರಲ್ಲಿ ಜ್ಞಾನಯೋಗಶಕ್ತಿಯನ್ನುಂಟುಮಾಡಿ, ಅದರಿಂದ ಅವರು ಆತ್ಮಾವಲಂಬಿನಿಯರಾಗಿ ಸುಖಿಸಲೆಂದು ಪ್ರಯತ್ನಪಟ್ಟುದಾದರೆ, ಆ ನಮ್ಮ ಸನ್ಮಾನಿತ ಭ್ರಾತೃಗಳಿಗುಂಟಾಗುವ ಪ್ರತಿಫಲವಾದರೂ, ವ್ಯಕ್ತಿ ತಾರತಮ್ಯಜ್ಞಾನವಿಲ್ಲದ-ಪ್ರಕೃತಿಸ್ಥಿತಿಸ್ವಭಾವ ಪರ್ಯಾಲೋಚನೆಯಿಲ್ಲದ-ಕಲುಷದೃಷ್ಟಿಗಳ ಮಿಥ್ಯಾಪವಾದದ ವಜ್ರಪಾತವೇ ಆಗಿರುವುದು! ಇತ್ತ ದುರಾಚಾರರ ಮುತ್ತಿಗೆ; ಅತ್ತ ವಾಜ್ಮಾತ್ರದ ಪ್ರಾಚೀನ ಸಮಾಜಶಾಸನವೆಂಬ ಮಿಥ್ಯಾಚಾರದ ನಿಷ್ಠುರತೆ; ಇವೆರಡರಲ್ಲಿ ಆವುದರಿಂದ ಆತ್ಮಕ್ಕೆ ಶಾಂತಿಯುಂಟು?—ಎಂಬ ವಿಚಾರವು ನಮ್ಮವರ ಚಿತ್ತದಲ್ಲಿ ಹುಟ್ಟುವುದು ಸಹಜವಾಗಿದೆ. ಅದನ್ನು ಚೆನ್ನಾಗಿ ವಿಮರ್ಶಿಸಿ, ಸಾಧಕ ಬಾಧಕಗಳನ್ನು ಸಮಾಲೋಚಿಸಿ, ನೈಜಸುಖಪ್ರಾಪ್ತಿ ಸ್ಥಾನವನ್ನೂ, ತತ್ಪ್ರಾಪ್ತ್ಯುಪಾಯವನ್ನೂ ಕಂಡುಹಿಡಿಯಬೇಕಾದುದು ನಮಗೆ ಮುಖ್ಯ ಕರ್ತವ್ಯವಾಗಿದೆ. ಆದರೆ, ಅಷ್ಟರ ವಿವೇಚನೆ ಇತಿಕರ್ತವ್ಯದಲ್ಲಿಯೇ ನೆಲೆಗೊಂಡಿರುವುದೆಂದು ಮತ್ತೆ ಹೇಳಬೇಕಾದುದಿಲ್ಲ. ಸದ್ಯಸ್ಸ್ಥಿತಿಯಲ್ಲಿ ಕರ್ತವ್ಯಜ್ಞಾನವೆಂಬುದು ಕೇವಲ ಸೂಕ್ಷ್ಮರೂಪದಲ್ಲಿರುವುದರಿಂದ ವರ್ತಮಾನಕಾಲದ ನಾಸ್ತಿಕವಾದಕ್ಕೂ ಅತ್ಯಾಚಾರದ

ಭ್ರೂಣಹತ್ಯಾದಿ ಆತ್ಮಘಾತಕ ಕ್ರಿಯೆಗಳಿಗೂ ಆಸ್ಪದವುಂಟಾಗಿ ಆಲಸ್ಯ-ಉದಾಸೀನ-ಅಸೂಯಾದಿ ಕ್ಲೇಶಗಳು ಹೆಚ್ಚಿ, ನಮ್ಮಿ ದೇಶಮಾತೆಯನ್ನು ಈರೀತಿ ಕ್ಷೀಣದಶೆಗೆ ತಂದಿರುವುದೆಂಬುದನ್ನು ಕುರಿತು ಎಷ್ಟೆಷ್ಟು ಬಗೆಯಿಂದ ಹೇಳಿದರೂ ತೀರದುದಾಗಿದೆ. ಇನ್ನಾದರೂ ಅವರವರೇ ತಿಳಿದೆಚ್ಚತ್ತು ಜಡತಾಕ್ಲೇಶಗಳ ಸಂಕಲೆ ಗಳನ್ನು ಕಡಿದೀಡಾಡಿ, ವಿವೇಕ-ಧೈರ್ಯ-ಸ್ಥೈರ್ಯ-ಸಾಹ ಸಾದಿ ಸಾಧನಗಳಿಂದ ಆತ್ಮಾನಂದ ಸಾಮ್ರಾಜ್ಯವನ್ನು ಕೈಗೊಳ್ಳು ವಂತಾದರೆ ಅಂದಲ್ಲವೇ ನಮ್ಮ ಪ್ರಿಯಮಾತೆಯು ಸುಸ್ವರೂಪವು ಮತ್ತೆ ಬಗೆಗೊಳ್ಳುವಂತಾಗುವುದು ?

ಪ್ರಿಯಸೋದರಿಯರೇ !

ಈವರೆಗೂ ವಿವರಿಸಲ್ಪಟ್ಟ ಭೀತಿಸ್ವರೂಪವಿಚಾರವು ಕೇವಲ ಊಹೆಯಿಂದಲೇ ಹೇಳಿದುದೆಂದು ತಿಳಿಯಬಾರದು ಅನುಭವ ಭಾಂಡಾಗಾರದ ಕೆಲಕೆಲವು ಅಂಶಗಳನ್ನೇ ತೆಗೆದು ಮುಂದಿಟ್ಟಿರುವು ದೆಂದು ತಿಳಿಯಬೇಕು ?

ಸ್ತ್ರೀಜನ್ಮಧಾರಣೆಯಿಂದ, ವೈಧವ್ಯಾನುಭವದಲ್ಲಿ ಪದಾ ರ್ಪಣಮಾಡಿದುದರಿಂದ-ಹಾಗೂ, ವಿಚಾರವಿಮರ್ಶೆಗೆಂದು ನಿಂತುದ ರಿಂದ ಸ್ತ್ರೀವರ್ಗದಲ್ಲಿ-ಅಭಾಗಿನಿಯರನ್ನು ಪ್ರತಿಭಟಿಸುತ್ತಿರುವ ಭೀತಿಸ್ವರೂಪವನ್ನು ಚೆನ್ನಾಗಿ ಅನುಭವಕ್ಕೆ ತಗೆದುಕೊಳ್ಳುವಂ ತಾಯ್ತು. ದೇಶಸೇವಾವ್ರತದಲ್ಲಿ ಹಾಗೂ ಭಗಿನೀಸಮ್ಮೇಳನ ದಲ್ಲಿ, ತೊಡಗಿದುದರಿಂದ ಪುರುಷಪ್ರಯತ್ನವನ್ನು ಸುತ್ತಿರುವ ಭೀತಿಯ ಭಿನ್ನಭಿನ್ನ ವಿಷಯಗಳನ್ನೂ ತಿಳಿದುಕೊಳ್ಳುವಂತಾಯ್ತು ! ಇದೂಅಲ್ಲದೆ, ಸೋದರೀಸೋದರರಲ್ಲಿ ಪರಸ್ಪರೈಕಮತ್ಯವು ನೆಲೆ ಗೊಳ್ಳುವುದಕ್ಕೆ ಅನುಕೂಲಿಸಬೇಕೆಂದು ಈಬಗೆಯಾಗಿ ಗ್ರಂಥ ಮಾಲಾಪ್ರಕಾಶಕಕಾರ್ಯವನ್ನು ಕೈಕೊಂಡುದರಿಂದ ಪತ್ರಚಾಲಕ

ರನ್ನು ಎಡೆಬಿಡದೆ ಕಾಡುವ ಕ್ಲೇಶಗಳನ್ನೂ ಮನನಮಾಡಿಕೊ ಳ್ಳುವಂತಾಯ್ತು! ಈರೀತಿಯಾದ ಅನುಭವಗಳಿಂದ ಈ ಲೇಖಿ ನಿಯ ಕೃಷಿಯೂ ಹೆಚ್ಚುವಂತಾಗಿರುವುದು.

ಆದಿಯಲ್ಲಿ ಪತ್ರಚಾಲನ ವೃತ್ತಿಯನ್ನು ಪುರುಷರೇ ವಹಿಸಿ ದ್ದರೂ, ನಮ್ಮ ಸೋದರೀ ಸಮ್ಮೇಳನಕಾರ್ಯಕ್ಕೆ ಅದು ಪೂರ್ಣ ಫಲಪ್ರದವಾಗುವುದಿಲ್ಲವೆಂದು ತಿಳಿದು, ಅದನ್ನೂ ಸ್ವಂತವಾಗಿ ನಡೆ ಯಿಸಲು ನಿಶ್ಚಯಿಸಿ ನಿಂತಿರುವುದು. ಇದಕ್ಕಾಗಿ "ಶಕ್ತಿಗೆ ಮೀರಿ ಪ್ರಯತ್ನಿಸಬಾರದು ;—ಅಬಲಾವರ್ಗವು ಅಧಿಕಸಾಹಸದಲ್ಲಿ ಪ್ರವ ರ್ತಿಸಲಾಗದು." ಎಂದು ಯುಕ್ತಿಯುಕ್ತವಾಗಿ ಕೆಲವರಾಡಿ ತಡೆ ದರು ಮತ್ತೆ ಕೆಲವು ವಿನೋದಪರರು, ದ್ವಿತೀಯಗ್ರಂಥವು ವಿಳಂಬವಾದುದಕ್ಕೆ ನಲಿದು, "ನೀವೇನು ಆರಂಭಶೂರರೋ? ಪ್ರತಾಪರುದ್ರರೊ?" ಎಂದು ಹಲವುಬಗೆಯಾಗಿ ಹಂಗಿಸಿದರು. ಆದರೂ ಅವೆಲ್ಲವನ್ನೂ ಜ್ಞಾಪಕದಲ್ಲಿಟ್ಟು,—"ಮಹತಾಚ ಪ್ರಯ ತ್ನೇನ ಸ್ಥೈರ್ಯೇಣ ಗುರುಸೇವಯಾ ॥ ಭಜನೇನಮಹೇಶಸ್ಯ ಕಾರ್ಯಂಸಾಧಯನಾನ್ಯಥಾ ॥" ಎಂಬ ಭಗವದ್ವಾಕ್ಯವನ್ನೇ ನೆರೆ ನಂಬಿ, ಉದ್ದೇಶಿಸಿದ ಕಾರ್ಯವನ್ನು ಮುಂಬರಿಸಲು ನಿಶ್ಚಯಿ ಸಿತು ;—ಪ್ರಯತ್ನಕ್ಕೆ ತಕ್ಕಂತೆ ಗುರ್ವನುಗ್ರಹ, ಭಗವತ್ಕೃಪೆ ಗಳೂ ಸಹಾಯವಾಗಿದ್ದು, ಬಂದಬಂದ ವಿಘ್ನಪರಂಪರೆಯನ್ನು ಹಿಂದಟ್ಟಿ, ಮುಂದಕ್ಕಡಿಯಿಡುತ್ತಿರುವುದು. ಇದಕ್ಕನುಸಾರವಾಗಿ— "ತಾವದ್ಭಯಸ್ಯಭೇತವ್ಯಂ... ...................ಪ್ರತಿಕುರ್ಯಾದ್ಯಥೋ ಚಿತಂ" ಎಂಬ ಇತಿ ಕರ್ತವ್ಯವು ಕೂಡ, ಸುಹೃದ್ಭಾತೃಗಳ ಹಿತಾಹಿತಸೂಚನಾಪ್ರೋತ್ಸಾಹಗಳಿಂದ ಜಾಗ್ರತವಾಗುತ್ತಿರುವುದು. ಇವುಗಳ ಬಲವತ್ಸಹಾಯಸಂಪತ್ತಿಯಿಂದಲೇ, ಮೊದಲು ಮೊದಲು,

ನಮ್ಮ ವಿಚಾರವಾಗಿ, ಅಲ್ಲದ ಸಲ್ಲದ ಮಿಥ್ಯಾರೋಪಗಳನ್ನಾರೋಪಿಸಿ, ತಮ್ಮ ಮನಸ್ಸು, ನಾಲಗೆ, ಲೇಖನಿಗಳನ್ನು ಸಾರ್ಥಕವಾಗುವಂತೆ ಮಾಡಿಕೊಳ್ಳುವೆವೆಂದೆಣಿಸಿಕೊಂಡಿದ್ದ ಅನಾಮಧೇಯರ, ದುರಭಿಸಂಧಿಯೂ ಮುರಿಯಲ್ಪಟ್ಟಿತು. ವಿರಾಗಿಣೀ ಚರಿತ್ರಪ್ರಕಾಶದಿಂದ ಅಭಾಗಿನಿಯರ ಅನುಕಂಪಸ್ಥಿತಿಗತಿಗಳು ಸ್ವಲ್ಪಕ್ಕೆ ಸ್ವಲ್ಪವಾದರೂ, ನಮ್ಮವರಿಗೆ ಹೃದಯಂಗಮವಾಗುವಂತೆ ಮಾಡಲ್ಪಟ್ಟಿತು, ಇನ್ನು—

"ಹೊಗಳಲಿ, ತೆಗಳಲಿ; ಹಳಿಯಲಿ. ಹೇಗಾದರೂ ಹಿಡಿದ ಕೆಲಸವನ್ನು ಬಿಡುವುದೂ, ನಾಸ್ತಿಕವಾದಿಗಳ ಬೆಣ್ಣುಡಿಗಳಿಗೆ ಮರುಳಾಗುವುದೂ ಸ್ತ್ರೀಯರ ನಿಸರ್ಗವ್ರತಕ್ಕೆ ಎಷ್ಟುಮಾತ್ರವೂ ತಕ್ಕುದಲ್ಲವೆಂದು ಸಾರಿಸಾರಿ ಬೇಡುವುದೊಂದೇ ಈಗ ನಮಗುಳಿದಿರುವುದು! ಈ ನಮ್ಮ ಮೊರೆಯನ್ನು ಕೇಳಿ, ಆ ನಮ್ಮ ಭಗಿನಿಯರು ಕರ್ತವ್ಯದಲ್ಲಿ ಎಚ್ಚರವನ್ನು ತಾಳಿ, ತಮ್ಮ ದೀನಸೋದರೀವರ್ಗಕ್ಕೆ ಧೈರ್ಯವನ್ನು ಹೇಳಿ, ಐಕಮತ್ಯಬಲದಿಂದ ಮಾತೃಜೀರ್ಣೋದ್ಧಾರವ್ರತದಲ್ಲಿ ಬದ್ಧಾದರರಾಗಿ ನಿಂತು, ಬಗೆಗೊಳ್ಳುವಂತೆ ಮಾಡೆಂದು ಭಗವತೀಮಾತೃದೈವವನ್ನೇ ಬೇಡುತ್ತಿರುವೆವು. ಮತ್ತು,

## (ಕೃತಜ್ಞತೆ.)

ಈವರಗೆ ನಮ್ಮೀಮಾಲೆಯ ೧-೨-೩ನೇ ಗ್ರಂಥಗಳಿಗೆ ಉದಾರಾಶ್ರಯವನ್ನು ಕಲ್ಪಿಸಿಕೊಟ್ಟು ಪ್ರೋತ್ಸಾಹಿಸುತ್ತ ಬಂದಿರುವ ನಮ್ಮ ಧರ್ಮಪ್ರಭು ಸರ್ಕಾರದವರ ಮತ್ತು ವಿದ್ಯಾಂಗದವರ ದಯಾವಿಶೇಷದಿಂದ ಮಾಲೆಯ ೧-೨ನೆ ಪುಸ್ತಕಗಳು ಈಗಾಗಲೇ ಪುನ

ವರ್ಮುದ್ರಣಕ್ಕೂ ಹೊರಡುವಂತಾಗಿರುವುದೆಂದು ಹೇಳಲು ಸಂತೋಷವುಂಟಾಗಿದೆಯಲ್ಲದೆ, ಇನ್ನು ಮುಂದೆಯೂ, ಹೀಗೆಯೇ ಸರ್ವಪ್ರಕಾರದಿಂದ ಸಹಕರಿಸಲುಳ್ಳ ಧರ್ಮಪ್ರಭು ಸರ್ಕಾರಕ್ಕೂ ಪ್ರಜಾಕೋಟಿಗೂ, ಉತ್ತರೋತ್ತರಾಭಿವೃದ್ಧಿಯನ್ನು ಅನುಗ್ರಹಿಸುತ್ತಿರಬೇಕೆಂದು ಅನನ್ಯಭಕ್ತಿಭಾವದಿಂದ ಜಗಜ್ಜನನೀ ಜನಕರಲ್ಲೇ ಮೊರೆಯಿಡುತ್ತಿರುವೆನು.

ನಂಜನಗೂಡು,<br>24-10-1922.

ಇತಿ ಹಿತೈಷಿಣಿ.

# ಉ ಪೋ ದ್ಘಾ ತ

ಸುಹೃತ್ಸೋದರಿಯರೇ ! ಸದ್ಧರ್ಮಸೋದರರೇ !!

"ಉದಯತಿ ಯದಿಭಾನುಃ ಪಶ್ಚಿಮೇ ದಿಗ್ವಿಭಾಗೇ | ಪ್ರಚಲತಿ ಯದಿಮೇರುಃ ಶೀತತಾಂ ಯಾತಿವಹ್ನಿಃ || ವಿಕಸತಿ ಯದಿಪದ್ಮಂ ಪರ್ವತಾಗ್ರೇ ಶಿಲಾಯಾಂ | ನಭವತಿ ಪುನರುಕ್ತಂ ಭಾಷಿತಂ ಸಜ್ಜನಾನಾಂ ||" ಎಂಬ ಧರ್ಮೋಪದೇಶವು ಪ್ರತಿಮಾನವರಿಗೂ ಧ್ಯೇಯವಾದುದಲ್ಲವೆ? ಏಕೆಂದರೆ, ಸೂರ್ಯನು, ಪಶ್ಚಿಮದಿಕ್ಕಿನಲ್ಲಿ ಉದಯಿಸಿದರೂ,—ಮೇರುಪರ್ವತವು ಚದರಿದರೂ, ಅಗ್ನಿ, ಶೀತಲವಾಗಿ ತೋರಿದರೂ,–ಗಿರಿಶಿಖರದ ಶಿಲೆಯಲ್ಲಿ ಪದ್ಮವು ವಿಕಸಿತವಾದರೂ,–ಸಜ್ಜನರ ವಚನವೆಂದೂ ಬೇರೆಯಾಗುವುದಿಲ್ಲ. (ಅವರ ಬಾಯಿಂದ ಹೊರಬಿದ್ದನುಡಿ ಎಂದಿಗೂ ತಪ್ಪದು.)

ಆದುದರಿಂದೆಯೇ ಲೋಕಾದರ್ಶ ನಾರೀಮಣಿಯಾದ ಸಾವಿತ್ರಿ ಇದೊಂದೇ ಸೂತ್ರವನ್ನು ಹಿಡಿದು, ಸಾಕ್ಷಾತ್ ಕಾಲಪುರುಷನನ್ನು ಜಯಿಸಿ, ಪತಿಭಾಗ್ಯವನ್ನು ಮತ್ತೆ ಪಡೆದಳು ! ಕಾಲನಾದರೂ,—"ಶತಪುತ್ರರು ನಿನಗುದಿಸುವರು" ಎಂದಿಂತು ಒಮ್ಮೆ ತಾನಾಡಿದ ನುಡಿಯನ್ನು ನಿಜವಾದುದನ್ನಾಗಿ ಮಾಡುವುದಕ್ಕೂ,—"ಸತ್ಯವೂ ತಪೋನಿಷ್ಠೆಯೂ ನನ್ನಲ್ಲಿದ್ದರೆ, ನನ್ನ ಸ್ವಾಮಿಯನ್ನು ಹೊಂದಲುಳ್ಳ ನನ್ನ ದಾರಿಗೆ ತಡೆಯಿಲ್ಲ" ವೆಂದಾಡಿದ ಸಾವಿತ್ರಿಯ ಸತ್ಯಪಾಶವನ್ನು ಮೀರಲಾರದಿದ್ದುದಕ್ಕೂ, ಶೀಲ-ಸತ್ಯಗಳ ಪ್ರಭಾ

ವವನ್ನು ಪ್ರಕಾಶಪಡಿಸಬೇಕೆಂಬ ಭಗವದುದ್ದೇಶಕ್ಕೂ ಕಟ್ಟು ಬಿದ್ದು, ಸತ್ಯವಾನನನ್ನು ಚಿರಜೀವಿಯನ್ನಾಗಿ ಮಾಡಿದನು! ಅಲ್ಲದೆ ಅವಳ ತಪಃಪ್ರಭಾವಕ್ಕೆ ತಲೆದೂಗಿ, "ಉಭಯ ಕುಲೋದ್ಧಾರಿಣಿ" ಎಂದರೆ "ಸಾವಿತ್ರಿಯೇ!" ಎಂಬ ಕೀರ್ತಿಲತೆ, ಆಚಂದ್ರಾರ್ಕವಾಗಿ ಪ್ರಕಾಶಿಸುವಂತೆ ಮಾಡಿದನು.

"ಪುತ್ರಾಚ್ಛತಗುಣಾಪುತ್ರೀ" ಎಂಬ ಶ್ರುತಿಯನ್ನು ಸಾರ್ಥಕ್ಯ ಪಡಿಸುವಂತೆ, ತಂದೆಯ ಕುಲವನ್ನೂ, ಮಾವನ ಕುಲವನ್ನೂ ಉದ್ಧರಿಸಿದ ಸಾವಿತ್ರಿಯ ತಪಸ್ಸಿದ್ಧಿಗೆ, ಅವಳ ತಾಯ್ತಂದೆಗಳ ಶೀಲ ವೃತ್ತಿಗಳೇ ಕಾರಣವೆನ್ನಬೇಕು! ಹಾಗಿಲ್ಲವಾದರೆ, ಅವಳಲ್ಲಿ ಅಷ್ಟರ ಕರ್ತವ್ಯ ಕ್ಷಮತೆಗೆ ಅವಕಾಶವಿರುತ್ತಿರಲಿಲ್ಲ.

ಸಾಮಾನ್ಯವಾಗಿ, ತಾಯ್ತಂದೆಗಳ ಶೀಲಸ್ವಭಾವವೇ ಮಕ್ಕಳಲ್ಲಿಯೂ ಇರತಕ್ಕುದೆಂಬುದಕ್ಕೆ ಜ್ಞಾನನಿಧಿಯಾದ ಜನಕರಾಯನ ಅನನ್ಯ ಜನ ಸುಲಭವಾದ ಮನೋಯೋಗ ಶಕ್ತಿಯೇ ಜಾನಕೀ ದೇವಿಯಲ್ಲಿಯೂ ನೆಲೆಗೊಂಡಿತ್ತೆಂಬುದು, ಕೇವಲ ಇತಿಕರ್ತವ್ಯ ದಲ್ಲಿ ಮಾತ್ರ ಕಣ್ಣಿಟ್ಟು ಇತರ ನಶ್ವರ ಸಂಪದಗಳನ್ನು ಕಡೆಗಣಿಸಿ, ತನ್ನ ಸ್ವಾಮಿಯೂ, ಲೋಕಾಭಿರಾಮನೂ ಆದ ಶ್ರೀರಾಮನನ್ನೇ ಅನುಸರಿಸಿ, ವನವಾಸಕ್ಕೆ ತೆರಳಿದ ಜಾನಕಿಯ ಚಿತ್ತಸ್ಥೈರ್ಯದಿಂದಿಯೂ, ಭಗವತ್ಸ್ವರೂಪನಾದಾತನಿಗೆ ಕೂಡ ಕಾಲಕ್ಕೆ ತಕ್ಕಂತೆ ರಾಜನೀತಿ ಲೋಕಾಚಾರಗಳಲ್ಲಿಯೂ ಸಲಹೆಗಳನ್ನು ಕೊಡಬಲ್ಲವಳಾಗಿದ್ದಳೆಂಬುದರಿಂದೆಯೂ ತಿಳಿದುಬರುತ್ತಿವೆ. ಆದರೆ, ಜಾನಕಿ, ಜನಕಮಹಾರಾಯನ ಪುತ್ರಿಯಾದುದರಿಂದಲೇ ಹಾಗಾಗ ಲಿಲ್ಲವೆಂದೂ, ಜಗನ್ಮಾತೆಯಾದುದರಿಂದ ಅಂತಹ ಅದ್ಭುತ ಮಹಿಮೆಯುಂಟಾದವಳೆಂದೂ ಕೆಲವರು ತರ್ಕಿಸಬಹುದು. ಹಾಗಾದರೂ, ಜನಕರಾಯನ ತಪೋನಿಷ್ಠೆಯನ್ನು ಆತನ ಪುತ್ರಿಯಾದ

ಊರ್ಮಿಳೆಯಿಂದಾದರೂ ತಿಳಿಯಬಹುದಲ್ಲವೆ ? ಊರ್ಮಿಳಾದೇವಿಯಲ್ಲಿ ನಿಜಜನಕನಲ್ಲಿದ್ದ ತಪೋನಿಷ್ಠೆಯಿಲ್ಲದಿದ್ದರೆ ವನವಾಸಕ್ಕೆಂದು ಹೊರಟ ನಿಜಪತಿಯ ನಿಯೋಗದಂತೆಯೇ ಗುರುಸೇವೆಯಲ್ಲಿ ನಿಂತು ತಪಸ್ವಿನಿಯಾಗಿರುತ್ತಿದ್ದಳೆ ? ಹಾಗೂ ಸಲ್ಲದ ಆಕ್ಷೇಪಗಳುಂಟಾಗುವುವೆಂದರೆ, ಅಂತಹರ ಮನವೇ ಅವಕ್ಕೆ ನೆಲೆಯಲ್ಲದೆ ಬೇರಿಲ್ಲ ! ಹೇಗಾದರೂ ಶೀಲವೇ ಸಮಸ್ತ ಸುಖಭೋಗಾಶ್ರಯಸ್ಥಾನವೆಂದು ಹೇಳಲು ತಡೆಯಿರುವುದಿಲ್ಲವೆಂಬುದಕ್ಕೆ ಶೀಲದ ಮಹತ್ವವು ಈ ರೀತಿ ಸ್ತುತಿಯಿಸಲ್ಪಡುತ್ತಿರುವುದೇ ಸಾಕಲ್ಲವೆ ?—

"ವಹ್ನಿಸ್ತಸ್ಯಜಲಾಯತೇ ಜಲನಿಧಿಃಕುಲ್ಯಾಯತೇ ತತ್ಕ್ಷಣಾ |
ನ್ಮೇರುಃಸ್ವಲ್ಪಶಿಲಾಯತೇ ಮೃಗಪತಿಃ ಸದ್ಯಃಕುರಂಗಾಯತೇ ||
ವ್ಯಾಲೋಮಾಲ್ಯಗುಣಾಯತೇ ವಿಷರಸಃಪೀಯೂಷವರ್ಷಾಯತೇ |
ಯಸ್ಯಾಂಗೇ ಽಖಿಲ ಲೋಕವಲ್ಲಭತರಂ ಶೀಲಂಸಮುನ್ಮೀಲತೇ ||

ಮತ್ತೂ,

ವ್ಯಾಘ್ರವ್ಯಾಲಜಲಾನಲಾದಿ ವಿಪದಸ್ತೇಷಾಂ ವ್ರಜಂತಿಕ್ಷಯಂ |
ಕಲ್ಯಾಣಾನಿ ಸಮುಲ್ಲಸಂತಿವಿಬುಧಾ ಸಾನ್ನಿಧ್ಯಮಧ್ಯಾಸತೇ ||
ಕೀರ್ತಿಸ್ಫೂರ್ತಿಮಿಯರ್ತಿಯಾತ್ಯುಪಚಯಂ ಧರ್ಮಃಪ್ರಣಶ್ಯತ್ಯಘಂ |
ಸ್ವರ್ನಿರ್ವಾಣಸುಖಾನಿಸಂನಿದಧತೇ ಯೇ ಶೀಲಮಾಬಿಭ್ರತೇ ||೩೮||

ಇಂತಹ ಲೋಕೋತ್ತರಗುಣವಾದ ಶೀಲವನ್ನು ಸತ್ಯದ ಏಕನಿಷ್ಠೆಯಲ್ಲಿ ನಿಲ್ಲಿಸಿ, ತಪಸ್ವಿಗಳನ್ನಿಸುವುದೇ ಮಾನವವರ್ಗಕ್ಕೆ ಹಾಗೂ ಸ್ತ್ರೀಸಮುದಾಯಕ್ಕೆ ಮುಖ್ಯ ಕರ್ತವ್ಯವಾಗಿದೆ. ಹಾಗೆ ಶೀಲವೇ ತಪದ ಮೂಲವಾಗಿ, ಶೀಲಕ್ಕೆ ಸತ್ಯವೇ ಪ್ರಾಪ್ಯಸ್ಥಾನವೆನ್ನಿಸಿರುವಲ್ಲಿ ಉಳಿದ ಕ್ಷಮದವಾದಿಗಳೂ ಶೀಲದ ಮುಖ್ಯಾಂಗಗಳಾಗಿ ಪ್ರಕಾಶಿಸುವುವೆಂಬುದು ಕೂಡ,—

"ವಿಶ್ವಾಸಾಯತನಂ, ವಿಪತ್ತಿದಳನಂ, ದೇವೈಃಕೃತಾರಾಧನಂ |
ಮುಕ್ತೇಃಪಥ್ಯಧನಂ ಜಲಾಗ್ನಿಶಮನಂ ವ್ಯಾಘ್ರೋರಗಸ್ತಂಭನಂ ||
ಶ್ರೇಯಸ್ಸಂವನನಂ ಸಮೃದ್ಧಿಜನನಂ ಸೌಜನ್ಯಸಂಜೀವನಂ |
ಕೀರ್ತೇಃ ಕೇಳಿವನಂ ಪ್ರಭಾವಭವನಂ ಸತ್ಯಂವಚಃಪಾವನಂ ||

ಎಂಬ ವಚನದಿಂದ ತಿಳಿದುಬರುತ್ತಿದೆ. ಹೀಗೆ ಸುಖಭೋಗಸಂಪದಾದಿಗಳಿಗೂ, ಜೀವನ್ಮುಕ್ತಿಯೆನ್ನಿಸುವ ಆತ್ಮರೂಪಸಾಕ್ಷಾತ್ಕಾರಕ್ಕೂ ಜನ್ಮಸ್ಥಾನವಾಗಿರುವ ಸತ್ಯವೇ ದೂರವಾದಲ್ಲಿ, ಮತ್ತಿನ ವ್ರತ-ನಿಯಮ-ದಾನ-ಧರ್ಮ-ಸೇವಾರ್ಚನಾದಿ ಸಮಸ್ತ ಕ್ರಿಯಾಕಲಾಪಗಳೂ ವ್ಯರ್ಥವಾಗುವುದರಲ್ಲಿ ಸಂಶಯವಿಲ್ಲ. ಆದರೆ, "ಶ್ರೇಯಾಂಸಿ ಬಹುವಿಘ್ನಾನಿ" ಎಂಬಂತೆ ಸತ್ಯಾತ್ಮರನ್ನು ವಂಚಿಸಬೇಕೆಂದು ಅಡಿಗಡಿಗೂ ವಿಘ್ನಗಳು ಅಡ್ಡಬರುವುವೆಂಬುದು ನಿಜವಾದರೂ, ಅಂತಹ ಸಮಸ್ತ ವಿಘ್ನಗಳೂ ಸತ್ಯದ ಮಹಿಮಾಪ್ರಕಾಶಕ್ಕೆ ಸಹಕಾರಿಗಳೇ ಆಗುವುವೆಂಬುದನ್ನು,—

"ತಸ್ಯಾಗ್ನಿ ಜಲ, ಮರ್ಣವಸ್ಥಲ, ಮರಿರ್ಮಿತ್ರಂ, ಸುರಾಃಕಿಂಕರಾಃ |
ಕಾಂತಾರಂ ನಗರಂ, ಗಿರಿರ್ಗೃಹ, ಮಹಿರ್ಮಾಲ್ಯಂ, ಮೃಗಾರಿರ್ಮೃಗಂ||
ಪಾತಾಲಂ ಬಿಲ, ಮಸ್ತ್ರಮುತ್ಪಲದಳಂ, ವ್ಯಾಲಸ್ಸೃಗಾಲೋ, ವಿಷಂ |
ಪೀಯೂಷಂ, ವಿಷಮಂಸಮಂ, ಸಮಂಚವಚನಂ ಸತ್ಯಾಂಕಿತಂ
ವಕ್ತಿಯಃ ||"

ಎಂಬ ವಚನವನ್ನೇ ಪ್ರತಿಪಾದಿಸುತ್ತಿರುವ ಶ್ರೀಸೀತಾ-ಸಾವಿತ್ರೀ-ಚಂದ್ರಮತಿ-ಮೊದಲಾದವರ ಪವಿತ್ರ ಚರಿತ್ರೆಗಳಿಂದ ತಿಳಿಯಬಹುದಲ್ಲವೆ? ಅಂತಹ ತ್ರಿಲೋಕ ಮಾನ್ಯೆಯರಾದ ಸೀತಾ ಸಾವಿತ್ರಿಯರ ಶೀಲವೃತ್ತಿಗಳನ್ನೇ ಅನುಸರಿಸಿ, ನಿಜಕರ್ತವ್ಯ ನಿಷ್ಠೆಯಿಂದ ಪರಮಾದರ್ಶ ರಮಣಿಯರೆನಿಸಿದ ನಮ್ಮ ಭಾರತ ಮಹಿಳೆಯರ

ಯಶಶ್ಚಂದ್ರಿಕೆ ಈಗಲೂ ಪ್ರಕಾಶಿಸುತ್ತಿಲ್ಲವೆ? ಆದರೆ, ಆ ನಮ್ಮ ಪೂಜ್ಯಮಹಿಳೆಯರ ಯಶಶ್ಚಂದ್ರಿಕೆಗೆ ರಾಹುವಾಗಿ ಪರಿಣಮಿಸುತ್ತಿರುವ ವರ್ತಮಾನಕಾಲದ ಅಬಲಾದೌರ್ಜನ್ಯ ರೋಗವು, ದೇಶಸೇವಕರಲ್ಲಿ ಆರಿಗೆ ದುಃಖವನ್ನುಂಟುಮಾಡುತ್ತಿಲ್ಲ? ಈಗಲಾದರೂ ಅಂತಹ ಪವಿತ್ರಾಂಗನೆಯರು ಬಹುಮಂದಿಯಿರಬಹುದಾದರೂ, ಅಂತಹರೂ ಸ್ತ್ರೀಸಾಮಾನ್ಯವನ್ನೇ ಆಕ್ರಮಿಸುತ್ತಿರುವ ಅಬಲಾದೌರ್ಜನ್ಯ ಸಂಬಂಧದಿಂದ ಅಂತಸ್ತಾಪಕ್ಕೆಡೆಗೊಟ್ಟಿರುವರೆಂಬುದನ್ನು ವಿಚಾರಪರರು ತಿಳಿದೇ ಇರುವರು!?

ಪ್ರಕೃತದಲ್ಲಿ,-ಭಗವತ್ಸಾಕ್ಷಾತ್ಕಾರ ಸ್ವರೂಪವಾದ ಸತ್ವವೇ ಅದರ ಮುಖ್ಯಾಂಗಗಳಾದ ಶೀಲ-ಸತ್ಯ-ಕ್ಷಮದಮಾದಿಗಳಿಂದೊಡಗೂಡಿ ಸಮಸ್ತ ವಿಘ್ನಗಳನ್ನೂ ಜಯಿಸಿ, ತಾನೇತಾನಾಗಿ ಬಗೆಗೊಳ್ಳುವುದೆಂಬುದನ್ನು ಈ ಕಥಾಭಾಗವು ಹೀಗೆ ಸಮರ್ಥಿಸುತ್ತಿರುವುದು.

ಮೊದಲು, ಸುಖಸೌಭಾಗ್ಯ ಸಾಮ್ರಾಜ್ಯದಲ್ಲಿ ಅಭಿಷಿಕ್ತೆಯಾಗುವಳೆಂದು ನಿರೀಕ್ಷಿಸಲ್ಪಟ್ಟಿದ್ದ ನಭೆಗೆ, ದುರ್ಯೋಗ ಬಲದಿಂದ ದುಃಖವೇ ಬಂದೊದಗಿದರೂ, ಇತಿಕರ್ತವ್ಯದಲ್ಲಿ ಕಣ್ಣಿಟ್ಟ ನಭೆ,—

> "ವಿಪದಿ ಧೈರ್ಯಮಥಾಭ್ಯುದಯೇ ಕ್ಷಮಾ | ಸದಸಿವಾಕ್ಪಟುತಾ ಯುಧಿವಿಕ್ರಮಃ || ಯಶಸಿ ಚಾಭಿರತಿರ್ವ್ಯಸನಂ ಶ್ರುತೌ | ಪ್ರಕೃತಿಸಿದ್ಧಮಿದಂ ಹಿ ಮಹಾತ್ಮನಾಂ ||೫೨||

ಎಂಬ ಮಹಾತ್ಮರ ಮಾತನ್ನೇ ಅನುಸರಿಸಲು ನಿಶ್ಚಯಿಸಿದಳು; ಪತ್ಯಾಜ್ಞೆಯಂತೆಯೇ ಚಿರಬ್ರಹ್ಮಚರ್ಯ ವ್ರತಕ್ಕಾಗಿ ಕಂಕಣವನ್ನು ಕಟ್ಟಿದಳು; ತನ್ನ ಭವಿಷ್ಯತ್ತಿಗಾಗಿ ಹಲುಬುತ್ತಿದ್ದ ತಾಯಿಗೂ ತನ್ನ ಧೃಡಸಂಕಲ್ಪವನ್ನು ತಿಳಿಯಹೇಳಿ ಶಾಂತಿಯನ್ನುಂಟು

ಮಾಡಿದಳು! ಮತ್ತೂ ಧರ್ಮಾಧರ್ಮ ಜ್ಞಾನವಿಲ್ಲದೆ ಧನತೃಷ್ಣಾ ವಶರಾಗಿದ್ದ ಶಂಕರನಾಥ ಶರಾವತಿಯರನ್ನು ಗುರುಭಾವದಿಂದ ಮನ್ನಿಸಿ, 'ವೈರಾಗ್ಯಮೇವಾಭವಂ' ಎಂಬ ವಿರಕ್ತ ಮುದ್ರೆಯು ಅಭೇದ್ಯಕವಚವನ್ನು ತೊಟ್ಟು ಅದರ ಪ್ರಭಾವದಿಂದ,—

"ನಿಮ್ನಂಗಚ್ಛತಿ ನಿಮ್ನಗೇವನಿತರಾಂ ನಿದ್ರೇವಸಿಷ್ಕಂಬತೆ । ಚೈತನ್ಯಂ, ಮದಿರೇವ ಪುಷ್ಯತಿಮದಂ ಧೂಮ್ಯೇವಧತ್ತೇಂಧತಾಂ ॥
ಚಾಪಲ್ಯಂಚಪಲೇವ ಚುಂಬತಿ ದವಜ್ವಾಲೇವ ತೃಷ್ಣಾಂನಯ ತ್ಯು
ಲ್ಲಾಸಂಕುಲಟಾಂಗನೇವ ಕಮಲಾ ಸ್ವೈರಂಪರಿಭ್ರಾಮ್ಯತಿ ॥೭೪॥

ಎಂಬಂತೆ ಹೇಯಗುಣಕ್ಕಾಕರವಾದ ಧನಸಂಪತ್ತನ್ನು ಶರಾವತಿಯ ಇಚ್ಛಾನುಸಾರವಾಗಿ ಅವರಿಗೇ ಸಲ್ಲಿಸಿದಳು. ಗುರುಕುಲವಾಸದಲ್ಲಿ, ಶಿಷ್ಯರು ಹೊಂದಬಹುದಾದ ಉಪವಾಸ ಜಾಗರಾದಿ ಕ್ಲೇಶಗಳನ್ನೂ ಮೂಢರಾದ ಸ್ತ್ರೀಯರಿಂದ ಹೊಂದಬಹುದಾದ ಅತ್ಯಾಚಾರದ ಕಷ್ಟನಿಷ್ಠುರಗಳನ್ನೂ,—

"ವಿವೇಕವನಸಾರಿಣೀಂ ಪ್ರಶಮಶರ್ಮಸಂಜೀವಿನೀಂ । ಭವಾರ್ಣವ
ಮಹಾತರೀಂ ಮದನದಾವ ಮೇಘಾವಲಿಂ ॥ ಚಲಾಕ್ಷಮೃಗವಾ
ಗುರಾಂ ಗುರುಕಷಾಯ ಶೈಲಾಶನೀಂ । ವಿಮುಕ್ತಿ ಪಥವೇಸರೀಂ
ಭಜತಭಾವನಾಂ ಕಿಂಪರೈಃ ॥೮೭॥

ಎಂಬಂತೆ ಸಮಸ್ತವಿಧ ತಾಪಗಳನ್ನೂ ಹೋಗಲಾಡಿಸಿ, ಬ್ರಹ್ಮಾನಂದವನ್ನುಂಟುಮಾಡುವ ಸದ್ಭಾವನೆಯೆಂಬ ಮನೋಯೋಗ ಬಲದಿಂದ ನಿರ್ವಹಿಸುತ್ತ ಬಂದಳು; ಸ್ತ್ರೀಜನೋಚಿತ ಕೋಮಲ ಸ್ವಭಾವವುಳ್ಳ ಶರಾವತಿಯ ಕಾಠಿಣ್ಯಕ್ಕಾಗಿ ಕೊರಗಿದಳು. ಆಧುನಿಕಮಹಾಶಯರ ನಾಕರಿಕತೆಯಂತೆ, ಸ್ತ್ರೈಣನಾಗಿ ಇಹಪರಸುಖಗಳೆರಡನ್ನೂ ಕಾಣದೆ ಕಳೆಗುಂದುತಿದ್ದ ಶಂಕರನಾಥನ ಅಧೀ

ರತೆಗಾಗಿ ಮರುಮರುಗಿದಳು ; ಆದರೂ ಸತ್ಪುತ್ರನ ಕರ್ತವ್ಯದಲ್ಲಿ ದಕ್ಷನಾದ ನಿರಂಜನನ ನ್ಯಾಯಾನ್ಯಾಯವಿಮರ್ಶೆ-ಸೋದರ ವಾತ್ಸಲ್ಯಾದಿಗಳಿಂದ ಮುಂದೆ ಎಂದಾದರೂ ಆತ್ಮಾನಂದವನ್ನು ಹೊಂದಬಹುದೆಂದು ನಂಬಿ ತಕ್ಕಮಟ್ಟಿಗೆ ಶಾಂತಿಯುಳ್ಳವಳಾಗಿದ್ದಳು.

**" ಸತ್ವಗುಣಕ್ಕೆ ಸರ್ವದಾ ಭಗವತ್ಸಹಾಯವುಂಟು "** ಎಂಬುದನ್ನು ಸಮರ್ಥಿಸುವುದಕ್ಕೆ, ಶಂಕರನಾಥನ ಮನೆಯಲ್ಲಿ ಹಾಸುಗೆ ಹತ್ತಿ ಅನಾಥೆಯಂತೆ ನಿಶ್ಚೇಷ್ಟಿತೆಯಾಗಿ ಮಲಗಿದ್ದ ನಭೆಯನ್ನು ಚಿದಾನಂದನೇ ಬಂದು, ಕರೆದೊಯ್ದುದೇ ಸಾಕಲ್ಲವೆ ? ಹಾಗೂ ವಿದ್ಯಾವಿನಯಾದಿ ಸುಗುಣಾಲಂಕೃತರಾದ ತಾಯ್ತಂದೆಗಳಿಂದ ಮಕ್ಕಳು ಹೊಂದಬಹುದಾದ ಬಾಲ್ಯಪ್ರೌಢಶಿಕ್ಷಣಗಳೆಲ್ಲವನ್ನೂ ರಮಾನಂದ ಚಿದಾನಂದರಿಂದ ಹೊಂದಿದುದೂ ತಿಳಿಸುತ್ತಿದೆಯಲ್ಲವೆ ?

ಹೀಗೆ ಸಂಸ್ಕರಿಸಲ್ಪಡುವ ಸದ್ಭಾವನಾ ಹೃದಯವು ಇತರರನ್ನು ಹೇಗೆಹೇಗೆ ಸುಧಾರಿಸಬಲ್ಲುವೆಂಬುದನ್ನು ನಭೆ, ರಮಾಮಣಿ, ನಿರಂಜನ, ಭಗವಾನಂದ, ರಮಾನಂದರಲ್ಲಿ ನಡೆಯಿಸಿದ ಸಂವಾದವೂ ಸೂಚಿಸುತ್ತಿರುವುದು. ಅಲ್ಲದೆ ವಿದ್ಯಾವಂತನಾದರೂ ವಿವೇಕವಿಲ್ಲದೆ ಇಂದ್ರಿಯವೇಗಕ್ಕೆ ಸಿಕ್ಕಿ ಸುಖಬಾಹಿರನಾಗುತ್ತಿದ್ದ ರಾಜಶೇಖರನ ಕ್ಷೇಮಾಭ್ಯುದಯವನ್ನು ಕೋರಿ, ಆತನಲ್ಲಿ ತೋರಿದ ದಯಾ-ದಾಕ್ಷಿಣ್ಯ-ಶಾತ್ಯಭಾವಗಳು ಕೂಡ " ದೋಷೋಯದ್ಯಪಿ ತಸ್ಯಸ್ಯಾತ್ ಸತಾಮೇತದಗರ್ಹಿತಂ " ಎಂಬ ಧರ್ಮವಚನಕ್ಕೆ ಸಾಕಾದ ನಿದರ್ಶನಗಳಾಗಿವೆ.

ಹೀಗೆ ಆತ್ಮಾವಲಂಬಿನಿಯಾಗಿ ಸದ್ಭಾವನಾ ತಪಸ್ಸಿನಿಂದ ಜಗತ್ತನ್ನೇ ಸೇವಿಸಬೇಕೆಂದೆಣಿಸಿದ ನಭೆಗೆ ಪ್ರೇಮಪಿತೃಗೃಹಾವಾಸವೂ, ಮಾಯಾಪಾಶಬಂಧನವೆಂದೇ ತಿಳಿದುಬಂದುದು ಅತಿಶಯವಲ್ಲ. ಅದಕ್ಕಾಗಿ ಆಶೆಗೂ ಅಂಧತೆಗೂ ಹೇತುವಾ

ಗುವ ರೂಪ ಯೌವನಗಳನ್ನು ಮರೆಮಾಡಿ ತಪೋಸಿದ್ಧಿ ಸಾಧನವಾದ ಜ್ಞಾನಾರ್ಜನೆಗೆ ಶಾಸ್ತ್ರಾಭ್ಯಾಸವೂ ಅವಶ್ಯವಾಗಿದ್ದುದರಿಂದ

" ಧತ್ತಾಂಮೌನಮಗಾರಮುಜ್ಝತುವಿಧಿ ಪ್ರಾಗಲ್ಭ್ಯಮಭ್ಯಸ್ಯತಾ |
ಮಸ್ತ್ವಂತರ್ವರ್ಣಮಾಗಮಶ್ರಮಮುಪಾ ಧತ್ತಾಂತಪಸ್ತಪ್ಯತಾಂ ||
ಶ್ರೇಯಃಕಂಜನಿಕುಂಜಭಂಜನಮಹಾ ವಾತಂನಚೇದಿಂದ್ರಿಯ |
ಪ್ರಾತಂಜೇತುನವೈತಿಭಸ್ಮನಿಹುತಂ ಜಾನೀತಸರ್ವಂತಪಃ " ||೭೧||

ಎಂಬ ನೀತಿಸೂತ್ರವನ್ನೇ ಹಿಡಿದು, ಹೊರಹೊರಟುದೂ ಯುಕ್ತವಾಗಿಯೇ ಇರುವುದು. ಮತ್ತೆ,—

ಶೀಲಾದಿ ಸುಗುಣೋಪೇತವಾದ ಸತ್ವವನ್ನು ಸಾದರಿಸಬಲ್ಲ ಶಕ್ತಿ, ರಘುನಾಥನ ಸತ್ಸಂಕಲ್ಪದಲ್ಲಿದ್ದುದರಿಂದ ಭಗವತ್ಪ್ರೇರಣೆಯೇ ವಿರಾಗಿಣಿಯಾಗಿ ಹೊರಟ ನಭೆಯನ್ನು ರಘುನಾಥನ ಮುಂದೆ ಕರೆತಂದು ನಿಲ್ಲಿಸಿತೆಂಬುದೂ ಆಶ್ಚರ್ಯವಿಷಯವಲ್ಲ; ಆದರೆ, ಸತ್ಯಸಂಕಲ್ಪನಾದ ರಘುನಾಥನಿಗೂ, ತಪಸ್ವಿನಿಯಾದ ವಿರಾಗಿಣಿಗೂ ಸಮೀಪಬಾಂಧವ್ಯವು ಹಾಗಿರಲಿ; ಪರಸ್ಪರ ಮನೋಧರ್ಮವೂ ಅಭಿನ್ನಯೋಗದಲ್ಲಿದ್ದುದು ಸತ್ಯ-ಸದ್ಭಾವನೆಗಳ ಪರಮಾದರ್ಶವಿಚಾರವಲ್ಲವೆ?

ಓದುಬರೆಹವರಿತಿದ್ದ ಮಾತ್ರಕ್ಕೇ ಸದ್ಗುಣಗಳುಂಟಾಗಲಾರವೆಂಬುದೂ, ಅವುಗಳನ್ನು ಪ್ರಕಾಶಪಡಿಸತಕ್ಕ ಅಭ್ಯಾಸವೂ, ಶ್ರಮಸಹಿಷ್ಣುತೆಯೂ ಕ್ಷಮೆಯಲ್ಲಿರುವುದೆಂಬುದೂ, ಅದಿಲ್ಲದಿದ್ದರೆ, ವಸ್ತುಗುಣಗ್ರಹಣಶಕ್ತಿಯಿಲ್ಲದೆ, ಅಲ್ಲದ ಸಲ್ಲದ ಅಭಿಮಾನ-ಅಸೂಯೆ-ಸಂಶಯ-ಕ್ಲೇಶಗಳಿಂದ ತಪಿಸಬೇಕಾಗುವುದೆಂಬುದೂ ಕೃಷ್ಣವೇಣಿಗೆ ಅವಳ ಮೂರ್ಖಸ್ವಭಾವದಿಂದ ಮೊದಲು ಬಂದೊದಗಿದ್ದ ವಿಪದ್ದಶೆಯಿಂದಲೇ ತಿಳಿಯಲಾದೀತು. ಆದರೂ ಇಂತಹ ಮೂರ್ಖ

ಭಾವವು ಕೂಡ, ಸದ್ಭಾವನಾ ಯೋಗಬಲದಿಂದ ಎಂದಾದರೂ ಹೇಗಾದರೂ ಪರಿಷ್ಕೃತವಾಗದಿರದೆಂಬುದನ್ನು ಕೃಷ್ಣವೇಣಿಯ ಪರಿವರ್ತನಾಸ್ಥಿತಿಯಿಂದ ತಿಳಿಯಬಹುದಾಗಿದೆ.

ಬಾಲ್ಯದಲ್ಲಿ ತಾಯ್ತಂದೆಗಳ ಸುಶಿಕ್ಷಣೆಯಿಲ್ಲದೆ, ಲಾಲನೆಯಿಂದಲೇ ಮನಸ್ವಿ ಬೆಳೆದವರ ಸ್ಥಿತಿ-ಗತಿ-ವಿಚಾರಗಳು ಹೇಗಾಗಿ ತಿರುಗುವುವೆಂಬುದನ್ನು ಸೌಬಲ-ತುಂಗಭದ್ರೆಯರ ಸ್ವೈರವೃತ್ತಿಯೇ ಹೇಳುತ್ತಿದೆ. ಅಲ್ಲದೆ ಅಂತದರಿಂದ ಸ್ವರೂಪನಾಶದ ಮಾತು ಹಾಗಿರಲಿ ; ಕುಲ-ಮಾನ-ಕೀರ್ತಿ-ಪ್ರಾಣಗಳಿಗೆ ಹೇಗೆ ಮೃತ್ಯುವಾಗಿ ತಿರುಗುವರೆಂಬುದನ್ನೂ, ಅಂತವರು ಕಾಮಪೂರ್ತಿಗಾಗಿ ಹೂಡುವ ಮಾಯಾಬಲೆಗೆ ಎಷ್ಟು ಸಂಸಾರಗಳು ಬಲಿಯಾಗಿ ಬೀಳುವವೆಂಬುದನ್ನೂ, ತುಂಗಭದ್ರೆ, ವಿರಾಗಿಣಿ-ರಘುನಾಥರ ಮೇಲೆ ಹೊರೆಯಿಸಿದ ಮಿಥ್ಯಾಪವಾದ-ಚಂದ್ರಭಾಗೆಗೆ ಹಾಸಿದ ಮೃತ್ಯುಶಯ್ಯೆ-ಮಕರಂದನಿಗುಂಟುಮಾಡಿದ ಸಂತಾಪ ಇವುಗಳೇ ಸಾರಿಸಾರಿ ಹೇಳುತ್ತಿವೆಯಲ್ಲವೆ ?

ಮತ್ತೆ, ವಿದ್ಯಾಗಂಧವಿಲ್ಲದ ಮೂಢಸ್ತ್ರೀಯರ ಸ್ವಭಾವವು ಕ್ಷಣಕ್ಷಣವಲ್ಲಿಯೂ ಹೇಗಾಗಿ ತಿರುಗುವುದೆಂಬುದನ್ನು ಸೂಚಿಸಲು,—ವಿರಾಗಿಣಿ ರಘುನಾಥರ ಪವಿತ್ರಚರಿತೆಯಲ್ಲಿ ಕಳಂಕವನ್ನೇ ಚಿಂತಿಸಿ, ವಿಚಾರವಿಲ್ಲದೆ ದುಡುಕಿ ನಿಷ್ಠುರವಾಡಿದ ಲಕ್ಷ್ಮೀದೇವಮ್ಮ ನರಸಮ್ಮ ಇವರೇ ವಿಚಾರಾಂತ್ಯದಲ್ಲಿ ಪರಿತಪಿಸಿದುದೇ ಸಾಕಲ್ಲವೆ ?

ಬಾಲ್ಯವಲ್ಲಿ ಹೊಂದುವ ಸುಶಿಕ್ಷಾರೂಪವಾದ ವಿದ್ಯಾಭ್ಯಾಸವು ಸ್ತ್ರೀಯರ ಅಭ್ಯುದಯಕ್ಕೆ ಹೇಗೆ ಸಹಕರಿಸುವುದೆಂಬುದನ್ನು ನಿರೂಪಿಸಲಿಕ್ಕೆ ಸತೀಮಣಿ ಚಂದ್ರಭಾಗೆಯ ಸೌಶೀಲ್ಯವೇ ಆದರ್ಶವಾಗಿರುವುದು. ಅಲ್ಲದೆ, " ಗುಣವಿದ್ದಲ್ಲಿ ಮಣವುಂಟು " ಎಂಬಂತೆ

ಅವಳ ಸೌಶೀಲ್ಯಕ್ಕೆ ವಿರಾಗಿಣಿಯ ತಪೋಬಲವೂ ಸೇರಿ, ಜಯ ಧ್ವಜವನ್ನು ಸ್ಥಾಪಿಸಿದುದೂ, ಮಕರಂದನ ಪರಿಶುದ್ಧಮಾರ್ಗ ಪ್ರವರ್ತನೆ-ಸೌಬಲನ ಜ್ಞಾನಸಂಪಾದನೆ-ಇವೇ ಮೊದಲಾದ ಅಘ ಟಿತಘಟನಾವಳಿಯಿಂದ ಸತ್ವಗುಣದ ಚಕ್ರವರ್ತಿತ್ವವು ಶತಸಹಸ್ರ ಮುಖದಿಂದ ಉದ್ಘೋಷಿಸಲ್ಪಡುತ್ತಿರುವುದೂ ನಮ್ಮ ಮಹಿಳಾ ಸಮುದಾಯದ ಸ್ಮೃತಿಪಥದಲ್ಲಿ ನಿರಂತರವೂ ಪ್ರಕಾಶಿಸುತ್ತಿರಬೇ ಕಲ್ಲವೆ ? ಒಟ್ಟಿನಲ್ಲಿ, ಸೌಭಾಗ್ಯಸಾಮ್ರಾಜ್ಯವನ್ನು ಕೈಗೊಳ್ಳುವ ಳೆಂದಿದ್ದ ನಳಿನೆ, ದುರ್ಯೋಗಕ್ಕೆ ಗುರಿಯಾದರೂ ಧೃತಿಗೆಡದೆ, ಆರ್ಯಮಹಿಳೆಯರ ಅಮೋಘಸೂತ್ರವನ್ನು ಭದ್ರಪಡಿಸಿ, ತನಗೆ ಅಹಿತವನ್ನುಂಟುಮಾಡುತ್ತಿದ್ದವರನ್ನು ಸಾದರಿಸಿ, ಅಭ್ಯುದಯಕ್ಕೆ ತಂದು ಆದಿಯಲ್ಲಿ ಶತ್ರುಗಳಾಗಿದ್ದವರೇ ಆ ಬಳಿಕ ಮಿತ್ರಭಾವದಿಂದ ಹಿತಮಾರ್ಗದಲ್ಲಿ ಬದ್ಧಾದರರಾಗಿ ನಿಲ್ಲುವಂತೆ ಮಾಡಿ ಸಮಸ್ತ ಜನಾ ದರಣೀಯಮೂರ್ತಿಯಾಗಿ ಬಗೆಗೊಳ್ಳುತ್ತಿರುವಳೆಂದರೆ ಸಾಕು.

ಆದರೆ, ಅಭಾಗ್ಯದೇವತಾಪ್ರಸಾದಕ್ಕೆ ಪಾತ್ರರಾಗಿ ಸಂತೋಷ ಲೇಶವಿಲ್ಲದೆ ತಪಿಸುತ್ತಿರುವ ಅನಾಥೆಯರನ್ನು "ಸಮಾಜಶಾಸನ" ಗಳೆಂಬ ಅಪಮೃತ್ಯುವೂ ಸುತ್ತಿಮುತ್ತಿ ದಯಾರಸವೆಳ್ಳಷ್ಟು ಇಲ್ಲದೆ, ಪಾಷಾಣಸ್ವರೂಪದಿಂದ, ಹೇಯವೂ ದಾರುಣವೂ ಆದ ಮುಂಡನ-ವಿಕಾಶನಾದಿ ನಾನಾವಿಧ ಕಷ್ಟನಷ್ಟ ನಿಷ್ಠುರಗಳಿಂದ ನರಲಿಸುತ್ತಿ ರುವುದರಿಂದಲ್ಲವೆ, ನಮ್ಮಿ ದೇಶಮಾತೆಗೆ ಈ ಬಗೆಯ ಕ್ಷಯ ರೋಗವುಂಟಾಗಿರುವುದು ? ಇನ್ನಾದರೂ ದೇಶವತ್ಸಲರಾದ ಸತ್ಸಂ ತಾನರು ತಿಳಿದೆಚ್ಚತ್ತು, ಅನಾಥೆಯರ ಸತೀತ್ವವನ್ನು ಅತಲ ಜಲ ದಲ್ಲಿ ಕೆಡಹಲು ಪ್ರಯತ್ನಿಸುವ ದುರ್ಮುಖರನ್ನೂ ಸಹಸಾ ನೀತಿ ಪಥದಲ್ಲಿ ಕರೆತಂದು ನಿಲ್ಲಿಸಿ, ತಮ್ಮ ಪೋಷ್ಯವರ್ಗಕ್ಕೆ ಸೇರಿದ ಆ ವಿತಂತು ಸೋದರಿಯರನ್ನು ಸದುಪದೇಶಾಮೃತದಿಂದ ಸಾದಸಿರಿ,

ಲೋಕಶಿಕ್ಷಣಕಾರ್ಯದಲ್ಲಿ ನೆಲೆಗೊಳಿಸಿ, ಅವರನ್ನು ಪ್ರೌಢ ವಿದ್ಯಾರ್ಜನೆಯಿಂದ ಪ್ರಕಾಶಪಡಿಸುವುದಾದರೆ, ಅಂತಹ ಅಭಾಗಿನಿಯರೇ ತಮ್ಮ ಸೋದರೀ ಸೋದರ ವರ್ಗದವರಾದ ಗೃಹಿಣೀ ಗೃಹಸ್ಥರಿಗೆ ಸರ್ವಪ್ರಕಾರದಲ್ಲಿಯೂ ನೈಜಕರ್ತವ್ಯ-ಜ್ಞಾನ-ಧರ್ಮಗಳಿಗೆ ತಕ್ಕಂತೆ ಸಹಾಯಕರಾಗಿ ನಿಂದು ಮುನ್ನಿನ ಭಾರತಮಹಿಳೆಯರ ಯಶಶ್ಚಂದ್ರಿಕೆಯನ್ನು ಮತ್ತೂ ಪ್ರಕಾಶಪಡಿಸುವರೆಂದೂ, ಹಾಗೆ ಮಾಡಿದಲ್ಲದೆ ಮತ್ತಾವವಿಧ ಪ್ರಯತ್ನವೂ ನಮ್ಮ ದೇಶಮಾತೆಯನ್ನು ಅಭ್ಯುದಯಸ್ಥಿತಿಗೆ ತರಲಾರದೆಂದೂ, ನಾಸ್ತಿಕವಾದದಲ್ಲಿ ನಿರತರಾಗಿ, ಆರ್ಯಧರ್ಮವನ್ನು ಅಲ್ಲಗಳದು, ಸಾರಾಸಾರ ವಿವೇಚನಾಶಕ್ತಿಯಿಲ್ಲದೆ ಮರುಳಾಟದಲ್ಲಿ ನಲಿಯುತ್ತಿರುವ ಕಲಿಮಹಿಮಾಬದ್ಧನಾರಿಯರ ಅವಿವೇಕಾಂಧಕಾರವು ಪರಿಹರವಾಗಿ, ಸುಜ್ಞಾನಭಾಸ್ಕರನು ಉದಯಗಿರಿಯಲ್ಲಿ ಬೆಳಗೊಳ್ಳುವವರೆಗೂ ನಮ್ಮವರಲ್ಲಿ ಐಕಮತ್ಯವೆಂಬುದು ದುರ್ಲಭವೆಂದೂ, ಐಕಮತ್ಯವಿಲ್ಲದೇ ಹೋದರೆ, ಸುಖಸಮಾಧಾನಗಳ ಆಶಯೇ ಉಳಿಯುವುದಿಲ್ಲವೆಂದೂ ಸಾರಿಸಾರಿ ಹೇಳುವ ಸಾಮಾಜಿಕ ಸೂತ್ರವೇ ಈ ಗ್ರಂಥರಚನಾ ಸಂದೇಶವಾಗಿದೆ. ಹಾಗೆ, ಭಗವತ್ಕೃಪೆಯಿಂದ ನಮ್ಮ ಭ್ರಾತೃವರ್ಗದಲ್ಲಿ ಕೆಲವುಮಂದಿಯಾದರೂ ರಘುನಾಥನಂತೆ ಧೈರ್ಯಸ್ಥೈರ್ಯಗಳಿಂದ ಸೋದರೀವರ್ಗವನ್ನು ಸುಧಾರಿಸಲು ಬದ್ಧಕಂಕಣರಾಗಿ ಮುಂದೆಬಂದು ನಿಲ್ಲುವ ಪಕ್ಷವಲ್ಲಿ, ಪ್ರಯತ್ನವೂ, ಶ್ರಮವೂ ಸಾಫಲ್ಯವೆಂದೇ ಭಾವಿಸುವೆನು.

ಈ ಗ್ರಂಥರಚನೆಯಲ್ಲಿ ನನ್ನ ಅಜಾಗರೂಕತೆಯಿಂದ ಬಿದ್ದಿರಬಹುದಾದ ದೋಷಗಳೆಲ್ಲವನ್ನೂ ಸಾವಧಾನದಿಂದ ಸಮಾಲೋಚಿಸಿ, ಹಿತಾಹಿತ ಸೂಚನೆಯಿಂದ ಸಹಕರಿಸುವ ನಮ್ಮ ಭಾಷಾ ಸುಹೃದ್ವರ್ಗಕ್ಕೆ ಚಿರಕೃತಜ್ಞಳಾಗಿರುವೆನು. ಮತ್ತೂ, ಈ ಗ್ರಂಥ

ಪರಿಷ್ಕರಣ ಮುದ್ರಣಕಾರ್ಯಗಳಲ್ಲಿ ಶ್ರಮವನ್ನು ವಹಿಸಿ ಸಹಕರಿಸಿದ ನಮ್ಮ ಸುಹೃದ್ಭ್ರಾತೃಗಳನ್ನು ಮನಃಪೂರ್ವಕವಾಗಿ ವಂದಿಸುವುದಲ್ಲದೆ, ಅವರಿಗೆ ಇತೋಽಪ್ಯತಿಶಯವಾದ ಆರೋಗ್ಯಭಾಗ್ಯ ಪುತ್ರಸಂಪತ್ತಿ ಯಶೋಲಾಭಗಳನ್ನು ದಯೆಪಾಲಿಸೆಂದು ಜಗಜ್ಜನನೀಜನಕರನ್ನೇ ಅನನ್ಯಭಾವದಿಂದ ಸಂಪ್ರಾರ್ಥಿಸುತ್ತಿರುವ,

**ನಂಜನಗೂಡು :**
24—10—1922.

ನಿರಂತರ ಶ್ರೇಯಃಕಾಂಕ್ಷಿಣೀ,
**ವಿದ್ಯಾರ್ಥಿನಿ.**

# ವಿಷಯಾನುಕ್ರಮಣಿಕೆ.

---

## (ಪ್ರಥಮ ಭಾಗ)


| ಪರಿಚ್ಛೇದ | | ವಿಷಯ |
|---|---|---|
| ಪ್ರಥಮಪರಿಚ್ಛೇದ | ... | ಅಲಭ್ಯಲಾಭ |
| ದ್ವಿತೀಯಪರಿಚ್ಛೇದ | . . | ನಿಷ್ಠುರಹೃದಯ |
| ತೃತೀಯಪರಿಚ್ಛೇದ | .... | ಪ್ರಥಮಮರ್ಯಾದೆ |
| ಚತುರ್ಥಪರಿಚ್ಛೇದ | . | ಸಂಕಲ್ಪ |
| ಪಂಚಮಪರಿಚ್ಛೇದ | | ವಿಚಾರವಿಮರ್ಶೆ |
| ಷಷ್ಠಪರಿಚ್ಛೇದ | | ಪಾತ್ರಾಪಾತ್ರವಿಚಾರ |
| ಸಪ್ತಮಪರಿಚ್ಛೇದ | . . | ಹಿತಬೋಧೆ |
| ಅಷ್ಟಮಪರಿಚ್ಛೇದ | . . . | ಗೂಢವಿಚಾರ |
| ನವಮಪರಿಚ್ಛೇದ | . | ಕಾಳಕೂಟ |
| ದಶಮಪರಿಚ್ಛೇದ | . . . | ವಿವೇಚನೆ–ವಿಡಂಬನೆ |
| ಏಕಾದಶಪರಿಚ್ಛೇದ | | ಗುಣಾನುವಾದ |
| ದ್ವಾದಶಪರಿಚ್ಛೇದ | . . | ವಿಷಜ್ವಾಲೆ |
| ತ್ರಯೋದಶಪರಿಚ್ಛೇದ | | ನಿಷೇಧ |
| ಚತುರ್ದಶಪರಿಚ್ಛೇದ | | ಭೀಷಣಪ್ರತಿಜ್ಞೆ |


## (ದ್ವಿತೀಯ ಭಾಗ)


| | | |
|---|---|---|
| ಪ್ರಥಮಪರಿಚ್ಛೇದ | . . | ಸ್ಪಷ್ಟಪರಿಚಯ |
| ದ್ವಿತೀಯಪರಿಚ್ಛೇದ | .... | ದುರಾಗ್ರಹ |

| ಪರಿಚ್ಛೇದ | | ವಿಷಯ |
|---|---|---|
| ತೃತೀಯಪರಿಚ್ಛೇದ | .... | ಪ್ರಾರ್ಥನೆ |
| ಚತುರ್ಥಪರಿಚ್ಛೇದ | .... | ಅಭ್ಯುದಯ |
| ಪಂಚಮಪರಿಚ್ಛೇದ | . | ಕಾಲಚಕ್ರಗತಿ |
| ಷಷ್ಠಪರಿಚ್ಛೇದ | .... | ಶಾಂತಿರೂಪ |
| ಸಪ್ತಮಪರಿಚ್ಛೇದ | .. | ಸಖೇದಾಶ್ಚರ್ಯ |
| ಅಷ್ಟಮಪರಿಚ್ಛೇದ | .... | ಆವೇಶ |
| ನವಮಪರಿಚ್ಛೇದ | .. | ಭೀಮಸಂದರ್ಶನ |
| ದಶಮಪರಿಚ್ಛೇದ | .... | ಪ್ರತ್ಯಕ್ಷಪ್ರಮಾಣ |
| ಏಕಾದಶಪರಿಚ್ಛೇದ | .... | ಸಂಭ್ರಮ |
| ದ್ವಾದಶಪರಿಚ್ಛೇದ | .... | ಅನುತಾಪ |
| ತ್ರಯೋದಶಪರಿಚ್ಛೇದ | .... | ಬಂಧುಸಮ್ಮೇಲನ |
| ಚತುರ್ದಶಪರಿಚ್ಛೇದ | .... | ಉತ್ಸವಾರಂಭ |

(ಸಂಕಲ್ಪಸಿದ್ಧಿ)

|| ಶ್ರೀಃ ||

ಶ್ರೀಲಕ್ಷ್ಮೀನೃಸಿಂಹಪ್ರಸೀದತಾಮ್.

# ವಿರಾಗಿಣೀ.

“ ಶ್ರೀಮದ್ರಹಸ್ಯತ್ರಯಸಾರಪಾಠ ಪ್ರಾರಂಭಕಾಲೇತವಸರ್ವಸಿದ್ಧಿಃ |
ಸ್ಯಾದಿತ್ಯುಪಶ್ರುತ್ಯಭಿದಾಯಕಂಮೇ ಲಕ್ಷ್ಮೀನೃಸಿಂಹಂಶರಣಂಪ್ರಪದ್ಯೇ” ||
(ಶ್ರೀನೃಸಿಂಹಪ್ರಪತ್ತಿಃ)

## ಪ್ರಥಮ ಪರಿಚ್ಛೇದ.

(ಅಲಭ್ಯಲಾಭ)

ಶ್ರೀಜೇಯ್ಯಾಳನಿಸಿದ ಯಾಮಿನೀಶಾಸನವು, ಸರ್ವತ್ರ ವ್ಯಾಪಿಸುತ್ತಿದ್ದಿತು. ಶಾಂತಿಸಮಾವೇಶವು, ಸುಮನೋಹರವೆನ್ನಿಸಿತು ! ಸಾಲದುದಕ್ಕೆ ಸುಧಾಕರನೂ, ರಜನೀಸಮಾಗಮದಿಂದ ಸಂದರ್ಶನೀಯನಾಗಿದ್ದನು ಕಲಾಧವನ ಕೃಪಾರೂಪಕೌಮುದಿ, ಕಾಂತರಾಜಪೇಟೆಯನ್ನು ಮತ್ತಷ್ಟು ಕಾಂತಿಮಯವಾಗಿ ಮಾಡುತ್ತಿದ್ದಿತು. ಇಷ್ಟೇ ಸಾಲದೆಂದು ದ್ವಿತೀಯಚಂದ್ರಮನ ಭ್ರಾಂತಿಯನ್ನುಂಟುಮಾಡುತಿದ್ದ ದೀಪದಿಂದ ಕಾಂತರಾಜಪೇಟೆಯ ರಾಜಬೀದಿಯ ಮೊದಲನೆಯ ಮಹಡಿಮನೆ ಇನ್ನಷ್ಟು ಕಣ್ಗೊಳಿಸುತ್ತಿದ್ದಿತು.

ಕಾರ್ಯಾರ್ಥಿಯಾಗಿ ಹೋಗಿದ್ದ ಮನೆಯ ಯಜಮಾನನು, ಆಳಿನೊಡನೆ ಬಂದು ಬೀದಿಯ ಹಂತದ ಬಳಿಯಲ್ಲಿ ನಿಂತನು. ಈತನು ಪ್ರಾಯಃ ಇಪ್ಪತ್ತೇಳು ಇಪ್ಪತ್ತೆಂಟುವರ್ಷದ ಸುಂದರ

ಯುವಕನು, ವಿದ್ಯಾ-ವಿನಯಾದಿ ಸದ್ಗುಣಸಮಾವೇಶದಿಂದ ತೇಜೋಮಯನಾದ ಧೀರವರನೂ ಆಗಿದ್ದನು.

ಯುವಕನು ನಿಂದೊಡನೆ ಆತನ ದೃಷ್ಟಿ, ಬಲಗಡೆ ಪಡಸಾಲೆಯ ಮೇಲೆಬಿದ್ದು ಕೌತುಕವನ್ನುಂಟುಮಾಡಿತು. (ಅನುಚರನನ್ನು ಕರೆದು) "ಅದಾರು? ಇಲ್ಲಿ ಮಲಗಿರುವರು!"

ಅನು;—(ಕೈಯಲ್ಲಿದ್ದ ಲಾಂದ್ರವನ್ನು ಮಲಗಿದ್ದ ವ್ಯಕ್ತಿಯಕಡೆಗೆ ತೋರಿಸಿದನು. ಮಲಗಿದ್ದುದು ಸ್ತ್ರೀವ್ಯಕ್ತಿ! ಯುವಕನು ಮತ್ತಷ್ಟು ಆತುರದಿಂದ ಇಣಿಕಿಣಿಕಿ ನೋಡಿದನು. ಸ್ತ್ರೀ ವ್ಯಕ್ತಿಯೇ! ಇಪ್ಪತ್ತುವರುಷಕ್ಕೆ ಮೀರಿದವಳಲ್ಲವೆಂಬ ಬೋಧೆಯಾಯ್ತು.) (ತನ್ನಲ್ಲಿಯೇ ವಿಚಾರಮಾಡಿ) "ಏನಿದು? ಈ ಸಣ್ಣ ವಯಸ್ಸಿನಲ್ಲಿ, ಈ ಅನಿಂದಿತ ತೇಜೋಮಯಪಾತ್ರದಲ್ಲಿ, ಈ ತೆರದ ದುರವಸ್ಥೆಯೇ! ಈ ದೈನ್ಯಭಾವವೇ? ಈ ವಿರಕ್ತವೇಷವೇ? ಸುಡುಸುಡು!! ವಿಧಾತನ ನಿಷ್ಠುರತೆಯನ್ನು ಸುಡುಸುಡು!! (ಕಡೆಗೆ ಕೆಲಹೊತ್ತಿನಮೇಲೆ ತನಗೆ ತಾನೇ ತಿಳಿದು, ಕರುಣಾವ್ಯಂಜಕ ಸ್ವರದಿಂದ ಕೂಗಿದನು.) "ತಾಯೀ! ಏಳಮ್ಮಾ, ಏಳು"

ಸ್ತ್ರೀವ್ಯಕ್ತಿ:—(ಚಕಿತೆಯಾಗಿ ಎದ್ದು ಕುಳಿತಳು.)

ಯುಜ:—ನೀನಾರು? ತಾಯೀ!

ಸ್ತ್ರೀ:—ಅಣ್ಣಾ! ನಾನು ವಿರಾಗಿಣಿ. ದೇಶಾಟನೆಯಿಂದ ತೊಳಲಿ ಬಳಲಿ, ಚೇತರಿಸಿಕೊಳ್ಳಲು ಮಲಗಿ ಇಲ್ಲೇ ಮೈಮ್ಮರೆತು ನಿದ್ದೆಮಾಡಿದೆನು. ಕ್ಷಮೆಯಿರಲಿ?

ಯುಜ:—(ದಯಾರ್ದ್ರದೃಷ್ಟಿಯಿಂದ ಮತ್ತೊಮ್ಮೆ ವಿರಾಗಿಣಿಯನ್ನು ನೋಡಿದನು; ಮರೆತಿದ್ದ ವಿಚಾರವಾವುದೋ ನೆನಪಿಗೆ

ಬಂದಂತಾಗಲು, ಕುತೂಹಲದಿಂದ) "ತಾಯಿ! ನಿನ್ನನ್ನು ಅನೇಕವೇಳೆ ನೋಡಿರುವೆನು; ಆದರೂ ಮರೆತಂತಿದೆ; ನಿರ್ಧರಿಸಲಾರೆನು. ನಿನಗಾದರೂ ನೆನೆಪಿದ್ದರೆ ಹೇಳು?"

**ವಿರಾ:**—(ಸಂಕುಚಿತಸ್ವರದಿಂದ) ನನಗೂ, ಸಂಶಯವೇ!

**ಯಜ:**—ತಾಯಿ! ಉಳಿದ ಪರಿಚಯವು ನಿಧಾನವಾಗಿ ದೊರೆಯಲಿ, ಬಳಲಿರುವೆ; ಒಳಗೆ ಬಂದು ವಿಶ್ರಮಿಸಿಕೊಳ್ಳಬಹುದು.

**ವಿರಾ:**—ಅಣ್ಣಾ! ಬರಲು ತಡೆಯಿಲ್ಲ, ಆದರೆ ಮನೆಯಲ್ಲಿರತಕ್ಕ ಹೆಂಗಸರ ಅಭಿಪ್ರಾಯವನ್ನು ತಿಳಿಯದೆ ಮೊದಲೇ ಹೇಗೆ ಬರಲಿ?

**ಯಜ:**—ಹಾಗಿದ್ದರೆ ನಾನು ಬರುವವರೆಗೂ, ನೀನೆಲ್ಲಿಗೂ ಹೋಗಲಾರೆಯಷ್ಟೆ?

**ವಿರಾ:**—ಅಷ್ಟು ಆತುರಕಾರ್ಯವಿಲ್ಲ.

**ಯಜ:**—"ಆದರೆ ಸರಿ" (ಎಂದು ಗೃಹಾಂತರವನ್ನು ಹೊಕ್ಕನು.)

**ವಿರಾ.**—(ಸೇವಕನನ್ನು ನೋಡಿ) ಅಯ್ಯಾ! ಇವರಾರು? ಶ್ರೀಯುತ, ರಘು–

**ಸೇವಕ:**—ಅಹುದಹುದು! ತಾಯಿ! ಇವರೇ ಪುಣ್ಯಪುರುಷರಾದ ಶ್ರೀಯುತ ರಘುನಾಥಪರಮಾನಂದರವರು.

**ವಿರಾ:**—(ತಲೆದೂಗುತ್ತ) ಇವರಿಗೆ ಸಂತಾನಲಾಭವುಂಟೋ?

**ಸೇವಕ:**—ಇಲ್ಲ; ಇನ್ನೂ ಸಂತಾನಲಾಭವಿಲ್ಲ.

**ವಿರಾ:**—ಇವರ ಪತ್ನಿಯವರ ಹೆಸರು "ಕೃಷ್ಣವೇಣೀಬಾಯಿ" ಎಂದಲ್ಲವೆ?

**ಸೇವಕ:**—ಅಹುದು.

ವಿರಾ:—ಪತ್ನಿಯಲ್ಲದೆ ಮನೆಯಲ್ಲಿ ಮತ್ತಾರಾರಿರುವರು ?

ಸೇವಕ:—ಅವರತಾಯಿ, ಮತ್ತು ಗಂಡಸಿಲ್ಲದ ತಂಗಿ, ಇವರಿಬ್ಬರು ಮಾತ್ರವೇ !

ವಿರಾ:—ತಮ್ಮನಿರಲಿಲ್ಲವೇ ?

ಸೇವಕ:—ಅವರು, ತಮ್ಮ ಕೆಟ್ಟ ನಡೆವಳಿಯಿಂದ ಇವರನ್ನು ಸಿಟ್ಟಿಗೆಬ್ಬಿಸಿ, ಮನೆಬಿಟ್ಟು ಹೋಗಿರುವರು.

ವಿರಾ:—ಎಲ್ಲವೂ ಕರ್ಮಫಲವು ! ಇಲ್ಲಿ ಪರಮಾನಂದರು ಶಾಲಾ ಮುಖ್ಯೋಪಾಧ್ಯಾಯರಲ್ಲವೆ ?

ಸೇವಕ:—ಅಷ್ಟೇ ಅಲ್ಲ ! ಇಲ್ಲಿಯ ಪ್ರತಿಯೊಂದು ಸಮಾಜಕ್ಕೂ ಸಹಾಯಕರು, ಬ್ರಹ್ಮವಿದ್ಯಾಸಮಾಜದ ವಿಚಾರಣಾಕರ್ತರು; ಅವರ ಮತ್ತೊಂದು ಶಾಖೆಯಾಗಿ ಸ್ತ್ರೀಸಂಘಪರಿಷ್ಕರಣಕ್ಕೂ ಪ್ರಯತ್ನಪಟ್ಟಿರುವವರು.

ವಿರಾ:—(ತಲೆದೂಗಿ) ಸಾಧು ! ಪುರುಷಶ್ರೇಷ್ಠ ! ಸಾಧುಸಾಧು !!

(ವಿರಾಗಿಣಿಯ ಸಾಧುವಾದನಕ್ಕೆಸರಿಯಾಗಿ ಗೃಹಾಂತರವನ್ನು ಹೊಕ್ಕಿದ್ದ ರಘುನಾಥನು ಮತ್ತೆ ಬಂದು ಮುಂದೆನಿಂತನು.)

ವಿರಾ:—"ಸತ್ಸಂಕಲ್ಪಕ್ಕೆ ಧನ್ಯವಾದವು"

ರಘು:—(ವಿರಾಗಿಣಿಯನ್ನು ನೋಡಿ ಸಖೇದಾಶ್ಚರ್ಯದಿಂದ) ಈ ಯಲ್ಪವಯಸ್ಸಿನಲ್ಲೀ ಬಲವತ್ತಪಶ್ಚರ್ಯೆ ! ಈ ಕೋಮಲ ದೇಹದಲ್ಲಿ, ಈ ಆಶ್ರಮಸ್ವೀಕಾರ. (ಎಂದು ಕ್ಷಣಕಾಲ ಸುಮ್ಮನಿದ್ದು ಬಳಿಕ) "ಸಾಧು ! ಸಾಧ್ವಿ ! ಭವದ್ವೃತ್ತಿ ರೇವಸಾಧುಸಾಧು !!"

ವಿರಾ:—(ತಲೆಬಾಗಿ) ಭವಾದೃಶಭ್ರಾತೃಸಹಾಯವಿದ್ದಲ್ಲಿ ಅಸಾಧ್ಯ ವಾವುದು ?

ರಘು:—ಭಲೆ! ತಾಯಿಾ! ಕ್ಷಮಾಪ್ರಭಾವವೆಂದಾಡದೆ, ಭ್ರಾತೃ ಸಹಾಯವೆನ್ನುವೆ! ನಿನ್ನೀಭ್ರಾತೃವಾತ್ಸಲ್ಯವೇ ದಿಗ್ವಿಜಯವನ್ನು ಹೊಂದುವಂತೆ ಪ್ರಯತ್ನಿಸು; ಭಗವತ್ಸಹಾಯವೂ ನೆರವಾಗುವುದು.

ವಿರಾ:—ಪ್ರಯತ್ನವು, ಯಥೋಚಿತವಾಗಿ ನಡೆಯುತ್ತಿದೆ.

ರಘು.—ಸೋದರಿ, ನಿನ್ನನ್ನು ನೋಡಿದಾಗಳಿಂದ ನನಗೆ ಅವ್ಯಾಜ ಸೋದರ ವಾತ್ಸಲ್ಯವು ಕ್ಷಣಕ್ಷಣಕ್ಕೆ ವೃದ್ಧಿಯಾಗುತ್ತಿದೆಯಲ್ಲದೆ, ನಿನ್ನಲ್ಲಿ ಕೆಲವು ವಿಚಾರಗಳನ್ನು ಹೇಳಬೇಕೆಂಬ ಕುತೂಹಲವೂ ಉಂಟಾಗಿದೆ

ವಿರಾ—ತಡೆಯೇನು?

ರಘು:—ಮುಚ್ಚಿಡಲಾಗದು?

ವಿರಾ.—ಹಿತಚಿಂತಕರಲ್ಲಿ ಮುಚ್ಚಿಡಲೇಕೆ?

ರಘು:—ಅದು ನಿನ್ನ ಮನದಲ್ಲಿ ಬಲವಾಗಿರಲಿ! ಹೇಳು. ನೀನು ನನ್ನ ಸೋದರತ್ತೆಯ ಮಗಳಾದ "ನಭೆ" ಯೆಂಬುದೇ ನನ್ನ ಭಾವನೆ!

ವಿರಾ:—ಯಾವ ಕಾರಣದಿಂದ?

ರಘು:—ಆಕೃತಿ, ಪ್ರಕೃತಿಗಳೇ ಸಾಕಾದ ಕಾರಣಗಳು! ಸಾಲ ಮದಕ್ಕೆ ಜನಜನಿತವಾರ್ತೆ ವ್ಯಥಪಡಿಸುತ್ತಿದೆ.

ವಿರಾ—ಅಣ್ಣಾ! "ನಭಾ" ನಾಮವು ಅಂದೇ ನಾಶವಾಯ್ತು. ಅವಳಾದುರ್ಜೀವನವೂ ಕೊನೆಗಂಡಿತು. ನಾನು ವಿರಕ್ತೆಯಾದ ವಿರಾಗಿಣಿ; ನಭೆಯಲ್ಲ.

ರಘು:—ನಿಜವಾಗಿ ಹೇಳು? ನೀನೇ ನಭೆ?

ವಿರಾ:—ಅಣ್ಣಾ! ಇದೇಕಿಷ್ಟುಸಂಶಯ? ಪ್ರಕೃತಿ ಸ್ಥಿತಿಗಳಿಂದ

ವಿಚಾರಮಾಡಿದರೆ ನಾನಾರೆಂಬುದು ತಿಳಿಯದೆ? ನಾನು ನಿಜ ವಾಗಿಯೂ ವಿರಾಗಿಣಿ!

ರಘು:—(ಅನುಮಾನದಿಂದ) ತಾಯಿ! ವಿಚಾರವಿಮರ್ಶೆಯಿಂದ ನಿನ್ನನ್ನು ವಿರಾಗಿಣಿಯೆಂದೇ ಅರಿತೆನು! ಹಾಗೆಯೇ, ನಿನ್ನ ಮೂಲಪ್ರಕೃತಿ ನಭೆಯದೆಂದೇ ನಂಬುವೆನು?

ವಿರಾ:—ಬಲ್ಲವರೆಂತಾದರೂ ತಿಳಿಯಬಹುದು.

ರಘು:—[ತಲೆದೂಗಿ] ತಾಯಿ! ನಿರ್ಧರವಾಯ್ತು. ನಿನ್ನೀವಿರಕ್ತ ವೃತ್ತಿಗೆ ಕಾರಣವೂ ನಿರ್ದಿಷ್ಟವಾಯ್ತು. ಇನ್ನು ಸಂಕು ಚಿತಭಾವವು ಸಾಕು, ಒಳಗೆ ಬಾ?

ವಿರಾ:—ಅಣ್ಣಾ! ನಿನ್ನ ಮಾತನ್ನು ಮೀರಲಾರೆನು. ಆದರೆ, .....

ರಘು:—ಆದರೆ, ಏನು? ಹೆಂಗಸರೇನಾದರೂ ಮುಳಿವರೆಂಬ ಶಂಕೆಯೋ? ಸಾಕು! ಸಾಕು!! ಆ ನಿನ್ನನುಮಾನವು ದೂರ ವಾಗಿರಲಿ. ಆರೊಬ್ಬರ ಕೋಪ ತಾಪಗಳಿಗಾಗಿ ನಾವು ನಮ್ಮ ಜನ್ಮವ್ರತವನ್ನೂ, ಜನನೀಜನಕರ ಸಂದೇಶವನ್ನೂ ಬಿಡ ಬಹುದೇ? ನಮ್ಮಿಬ್ಬರ ಆತ್ಮಗಳೂ, ಶುದ್ಧಭಾವದಲ್ಲಿರುವಲ್ಲಿ ನಮಗೇತರ ಭಯವು?

ವಿರಾ:—ಅಣ್ಣಾ! ನಿಂದಾಸ್ತುತಿಗಳಿಗೆ ಕುಗ್ಗಿ ಹಿಗ್ಗುವಂತಹ ಲೋಭ ಮೋಹಗಳೆಲ್ಲವೂ ಅಂದೇ ನನ್ನಿಂದ ಜಲಾಂಜಲಿಯನ್ನು ಕೈಕೊಂಡುವು. ಮತ್ತವುಗಳ ಭಯವೇನೂ ಇಲ್ಲ. ಆದರೂ, ನನಗಾಗಿ ನನ್ನ ಪ್ರಿಯಸೋದರೀಸೋದರರಲ್ಲಾರೂ, ಖಿನ್ನ ರಾಗಬಾರದು! ಇದೊಂದೇ ನನ್ನ ಮನದೆಣಿಕೆ!

ರಘು:—ಸರಿ, ತಾಯಿ! ವಿಚಾರಮಾಡು? ನಿನ್ನ ನೆಲೆಯರಿಯಲು, ತಿಂಗಳಿಂದ ನಿನ್ನೀಭ್ರಾತೃವೆಷ್ಟೆಷ್ಟು ಪ್ರಯಾಸಪಟ್ಟನೆಂಬು

ದನ್ನು ನಿನ್ನಲ್ಲಿ ನೀನೇ ಊಹಿಸು ! ನಿನ್ನೊಡನಾಡಿಯೂ ಅಕ್ಕನೂ, ಆಗಿರುವ ನನ್ನ ಪತ್ನಿಯನ್ನು ಈಗಿನ ಹಟ, ಶಠತೆಗಳನ್ನು ಬಿಟ್ಟು ಸರಲವೃತ್ತಿಗೆ ಬರುವಂತೆಸಗಲು ನಿನ್ನ ಸಾಹಾಯ್ಯವನ್ನೇ ಕೋರುತ್ತಿದ್ದ ನನ್ನ ಮನೋದಾರ್ಢ್ಯವನ್ನೂ ಕರುಣಿಸಿ ನೋಡು ? ಮೌಢ್ಯವೃತ್ತಿಯಲ್ಲಿ ಜಡರಾಗಿರುವ ಧರ್ಮಸೋದರಿಯರನ್ನು ಸುಸ್ಥಿತಿಗೆ ತರಬೇಕಾದ ಚಿರವ್ರತಕ್ಕೆ ನೀನೇ ಕಂಕಣವನ್ನು ಕಟ್ಟಿಕೊಳ್ಳಬೇಕಲ್ಲದೆ ಮತ್ತಾರಿಂದಲೂ ಸಾಧ್ಯವಿಲ್ಲ.

ವಿರಾ —ಅಣ್ಣಾ ! ನನ್ನ ಮನದೆಣಿಕೆ ಬೇರೆಯಾಗಿಲ್ಲ. ಶಕ್ತ್ಯನುಸಾರವಾಗಿ ಸೋದರೀಸೇವೆಯಿಂದ ಇಹಜನ್ಮದ ಪರಾಕಾಷ್ಠೆಯನ್ನು ಕಾಣಬೇಕೆಂಬುದೊಂದೇ ನನ್ನ ಸಂಕಲ್ಪವು. ಹೇಗೂ, ನನ್ನ ಅಜ್ಞಾತವಾಸವೆಲ್ಲಿಯಾದರೂ, ಕಳೆಯಬೇಕಾದುದು, ಇಲ್ಲಿಯೇ ಕಳೆಯಲಿ ! ಕುಂದೇನು ?

ರಘು —(ಸಂಭ್ರಮದಿಂದ) ಧನ್ಯ ! ಸತ್ಯಪುರುಷ ! ಧನ್ಯಧನ್ಯ !! ಈ ಅಲ್ಪನ ಬಲವದುದ್ಯಮವು ಸಾರ್ಥಕ್ಯವಾಗುವಂತೆ ಮಾಡಿದ ನೀನಲ್ಲವೇ ಪುಣ್ಯಪುರುಷ ? ಸಂದೇಹವೇನು ? (ವಿರಾಗಿಣಿಯನ್ನು ನೋಡಿ) ವಿರಾಗಿಣಿ ! ನಿನ್ನೀ ಆಗಮನದ ಅಲಭ್ಯಲಾಭದಿಂದ ಈ ನಿನ್ನಗ್ರಜನ ಹೃತ್ಕೋಶದಲ್ಲಿ ನೂತನಶಕ್ತಿಯುತ್ಪನ್ನವಾಗಿದೆ. ಇದೇ ಜಯಸೂಚನೆ ! ಹೊತ್ತಾಯ್ತು, ಇನ್ನು ಒಳಗೆ ಬಾ ! (ಎಂದು ವಿರಾಗಿಣಿಯೊಡನೆ ಮನೆಯೊಳಹೊಕ್ಕನು.)

॥ ಶ್ರೀಃ ॥

## ದ್ವಿತೀಯ ಪರಿಚ್ಛೇದ.

(ನಿಷ್ಠುರಹೃದಯ.)

ರಘುನಾಥನ ಹೃತ್ಕ್ಲೇಶವು, ಸದ್ಗುಣಸಮಾವೇಶದಿಂದೆಷ್ಟು ವಿಸ್ತಾರವಾಗಿರುವುದೋ, ತದನುಗುಣವಾಗಿ ಆತನ ವಾಸಭವನವೂ, ವಿಶಾಲವೂ_ತಕ್ಕಂತೆ ಅನುಕೂಲವೂ, ಆಗಿದ್ದಂತೆ ಕಂಡು ಬರುವುದು. ಪಾಠಕರ ಅವಗಾಹನೆಗೆ ಸಂಗ್ರಹವಾಗಿ ನಿರೂಪಿಸುವೆವು.

ಬೀದಿಯ ಬಾಗಿಲನ್ನು ದಾಟಿ ಒಳಹೊಕ್ಕರೆ, ಅಂಗಳಗಳೆರಡು; ಅವುಗಳೆರಡಕ್ಕೂ ನಡುವೆ ಬಯಲು, ಎರಡನೆಯ ಅಂಗಳದ ಇಕ್ಕೆಲಗಳಲ್ಲಿಯೂ ದೊಡ್ಡದೊಡ್ಡ ಜಾವಡಿಗಳು, ಅವುಗಳಲ್ಲಿ ಎಡಗಡೆಯದೇ ರಘುನಾಥನ ಓಲಗಸಾಲೆ; ಬಲಗಡೆಯದೇ ವಿದ್ಯಾರ್ಥಿಗಳ ವಾಚನಶಾಲೆ.

ಅಂಗಳವನ್ನು ಬಿಟ್ಟು ಮುಂದೆ ನಡೆದರೆ ಅಲ್ಲೊಂದು ಸಣ್ಣ ನಡುವೆ, ಅಲ್ಲಿಂದ ಮುಂದಕ್ಕೆ ಒಳಹಜಾರದ ಮನೆ, ಹಜಾರದ ನಾಲ್ಕು ಕಡೆಗಳಲ್ಲಿ ಕಿರುಮನೆಗಳು, ಈಶಾನ್ಯದಿಕ್ಕಿನಲ್ಲಿ ಊಟದ ದೊಡ್ಡ ಅಂಗಳ, ಅದರಆಚೆ, ಅಡುಗೆ ಮತ್ತು ದೇವರ ಮನೆಗಳು, ಹಜಾರಕ್ಕೆ ನೈರುತ್ಯದಿಕ್ಕಿನಲ್ಲಿ ಮಹಡಿಗೆ ಹತ್ತುವ ಹಂತದ ಬಾಗಿಲು, ವಾಯುವ್ಯದಿಕ್ಕಿನಲ್ಲಿ ಕಾಲಕ್ಷೇಪದ ಸ್ಥಳ, ಹಜಾರದ ಆಗ್ನೇಯ ದಿಕ್ಕಿನಲ್ಲಿ ದೊಡ್ಡಬಯಲು, ಅದರ ಬಲಗಡೆ ಬಾವಿ, ಬಾವಿಯ

ಸುತ್ತಲೂ ತುಲಸೀವನ, ಬಯಲಿಗೆಡಗಡೆ ಎತ್ತರವಾದ ಬೃಂದಾವನ, ಬೃಂದಾವನದ ಮುಂದೆ ಬಿಡದಿಯೊಂದು, ಬಿಡದಿಗೂ ಬೃಂದಾವನಕ್ಕೂ ಸೇರಿದಂತೆ ಮೇಲಗಡೆ ಬಗೆಗೊಳ್ಳುವ ಚಪ್ಪರ, ಬೃಂದಾವನಕ್ಕೂ ಬಾವಿಗೂ ನಡುವಣ ಬಾಗಿಲೇ ಹಿತ್ತಿಲಿಗೆ ಹೋಗುವಂತಹದು. ಹಿತ್ತಿಲಾದರೂ ಚಿಕ್ಕದಲ್ಲ. ಸುತ್ತಲೂ, ಆಳುದ್ದದ ಬಲವಾದ ಗೋಡೆಗಳಿಂದ ಆವೃತ. ಮನೋಹರಗಳಾದ ಫಲಪುಷ್ಪಭರಿತ ತರುಲತಾಗುಲ್ಮಗಳಿಂದ ಕೂಡಿದ ದೊಡ್ಡತೋಟ. ಇನ್ನು ಮಾಳಿಗೆಯಮೇಲೆ ಹೀಗೆಯೇ ಅನುಕೂಲ ಬಾಹುಳ್ಯವಿದ್ದಿತೆಂದೇ ವಾಚಕರು ತಿಳಿಯಬೇಕು. ವಿಶೇಷ ವಿವರಣೆಯಿಂದ ಬೇಸರವುಂಟಾಗಬಹುದು.

ಸುಹೃದ್ಬಾಂಧವರೇ !

ಅನವಶ್ಯವಿಚಾರಗಳನ್ನು ತೆಗೆವೆವೆಂದು ಬೇಸರಿಸಬಾರದು. ರಘುನಾಥನ ಹಿಂದೆ ಬಂದ ವಿರಾಗಿಣಿ ತೊಟ್ಟಿಯಲ್ಲಿ ಕುಳಿತು, ಇನ್ನು ಮುಂದೆ ತಾನು ಬರಲೊಲ್ಲನೆಂದು ಹೇಳಿಬಿಟ್ಟಳು. ರಘುನಾಥನೇ ಉಪ್ಪರಿಗೆಯನ್ನು ಹತ್ತಿ ಮಲಗುವ ಕಿರುಮನೆಯೊಳ ಹೊಕ್ಕು ನೋಡಿದನು, ಬೆರಗಾಗಿ ನಿಂತನು. ಏಕೆ ? ಕಿರುಮನೆಯಲ್ಲಿ ಚಾಪೆಯಮೇಲೆ ದೀಪಕ್ಕಿದಿರಾಗಿ, ರಜೋಗುಣಪ್ರಧಾನ ಸ್ತ್ರೀಮೂರ್ತಿಯೊಂದು ಪ್ರತಿಷ್ಠಿತವಾಗಿದ್ದಿತು. ಮೂರ್ತಿಯು, ಮಾನವೀವ್ಯಕ್ತಿ ; ಆದರೂ ಅಚಲತೆಯಿಂದ ಪಾಷಾಣಮಯ ಮೂರ್ತಿಯಂತಿದ್ದಿತು. ಬೆರಗಾಗುವುದೊಂದಾಶ್ಚರ್ಯವೇ ?

ರಘು —(ಕಿರುನಗೆಯಿಂದ) "ಏನು! ಕೃಷ್ಣೆ! ಫೋಟೋಕ್ಯಾಮರಾವನ್ನು ತರಲೇ? (ಕುಳಿತಿದ್ದಾ ಸ್ತ್ರೀಯೇ ರಘುನಾಥನಪತ್ನಿಯಾದ ಕೃಷ್ಣವೇಣಿಯೆಂದು ಪ್ರತ್ಯೇಕ ಹೇಳಬೇಕಾಗಿಲ್ಲ.)

ಕೃಷ್ಣಾ:—(ಮುಖದಲ್ಲಿ ತಾನಾಗಿ ತೋರುತ್ತಿದ್ದ ನಗೆಯನ್ನು ಪ್ರಯಾಸದಿಂದ ತಡೆದು) ಬೇಕಾದುದನ್ನು ತರಬಹುದು. ಬೇಡವೆನ್ನುವರಾರು ?

ರಘು:—ಬೇಡವೆನ್ನುವುದಿಲ್ಲವೊ ? ಸರಿಯೆ, ನನ್ನ ಮಾತನ್ನು ಕೇಳಿಯೇ ಕೇಳುವೆ ?

ಕೃಷ್ಣಾ:—ಕೇಳುವುದಕ್ಕೇನು ? ಕಿವಿಮುಚ್ಚಿಹೋಗಿಲ್ಲ ; ಮಾಡಬೇಕಾದರೆ ಆಲೋಚಿಸಬೇಕು.

ರಘು:—ಆಲೋಚಿಸು ! ಆಲೋಚಿಸು ! ಕೆಳಗೆ ಬಂದಿರುವವರಾರೆಂಬುದನ್ನು ನೋಡಬೇಡವೊ ?

ಕೃಷ್ಣಾ:—ನಾನೇಕೆ ಬರಬೇಕು ?

ರಘು:—ಮನೆಗೆ ಬಂದವರನ್ನು ಆದರಿಸುವುದು, ನಿನಗೆ ಸೇರಿದುದಲ್ಲವೇ ?

ಕೃಷ್ಣಾ:—ಹೆಂಗಸೊ ? ಗಂಡಸೊ ?

ರಘು:—ಗಂಡಸಾಗಿದ್ದರೆ ನಿನ್ನವರೆಗೂ ಸುದ್ದಿ ಬರುತ್ತಿರಲಿಲ್ಲ, ಅವಳೊಬ್ಬ ವಿರಾಗಿಣಿ !

ಕೃಷ್ಣಾ:—ದಿನಗಳೆದವಳೊ ?

ರಘು:—ಹೇಗೋ-ನಿನಗೆ ತಂಗಿ !

ಕೃಷ್ಣಾ:—(ವ್ಯಂಗ್ಯವಾಗಿ ನಗುತ್ತ) ಓಹೋ! ಆಗಲೇ ತಂಗಿಯಾಗಿಬಿಟ್ಟಳೊ ?

ರಘು:—ಕೂಡದೆ ? ಅವಳು ನಿಜವಾಗಿ ನಿನಗೆ ತಂಗಿ.

ಕೃಷ್ಣಾ:—ನಿಮಗಿನ್ನೂ ಹೆಚ್ಚಿನ ನಂಟುತನ ?

ರಘು:—ಆಹಾ ! ಅಡ್ಡಿಯಿಲ್ಲದೆ ನನಗೆ ಪರಮಾಪ್ತಬಂಧುವೇ !

ಕೃಷ್ಣಾ:—(ಅಸೂಯೆಯಿಂದ) ಎಂತಹ ಆಪ್ತಬಾಂಧವ್ಯವೊ ? ಹಾಳು ನಂಟುತನವೋ ?

ರಘು:—ಮಾನವಸ್ವಭಾವಧರ್ಮಾನುಗುಣಬಾಂಧವ್ಯವೇ!

ಕೃಷ್ಣಾ:—(ಶಠಭಾವದಿಂದ) ಏನೆಂದಿರಿ?

ರಘು:—ನಾನೇನೆಂದೆನು? ಇಷ್ಟೆ! ಅವಳು ಸ್ಥಿತಿ-ರೂಪಗಳಿಂದ ಮಾತ್ರವೇ ನಿನ್ನ ತಂಗಿ; ನನಗೆ ಹಾಗಲ್ಲ? ಸ್ವಭಾವ-ಗುಣ ವಿಶೇಷಗಳೆಲ್ಲವುಗಳಿಂದಲೂ ನನಗೆ ಪವಿತ್ರತಮೆಯಾದ ತಂಗಿ!

ಕೃಷ್ಣ.—(ದರ್ಪಿತಸ್ವರದಿಂದ) ಹಾಗಾದರೆ ನಿಮಗೇ ಸೇರಿದಂತೆ.—

ರಘು:—ನಾನೇನೋ ಒಳಗೆ ಕರೆತಂದಿರುವೆನು. ನೀನೂ ಒಮ್ಮೆ ಕಂಡು ಬಾ?

ಕೃಷ್ಣ—ಕಾಣಿಸಿಕೊಳ್ಳದಿದ್ದರೇನು?

ರಘು:—ಏನೆಂಬುದನ್ನು ನಾನೇಕೆ ಹೇಳಬೇಕು? ನೋಡಲಾಗುವುದೋ ಇಲ್ಲವೊ?

ಕೃಷ್ಣ.—ಏತಕ್ಕಾಗಿ?

ರಘು:—ನನಗಾಗಿ!

ಕೃಷ್ಣ—ಒಳಕ್ಕೆ ಕರೆತಂದಾಗ ನಾನು ಬಂದಿದ್ದರಲ್ಲವೇ ಈಗ ಬರಬೇಕೆಂಬ ಕಟ್ಟಳೆ?

ರಘು:—ಆಗ ನಾನು ಹೇಳಿದುದು, ನಿನ್ನ ಕಿವಿಯನ್ನೇ ಹೊಗಲಿಲ್ಲ.

ಕೃಷ್ಣ:—ಅದೆಲ್ಲಿಯ ಹಾಳು ಪಿಶಾಚವೋ? ಇಲ್ಲೇಕೆ ಬಂದಿತೋ?

ರಘು:—ಛೀ! ಛೀ! ಹಾಗೆನ್ನಬಾರದು, ಅವಳಾಗಲೇ ಬರಲೊಲ್ಲೆನೆಂದಳು.

ಕೃಷ್ಣ:—ಹಾಗಾದರೆ, ನೀವೇ ಎಳೆತಂದಿರೋ?

ರಘು:—ಹಾಗೆಂದೇ ಹೇಳು, ನನ್ನನ್ನು ಹೇಗಾದರೂ ಭಾವಿಸು, ಅದರಿಂದ ನನಗೇನೂ ಕುಂದಿಲ್ಲ. ನಿನ್ನನ್ನು ಎಳೆತನ

ದಿಂದಲೂ ಸಾಕಿದ ಆ ನಿನ್ನ ಹಿರಿಯಮ್ಮನಿಗೆ, ನೀನೇನೂ, ಉಪಕಾರ—

ಕೃಷ್ಣ:—ಏಕೆ? ಇದ್ದುದನ್ನೆಲ್ಲಾ ಆರಾರಿಗೋ ತೆತ್ತು, ಹಾಳಾದವಳಿಗೆ ನಾನು ಮಾಡಬೇಡವೇ?

ರಘು:—ಛೀ! ಇದೇ ಹೆಂಗಸರ ದುರಾಶ? ಇದೇ ಸ್ತ್ರೀಸಾಮಾನ್ಯಕ್ಕೆ ವಕ್ರಿಸಿರುವ ಪ್ರಬಲ ಕೃತಘ್ನತೆ! ಅವಳು ನಿನಗಿನ್ನೇನನ್ನು ಮಾಡಬೇಕಾಗಿದ್ದಿತು? ತನ್ನ ಶಕ್ತಿಯಿದ್ದಷ್ಟು ಉಪಕರಿಸಿದಳು. ತನ್ನ ಮಗಳೊಡನೆ ನಿನಗೂ ತಕ್ಕಷ್ಟು ಓದುಬರೆಹಗಳನ್ನು ಕಲಿಸಿದಳು. ಕಡೆಗೆ ದೊಡ್ಡ ಮನೆತನಕ್ಕೆ, ಅದರಲ್ಲಿಯೂ ಅನುಕೂಲವಾದ ಮನೆಗೆ, ಒಡತಿಯನ್ನಾಗಿ ಮಾಡಿಹೋದಳು.

ಕೃಷ್ಣ:—ನಿಜ! ಅವಳ ಉಪಕಾರವೇ ನನ್ನನ್ನು ಹೀಗೆ ಹಗಲಿರಳೂ, ಗೋಣಮುರಿಯುತ್ತಿದೆ. ಇಲ್ಲದಿದ್ದರೆ, ನಿಮ್ಮಮ್ಮನ ಕುಯ್ಲಿಗೆ ಪಕ್ಕಾಗುತ್ತಿರಲಿಲ್ಲ.

ರಘು:—ಭಲೆ! ಇದೊಂದುಬಗೆ ಸೊಸೆಯ ಸೊಬಗಿನಸುಗ್ಗಿ! ಪಾಪ! ನಿನ್ನನ್ನು ನಮ್ಮಮ್ಮನು ಬೇಕುಬೇಕೆಂದೇ ಕೊಲ್ಲುತ್ತಿರುವಳು; ಏನುಮಾಡಲಾಗುವುದು? ಈಗಲೂ ಹೇಳು; ನಿನಗೆ ಇಲ್ಲಿರಲಿಷ್ಟವಿಲ್ಲವೊ?

ಕೃಷ್ಣ—ಇಷ್ಟವಿದ್ದರೂ, ಇಲ್ಲದಿದ್ದರೂ, ಇಲ್ಲಿರದೆ ಮತ್ತೆಲ್ಲಿಗೆ ಹೋಗಬಹುದು?

ರಘು:—(ಕಿರುನಗೆಯಿಂದ ಕೃಷ್ಣವೇಣಿಯ ಬೆನ್ನತಟ್ಟಿ) ನೋಡು, ನೋಡು! ನಿನಗೆಲ್ಲಿದ್ದರೆ ಸುಖ-ಸಮಾಧಾನಗಳಿರುವುವೊ, ಆರು, ನಿನಗೆ ಹಿತಚಿಂತಕರೋ ಅಲ್ಲಿರಲು ನನ್ನ ಅಭ್ಯಂತರವೇನೂ ಇಲ್ಲ, ಸಂತೋಷವಾಗಿರಬಹುದು.

ಕೃಷ್ಣ.—(ಅಪ್ರತಿಭೆಯಾಗಿ ಉತ್ತರವಿಲ್ಲದೆ ತಲೆವಾಗಿ ಕುಳಿತು ಬಿಟ್ಟಳು)

ರಘು:—ಕೃಷ್ಣ! ಇದೇಕೆ? ಕೋಪವೊ? ಬೇಡಬೇಡ! ತಾಳ್ಮೆಯೇ ಮೇಲ್ಮೆಗೆ ಕಾರಣವೆಂಬುದನ್ನು ಚೆನ್ನಾಗಿ ನಂಬು? ಆಶ್ರಿತಪರಿಪಾಲನವೇ ಆರ್ಯಮಹಿಳೆಯರ ಅವಶ್ಯಕರ್ತವ್ಯವೆಂಬುದನ್ನು ಒಂದೇ ಮನಸ್ಸಿನಿಂದ ಗುಣಿಸುತ್ತಿರು! ಹೋಗಿ ನೋಡು, ನಿನ್ನ ಹಿರಿಯಮ್ಮನ ಮಗಳು ಆ ಸಭೆ ವಿರಾಗಿಣಿಯಾಗಿ ಬಂದಿರುವಳು, ಮಾತನಾಡಿಸು; ಬಾ?

ಕೃಷ್ಣ:—(ಸಿಟ್ಟಿನಿಂದ) ಹೋದವಳು ಹಾಗೆಯೇ ಹಾಳಾಗಲಿಲ್ಲವೇಕೆ? ಇಲ್ಲೇಕೆ ಕರೆತರಬೇಕು? ಎಲ್ಲಾದರೂ, ಹೋಗಲೆಂದು ಸುಮ್ಮನಿದ್ದರಾಗುತ್ತಿರಲಿಲ್ಲವೊ?

ರಘು:—(ವಿಸ್ಮಿತನಾಗಿ) ಏಕೆ, ನೀನೇ ಹೀಗೆ ಹೇಳುವೆ?

ಕೃಷ್ಣ:—ಮತ್ತೇನು? ನಮ್ಮ ಸೋದರತ್ತೆ ಶರಾವತಿಗಾದ ಸುಖವು ಸಾಲದೊ? ನನ್ನ ತಂದೆ ತಾತಂದಿರ ಕುಲಕ್ಕೆಲ್ಲಾ ಒಬ್ಬನೇ ಒಬ್ಬನಾದ ರಾಜಶೇಖರನಿಗಾದ ಸುಖ ಸಂತೋಷಗಳು ಸಾಲವೊ? ಇಲ್ಲಿ ಇನ್ನಾರಾರಿಗೆ ಶನಿ ವಕ್ರಿಸಿರುವುದೊ?

ರಘು:—ಪಾಪ! ನಿರಪರಾಧಿನಿಯನ್ನು ಸುಮ್ಮನೇಕೆ ದೂರುವೆ? ಸತೀತ್ವವೊಂದಲ್ಲದೆ, ಮಿಕ್ಕ ಸಶ್ವರಸಂಪದಗಳನ್ನೆಲ್ಲಾ ತೊರೆದು, ವಿರಾಗಿಣಿಯಾಗಿರುವಳು, ಆರಿಗೆತಾನೇ ಅಹಿತವನ್ನು ಕೋರುವಳು?

ಕೃಷ್ಣ:—ಅಯ್ಯೋಪಾಪ! ನಿರಾಪರಾಧಿನಿ; ಹರೆಯದ ಗಂಡಸರ ಮುಂದೆ ನಾಣ್ಗೆಟ್ಟು ಇಲ್ಲದ ಸಲ್ಲದ ತಳಕು ಬಳಕುಗಳನ್ನು ತೋರಿ ಹಳ್ಳಕ್ಕೆ ಕೆಡಹಿದವಳು, ಅಷ್ಟೆ!

ರಘು:—(ತನ್ನಲ್ಲಿ) "ಸಹನವೆಂಬುದು, ಸ್ತ್ರೀಮಂಡಲಿಯಲ್ಲಿಯೇ ಇಲ್ಲವೊ? ಇದ್ದರೆ ಈ ಬಗೆಯ ತಿಳಗೇಡಿತನವೇಕೆ ಬಲವಾಗುತ್ತಿದ್ದಿತು? ನ್ಯಾಯಾನ್ಯಾಯವಿಮರ್ಶೆಯೇಕೆ ಕುಗ್ಗುತ್ತಿದ್ದಿತು?" (ಎಂದು ಚಿಂತಿಸಿ ಮತ್ತೆ) "ಕೃಷ್ಣ! ಹೇಗಾದರೂ ಇರಲಿ; ನನ್ನ ಮಾತಿನಮೇಲೆ ಅವಳನ್ನು ನೋಡಿ ಬಾ?"

ಕೃಷ್ಣ:—ಅವಳನ್ನು ನಾನು ನೋಡಲಾರೆನು? ಬೇಕಾದವರು ಮರ್ಯಾದಿಸಬಹುದು?

ರಘು:—(ಖತಿಯಿಂದ ನಿಟ್ಟುಸಿರಿಟ್ಟು) ಹೂಂ; ನನ್ನ ಅದೃಷ್ಟ! ನೀನೇನು ಮಾಡಬಲ್ಲೆ? ನೀನೆಂದಿಗೆತಾನೇ ನನಗನುಕೂಲೆಯೆನಿಸುವೆ? ನಿನ್ನ ನಿಷ್ಠುರಹೃದಯದಲ್ಲಿ ಶಾಂತಿರಸವೆಂದು ಹುಟ್ಟುವುದು? (ಹೀಗೆ ಹೇಳುತ್ತ ಹೇಳುತ್ತ ಹೊರಟು ಹೋದನು)

॥ ಶ್ರೀಃ ॥

## ತೃತೀಯ ಪರಿಚ್ಛೇದ.

(ಪ್ರಥಮ ಮರ್ಯಾದೆ)

ಭೋಜನಕಾಲವನ್ನು ಸೂಚಿಸುವಂತೆ ಭೋಜನಶಾಲೆಯು ಸಾಲುಮಣೆಗಳಿಂದಲೂ, ಮುಂದೆಡೆ ಬೆಳಬೆಳಗುತ್ತಿದ್ದ ಸೀನೀರಿನ ಪಾತ್ರೆಗಳಿಂದಲೂ ಪ್ರಕಾಶಮಾನವಾದ ದೀಪಗಳಿಂದಲೂ, ಬಗೆಗೊಳ್ಳುತ್ತಿದ್ದುದು. ವೃದ್ಧೆಯೊಬ್ಬಳು ಮೆಲ್ಲಮೆಲ್ಲನೆ ಪದ್ಮನಾಭ ಸಂಕೀರ್ತನೆ ಮಾಡುತ್ತೆ ಎಲೆಗಳನ್ನು ಹಾಕುತ್ತಿದ್ದಳು. ಇವಳೇ ರಘುನಾಥನ ಗರ್ಭಧಾರಿಣಿ-ಲಕ್ಷ್ಮೀದೇವಮ್ಮನೆಂಬುವಳು.

ರಘು:—(ಪತ್ನಿಯ ನಿಷ್ಠುರಹೃದಯಕ್ಕಾಗಿ ಖತಿಗೊಂಡು ಬಂದು, ತಾಯಮುಂದೆ ನಿಂತು ಮೆಲ್ಲಗೆ) "ಅಮ್ಮಾ! ಅಪೂರ್ವಲಾಭ"

ಲಕ್ಷ್ಮೀ:—(ಕುತೂಹಲದಿಂದ) ಆವುದಪ್ಪ?

ರಘು:—ವಿರಕ್ತ ಸನ್ಯಾಸಿನೀ ಸುಖಾಗಮನವೇ?

ಲಕ್ಷ್ಮೀ:—ಅವಳಾರು!

ರಘು:—ನಿನ್ನ ಸೋದರಸೊಸೆ, ನಭೆ.

ಲಕ್ಷ್ಮೀ:—ಹೇಗೆ ಬಂದಳು?

ರಘು:—ವಿರಕ್ತಿಪ್ರಭಾವದಿಂದ.

ಲಕ್ಷ್ಮೀ:—ಒಬ್ಬಳೇ ಬಂದಳೇ?

ರಘು:—ನೈಷ್ಠಿಕಬ್ರಹ್ಮಚರ್ಯೆಯಲ್ಲಿ ದೇಶಸೇವಾವ್ರತವನ್ನು ಕೈಕೊಂಡಿರುವವಳಿಗೆ ಆರಜತೆ ಬೇಕು? ಲೋಕವೆಲ್ಲವೂ ತನ್ನದೇ ಆಗಿದೆ.

ಲಕ್ಷ್ಮೀ:—ಇಲ್ಲಿಗೇಕೆ ಬಂದಳು ?

ರಘು:—ಅವಳಾಗಿ ಬರಲಿಲ್ಲ, ದಾರಿನಡೆದು ಬಳಲಿ ಬೀದಿಯ ಪಡಸಾಲೆಯ ಮೇಲೆ ಮಲಗಿದ್ದಳು, ನಾನೇ ಗುರುತಿಸಿ ಬಲಾತ್ಕಾರಮಾಡಿ ತೊಟ್ಟಿಯುವರೆಗೆ ಕರೆತಂದೆನು.

ಲಕ್ಷ್ಮೀ:—ಎಲ್ಲಿರುವಳು ?

ರಘು:—ಹಜಾರದಲ್ಲಿರುವಳು. ಮುಂದಕ್ಕೆ ಬರಲಾರಳಂತೆ.

ಲಕ್ಷ್ಮೀ:—(ತಲೆಯೆತ್ತಿ) "ಎಲೆ ತುಂಗೆ! ತುಂಗೆ!" (ಎಂದೆರಡು ಬಾರಿ ಕೂಗಿದಳು.)

(ಲಕ್ಷ್ಮೀದೇವಮ್ಮನ ಕೂಗು ನಿಲ್ಲುವುದರೊಳಗಾಗಿಯೇ, ತೊಟ್ಟಿದ್ದ ಚಿನ್ನರನ್ನದೊಡವೆಗಳ ಥಣಕು ಮಿಣುಕಿನಿಂದಲೂ, ಉಟ್ಟಿದ್ದ ಪಟ್ಟುಸೀರೆಯ ಸಿರಿಮುರಿ ಸಪ್ಪಳದಿಂದಲೂ, ಮುಡಿಯಲ್ಲಿ ಡಕಗೊಂಡಿದ್ದ ಹೂವಿನ ಕಂಪಿಸಿಂದಲೂ, ಕುಲುಕು ವೈಯ್ಯಾರದಿಂದ ಬಂದ ಮದಿಸಿದ ಕಪ್ಪನೆಯ ವಿಗ್ರಹವೊಂದು ರಘುನಾಥ, ಲಕ್ಷ್ಮೀದೇವಮ್ಮನವರ ಮುಂದೆ ನಿಂತುದು.)

ರಘು:—(ಮುಂದೆನಿಂದ ಕರಾಳವ್ಯಕ್ತಿಯನ್ನು ನೋಡಿ ಒಮ್ಮೆ ನಿಟ್ಟುಸಿರಿಟ್ಟು) "ತುಂಗೆ! ಹಜಾರದಲ್ಲಿ ಕುಳಿತಿರುವ ಸನ್ಯಾಸಿನಿಯನ್ನು ಬರಹೇಳು."

ತುಂಗೆ:—ಸನ್ಯಾಸಿನಿಯನ್ನೇಕೆ ಕರೆತರಬೇಕು ?

ರಘು:—ಅವರಾಗಿ ಇತರರ ಮನೆಯನ್ನು ಹೊಗುವುದಿಲ್ಲವಾದರೂ, "ಅವಳ ಸಹವಾಸಬಲದಿಂದ ದೇಶೋದ್ಧಾರಕಾರ್ಯದಲ್ಲಿ ನೀನೂ ಸಿದ್ಧಿ ಹೊಂದಬಹುದು." ಎಂದು ಬರಮಾಡಿದೆನು. ಕರೆದುಕೊಂಡುಬಾ.

ಲಕ್ಷ್ಮೀ:—ತುಂಗೆ! ಹೋಗಿ ಅವಳನ್ನು ಇಲ್ಲಿಗೆ ಕರೆದುಕೊಂಡು

ಬಾ ! ನೋಡಿ ಕಣ್ಮನಂಗಳು ತಣಿಯಲಿ ! (ರಘುನಾಥನನ್ನು ನೋಡಿ) " ರಘು, ನೀನಿನ್ನು ಊಟಕ್ಕೆ ಏಳು "

ರಘು:—" ಇದೋ ಎದ್ದೆನು " ಎಂದು ಹೇಳಿ ಹೊರಟುಹೋದನು.

(ತುಂಗಭದ್ರೆ ಬಂದು ಹಜಾರದಲ್ಲಿ ತಲೆವಾಗಿ ಚಿಂತಿಸುತ್ತ ಕುಳಿತಿದ್ದ ವಿರಾಗಿಣಿಯ ಮುಂದೆನಿಂತು, ಬೆರಗಾಗಿ ನೋಡು ತ್ತಿದ್ದಳು.)

ವಿರಾ:—(ತಲೆಯೆತ್ತಿ) ತುಂಗಾ ! ಇದೇಕೆ ಬೆರಗಾಗಿ ನೋಡು ತ್ತಿರುವೆ ?

ತುಂಗೆ:—ನೀನೇ ನಮ್ಮ ನಭೆ !

ವಿರಾ:—(ಅಷ್ಟಕ್ಕೇ ತಡೆದು) ಬೇಡ, ಆ ಹೆಸರು ಅಷ್ಟಕ್ಕೇ ಕೊನೆ ಗಂಡಿತು. ಇನ್ನದನ್ನು ಎತ್ತಬೇಡ

ತುಂಗೆ:—ನಿನ್ನಿದಿರಿಗೆ ನಿಲ್ಲಲು ನನಗೆ ನಾಚುಗೆಯಾಗುವುದು.

ವಿರಾ:—(ಕಿರುನಗೆಯಿಂದ) ಏಕೆ ನಾಚುಗೆ ? ನಾನೇನಾದರೂ ದೈವಿಕ ವ್ಯಕ್ತಿಯೋ ? ನಿನ್ನಂತೆಯೇ ನಾನೂ ಒಬ್ಬ ಹೆಂಗಸು.

ತುಂಗೆ:—ಆಗಲಿ, ನಿನಗೂ ನನಗೂ ಬಹಳ ಅಂತರವಿದೆ.

ವಿರಾ:—ಅವೆಲ್ಲವೂ ಅಭ್ಯಾಸದಮೇಲಿದೆ.

ತುಂಗೆ:—ಹೋಗಲಿ, ಅಮ್ಮನು ಬರಹೇಳಿದನು.

ವಿರಾ.—ಎಲ್ಲಿಗೆ ?

ತುಂಗ:—ಊಟದಮನೆಗೆ.

ವಿರಾ:—ನಿನ್ನ ಅತ್ತಿಗೆಯೆಲ್ಲಿ ?

ತುಂಗ:—ಮಹಡಿಯಮೇಲೆ.

ವಿರಾ:—ಬರಲಿ, ನಿಮಗೆಲ್ಲರಿಗೂ ಊಟವಾದಮೇಲೆ ಬರುವೆನೆಂದು ಹೇಳು.

ತುಂಗ:—ನಾನೊಬ್ಬಳೇ ಹೋದರೆ ಅಮ್ಮನು ಬಯ್ಯುವಳು.

(ಈ ವೇಳೆಗೆ ಸರಿಯಾಗಿ ಅಂಗಳದೊಳಗಿಂದ ಲಕ್ಷ್ಮೀದೇವಮ್ಮನು "ಎಲೇ ತುಂಗೆ! ತುಂಗೆ! ಹೋದವಳು ಅಲ್ಲಿಯೇ ಅಡಗಿಬಿಟ್ಟೆಯೊ?" ಎಂದು ಕೂಗಿಕೊಂಡಳು.)

ತುಂಗ:—ವಿರಾಗಿಣಿ! ಅಮ್ಮನು ಅರಚುತ್ತಿರುವಳು. ಹೊತ್ತು ಗಳೆಯದೆ ಬೇಗ ಏಳು.

ವಿರಾ:—ಇಲ್ಲ, ನಾನು ಬರುವುದಿಲ್ಲ.

(ಲಕ್ಷ್ಮೀದೇವಮ್ಮನು ಮತ್ತೆ "ಕೃಷ್ಣವೇಣಿ! ಬರುವುದಿಲ್ಲವೇನೆ? ಎಷ್ಟುಸಲ ಕೂಗಿ ಸಾಯಬೇಕು? ಕಿವಿಗೇಳದೇನು? ಎಂದು ಕೂಗಿಕೊಂಡಳು.)

ವಿರಾ:—ತುಂಗೆ! ಹೋಗು, ಹಿರಿಯರನ್ನು ಬಳಲಿಸಬಾರದು. ನಾನಿಲ್ಲಿಯೇ ಇರುವೆನು. ಆಮೇಲೆ ಬಾ.

ತುಂಗೆ:—ಹೋದರಾಯ್ತು, ಅತ್ತಿಗೆ ಬರುವುದರೊಳಗೆ ನಾನು ಹತ್ತುಬಾರಿ ಹೋಗಿಬಂದೇನು!

(ತುಂಗೆಯ ಮಾತು ಮುಗಿಯುವುದಕ್ಕೆ ಮೊದಲೇ ಬಂದ ಕೃಷ್ಣವೇಣಿಯು ನಾದಿನಿಯಮೇಲೆ ಸಿಟ್ಟಾಗಿ "ಅಹುದಮ್ಮಾ ಅಹುದು, ನಾನೊಬ್ಬಳೇ ಅಲಸೆ, ನೀವೆಲ್ಲರೂ ಚಟುವಟಿಕೆಯವರು; ಏನುಮಾಡುವುದು?"

ತುಂಗೆ:—ಅತ್ತಿಗೆ! ಇಷ್ಟಕ್ಕೇ ಕೋಪವೇ? ಚೆನ್ನಾಗಿದೆ. ಪರಿಹಾಸಕ್ಕೆ ಹೇಳಿದರೂ ಕೋಪವೊ? ಬಲು ಚೆನ್ನಾಗಿದೆ.

ಕೃಷ್ಣ:—ನನ್ನ ಕೋಪವು ನನ್ನನ್ನೇ ತಿನ್ನಬೇಕಲ್ಲದೆ ಕೇಳುವವರಾರು?

ವಿರಾ:—ಅಕ್ಕಾ! ಸುಖವಾಗಿರುವೆಯಾ?

ಕೃಷ್ಣ:—ಇನ್ನೂ ಸತ್ತಿಲ್ಲ.

ವಿರಾ:—ಸತ್ತರೆ ಬರುವ ಸಿರಿಯೇನು ?

ಕೃಷ್ಣ:—ಕಷ್ಟವಾದರೂ ತಪ್ಪುವುದು.

ವಿರಾ:—ಹೇಗೆ ? ಅನುಭವವೆಂದಿಗೂ ತಪ್ಪದು. ಅಕಾಲದಲ್ಲಿ ಮರಣವೂ ಬಾರದು. ಸತ್ತುದರಿಂದಲೇ ಸುಖವುಂಟಾಗದು. ಬರತಕ್ಕ ಕಷ್ಟಸುಖಗಳನ್ನು ಸಮಾಧಾನದಿಂದ ಅನುಭವಿಸಬೇಕಾದುದೇ ಮಾನವಲಕ್ಷಣವು. ಕ್ಷಮೆಯೊಂದು ಕೈವಶವಾಗಿದ್ದಲ್ಲಿ, ಸಮಸ್ತವೂ ಸುಖವೇ ಆಗುವುದು।

ಕೃಷ್ಣ:—ಅಹುದು, ಹೇಳಲು ಸುಲಭ, ಮಾಡಲು ಕಷ್ಟ.

ತುಂಗೆ:—ವಿರಾಗಿಣೀ ! ಇನ್ನು ಸಾಕು ಏಳು.

ವಿರಾ:—ನಾನು ಬರುವುದಿಲ್ಲ.

ಕೃಷ್ಣ:—ಏಕೆ ? ಇಲ್ಲಿ ಊಟಮಾಡಲಾಗದೋ ?

ವಿರಾ:—ಅಂತಹುದೇನೂ ಇಲ್ಲ. ನನಗೇಕೆ ಇಷ್ಟು ಬಲಾತ್ಕಾರ ?

ಕೃಷ್ಣ:—ಬಲಾತ್ಕಾರವಿಲ್ಲ. ಸನ್ಯಾಸಕ್ಕೆ ಏಕಾಶನವೇ ಮುಖ್ಯನಿಯಮ ! ಹೇಗೆಬೇಕಾದರೂ ಮಾಡಲಿ.

(ಎಂದು ಹೇಳಿ ಹೊರಟುಹೋದಳು. ತುಂಗಭದ್ರೆಯೂ ತಲೆದೂಗುತ್ತ ಹೊರಟಳು.)

(ಕಡೆಗೆ, ಲಕ್ಷ್ಮೀದೇವಮ್ಮನೇ ಬಂದು ವಿರಾಗಿಣಿಯ ಮುಂದೆ ನಿಂದಳು. ಅವಳಾ ವೇಷ ಭೂಷಣಗಳನ್ನು ಕಂಡು, ಸಖೇದಾಶ್ಚರ್ಯಗಳಿಂದ ಚಿತ್ರಪ್ರತಿಮೆಯಂತಾದಳು.)

ವಿರಾ:—ಇದೇಕೆ ಹೀಗೆ ನೋಡುವೆ ? ಅತ್ತೆ ! ನಾನೇನಾದರೂ ವಿಜಾತೀಯ ವ್ಯಕ್ತಿಯೋ ?

ಲಕ್ಷ್ಮೀ:—ಹಾಗೆಯೇ ಇದೆ. ಎಲ್ಲವೂ ಸಂಚಿತಫಲ ! ತಾಯಿಾ !

ಹೀಗೇಕೆ ಈ ಎಳೆತನದಲ್ಲಿಯೇ ಕರುಳನ್ನು ಕುಂದಿಸುವೆ ? ವಿರಕ್ತಿಗೂ ಕಾಲವಿಲ್ಲವೇ ? ಇದರಿಂದ ಆಮೇಲಾದರೂ ರೋಗಗಳುಂಟಾಗವೇ ?

ವಿರಾ.—ಅತ್ತೆ ! ತಿಳಿದ ನೀನೇ ಹೀಗೆ ಹೇಳಬಹುದೇ ? ವಿರಕ್ತಿಯಿಂದ ಸುಖವಲ್ಲದೆ ದುಃಖವೇ ? ಬಾಲ್ಯದಿಂದಲೂ ಸಂಸ್ಕಾರಹೊಂದದ ಉಪಕರಣಗಳು, ಬಲಿತಮೇಲೆ ಬಳಕೆಗೆ ಬರುವುವೆ? ಅಂತಹವುಗಳಿಂದ ಏನಾದರೂ ಹಿತವುಂಟಾಗುವುದೇ? ವಿರಕ್ತಿವೃತ್ತಿ ಬಾಲ್ಯದಿಂದ ಪಾಠವಾಗಿ ಬಂದಿರಬೇಕು.

ಲಕ್ಷ್ಮೀ—ನಾನು ಇದಕ್ಕೇನು ಹೇಳುವುದು ?

ವಿರಾ:—ತಾಯಿ ! ನೀನು ಹೇಳಬೇಕಾದುದು ಬಹಳವಾಗಿದೆ. ಆದರೆ, ಈಗ ನನಗೆ ಪ್ರತ್ಯೇಕ ಸ್ಥಳವೊಂದನ್ನು ತಿಳಿಯ ಹೇಳಿದರೆ ಸಾಕು.

ಲಕ್ಷ್ಮೀ:—ಅವರಿಬ್ಬರೂ ಊಟಕ್ಕೆ ಕುಳಿತಿರುವರು. ಉಣಬಡಿಸಲು ಹೋಗಬೇಕಾದುದರಿಂದ ನನಗೆ ವೇಳೆಯಿಲ್ಲ. ರಘುವೇ ಬಂದು ತೋರುತ್ತಾನೆ. (ಎಂದು ಹೇಳಿ ಹಿಂದಿರುಗಿದಳು.)

(ವಿರಾಗಿಣಿಯು ಕುಳಿತಂತೆಯೇ ಕೃಷ್ಣವೇಣಿಯಿಂದಾದ ಪ್ರಥಮಮರ್ಯಾದೆಯನ್ನು ಕುರಿತು, ಮತ್ತೆ ಮತ್ತೆ ವಿಚಾರ ಮಾಡುತ್ತ ಸ್ತಬ್ಧಳಾಗಿ ಕುಳಿತುಬಿಟ್ಟಳು.)

|| ಶ್ರೀಃ ||

# ಚತುರ್ಥ ಪರಿಚ್ಛೇದ.

---

## (ಸಂಕಲ್ಪ)

ಊಟವಾದಮೇಲೆ ರಘುನಾಥನು ವಿರಾಗಿಣಿಯನ್ನು ನೋಡಲು ಬಂದನು (ಚಿಂತಾಪರವಶೆಯಾಗಿ ಸ್ಮೃತಿಯಿಲ್ಲವೆ ಕುಳಿತಿದ್ದವಳನ್ನು ನೋಡಿ ಕರುಣಾವ್ಯಂಜಕಸ್ವರದಿಂದ)—"ತಾಯಿ ! ನಿದ್ದೆಯು ?'' ಎಂದು ಕೇಳಿದನು.

ವಿರಾ·—(ತಲೆಯೆತ್ತಿ) ಅಣ್ಣಾ ! ಭವಿಷ್ಯಜ್ಜೀವನಚಿಂತೆಯೊಂದಲ್ಲದೆ ನಿದ್ದೆಯೆಲ್ಲಿ ? ಏನು ವಿಚಾರ ?

ರಘು —ವಿಚಾರವಿಮರ್ಶನವುಂಟು !

ವಿರಾ —ತಡವೇಕೆ ?

ರಘು —(ಇದಿರಾಗಿ ಕುಳಿತು) ತಾಯಿ ! ನಿನ್ನ ಆಯಾಸವೆಂತಿರುವುದು ?

ವಿರಾ:—ಅವಶ್ಯವಿಚಾರಕಾಲಗಳಲ್ಲಿ ನಿದ್ದೆಯಿಂದಿದ್ದರೆ ಆಗುವುದೇ? ಆಯಾಸವೆಂದಿರಬಹುದೆ ?

ರಘು —ನಿಜ , ಆದರೆ, ಉತ್ತರಪ್ರತ್ಯುತ್ತರಗಳಲ್ಲಿ ತಿಳಿಯದೆ ಬರಬಹುದಾದ ತಪ್ಪುಗಳನ್ನು ಮನ್ನಿಸಬಲ್ಲೆಯಲ್ಲವೆ ?

ವಿರಾ:—ನೈಜಭ್ರಾತೃವಾಕ್ಯದಲ್ಲಿ ಪ್ರಕಾರಾಂತರಭಾವವೂ ಹುಟ್ಟುವುದೇ ? ಇಷ್ಟೇಕೆ ಸಂದೇಹಪಡುವೆ ?

ರಘು:—ತಾಯಿ ! ನೀನು ಶ್ಯಾಮನಗರವನ್ನು ಬಿಟ್ಟು ಬಂದೆರಡು ವಾರಗಳು ಎಲ್ಲಿದ್ದೆ ? ಹೇಗೆ ಬಂದೆ ?

ವಿರಾ:—ಅಣ್ಣಾ ! ಅಂದು ನಾನು ಧರಾಮಾತೆಯಲ್ಲೇ ಅನನ್ಯಶರಣೆ ಯಾಗಿ ಹೊರಟು, ಅದೇ ರಾತ್ರಿಯೇ ಈ ವಿರಕ್ತವೇಷದಲ್ಲಿ ಕೊಂಡಪಾಳ್ಯವೆಂಬ ಹಳ್ಳಿಯನ್ನು ಸೇರಿದೆನು. ಅಲ್ಲಿಯ ಜನರು ನನ್ನನ್ನು ಪೂಜ್ಯಭಾವದಿಂದೀವರೆಗೂ ಅತ್ತಿತ್ತ ಬಿಟ್ಟಿರದೆ ಸೇವಿಸುತ್ತಿದ್ದರು. ಆದರೆ ನನಗಿನ್ನು ಅಲ್ಲಿರಲಾ ಗದೆ ಹೊರಟುಬಿಡಬೇಕೆಂಬ ಚಲವಿಡಿದುದರಿಂದ ಅವರು ಕಡೆಗೆ ನನ್ನನ್ನು ಕಡುದುಗುಡದಿಂದ ನಂಬುಗೆಯ ಸೇವಕ ನೊಡನೆ ಬೀಳ್ಕೊಟ್ಟರು. ಅವರೊಡನೆ ಬಂದು ನಾನು ಇಲ್ಲಿಂದ ಅವರನ್ನು ಹಿಂದಕ್ಕಟ್ಟಿದೆನು.

ರಘು:—ತಾಯಿ ! ನೀನಿಲ್ಲಿಗೆ ಬಂದುದು, ನನ್ನ ಸುಕೃತದ ಫಲ ದಿಂದಲ್ಲದೆ ಬೇರಿಲ್ಲ ! ನಿನ್ನ ಸುಖಾಗಮನದಿಂದ ಈ ನಿನ್ನ ಭ್ರಾತೃವು ಸುಖಿಯಾಗಿರುವಂತೆ ಮತ್ತಾರೂ ಆಗಿಲ್ಲ.

ವಿರಾ:—ನಾನು ಇಲ್ಲಿಗೆ ಬಂದಾಗ ನಿನ್ನ ನೆನಪೇ ಇರಲಿಲ್ಲ. ಬಂದ ವಳು, ಒಮ್ಮೆ ಅತ್ತೆಮಾವಂದಿರಿಗೆರಗಿ ಅವರ ಆಶೀರ್ವಾದ ಗಳನ್ನು ಪಡೆದು, ಮುಂದೆ ಹೊರಡಬೇಕೆಂದೆಣಿಸಿದ್ದೆನು. ಆದರೇನು ? ಸ್ತ್ರೀಸಹಜವಾದ ಲಜ್ಜಾವರಣವು ನನ್ನನ್ನು ತಡೆದುಬಿಟ್ಟಿತು. ಕಡೆಗೆ ನಾನು ಭಗವನ್ನಿಯಮಿತಸ್ಥಳವೆಲ್ಲಿ ರಬಹುದೆಂಬುದನ್ನು ಹುಡುಕಿಕೊಂಡು ಬರುತ್ತಾ ಈ ಮನೆ ಬಾಗಿಲಲ್ಲೇ ಉಳಿದೆನು. ಭಗವತ್ಪ್ರೇರಣೆಯೇ ನನ್ನನ್ನು ಇಲ್ಲಿಂದ ಮುಂದಕ್ಕೆ ಹೋಗಗೊಡಲಿಲ್ಲ.

ರಘು:—ತಾಯಿ ! ಎಲ್ಲವೂ ಭಗವದಿಚ್ಛೆ ! ನಿನ್ನ ವಿಯೋಗಜನ್ಯ ದುಃಖವು ನಿನ್ನ ಮಾತಾಪಿತೃಗಳನ್ನು ಮಾತ್ರವೇ ಕುಂದಿ ಸಿರಲಿಲ್ಲ. ನನ್ನನ್ನೂ ವಿಚಾರಗ್ರಸ್ತನನ್ನಾಗಿ ಮಾಡಿದ್ದಿತು.

ವಿರಾ:—ನಿನಗಾರಿಂದ ತಿಳಿಯಿತು ?

ರಘು:—ಮತ್ತಾರಿಂದ ತಿಳಿವುದು ?

ವಿರಾ:—(ಕುತೂಹಲದಿಂದ) ನಿರಂಜನನಿಂದಲೇ ? ಹಾಗಾದರೆ, ವಿದ್ಯಮಾನವೆಲ್ಲವೂ ತಿಳಿದಿದೆ ?

ರಘು:—ಎಲ್ಲವೂ ತಿಳಿದಿವೆ ; ನಿನ್ನ ಚಿಕ್ಕಪ್ಪ-ಶಂಕರನಾಥನು, ವಿರಕ್ತನಾಗಿ ತಮ್ಮನ ಪೋಷಣೆಗೊಳಪಟ್ಟು ಶ್ಯಾಮನಗರ ವಲ್ಲಿರುವನು. ಅಲ್ಲಿ ಎಲ್ಲರೂ ಕ್ಷೇಮಿಗಳಾಗಿರುವರು. ಮತ್ತೇನು ?

ವಿರಾ:—ಚಿಕ್ಕಮ್ಮ ಶರಾವತಿಯೊ ?

ರಘು:—ಅವಳು ಶಂಕರಪೇಟೆಯನ್ನು ಬಿಟ್ಟಾದರೂ ಬರುವಳೇ ?

ವಿರಾ.—ಅಲ್ಲಿ ಅವಳಿಗಾರು ಜತೆ ?

ರಘು.—ಧನಪಿಶಾಚವೂ ಜತೆಯನ್ನು ಹುಡುಕುವುದೇ ? ಇರುವ ವರೆಗೂ ಒಬ್ಬರ ಆತಂಕವಿಲ್ಲದೆ ಮನಬಂದಂತೆ ಸುಖವಾಗಿರ ಬಹುದು. ತನ್ನ ಅಪ್ತೇಷ್ಟರನ್ನೂ ತಂದಿಟ್ಟುಕೊಳ್ಳ ಬಹುದು. ಮತ್ತೇನು ಬೇಕು ? ನನ್ನ ತಮ್ಮ ಸೌಬಲನೂ ಕೂಡ ಅಲ್ಲಿ ಕಿರಿಯಮ್ಮನೆಡೆಯಲ್ಲಿರುವನು.

ವಿರಾ:—ದೈವೇಚ್ಛೆಯಿದ್ದರೆ ನಾನೂ ಮತ್ತೊಮ್ಮೆ ಅವರನ್ನು ನೋಡುವೆನು.

ರಘು:—ನೋಡು, ಫಲವೇನು ? ಅವಳ ದ್ವೇಷವು ಮಾತ್ರ ಹೆಚ್ಚಿ ದಂತಾಗುವುದಲ್ಲದೆ ನಿನಗೇನು ?

ವಿರಾ:—(ಚಕಿತೆಯಾಗಿ) ನನ್ನಲ್ಲಿ ಆಕೆಗೆ ದ್ವೇಷವೇ ?

ರಘು:—(ಕಿರುನಗೆಯಿಂದ) ಇಲ್ಲ ; ತಾಯಿ ! ನಿನ್ನಲ್ಲಿ ಪೂರ್ಣಾಭಿ ಮಾನ ; ಸಾಲದುದಕ್ಕೆ ರಾಜಶೇಖರನ ದುರ್ದಶೆಯೂ ಸೇರಿ, ಮತ್ತಷ್ಟು !! ಆದರೆ,—

ವಿರಾ:—(ಗಾಬರಿಯಿಂದ) ರಾಜಶೇಖರನಿಗೆ ದುರ್ದಶೆಯೇ ?

ರಘು:—ಅಕರ್ಮದ ಅಲಂಘ್ಯಫಲ ! ದುರಾಚಾರದ ಮರ್ದ್ದನೀಯ ಚಿಂತೆ !! ಪರಸ್ವಾಪಹರಣ-ವಿಷಯಾತುರಗಳ ವಿಪದ್ದಶೆ !!!

ವಿರಾ:—ಏನು? ಏನಾಯ್ತು ? ವರ್ತಮಾನವೇನು ? ಹೇಗಿರುವನು?

ರಘು:—ಶ್ಯಾಮನಗರದ ಜ್ಞಾನಮಂಟಪದಲ್ಲಿ, ನಿಗಳಬಂಧನದ ಜಾಗ್ರದವಸ್ಥೆಯಲ್ಲಿ, ಬಾಯ್ದೆರೆದು ಚೀರಿಡುತ್ತಿರುವನು !

ವಿರಾ:—ನಿಜವಾಗಿ ! ಕಾರಾಗೃಹವಾಸ !! ರಾಜಶೇಖರನಿಗೆ ನಿಗಳ ಬಂಧನ ?

ರಘು.—ತಾಯಿ ! ಹೀಗೇಕೆ ಬೆಜ್ಜರಗೊಳ್ಳುವೆ ? ನಿಜವಾಗಿಯೂ ಕಾರಾಗೃಹವಾಸ.

ವಿರಾ:—(ಮರ್ಮಾಹತೆಯಾದಳು ! ಮುಂದೆ ಮಾತು ಹೊರಡಲಿಲ್ಲ. ಅನುತಾಪದಿಂದ ದೇಹವಾದ್ಯಂತವೂ ಜ್ವಲಿಸುವಂತಾಯಿತು ; ಅವಳಾವಿಶಾಲಾಕ್ಷಿಗಳಿಂದ ಶೋಕಾಶ್ರುಕಣಂಗಳುದುರುತ್ತಿದ್ದುವು. ಸಂಕಟವನ್ನು ತಡೆಯಲಾರದೆ ಗೋಡೆಗೆ ತಲೆಯನ್ನಿಟ್ಟು, ಅನುಕಂಪಿತಸ್ವರದಿಂದ) "ವಿಧಾತ ! ಇದೇ ನಿನ್ನ ಘಟನಾಕ್ರಮವೇ ? ಈ ದೀನಸನ್ಯಾಸಿನಿಯಲ್ಲಿಯೂ ಈ ನಿಷ್ಠುರವೆ ? ಭಗವಂತ ! ಏನು ನಿನ್ನ ಲೀಲೆ ? ಈ ಮಂದಭಾಗಿನೀ ಸಂಕಲ್ಪವು ನಿನಗರಿಯದುದೇನು ? ಈ ದೀನ ಚೇತನವು ನಿರಂತರವೂ ಶೋಕಾನುತಾಪಗಳಿಂದ ಬೆಂದು ಹೋಗಬೇಕೆಂಬುದೇ ನಿನ್ನಿಚ್ಛೆಯೇ ? ಆಗಲಿ, ಅದೂ ಆಗಲಿ, ಮಾಡು ! ನಿನಗಿಷ್ಟವಾದುದನ್ನೆಲ್ಲಾ ಮಾಡಿನೋಡು, ನಲಿದಾಡು " ಎಂದು ಹೇಳಿ ಸುಮ್ಮನಾದಳು.

ರಘು:—(ರಘುನಾಥನ ಕಾರುಣ್ಯಮಯಚಿತ್ತವು ವಿರಾಗಿಣಿಯ ದೈನ್ಯ

ಪ್ರಲಾಪಕ್ಕೆ ಕರಗಿ ನೀರಾಯಿತು. ಗದ್ಗದ ಸ್ವರದಿಂದ)—
"ತಾಯಿ! ಇದೇನೀಯಸ್ಥಿರತೆ? ನಿನ್ನ ನೈಷ್ಠಿಕವೃತ್ತಿಗೆ
ಇದೇ ಪ್ರತಿಬಂಧಕವಲ್ಲವೇ? ಶಾಂತಳಾಗು, ತಾಯಿ
ಶಾಂತಳಾಗು.

ವಿರಾ.—(ಕಾತರಸ್ವರದಿಂದ) ಅಣ್ಣಾ! ನನ್ನ ದುಡುಕೇ ರಾಜ
ಶೇಖರನ ಕೇಡಿಗೆ ಕಾರಣವಾಯ್ತೇ? ಈ ಹಾಳು ಕೈಬರೆ
ಹವೇ ಅವನಾ ದುಸ್ಥಿತಿಗೆ ಮೂಲವಾಯ್ತೇ? ಅಯ್ಯೋ
ನಾನೇಕೆ ಅದನ್ನು ಬರೆದಿಟ್ಟುಬಂದೆಸು? ಹಾಗೆಯೇ ಬಂದಿದ್ದ
ರೇನಾಗುತಿದ್ದಿತು? ನನ್ನ ಸುಖವೇ ನನಗೆ ಹೆಚ್ಚಾದುದೇ?
ರಾಜಶೇಖರನಿಗಾಗುತಿದ್ದ ಕಷ್ಟವಾದರೂ ಹೊಳೆಯದಿದ್ದು
ದೇ? ನನಗೇಕೆ ಅಂದು ದುರಭಿಮಾನವುಂಟಾಯ್ತು?
ಈಗೇನುಮಾಡಲಿ? ಇದಕ್ಕೆ ಪ್ರತೀಕಾರವೇನು? ಅಣ್ಣಾ!
ರಾಜಶೇಖರನ ತಾಯಿಗೆ ನಾನೆಂತಹ ಶತ್ರುವಾದೆ? ಪಾಪ;
ಏಕಮಾತ್ರಪುತ್ರನಿಗಾದ ದುರವಸ್ಥೆಗಾಗಿ ಅವಳಂತು ಶೋ
ಕಾರ್ಣವದಲ್ಲಿ ಮುಳುಗುವಂತಾದಳೇ? ಅಷ್ಟೇ ಅಲ್ಲ!
ವಿದ್ಯಾವಿನಯಾದಿಗಳಿಂದ ಪ್ರೋನ್ನತಿಗೆ ಬರಬೇಕಾಗಿದ್ದ
ರಾಜಶೇಖರನ ಸುಖಸಂತೋಷಕ್ಕೆ ಕುಠಾರವಾದೆನಲ್ಲವೆ?
ಅಯ್ಯೋ! ಈ ನನ್ನ ಘೋರಪಾತಕಕ್ಕೆ, ಈ ನನ್ನ ಸ್ವಾಭಿ
ಮಾನದ ಔದ್ಧತ್ಯಕ್ಕೆ, ನಿಸ್ತಾರವುಂಟೆ? ಈ ನನ್ನ ದುರಂತ
ಚಿಂತೆಗೆ ನಿಷ್ಕೃತಿಯಿರುವುದೇ? ಏತರಿಂದ? ಹೇಗೆ ದೊರೆ
ಯುತ್ತದೆ? ನಾನೆಂದು ಶಾಂತಿಸಾಮ್ರಾಜ್ಯದಲ್ಲಿ ಕುಳ್ಳಿರು
ವೆನು? ಅಯ್ಯೋ!...... . . .. .

ರಘು:— ಸಹೋದರಿ! ಸಾಕು! ಚಿಂತೆಯನ್ನು ಕೊನೆಗಾಣಿಸು!!
ದುರ್ವರ್ತನಕ್ಕೆ ಪ್ರಾಯಶ್ಚಿತ್ತವಾಗದಿದ್ದರೆ ಸಮಾಜಕ್ಕೆ ಹಾನಿ

ತಪ್ಪದು. ರಾಜಶೇಖರನು ನಿನ್ನಿಂದ ದುರ್ದಶೆಗೀಡಾಗಲಿಲ್ಲ. ಅವನ ಅವ್ಯವಸ್ಥಿತವಾದ, ಸ್ವಚ್ಛಂದವಾದ ವಿಷಯಾತುರದಿಂದಲೇ ತಕ್ಕ ಪ್ರಾಯಶ್ಚಿತ್ತವನ್ನು ಹೊಂದಿರುವನು. ನೀನೇಕೆ ಕಾತರಳಾಗುವೆ? ಶಾಂತಳಾಗು! ನಿನ್ನ ಆತ್ಮಕ್ಕೆ ಸಮಾಧಾನವುಂಟು! ಅಂತಹ ಸುಸಂಧಿಯನ್ನು ಕ್ಷಿಪ್ರದಲ್ಲೇ ಕಾಣುವೆ! ನಿನ್ನ ಮನಸ್ಸಮಾಧಾನಕ್ಕೆ ಬೇಕಾದರೆ ನಿರಂಜನನನ್ನೂ ನಿನ್ನ ಮೈದುನನನ್ನೂ ಬರಮಾಡುವೆನು.

ವಿರಾ:—ಅಣ್ಣಾ! ನನಗೀಗಲೇ ಶಾಂತಿಯೆಲ್ಲಿಯದು? ನಮ್ಮ ಧರ್ಮಭ್ರಾತೃವರ್ಗಕ್ಕೆ ಮುಸುಕಿರುವ ವಿಷಯಾಂಧತೆ ಕೊನೆಗಾಣದಮುನ್ನ, ಅವರ ದುರ್ವರ್ತನದ ದುರ್ಬೋಧನೆಯಿಂದ ಕೆಡುತ್ತಿರುವ ನಮ್ಮ ಧರ್ಮಭಗಿನಿಯರಲ್ಲಿ ಸ್ವಧರ್ಮಪಾಲನಾಶಕ್ತಿಯುಂಟಾಗುವ ಮುನ್ನ, ತನ್ನ ಸಂತಾನದ ಸೌಜನ್ಯಭಾವದಿಂದ ನಮ್ಮ ಜಾತಿಯು ಅಭ್ಯುದಯವನ್ನು ಹೊಂದದಮುನ್ನ, ನನಗೆ ಶಾಂತಿಯೆಲ್ಲಿಯದು? ಇರಲಿ; ಅಣ್ಣಾ! ನನ್ನನ್ನೇ ನಿನ್ನ ಹಿತೋಪದೇಶವು ಕಾಲೋಚಿತ ನೀತಿಬೋಧೆಗಳಿಂದ ಎಚ್ಚರಿಸುತ್ತಿರಲಿ! ನನಗೆ ನಿರಂಜನ ಮತ್ತು ಮೈದುನನ ಕ್ಷೇಮವಾರ್ತೆ ತಿಳಿದುದೇ ಸಾಕು. ನನ್ನೀ ಅಜ್ಞಾತವಾಸವು ಅವರಾರಿಗೂ ತಿಳಿಯದಿರುವುದೇ ಒಳ್ಳೆತೆಂದು ತೋರುವುದು. ಇದರಮೇಲೆ ನಿನ್ನ ಇಷ್ಟ.

ರಘು:—ತಾಯಿ! ನನಗೂ ಅದೇ ಉತ್ತಮವೆಂದು ತೋರುವುದು. ಏಕೆಂದರೆ, ಈಗಲೇ ನಿನ್ನ ಹೆಸರನ್ನು ಹೊರಪಡಿಸಿದರೆ ಜನಗಳ ವಿಪರೀತಭಾವನೆಗೆ ಕಾರಣವಾಗಿ ಆಪ್ತೇಷ್ಟರಿಗೆ ಕ್ಲೇಶವುಂಟಾದೀತು.

ವಿರಾ:—ಅಣ್ಣಾ! ವೈಧವ್ಯಾನುಭವದಲ್ಲಿ ಪದಾರ್ಪಣಮಾಡಿದುದು ಮೊದಲು ಈವರೆಗೂ ನಾನು ವಿಮರ್ಶಿಸಿದ ವಿಚಾರಗಳಾವು ದರಿಂದಲೂ, ನನಗೆ ಆತ್ಮಸಮಾಧಾನಕರಗಳಾದ ವಿಷಯಗ ಳಾವುದೊಂದೂ ಕಂಡುಬರಲಿಲ್ಲ! ಪರಿಶೀಲನೆಗೊಳಪಟ್ಟ ಕಾರ್ಯಗಳಾವುದರಿಂದಲೂ-ಇಹಜೀವನ ಪರಾಕಾಷ್ಠೆಯನ್ನು ಕಂಡುಹಿಡಿಯಬಲ್ಲುದೊಂದೂ ಇರುವಂತೆ ತಿಳಿಯಲಿಲ್ಲ! ಪರ ಸ್ಪರ ವಿರೋಧಗಳಿಂದಲೇ ತುಂಬಿರುವ ಇತರ ಶಾಸ್ತ್ರ ಚಾರಗಳಲ್ಲಿ ಆವುದೂ ನನ್ನ ಹೃದಯಂಗಮವಾಗುವಂತಿಲ್ಲ. ಮತ್ತೆ ತೀರ್ಥಯಾತ್ರಾದಿಗಳಲ್ಲಿ ಸ್ವರೂಪ-ಸ್ವಧರ್ಮ-ಕರ್ತ ವ್ಯಗಳಿಗೆ ಪ್ರತಿಬಂಧಕಗಳಾದ ವಿಷಮ ವಿಷಯಗಳೇ ತುಂಬಿ ರುವುದೆಂದು ತಿಳಿದುದರಿಂದ ನನಗವುಗಳಲ್ಲಿ ಅಸಹ್ಯಭಾ ವವೂ, ಅಂತಹ ಕಾರ್ಯಪ್ರವರ್ತನಗಳಲ್ಲಿ ಉದಾಸೀನವೂ ಉಂಟಾದುವು, ನಾನೇನುಮಾಡಲಿ?

ಈಗ ನಿನ್ನಲ್ಲಿ ಹೇಳುವುದಿಷ್ಟೆ! ನನ್ನ ಗತಜೀವಿತಕಾಲ ಧನವೆಲ್ಲವೂ ಇಹಜನ್ಮಧಾರಣಾ ಸಾರ್ಥಕ್ಯತೆಗೆ ತಕ್ಕ ಮಾರ್ಗಾ ನ್ವೇಷಣೆಗೋಸುಗವೇ ಕಳೆಯಲ್ಪಟ್ಟಿತು. ಭವಿಷ್ಯಜ್ಜೀವನಕಾಲ ಧನವಾದರೂ ವ್ಯರ್ಥವೆನಿಸದೆ ಸಾರ್ಥಕರೂಪದಲ್ಲಿ ವಿನಿಯೋಗವಾ ಗಬೇಕೆಂಬುದೇ ನನ್ನ ಮನದಣಿಕೆಯಾಗಿದೆ. ಇದರಲ್ಲಿ ನನ್ನ ಆರಾಧ್ಯದೇವನ ಸಹಾಯವೂ ಪೂರ್ಣವಾಗಿರಬೇಕು.

ರಘು:—(ತಲೆದೂಗುತ್ತ) ವಿರಾಗಿಣಿ! ನಿನ್ನ ಸತ್ಸಂಕಲ್ಪವು, ಸಂದೇ ಶವು, ಸ್ತುತ್ಯವೇಸರಿ! ನಿನ್ನ ಮನದಣಿಕೆಯು ಕೈಗೂಡ ಬೇಕಾದರೆ, ನಿನ್ನಲ್ಲಿ ಸತ್ವಗುಣವು ನಿತ್ಯವಾಗಿರಬೇಕು. ಸತ್ವವೇ ಆತ್ಮೋನ್ನತಿಗೆ ಆಧಾರಸ್ತಂಭವು! ಅದರ ಬಲ

ವಾದ ಕಟ್ಟುಗಳೇ ಸತ್ಯ-ಕ್ಷಮಾದಿಗಳು. ಈ ದ್ವಯಾರ್ಥವು ನಿನ್ನಲ್ಲಿ ನಿರಂತರವೂ ಜಾಗ್ರತವಾಗಿರಲಿ.

ವಿರಾ:—ಅಣ್ಣಾ! ಪವಿತ್ರಪ್ರೇಮಪೇರಿತನಾದ ಅಣ್ಣನ ಬಲವದುಕ್ಕಂದವೇ ದೊರೆತಿರುವಲ್ಲಿ ನನಗೇತರ ಕೊರತೆ? ಅಸಾರ ವಸ್ತುವೆಂದೆನಿಸಿದ್ದ ಈ ದೀನ ಚೇತನವೇ ಇನ್ನುಮೇಲೆ ಸಾರವಸ್ತುವಾಗಬಹುದೆಂದು ಭಾವಿಸುವೆನು

ರಘು—ತಾಯಿ! ಅಡ್ಡಿಯಿಲ್ಲದೆ ಸಾರವಸ್ತುವಾಗುವೆ! ಬೇಗನೆಯೇ ನೀನಾ ಉನ್ನತಶಿಖರವನ್ನೇರಿ ಮೆರೆವಂತಾಗುವೆ! ಚಿಂತೆಯೇಕೆ! ಅಂತಹ ಮಹತ್ಫಲವನ್ನಲಂಕರಿಸುವಂತಹ ಪಾತ್ರಳಾಗಲು ತಕ್ಕ ಸಂಸ್ಕಾರವು ನನ್ನಿಂದಲೇ ನಡೆಯಿಸಲ್ಪಡುವುದು. ಆ ಮೂಲಕವಾಗಿಯೇ ನನ್ನ ಉದ್ಯಮವು ಸಿದ್ಧಿಸುವುದು.

ವಿರಾ.—ಅದಾವುದು ನಿನ್ನ ಉದ್ಯಮವು?

ರಘು—ಈ ಅಣ್ಣನಿಂದ ನಿರ್ಮಿತವಾದ ವಿದ್ಯಾಲಯಕ್ಕೆ ಅಧಿಕಾರಿಣಿಯಾಗುವುದೇ!

ವಿರಾ.—ನಿನ್ನ ತಂಗಿ ತುಂಗೆಯೂ ಇರುವಳಲ್ಲವೆ?

ರಘು:—(ದೀರ್ಘನಿಶ್ವಾಸದಿಂದ) ಸೋದರಿ! ಆ ನಿಷ್ಠುರಶಬ್ದಪ್ರಯೋಗದಿಂದ ನಾನು ಶಿತಾಣನಾಗುತ್ತಿರುವೆನು! ಮರ್ಮವೇದನೆಗೆ ಕಾರಣವಾದ ಆ ವ್ಯಕ್ತಿಯನ್ನು ನನ್ನ ಒಡಹುಟ್ಟಿದೆಂದು ಸ್ವಪ್ನದಲ್ಲಿಯೂ ಹೇಳಲಾರೆನು! ಮಾತೃಭಕ್ತಿಯೊಂದು ನನ್ನನ್ನು ನಿರೋಧಿಸದಿದ್ದರೆ ಆ ದುರ್ಜೀವಿ ಈ ವರೆಗೂ ಬದುಕಿರುತ್ತಿರಲಿಲ್ಲ. ಕೇವಲ ಮಾತೃಮುಖೋಲ್ಲಾಸಕ್ಕಾಗಿಯೇ ಅದನ್ನು ಸಹಿಸಿ-ಸಹಿಸಿ ನನ್ನಲ್ಲಿ ನಾನೇ ಕೊರಗಬೇಕಾಗಿದೆ!

ವಿರಾ:—(ಕುತೂಹಲದಿಂದ ರಘುನಾಥನ ಮುಖವನ್ನೊಮ್ಮೆ ನೋಡಿದಳು. ಆತನ ಆರಕ್ತಿಮ ಭ್ರುಕುಟೀ ಮುಖದ ಆಕೃತಿಯನ್ನೂ, ಅತಿ ಭಯಂಕರವಾದ ಮರ್ಮಾಂತಿಕ ಯಾತನಾವೇಗದಿಂದ ಹೊರಹೊರಡುತ್ತಿದ್ದ ದೀರ್ಘನಿಶ್ವಾಸಗಳನ್ನೂ ನೋಡಿ) ಅಣ್ಣಾ! ನನ್ನಲ್ಲಿ ಕೋಪವೆ?

ರಘು—ನಿನ್ನಲ್ಲಿ ಕೋಪವೆ! ತಾಯಿಾ? ಈ ಆತ್ಮನು ಈ ದೇಹವನ್ನು ಬಿಟ್ಟು ಹೋಗುವವರೆಗೂ, ನಿನ್ನಲ್ಲಿ ಕೋಪಿಸಲೊಲ್ಲೆನು. ತಾಯಿಾ! ನೀನೇ ನನ್ನ ನೈಜಸೋದರಿಯೆಂದು ಸಪ್ರಮಾಣವಾಗಿ ಹೇಳುವೆನು. ದೇಹಬಾಂಧವ್ಯವೇ ವಿಶ್ವಾಸ ಗೌರವಗಳಿಗೆ ಪಾತ್ರವೆಂದು ನಾನೆಂದೂ ಹೇಳಲಾರೆನು. ಸದ್ಗುಣಾಳಿಗಳಿಂದ ಆವುದು ಸುಮನೋಹರವೋ ಆವುದು ಪವಿತ್ರಪ್ರೇಮರಸದಿಂದ ಸುಸಂಸ್ಕೃತಪಾತ್ರವೋ ಅದೇ ನನ್ನ ನೈಜ ಸೋದರಸ್ನೇಹಗೌರವಕ್ಕೆ ತಕ್ಕ ನೆಲೆ! ನಿನ್ನಲ್ಲಿ ನನಗುಂಟಾಗಿರುವ ಅವ್ಯಾಜ-ನಿಶ್ಚಲ-ವಿಶ್ವಾಸವೆಂದಿಗೂ ಕುಂದಲಾರದೆಂದು ತಿಳಿದಿರು! ತುಂಗೆಯ ಮಾತೆತ್ತಿ ನನ್ನನ್ನು ನೋಯಿಸದಿರು.

ವಿರಾ—ಅದೇಕೆ?

ರಘು—ಅಪಾತ್ರವಾದುದರಿಂದ

ವಿರಾ—ಹೇಗೆ?

ರಘು.—ಶೀಲ-ವ್ರತಗಳನ್ನು ಭದ್ರವಾಗಿಡದುದರಿಂದ

ವಿರಾ:—ಅಲಂಕಾರದಲ್ಲಿ ಆಶಯಿದ್ದಮಾತ್ರಕ್ಕೆ ಅಪಾತ್ರವಾಗಬೇಕೇ?

ರಘು:—ತಾಯಿಾ! ನಾನು ಊಟ-ನಿದ್ದೆ-ಅಲಂಕಾರಗಳನ್ನು ಕುರಿತು

ಅಡ್ಡಿಯಾಗುವುದಿಲ್ಲ. ಆದರೆ, ನನ್ನೀ ತಾಳ್ಮೆಗೆ ಶತ್ರುವಾಗಿ, ನನ್ನ ಆತ್ಮನನ್ನು ಉದ್ರಿಕ್ತನನ್ನಾಗಿ ಮಾಡುವ ಪ್ರಬಲ ದುರ್ವೃತ್ತಿಯೊಂದು ಅವಳಲ್ಲಿರುವುದು. ಇದಕ್ಕಾಗಿಯೇ ನಾನು ಅಹೋರಾತ್ರಿಯೂ ಸಂತೋಷ ಲೇಶವಿಲ್ಲದೆ ಚಿಂತಿಸುತಿರುವೆನು. ವಿರಾಗಿಣೀ! ನನ್ನೀ ಮನದಳಲನ್ನು ನಾನು ಈವರೆಗೂ ತಾಯ ಬಳಿಯಲ್ಲಾಗಲೀ, ಹೆಂಡತಿಯ ಮುಂದಾಗಲೀ ಹೇಳರಲಿಲ್ಲ. ಇಂದು ನಿನ್ನಲ್ಲಿ ಪೂರ್ಣವಾದ ಭರವಸೆಯಿಂದ ಹೇಳರುವೆನು.

(ವಿರಾಗಿಣಿಯು ಚಕಿತೆಯಾಗಿ ನೋಡುತ್ತಿದ್ದಳು. ರಘುನಾಥನು ಮುಂದೆ ಹೇಳಿದನು.)

ರಘು:—ಸೋದರಿ! ಕರಾಳವ್ಯಕ್ತಿಯನ್ನು ಸಂಸ್ಕರಿಸಲು ಮಾಡಿದ ನನ್ನ ಪ್ರಯತ್ನವೆಲ್ಲವೂ ವ್ಯರ್ಥವಾದುವು. ತಾಯ ಲಾಲನೆ, ನನ್ನ ಶ್ರಮವನ್ನು ಮೊದಲು ಸಾಗಗೊಡಲಿಲ್ಲ. ಆದರೆ ಆ ಲಾಲನೆಯೇ ಮೃತ್ಯುರೂಪಕ್ಕೆ ಸಹಕಾರಿಯಾಗಿ, ಈಗ ಮಗಳ ಮತ್ತತೆಗೆ ದುಃಖಿಸಬೇಕಾಗಿದೆ. ಮಾಡತಕ್ಕುದೇನು? ಈ ದುರ್ಭರ ಚಿಂತೆಗೆ ನಿನ್ನಿಂದಲ್ಲದೆ ಮತ್ತಾರಿಂದಲೂ ನಿಷ್ಕೃತಿಯಿಲ್ಲವೆಂದೇ ನನ್ನ ಭಾವನೆ!

ವಿರಾ:—ನನಗಷ್ಟರ ಸಾಮರ್ಥ್ಯವುಂಟೆ?

ರಘು:—ನಿನ್ನ ಮನೋದಾರ್ಢ್ಯವೂ, ಈ ನಿನ್ನ ಕ್ಷಮೆಯೂ ಅಮೃತೋಪಮವಾದೀ ನಿನ್ನ ಹಿತಬೋಧೆಯೂ, ಸ್ವಲ್ಪಕ್ಕೆ ಸ್ವಲ್ಪವಾದರೂ ನಿನ್ನ ದೇಶಭಗಿನಿಯರಲ್ಲಿರುವುದಾದರೆ ನಮ್ಮಾ ಭಾರತಮಾತೆ ಸ್ವರ್ಗಸಾಮ್ರಾಜ್ಯವನ್ನೇ ತುಚ್ಛೀಕರಿಸುವಂತೆ ಮಾಡುವುದರಲ್ಲಿ ಸಂಶಯವಿಲ್ಲ. ತಾಯಿ! ನೋಡು,

"ಹೂವಿಂದೆ ನಾರೂ ಮುಡಿಯನೇರಿತು." ಎಂಬ ನಾಣ್ನುಡಿಯಂತೆ ನಿನ್ನ ಸಹವಾಸಬಲದಿಂದಲಾದರೂ ಆ ವ್ಯಕ್ತಿಗೆ ಸ್ವಲ್ಪ ವಿವೇಚನೆಯುಂಟಾಗಲೆಂಬುದೇ ನನ್ನ ನಿರೀಕ್ಷಣೆಯಾಗಿದೆ.

ವಿರಾ:—ಅಣ್ಣಾ ! ನನ್ನ ಶಕ್ತಿವಂಚನೆಯಿಲ್ಲದೆ ನಾನೀ ಕಾರ್ಯದಲ್ಲಿ ಕೈನೀಡಿ ಮಾಡಿನೋಡುವೆನು. ಫಲಾನುಭವವು ಕಡೆಯ ಮಾತು. ಆದರೆ ನನ್ನೀಪ್ರಯತ್ನದಿಂದ ಆರಾರ ಮನವು ಆವಾವ ಬಗೆಯಿಂದ ತಿರುಗುವುದೋ ?

ರಘು:—ಅವುದು ಹೇಗಾದರೂ ತಿರುಗಲಿ, ನಮಗದರಿಂದ ಕುಂದೇನೂ ಇರುವುದಿಲ್ಲ. ಮುಖ್ಯವಾಗಿ ನಮ್ಮಲ್ಲಿ ಕರ್ತವ್ಯನಿಷೆಯೂ ದೃಢಮನೋಭಾವವೂ ಸಂಕಲ್ಪ ಕಾರ್ಯಗಳಲ್ಲಿ ಜಾಗ್ರತವಾಗಿರಬೇಕಾದುದೂ ಮುಖ್ಯವು.

ವಿರಾ:—ಆ ವಿಚಾರದಲ್ಲಿ ನನಗೆ ಭಯವಿಲ್ಲ. ಕಾಲವರಿತು ಹಿತ ಸೂಚನೆಯಿಂದೆಚ್ಚರಿಸುವ ಭ್ರಾತೃವೇ ಬಳಿಯಲ್ಲಿರುವಲ್ಲಿ ಮತ್ತಾವ ಚಿಂತಾಖತಿಗಳಾದರೂ ಬಳಿಸೇರಬಲ್ಲುವೆ ?

ರಘು:—ತಾಯಿ ! ಹೊತ್ತುಮೀರಿತು, ಎಲ್ಲರೂ ಮಲಗಿರುವರು. ನೀನೂ ಇನ್ನು ನಿನಗಾಗಿ ತೆರವುಮಾಡಿರುವ ಬಿಡದಿಯಲ್ಲಿ ಹೋಗಿ ಮಲಗು. ಅಲ್ಲಿಯೇ ದೀಪವುರಿಯುತಿದೆ. ನಾರಿನ ಹಾಸಿಗೆ-ಹೊದಿಕೆ-ಬಟ್ಟೆಗಳೂ ಸಿದ್ಧವಾಗಿವೆ. ಬೇಕಾದ ಉಪಕರಣಗಳೂ ಇವೆ. ಮನಸ್ಸಮಾಧಾನದಿಂದಿರಬಹುದು. ಎಂತೂ ನಿನ್ನ ಇಂದಿನ ಸಂಕಲ್ಪಕ್ಕೆ ಭಂಗಬಾರದಿರಲಿ ! (ಎಂದು ಹೇಳಿ ತನ್ನ ಸ್ಥಾನವನ್ನು ಕುರಿತು ತೆರಳಿದನು. ವಿರಾಗಿಣಿಯೂ ತಲೆದೂಗುತ್ತ ಎದ್ದುಬಿಟ್ಟಳು.)

---

॥ ಶ್ರೀಃ ॥

## ಪಂಚಮಪರಿಚ್ಛೇದ.

(ವಿಚಾರವಿಮರ್ಶೆ.)

ಭಸ್ಮಾಚ್ಛಾದಿತನಾಗಿದ್ದರೂ, ಪಾವಕನು, ತನ್ನ ತೀಕ್ಷ್ಣವನ್ನು ಸ್ವಲ್ಪಕ್ಕೆ ಸ್ವಲ್ಪವಾದರೂ, ಹೊರಗೆಡಹದಿರನಲ್ಲವೆ? ಹಾಗೆಯೇ ನಮ್ಮ ವಿರಾಗಿಣಿಯು ಅಜ್ಞಾತವಾಸದಲ್ಲಿರಬೇಕೆಂದರೂ ಅವಳಾ ಉಜ್ವಲಸ್ವಭಾವಗಳು ಮಾತ್ರ ಅಡಗಲಾರದೆ ಹೊರಬಿದ್ದುವು. ಆದರೆ, ಪೂರ್ವಪರಿಚಯವಾಗಲೀ, ಪೂರ್ವಶಬ್ದಪ್ರಯೋಗವಾಗಲೀ, ಪೂರ್ವಕಥಾಪ್ರಸ್ತಾಪವಾಗಲೀ, ಆವುದೂ ಕೂಡದೆಂದು ಬಹು ಖಂಡಿತವಾದ ವಿಧಿಯುಂಟಾಯಿತಲ್ಲದೆ, ಅವಳ ಹೆಸರಿನ ಅಭಿರುಚಿಯಾದರೂ ಆರಿಗೂ ಇರಲಿಲ್ಲ, ಹೇಗಿದ್ದರೇನು? ವಸ್ತುಪ್ರಕಾಶಕ್ಕೆ ಮಾರ್ಗಗಳೂ ಅನೇಕವಾಗಿರುವುವಲ್ಲವೇ?

ವಿರಾಗಿಣಿ ಬಂದರಾತ್ರಿ ಹೇಗೋ ಕಳದುಹೋಯಿತು. ಮರುದಿನ ಬೆಳಗಾಗುವಮೊದಲೇ ಹಿತ್ತಿಲಕಡೆಗೆ ಹೋದ ಲಕ್ಷ್ಮೀದೇವಮ್ಮನು ನೆರೆಮನೆ ನರಸಮ್ಮನನ್ನು ಸಂಧಿಸಿದಳು. ಇಬ್ಬರಿಗೂ ಮಾತಿಗೆ ಮೊದಲಾಗಿ, ಮಾತಿನ ಸಂದಣಿಯಲ್ಲಿ ವಿರಾಗಿಣಿ ಬಂದಿರುವ ವಿಚಾರವೂ, ಹೊರಬಿದ್ದಿತು. ವಿರಾಗಿಣೀ ವಿಚಾರವು ಕಿವಿಗೆ ಬಿದ್ದೊಡನೆಯೇ ನರಸಮ್ಮನು ಕೈಯಲ್ಲಿದ್ದ ನೀರಿನ ಪಾತ್ರೆಯನ್ನು ಕೆಳಗಿಟ್ಟು, ವಿರಾಗಿಣಿಯನ್ನು ನೋಡಲು ಓಡಿಬಂದಳು. ಇವಳು ಬಂದು ನೋಡುವುದರೊಳಗಾಗಿಯೇ ಸ್ನಾನವನ್ನು ಮುಗಿ

ಸಿದ್ಧ ವಿರಾಗಿಣಿ ಧ್ಯಾನಾಸಕ್ತೆಯಾಗಿದ್ದುದರಿಂದ ನರಸಮ್ಮನು ಬಂದು ಬಿಡದಿಯ ಬಾಗಿಲಬಳಿ ನಿಂತು ಬಹಳ ಹೊತ್ತಿನವರೆಗೂ ಬೆರಗಾಗಿ ನೋಡುತ್ತಿದ್ದಳು. ಕಡೆಗೆ ತಡೆಯದೆ ಕೂಗಿದಳು—"ಸನ್ಯಾಸಿನಿ !"

ವಿರಾಗಿಣಿ.—(ತಿರುಗಿನೋಡಿ) ಏನಮ್ಮಾ ? ಏಕೆ ?

ನರ:—ನಿನ್ನನ್ನು ನೋಡಲು ಬಂದೆನು.

ವಿರಾ:—ಮತ್ತೇನು ?

ನರ:—ಸ್ಥಳವಾವುದು ? ಬಂದುದೆಲ್ಲಿಂದ ? ಹೋಗುವುದೆಲ್ಲಿಗೆ ?

ವಿರಾ·—(ನಕ್ಕು) ಎಂದು, ಎಲ್ಲಿ, ಆಶ್ರಯವು ದೊರೆಯುವುದೋ ಅಂದು ಅಲ್ಲೇಸ್ಥಳವು, ಉಳಿದುದಕ್ಕೆ ಉತ್ತರವಿಲ್ಲ.

ನರ:—ಹೋಗಲಿ, ಹೆಸರನ್ನಾದರೂ ಹೇಳಬಹುದೋ ?

ವಿರಾ.—"ವಿರಾಗಿಣಿ" ಎಂದಲ್ಲದೆ ಬೇರಿಲ್ಲ.

ನರ·—ಇಲ್ಲಿ ಬಂಧುಗಳಾರಾದರಿರುವರೋ ?

ವಿರಾ·—"ತಾಯಿ ! ಈ ವಿಶ್ವವೇ ನನ್ನದಾಗಿದೆ ಆರನ್ನು ಬಂಧುಗಳೆನ್ನಲಿ ? ಆರನ್ನು ಬಿಡಲಿ ?" ಎಂದು ಹೇಳಿ ಸ್ವಕರ್ತವ್ಯದಲ್ಲಿ ನಿರತೆಯಾದಳು.

ನರಸಮ್ಮನು ತಲೆದೂಗುತ್ತ, ಓಡಿಹೋಗಿ, ಸೊಸೆಯಾದ ಚಂದ್ರಭಾಗೆಗೆ ಹೇಳಿದಳು. ಸತೀಮಣಿ ಚಂದ್ರಭಾಗೆಯೂ ಬಂದು ವಿರಾಗಿಣಿಯಲ್ಲಿ ಪ್ರಥಮ ಪರಿಚಯದೊಡನೆಯೇ ಪವಿತ್ರಸ್ನೇಹಬೀಜವನ್ನು ಬಿತ್ತಿ ಮನೆಗೆಯ್ದಿದಳು. ಆಮೇಲೆ ಅವಳಿಂದರಿತ ಅವಳೊಡನಾಡಿಯರೂ, ಒಬ್ಬೊಬ್ಬರಾಗಿ ಬಂದು ಬಂದು ನೋಡಿ ಮಾತನಾಡಿ ಹೋಗಿ ತಮ್ಮ ಆಪ್ತೇಷ್ಟರಲ್ಲಿಯೂ ಹರಡುತ್ತಿದ್ದರು ಹೀಗಾಗಿ ಅಂದಿನ ಸಾಯಂಕಾಲದೊಳಗಾಗಿ ಕಾಂತರಾಜಪೇಟೆಯ

ಕಾಲುಪಾಲು ಜನಾಂಗವೇ ರಘುನಾಥನ ಮನೆಗೆ ತಿರುಗಿಬಿಟ್ಟಿರಬಹುದೆಂದು ಹೇಳಬಹುದು.

ನೂತನಪರಿಚಯದಲ್ಲಿ ಆರಿಗಾಗಲೀ, ಔತ್ಸುಕ್ಯವುಂಟಾಗುವುದು ಆಶ್ಚರ್ಯವಿಷಯವಲ್ಲ. ಹಾಗೂ, "ಅಭಿನವಶೋಭಾರೂಪ! ಅಸಾಧಾರಣ ಗುಣೋಜ್ವಲಪ್ರಕೃತೀಭಾವ!" ಹೀಗಿರುವುದರಲ್ಲಿ ಹೇಳಿ ಕೇಳುವುದೇನು? ನೋಟಕರ ಆತುರವೆಷ್ಟಿರಬೇಕೋ ಪಾಠಕರೇ ತಿಳಿಯಲಿ! ವಿರಾಗಿಣಿ ಬಂದ ನಾಲ್ಕೈದುದಿನಗಳವರೆಗೆ ಜನಸಂದಣಿಯಿಂದ ರಘುನಾಥನಮನೆ ಕಿಕ್ಕಿರಿವಂತಿದ್ದಿತು. ವಿರಾಗಿಣಿಗೆ ಕ್ಷಣಕಾಲವೂ ಬಿಡುವಿಲ್ಲ. ಬಂದು ನೋಡಿ ಕೇಳಿದವರಿಗೆಲ್ಲಾ ಯಥೋಚಿತ ಪ್ರತ್ಯುತ್ತರಾನುಪೂರ್ವಕ ಸತ್ಕಾರಗಳು ನಡೆಯಬೇಕು, ಅವಿಶ್ರಾಂತಶ್ರಮ. ಆದರೂ ಅವಳ ಮುಖದಲ್ಲಿ ಅನಾದರ ಅಥವಾ ತಿರಸ್ಕಾರದ ಕುರುಹಾದರೂ ತೋರಿತೆಂಬುದನ್ನು ಕಂಡು ಹೇಳುವವರಿಲ್ಲ. ಆರಲ್ಲಿಯೂ ಸವಿನಯಸಿವೇದನವೇ! ಆರಲ್ಲಿಯೂ ಸೋದರಸನ್ಮಾನವೇ!! ಹೆಚ್ಚುಗೆಯಿಂದೇನು? ವಿರಾಗಿಣಿಯ ಪವಿತ್ರತಮ ಸ್ನೇಹರೂಪವು ಪ್ರತಿಯೊಬ್ಬರ ಕಣ್ಮನಂಗಳಲ್ಲಿಯೂ ತಾನೇತಾನಾಗಿ ಬಗೆಗೊಳ್ಳುವಂತೆ ನಲಿದಾಡುತ್ತಿದ್ದಿತು.

ಕೃಷ್ಣವೇಣಿಗೆ ಜನಸಂದಣಿಯನ್ನು ನೋಡಿನೋಡಿಯು ಬೇಸರವುಂಟಾಯಿತು. ಮಾತನಾಡಲಾರಳು. ಪಾಪ! ಪತ್ಯಾಗ್ರಹ ಭೀತಿಯಿಂದ ಉಸಿರ್ಗರೆಯದಿರುವಳು.

ತುಂಗಭದ್ರೆಯ ಸ್ಥಿತಿ ಹೇಗಿದ್ದಿತೋ ಹೇಳಲಾರೆವು. ಹೇಗೂ—ಅವಳಾ ಕೃಶ ಮುಖದಲ್ಲಿ ಕಾಂತಿಮಾತ್ರವೂ ಇಲ್ಲದೆ. ಕೇವಲ ಯಾತನಾವೇಗದ ಕೃಷ್ಣತ್ವವೇ ತೋರಿಬರುತ್ತಿದ್ದಿತು. ಹೇಗೆ?

ಮತ್ತೇನು ? ಮನೆಗೆಬಂದವರು ವಿರಾಗಿಣಿಯನ್ನೂ ನೋಡು ವರು, ತುಂಗಭದ್ರೆಯನ್ನೂ ನೋಡುವರು, ನೋಡಿದಮಾತ್ರದಿಂ ದೇನು ? ಆ ನೋಟವೆರಡೂ ಒಂದೇಬಗೆಯಾಗಿದ್ದುವೋ? ಹಾಗಿರ ಲಿಲ್ಲ ಸಂಗಮಂಗನ್ಯಾಯ ' ಕನಕಗಿರಿಗೂ ಕಾಡುಗುಡ್ಡಕ್ಕೂ, ಕಸ್ತೂರಿಗೂ ಕಲ್ಲಿದ್ದಲಿಗೂ, ಇರತಕ್ಕ ಅಂತರ ' ಏಕೆಂದರೆ, ವಿರಾ ಗಿಣಿಯನ್ನು ನೋಡುವಲ್ಲಿ, ನುಡಿವಲ್ಲಿ, ಹೊರ ಹೊರಡುತ್ತಿದ್ದ ನಗೆಯೂ, ಕೋಲಾಹಲವೂ, ತುಂಗಭದ್ರೆಯನ್ನು ಕಂಡಾಕ್ಷಣವೇ ಅಸಮಾಧಾನ ಬೇಸರಗಳಿಗೆ ತಿರುಗುತ್ತಿದ್ದುವು ' ಹೀಗಿದ್ದಮೇಲೆ ಪಾಪ ' ತುಂಗೆಯ ಮನವು ಏನಾಗಿರಬೇಕು " ಅವಳಾವಳೋ ಹೊಟ್ಟೆಗಿಲ್ಲದೆ ಬಟ್ಟೆಗಾಣದೆ ಬಂದವಳಿಗೆ ಅಬ್ಬರದ ಮನ್ನಣೆ ' ಹೊಟ್ಟೆಗೂಬಟ್ಟೆಗೂ ಕಟ್ಟಂಕೆಯಿಲ್ಲದೆ, ಹಣದ ರಾಶಿಯಮೇಲೆಯೇ ಕುಳಿತಿರುವ ತನಗೆ ಅವಮಾನ ' ಹೇಗೆ ಸಹಿಸಬಹುದು ? ಆರಾ ದರೂ ಬಂದರೆ, ಪಾಪ ' ನಮ್ಮ ತುಂಗೆ ಹೊರಗೆ ಸುಳಿವುದಕ್ಕಾಗದೆ ಮನೆಯೊಳಗೆ ಅಡಗಿರಬೇಕಾಗಿದ್ದಿತು ಲಕ್ಷ್ಮೀದೇವಮ್ಮನಿಗಾದ ರೋ ನಿಂತೆಡೆಯಲ್ಲಿ ನಿಲ್ಲುವಂತಿಲ್ಲ. ಬಂದಬಂದವರನ್ನು ಮರ್ಯಾ ದಿಸುವುದೇ ಸಾಕಾಗುತಿದ್ದಿತು ಆದರೂ ಬೇಸರಗೊಳ್ಳದೆ ವಿರಾ ಗಿಣೀ ಪ್ರವೇಶವೇ ತಮ್ಮ ಮನೆತನದ ಮೇಲ್ಮೆಗೆ ಸೂಚನೆಯೆಂದು ನಂಬಿ ಉತ್ಸಾಹದಿಂದಿದ್ದಳು.

ರಘುನಾಥನ ವಿಚಾರವಾಗಿ ಹೇಳಬೇಕಾದುದೇ ಇಲ್ಲ. ಅಲಭ್ಯಲಾಭದ ಬೆಸೆಯಿಂದುಂಟಾದ ಆನಂದೋತ್ಸಾಹಗಳು ಈತ ನಲ್ಲಿ ನೂತನಶಕ್ತಿಯೊಂದನ್ನುಂಟುಮಾಡಿದ್ದುದೆಂದರೆ ಸಾಕಾಗಿದೆ

ವಿರಾಗಿಣಿ ಬಂದ ನಾಲ್ಕಾರುದಿನಗಳ ಮೇಲೆ ಜನಸಂದಣಿ ಕಡಿಮೆಯಾಯ್ತು. ವಿರಾಗಿಣಿಗೆ ಕಾರ್ಯಕ್ರಮದ ಕಾಲನಿರ್ಣಯ ವಾಯಿತು ; ಪಾಠಕರ ತಿಳಿವಿಗಾಗಿ ಸ್ವಲ್ಪ ವಿವರಿಸಲ್ಪಡುವುದು.

ವಿರಾಗಿಣಿ ಬೆಳಗುಜಾವದೈದುಘಂಟೆಗೆ ಮೀರಿ ಮಲಗುತಿರ ಲಿಲ್ಲ, ಎದ್ದೊಡನೆಯೇ ತಣ್ಣೀರಿನಲ್ಲಿ ಸ್ನಾನ; ಸ್ನಾನವಾದಮೇಲೆ ಧ್ಯಾನ-ಪ್ರಾತಸ್ಸ್ವೇವಾಕಾರ್ಯಗಳು. ಏಳುಘಂಟೆಯಮೇಲೆ ಮನೆ ಗೆಲಸಗಳಿಗಾಗಿ ಒಂದೆರಡು ಘಂಟೆಗಳಕಾಲವು ಹಿಡಿಯುತ್ತಿದ್ದಿತು. ಆಬಳಿಕ **ಊಟ**ವಾದಮೇಲೆ ಸಣ್ಣಸಣ್ಣ ಕೆಲಸಗಳು, ಆಬಳಿಕ ಕೆಲವುಹೊತ್ತು ಬೃಂದಾವನಪ್ರದಕ್ಷಿಣೆಗಳೂ ನಡೆಯುತ್ತಿರುವುವು. ಮಧ್ಯಾಹ್ನದಮೇಲೆ ಮೂರುಘಂಟೆಗಳಕಾಲವೂ ಲೇಖನ, ವಾಚನ, ಸದ್ಗ್ರಂಥಸಮಾಲೋಚನಗಳಲ್ಲಿಯೂ ಸಹಾಧ್ಯಾಯನಕ್ಕಾಗಿ ಬರು ವವರ ಸರಸ ಸಂಭಾಷಣಾದಿ ಹಿತಸೂಚನೆಯಲ್ಲಿಯೂ, ನಿಯತ ವಾಗಿ ವಿನಿಯೋಗಿಸಲ್ಪಡುವುದು ಮತ್ತೆ ಸಾಯಂಕಾಲ ಮಿಕ್ಕ ಕೆಲಸಗಳಲ್ಲಿ ಯಥೋಚಿತ ಸಹಾಯವೂ, ತದನಂತರದಲ್ಲಿ ಅಗ್ರ ಹಾರ ಪ್ರದಕ್ಷಿಣವೂ ನಡೆವುದು. ರಾತ್ರಿ ಎಂಟುಘಂಟೆಯಿಂದ ಒಂಭತ್ತರವರೆಗೆ ರಘುನಾಥನ ಬಳಿಯಲ್ಲಿ ಸಂಸ್ಕೃತಪಾಠವೂ, ಬಾಲಸುಶಿಕ್ಷಣಾಕ್ರಮವೂ, ಸುಲಲಿತವಾಗಿ ಸಾಗುತ್ತಿದ್ದುವು. ರಾತ್ರಿ ಊಟವಾದಮೇಲೆ ಲಕ್ಷ್ಮೀದೇವಮ್ಮನ ಬಳಿಯಲ್ಲಿ ಕೆಲವು ಹೊತ್ತು ಸರಸಪ್ರಸಂಗವೂ ಆಮೇಲೆ ನಿಯಮಿತಸ್ಥಾನದಲ್ಲಿ ಸುಖ ನಿದ್ರೆಯೂ ನಡೆಯುತ್ತಿರುವುವು

ವಿರಾಗಿಣಿಯ ಸಹವಾಸವು ತುಂಗೆಗೆ ಮೊಟ್ಟಮೊದಲು ವಿನೋದಕರವಾಗಿದ್ದರೂ, ಕ್ರಮಕ್ರಮವಾಗಿ ವಿನೋದವು ಕಡಿಮೆ ಯಾಗಿ ಆ ಎಡೆಯಲ್ಲಿ ತನ್ನ ಮನಸ್ಸ್ವೇವರ್ತನಕ್ಕೆ ವಿರೋಧವಾದ ಬೋಧನೆಗಳುಂಟಾಗುತಿದ್ದುದರಿಂದ ಅಸಮಾಧಾನೋದಾಸೀನಗಳೇ ತಲೆದೋರಿಬರುತ್ತಿದ್ದುವು.

ರಘುನಾಥನು ವಿರಾಗಿಣಿಯೊಡನೆ ವ್ಯಾಸಂಗಿಸಲು ಕೃಷ್ಣ ವೇಣಿಗೂ ತುಂಗಭದ್ರೆಗೂ ಕಟ್ಟುಮಾಡಿದನು. ಅಭಿಮಾನವತೀ

ರಾಜ್ಞಿಯಾದ ಕೃಷ್ಣವೇಣಿ ಕಟ್ಟಳೆಯನ್ನು ಮೀರಿಯೂ, ತುಂಗಭದ್ರೆ ಮನಬಂದರೆ ಬರುವುದು, ಇಲ್ಲವಾದರೆ ರೇಗಿ ಹೊರಟು ಹೋಗುವುದು,—ಈತೆರದ ಮನಸ್ವೀವರ್ತನದಿಂದಲೂ ಆತನ ಮನವನ್ನು ಅಧಿಕವಾಗಿ ನೋಯಿಸುತ್ತಿದ್ದರು. ಆದರೂ, ಆತನು ವಿರಾಗಿಣಿಗೆ ವ್ಯಾಸಂಗದಲ್ಲಿದ್ದ ಶ್ರದ್ಧೆ, ಭಕ್ತಿ, ಸಹನೆ, ವಿನಯ, ವಿಚಾರವಿಮರ್ಶೆಯೇ ಮುಂತಾದ ಸದ್ಗುಣವೃತ್ತಗಳಿಂದಲೂ, ಅವಳ ಅವ್ಯಾಜ ವಾತ್ಸಲ್ಯದ ಸಹಾನುಭೂತಿಯಿಂದಲೂ ಶಾಂತನಾಗಿ, ಬಾಲಿಕಾಸಾಮಾನ್ಯಕ್ಕೆ ತಿಳಿವನ್ನು ಹೆಚ್ಚಿಸಿ, ಮೇಲ್ಮೆಯನ್ನುಂಟು ಮಾಡುವಂತಹ ಸನ್ನೀತಿಗಳನ್ನು ಉಪನ್ಯಾಸಿಸುವುದೂ, ಲಿಖಿತ ಮೂಲಕ ಪ್ರಕಾಶಪಡಿಸುವುದೂ, ಮೊದಲಾದ ದೇಶಸೇವೆಯಲ್ಲಿ ಅವಕಾಶ ದೊರೆತಂತೆಲ್ಲಾ ವಿರಾಗಿಣಿಯನ್ನು ಮುಂದೆ ಬಿಡುತ್ತಿದ್ದನು.

ಆವವಸ್ತು ನಿಜಕರ್ತವ್ಯಪಾಲನಾಸಕ್ತಿಯಿಂದ ಶುದ್ಧಸತ್ವಸ್ವರೂಪವನ್ನೇ ಸಾಕ್ಷಾತ್ಕರಿಸಿಕೊಳ್ಳತಕ್ಕುದೋ ಅಂತಹ ವಸ್ತುವಿನ ಪ್ರಭಾವವೂ ಅತ್ಯಮೋಘವಾದುದಲ್ಲವೆ ? ಸತ್ವಸ್ವಭಾವವು ಅತ್ಯದ್ಭುತವೆಂದು ಶ್ರುತಿಯೇ ಪ್ರತಿಪಾದಿಸುತ್ತಿಲ್ಲವೇ ? ಆದಿಮೂಲವೂ ಸತ್ವವೆಂಬುದೇ ಅಲ್ಲವೆ ? ಸಂಶಯವೇನು ? ಸತ್ವಕ್ಕೆ ಚ್ಯುತಿಯುಂಟೇ ? ನಿಂದಾಸ್ತುತ್ಯಾದಿ ಕ್ಷುದ್ರವಿಷಯಕೀಟಗಳಾವವೂ ಸತ್ವವನ್ನು ಮುಟ್ಟಬಲ್ಲುವೆ ? ಹೆಚ್ಚು ಹೇಳುವುದೇನಿದೆ ? ಸರ್ವಕಾಲ ಸರ್ವಾವಸ್ಥೆಗಳಲ್ಲಿಯೂ “ಸತ್ವಮಯಮೂರ್ತಿಯೇ ಸರ್ವತ್ರವಿಜಯಿ !” ಎಂಬ ಜಯಧ್ವಾನವೊಂದು ಉದ್ಘೋಷವಾಗುತ್ತಿದೆಯಲ್ಲವೆ ? “ಧನ್ಯ ! ಹೇ ಸತ್ವಸ್ವರೂಪ !! ನೀನೇ ಧನ್ಯ ! ಧನ್ಯ !! ನಿನ್ನ ಸತ್ಯ ಕ್ಷಮ ದಮಾದಿಪ್ರತ್ಯಂಗಗಳಿಗೂ ಸಹಸ್ರ ಸಹಸ್ರಶಃ ಧನ್ಯವಾದಗಳು !!! ಹೇ ಧನ್ಯಾತ್ಮ ! ಈಗ ನೀನೆಲ್ಲಿರುವೆ ?

ಹೇಗಿರುವೆ? ಆ ನಿನ್ನ ಅಪ್ರಮೇಯಾಖಿಲಾತ್ಮನಾವಾಸಿತ್ವವು ಈಗ ಏನಾಗಿರುವುದು? ಈ ನಮ್ಮ ಮಾತೃಭೂಮಿಯಲ್ಲೇಕಿಂತು ಸೂಕ್ಷ್ಮರೂಪವಾಂತಿರುವೆ? ನಮ್ಮ ದೌರ್ಭಾಗ್ಯದಿಂದೆಯೋ? ಲೋಭ, ಕ್ರೋಧ, ಮೋಹ, ಮದ, ಮಾತ್ಸರ್ಯಾದಿಗಳಿಂದ ಬೀಗಿ ಬಿರಿದು, ಅವಿಧೇಯತೆಯಿಂದ ಸ್ವಧರ್ಮಕುಠಾರಿಗಳಾಗಿರುವ ನಮ್ಮವರ ದುರಾಗತವನ್ನು ಸಹಿಸಲಾರದೆಯೋ? ಅಕಟಕಟಾ! ದುಷ್ಟಸಂತಾನದ ದುರಾಚಾರಕ್ಕೂ, ತನ್ಮೂಲಕ ಕಷ್ಟಕ್ಕೀಡಾಗಿ ಹಲಬುವ ಸತ್ ಸಂತಾನದ ಪರಿತಾಪಕ್ಕೂ ಮೊದಲೇ ಕಂದಿ ಕುಂದಿ ಬೆಂದು ಬೇಸತ್ತು ಬಾಯ್ಬಿಡುತ್ತಿರುವ ನಮ್ಮೀ ಕರ್ಣಾಟಕ ಮಾತೆಯನ್ನು ನೀನೂ ಇಂತು ಉಪೇಕ್ಷಿಸುವುದುಚಿತವೇ? ನೀನೇ ನಿರಾಕರಿಸಿದರಿನ್ನಾರುಗತಿ? ಮೆಯ್ದೋರು! ಕೃಪೆಮಾಡು! ಮಹಾನುಭಾವ! ಕೃಪೆಮಾಡು!! ಮತ್ತೆ ಮೆಯ್ದೋರಿ ಮುನ್ನಿನಂತೆಯೇ ನಮ್ಮೆಲ್ಲರ ಬಗೆಗಾನಂದವನ್ನು ಹೆಚ್ಚಿಸುತ್ತಿರು!!! ದೇವದೇವ! ನಮ್ಮೀ ವಿಚಾರವಿಮರ್ಶೆಯಿಂದ ನಮ್ಮ ದೇಶಬಾಂಧವರ ಮನೋಭಾವವು ಭವದೀಯ ಶಾಸನಕ್ಕೊಳಪಟ್ಟು ನೂತನಭಾವೋದಯದಿಂದ ವಿಕಸಿತವಾಗಿ ಬಗೆಗೊಳ್ಳಲಿ! ತನ್ಮೂಲಕ ಈ ಪರಿಚ್ಛೇದವನ್ನು ವಿಲಿಖಿಸಿದ ಈ ಲೇಖಿನಿಯೂ ಧನ್ಯವೆನಿಸಲಿ!! ನಮ್ಮ ಭವಿಷ್ಯನ್ಮಾರ್ಗವೂ ಸುಗಮವಾಗಿ ಪ್ರಕಾಶಿಸಲಿ!!!

|| ಶ್ರೀಃ ||

## ಷಷ್ಠ ಪರಿಚ್ಛೇದ

---

ಲೋಕದಲ್ಲಿ ದಾಂಪತ್ಯಾನುಕೂಲವು ಆರಲ್ಲಿರುವುದೋ ಅವರೇ ಭಾಗ್ಯಶಾಲಿಗಳು. ಪತಿಯೊಲ್ಮೆಗೆ ಪಾತ್ರಳಾದ ಸತಿಗೆ ಮತ್ತಾವ ಪರವಸ್ತುವೂ ಬೇಕಾಗಿರದು. ಸಮಸ್ತವನ್ನೂ ಪತಿಸೇವೆಯೊಂದರಿಂದಲೇ ದೊರೆಯಿಸಿಕೊಳ್ಳಬಹುದೆಂಬ ಆತ್ಮಸಂತೋಷವೂ ಅವಳ ಹೃದಯದಲ್ಲಿ ನಿತ್ಯವೂ ನೆಲೆಗೊಂಡಿರುವುದು. ಅಂತಹ ಹಿತೈಷಿಣೀ ಸತೀಲಾಭವುಳ್ಳ ಪತಿಯಾವನೋ ಅವನೇ ಚತುರ್ವಿಧ ಪುರುಷಾರ್ಥಗಳನ್ನೂ ಹೊಂದತಕ್ಕವನೆಂದರೆ ಅತ್ಯುಕ್ತಿಯಲ್ಲ. ಪರಸ್ಪರ ದ್ವೇಷಭಾವವುಳ್ಳ ಧರ್ಮಾರ್ಥಕಾಮಗಳು ಪರಸ್ಪರೈಕಮತ್ಯದಿಂದ ಆರಲ್ಲಿ ಕಲೆತಿರುವುವೋ ಅವರಲ್ಲಿಯೇ ಶಾಶ್ವತಸುಖಾನಂದ ದಾಯಕವಾದ ಮುಕ್ತಿಯೂ ಸ್ವತಸ್ಸಿದ್ಧವೆಂದೇ ಭಾವಿಸಬೇಕು.

ಚತುರ್ವಿಧ ಪುರುಷಾರ್ಥಸಾಧನೆಗೂ ಆಶ್ರಯದ ವಸ್ತುವಾವುದು? ಮಾನವನು ಯಾವುದರ ಆಧಾರದಿಂದ ಅಂತಹ ದಿವ್ಯ ಸುಖಾನುಭವಕ್ಕೆ ಪಾತ್ರನಾಗುವನು? ಎಂಬುವನ್ನು ಪರಿಶೀಲಿಸುವುದಾದರೆ, ಯಾವ ಮಹಿಳೆಯು ಪತಿಯೇ ಸತಿಯ ಜೀವನಸಾರ ಸರ್ವಸ್ವವೆಂಬ ಅನನ್ಯಭಾವದಿಂದ ಪವಿತ್ರಚಿತ್ತಳೋ, ಯಾವ ಸತೀಮಣಿಯ ಪ್ರತಿಭಾವಿಶೇಷವು ಗೃಹರಾಜ್ಯದಲ್ಲಿ ಕ್ಷುದ್ರಕಲಹಾದಿ ದುರಾಗ್ರಹಗಳಿಗೆಡೆಗುಡದಿರುವುದೋ ಅಂತಹ ನಾರಿಯೇ ಮೇಲೆ ಹೇಳಲ್ಪಟ್ಟ

ದಿವ್ಯಸುಖಾನುಭವಕ್ಕೆ ಪವಿತ್ರಾಶ್ರಯವು. ಅವಳೇ ಚತುರ್ವಿಧ ಪುರುಷಾರ್ಥವನ್ನೂ ಸಾಧಿಸಿಕೊಡತಕ್ಕ ಪಾತ್ರಸ್ವರೂಪಿಣಿಯು ! ಆದರೆ, ಇಂತಹ ನಾರೀಮಣಿಯರನ್ನು ಪಡೆವುದು ಕೇವಲ ದುರ್ಲಭವೇ ಸರಿ. ಏಕೆಂದರೆ—ನಮ್ಮ ಅವಲೋಕನಕ್ಕೊಳಪಟ್ಟ ಗೃಹರಾಜ್ಯಗಳಲ್ಲಿ ಮೇಲೆ ಹೇಳಲ್ಪಟ್ಟ ನಾರೀಮಣಿಯರು ವಿರಳರಾಗಿರುವುದೂ, ಅವರಲ್ಲಿಯೂ ವಿರಳವಿರಳವಾಗಿ ಕಾಣಲ್ಪಡುತ್ತಿರುವ ಲಲನಾಮಣಿಯರೂ ಕೂಡ ಅವಿಚಾರಾಂಧರಾದ ಕ್ರೂರ ವ್ಯಾಪಾರಿಳನ್ನೇ ಪತಿಗಳನ್ನಾಗಿ ಹೊಂದಿರುವುದರಿಂದ ಚಿರದುಃಖಿನಿಯರಾಗಿ ನರಲುತ್ತಿರುವುದೂ ಸಂತಾಪಜನಕವಾಗಿಯೇ ಕಾಣುತ್ತಿರುವುದು ಅಲ್ಲದೆ ಸಾಮಾನ್ಯವಿಚಾರದಿಂದ ನೋಡುವುದಾದರೂ ಅಂತಹ ಸತ್ಪಾತ್ರಗಳೂ ಪರಸ್ಪರಾನುಬಂಧವನ್ನು ಹೊಂದದೆ ಅನನುಗುಣ ಪಾತ್ರಗಳ ಪರಸ್ಪರ ಬಲವತ್ಪಾಶದಲ್ಲಿ ಕಟ್ಟಲ್ಪಟ್ಟು ಭಿನ್ನಭಾವದಿಂದ ವರ್ತಿಸುತ್ತಿರುವುದೂ, ಕಾಲಾನುಕಾಲದಲ್ಲಾದರೂ ನೀತಿಬೋಧೆಗಳಿಂದ ಸನ್ಮಾರ್ಗಗಳಾಗುವಂತಹ ಪುರುಷರು ಹಲವರಿದ್ದರೂ ತದಧಿಕರಾಗಿರತಕ್ಕ, ಎಂದರೆ—ಸಕಲ ಗುಣಾಲಂಕೃತರಾದ ಸತ್ಸ್ವರೂಪರೇ ತಮಗೆ ಪತಿಗಳಾಗಿದ್ದರೂ ಪತಿಮನೋನುಕೂಲೆಯರಾಗಿರದೆ, ಅಹಂಕಾರಾದಿಗಳಿಂದ ಬೀಗಿ, ಬಿರಿದು, ಬೊಬ್ಬಿರಿದು ಪತಿಗಳ ಜೀವನವನ್ನೇ ಕಟುತರವಾಗಿ ಮಾಡಿರುವ ಆಧುನಿಕ ಮಹಿಳಾವ್ರಾತದ ವಿಚಾರವೂ, ಮತ್ತಷ್ಟು ವಿಷಾದಕರವಾಗಿರುವುದು. ಅಸಮಾನ ಪಾತ್ರಗಳು ಪರಸ್ಪರೈಕ್ಯವನ್ನೆಂತುಹೊಂದುವುವು ? ಸಮಾನ ಗುಣವರ್ಣಗಳು ಮಾತ್ರವೇ ಸಾಮರಸ್ಯದಿಂದಿರತಕ್ಕುವು! ಅಲ್ಲದೆ ಪರಸ್ಪರ ಭಿನ್ನಾಭಿಪ್ರಾಯದ ಭಿನ್ನಗುಣಗಳೆಷ್ಟುಕಾಲ ಒಂದೆಡೆಯಲ್ಲಿದ್ದರೂ, ಸಾಮರಸ್ಯದಿಂದಿರಲಾರವೆಂದು ಧಾರಾಳವಾಗಿ

ಹೇಳಬಹುದು. ಈ ಕಾರಣದಿಂದಲೇ ಈ ನಮ್ಮ ಕಣ್ಣುಮುಂದಿರುವ ಅನೇಕ ಸಂಸಾರಗಳಲ್ಲಿ ಪುರುಷರು, ಇಲ್ಲವೆ—ಸ್ತ್ರೀಯರು ಆರಾದರೂ ಆರಿಂದಲೇ ಆಗಲಿ ಸುಖಲೇಶವೂ ಇಲ್ಲದೆ ದುಃಖಾರ್ಣವದಲ್ಲಿ ತಮ್ಮ ಜೀವನ ನೌಕೆಯನ್ನು ನಡೆಯಿಸುತ್ತಿರುವ ವಿಷಯವು ಪ್ರತ್ಯಕ್ಷಪ್ರಮಾಣಗಳಿಂದ ಪ್ರತ್ಯಹದಲ್ಲಿಯೂ ಪರಿತಾಪಜನಕವಾಗಿ ಕಂಡುಬರುತ್ತಿರುವುದಷ್ಟೆ? ಪ್ರಕೃತದಲ್ಲಿ ಉದಾಹರಣೆಗಾಗಿ ನಾವು ಮತ್ತೆಲ್ಲಿಯೂ ಹೋಗಬೇಕಾದುದಿಲ್ಲ. ಈ ನಮ್ಮ ಕಥಾಸ್ಥಪಾತ್ರಾಪಾತ್ರಗಳ ಸಮಾಜ ಚಿತ್ರವನ್ನೇ ತೆಗೆದು ಮುಂದಿಟ್ಟರೆ ಸಾಕಾಗಿದೆ.

ವಿರಾಗಿಣಿ. ರಘುನಾಥನ ಮನೆಯನ್ನು ಸೇರಿ ಇಂದಿಗೆ ಎರಡು ತಿಂಗಳಾದುವು ಈ ಎರಡು ತಿಂಗಳಲ್ಲಿ ಅವಳ ಸಖ್ಯಕ್ಕೆ ಅನೇಕ ಮಹಿಳೆಯರೊಳಪಟ್ಟಿದ್ದರು ಆದರೂ ಸತ್ವಗುಣದಲ್ಲಿ ಪ್ರಥಮತಃ ಸತ್ಯ-ಕ್ಷಮಾದಿಗಳು ಮಾತ್ರವೇ ಅನುಗೊಂಡಿರುವುವು. ಉಳಿದ ಮಿಶ್ರಗುಣಗಳು ಕತಿಗಾದರೂ ಅನುಗೊಳ್ಳತಕ್ಕುವಾದರೂ ಅದಿಯಲ್ಲಿ ವ್ಯತಿರಿಕ್ತವಾಗಿ ನಿಂತು ಸತ್ವಗುಣಪ್ರಕಾಶಕ್ಕೆ ಕಾರಣವಾಗುವುದೂ ತಿಳಿದ ವಿಷಯುವೇ ಅಹುದಷ್ಟೆ? ಅಂತೆಯೇ ಸತ್ವಮಯಪಾತ್ರಳಾದ ನಮ್ಮ ವಿರಾಗಿಣಿಯಲ್ಲಿ ಮೊತ್ತಮೊದಲು ಸ್ನೇಹಬೀಜವನ್ನು ಬಿತ್ತಿದ ಚಂದ್ರಭಾಗೆಯಳೊಬ್ಬಳೇ ಪ್ರಾಣಾಪ್ತ ಸಖಿಯಾಗಿದ್ದಳೆಂದರೆ ನಂಬಲಾರಿರೇನು?

"ಚಂದ್ರಭಾಗೆ" ಎಂದರೆ ನಾಮಮಾತ್ರವಾಗಿರಲಿಲ್ಲ. ರೂಪಗುಣ ವಯೋ ವಿದ್ಯಾ ಬುದ್ಧಿ ಗಾಂಭೀರ್ಯಾದಿ ಸಮಸ್ತ ಗುಣಗಳಲ್ಲಿಯೂ ಸುಪ್ರಕಾಶಳಾದ ಭಾಗ್ಯರೇಖೆಯೇ ಆಗಿರುವಳು. ಇವಳು ವಿರಾಗಿಣಿಗೆ ಆವಭಾಗದಲ್ಲಿಯೂ ಕಡಿಮೆಯಾಗಿಲ್ಲವಾದರೂ, ಇವ

ಳನ್ನು ಸ್ತ್ರೀಸಾಮಾನ್ಯಗುಣಗಳಾದ ಅಭಿಮಾನಾಸೂಯೆಗಳೆಂಬ ದುಷ್ಟರೋಗಗಳು ಬಳಸೇರುತ್ತಿರಲಿಲ್ಲವಾದುದರಿಂದ ಅಬಲಾ ಸಾಮಾನ್ಯದಲ್ಲಿ ತಾನೋರ್ವ ಅಲ್ಪಮತಿಯೆಂಬ ದೈನ್ಯಭಾವವೇ ಇವಳಲ್ಲಿ ದೃಢವಾಗಿ ನಿಂತ ವಿರಾಗಿಣೀ ಪವಿತ್ರಸ್ನೇಹದಲ್ಲಿ ವಿಕ್ರೀತವಾಗಿ ಹೋಗಿರುವುದು.

ಚಂದ್ರಭಾಗೆಯು ಬಡವರ ಮನೆಯಲ್ಲಿ ಹುಟ್ಟಿದವಳೇನೂ ಅಲ್ಲ. ಶ್ರೀಮಂತರ ಮಗಳೇ! ಅಲ್ಲದೆ, ಮೊದಲಿಂದಲೂ ಅಕ್ಕರೆಯಿಂದ ಬಳೆದವಳೂ ಅಹುದು ಆದರೆ ಅಕ್ಕರೆಯೆಂತಿದ್ದಿತೆಂಬು ನಮ್ಮ ಶ್ರೀಮಂತ ವಾಚಕರಿಗೆ ಹೇಳಬೇಕಾಗಿಲ್ಲವಾದರೂ ಇವಳು ಅಂತಹ ಅಕ್ಕರೆಯೊಂದರಲ್ಲಿಯೇ ಮುಂದೆ ಬರುವಂತಾಗಲಿಲ್ಲ ಅಕ್ಕರೆಗೆ ತಕ್ಕಂತೆ ತಾಯ್ತಂದೆಗಳ ಬಾಲಸುಶಿಕ್ಷಣವೂ ಸದ್ಬೋಧಕರ ಪ್ರೌಢಶಿಕ್ಷಾಬಲವೂ ಇವಳನ್ನು ಪ್ರಾಪಂಚಿಕ ತತ್ವವನ್ನರಿತು ಗೃಹರಾಜ್ಯಪಾಲನೆಗೆ ಅರ್ಹಳನ್ನಾಗಿ ಮಾಡಿರುವುವು ಆದುದರಿಂದಲೇ ಇವಳು ತಾನು ಶ್ರೀಮಂತರ ಮಗಳೆಂಬ ಹೆಮ್ಮೆಯನ್ನು ಬಳಿಗೂ ಸೇರಿಸದೆ ನೈಜಧರ್ಮಕ್ಕೆ ತಿಲಮಾತ್ರವೂ ಚ್ಯುತಿಬಾರದಂತೆ ಜಾಗರೂಕಳಾಗಿರುವಳು ಹೆಚ್ಚೇಕೆ? ಇವಳು "ಸತೀ, ಸಾಧ್ವೀ, ಭಾರ್ಯಾ, ಸಹಧರ್ಮಿಣೀ, ಕುಲಾಂಗನಾ" ಇತ್ಯಾದಿ ಸ್ತುತಿಗಳಿಗೆ ತಕ್ಕ ಪಾತ್ರಸ್ವರೂಪಿಣಿಯಾಗಿರುವಳು. ಹೇಗಿದ್ದರೇನು? ಇವಳ ಪತಿ—ಮಕರಂದಮಿತ್ರನು ಮಾತ್ರ ಇವಳಲ್ಲಿ ಕೃತಘ್ನನಾಗಿಯೇ ಇರುವನು, ಪಾಪ! ಚಂದ್ರಭಾಗೆ ಊರಿಗೊಂದು ಕಣ್ಣಾಗಿದ್ದರೂ ಪತಿಯ ದೋಷದೃಷ್ಟಿಗೆ ಶ್ಲೇಷ್ಮವ್ಯಾಧಿಯಂತೆ ಕಾಣಲ್ಪಡುವಳು!! ಕರ್ಮಫಲಾನುಭವವು ಅನುಲ್ಲಂಘ್ಯವಲ್ಲವೇ?

ಮಕರಂದನೆಂದರೆ ಗುಣಶಾಲಿ, ಮಾನ್ಯ, ಪೂರ್ಣವಿದ್ಯಾವಂತ. ಸ್ನೇಹಪರನೂ ಅಹುದು ! ಸಹವಾಸದೋಷ-ಸಂಗದೋಷಗಳ ಆವೇಶವು, ಈಚೀಚೆಗೆ ಇವನಲ್ಲಿ ಬೇರೂರುತ್ತ ಬಂದು ದುಂಮಗಾರರಿಗೆ ಮುಂದಾಳಾಗಿ ನಿಲ್ಲುವಂತೆ ಮಾಡುತ್ತಿರುವುದು ಇವನು ಸ್ವಾತಂತ್ರ್ಯಪ್ರಿಯನಾದುದರಿಂದ ಆರಿಗೂ ಆಶ್ರಿತನಾಗಿರಲೊಲ್ಲೆನೆಂದು ಸ್ವಂತ ನಾಟಕಸಂಘವೊಂದನ್ನೇರ್ಪಡಿಸಿಕೊಂಡು ಉಚ್ಛೃಂಖಲವೃತ್ತಿಯಲ್ಲಿರುವನು ತನ್ನ ಅಕಾರ್ಯಪ್ರವರ್ತನೆಗೆಂದು ತನ್ನ ಪತ್ನಿಗೆ ಪಿತೃದತ್ತವಾಗಿ ಬಂದ ಸ್ಥಿರ ಚರ ಸ್ವತ್ತುಗಳೆಲ್ಲವನ್ನೂ ತಾನೇ ತೆಗೆದು ಹಾಳುಮಾಡಿದನು. ಅಷ್ಟಾದರೂ ಸತೀಮಣಿಯಾದ ಧರ್ಮಪತ್ನಿಯಲ್ಲಿ ಕೃತಜ್ಞನಾಗಿರುವನೆಂದರೆ, ಪತ್ನಿಯನ್ನು ತೃಣಕ್ಕೂ ಕಡೆಯಾಗಿ ಭಾವಿಸುವನು ' ಮಾಡತಕ್ಕುದೇನು ?

ಪಾಪ ! ಸ್ವಾಮಿಸೇವಾವೃತ್ತಿಯೊಂದೇ ಸಚ್ಚಿದಾನಂದ ಸಾಮ್ರಾಜ್ಯವೆಂದು ನಂಬಿ ನಡೆವ ಚಂದ್ರಭಾಗೆ, "ಅಳಕನಂದೆ" ಎಂಬ ಎಂಟುವರ್ಷದ ಹೆಣ್ಣಿಗೆ ತಾಯಾಗಿರುವ ಆ ಪೆಣ್ಮಣಿ, ತನ್ನ ಮೆಯ್ಮೇಲಿದ್ದ ತೊಡುಗೆಗಳನ್ನು ಸುಲಿದಿತ್ತೂ, ತನ್ನಲ್ಲಿ ಉದಾಸೀನನಾಗಿರುವ ಪತಿಯುಪಚಾರವಾಗಿ ಎಂದೂ ತಿರಸ್ಕರಿಸಲೊಲ್ಲಳು' ತನ್ನ ಶೀಲವೃತ್ತಗಳಿಗೂ ತನ್ನ ಪತಿಯ ದುರ್ವೃತ್ತಗಳಿಗೂ ಅನುಕಂಪಿಸುತ್ತಿರುವ ನರಸಮ್ಮನನ್ನೂ ತಾನೇ ಸಂತಪಡುವಳು ಅವಳಾದರೂ ಸೊಸೆಯೇ ತನಗೆ ಮಗಳೆಂದೂ, ಮಗನೇ ತನಗೆ ಮನೆಯ ಅಳಿಯನೆಂದೂ ಭಾವಿಸಿ ಚಂದ್ರಭಾಗೆಯನ್ನೂ ಅಳಕನಂದೆಯನ್ನೂ ಪ್ರೀತಿಸುತ್ತ ಅವರ ಆದರ ಸನ್ಮಾನಗಳಿಂದ ಸಮಾಧಾನವನ್ನೂ ಹೊಂದುತ್ತಿದ್ದಳು.

ವಿರಾಗಿಣಿಗೆ ಚಂದ್ರಭಾಗೆಯೇ ಹೊರಗಿನ ಪ್ರಾಣವು ಚಂದ್ರಭಾಗೆಗೆ ವಿರಾಗಿಣೀ ಸಹವಾಸವು ದೊರೆದಂದಿನಿಂದಲೂ ಬಂದು

ಬಗೆಯ ನೂತನ ಶಕ್ತಿಯು ಇದ್ದಿತು. ಅದರ ಪ್ರಭಾವವೇ ಇವಳಿಗೆ ಮನೆಗೆಲಸಗಳನ್ನೂ ಲೀಲಾಮಾತ್ರದಿಂದ ನೆರವೇರಿಸಿ ವ್ಯಾಸಂಗಕ್ಕೆ ತಕ್ಕಷ್ಟು ಕಾಲವನ್ನುಂಟುಮಾಡಿಕೊಡುವುದು. ವಿರಾಗಿಣಿಯೊಬ್ಬಳಲ್ಲಿಗಲ್ಲದೆ ಇವಳು ಮತ್ತೆಲ್ಲಿಗೂ ಹೋಗತಕ್ಕವಳಲ್ಲವಾದುದರಿಂದ ಅತ್ತೆಯೂ ಕೂಡ ಇವಳನ್ನು ವಿರಾಗಿಣೀ ಸಹಾಧ್ಯಾಯನದಲ್ಲಿರಲು ಬಿಡುತಿಯಿತ್ತಿರುವಳು. ವಿರಾಗಿಣಿ ಬರುವವರೆಗೂ ಇವಳು ರಘುನಾಥನ ಮನೆಗೂ ಬರುತ್ತಿರಲಿಲ್ಲ. ಈಗ ಇವಳು ತಮ್ಮ ಮನೆಗೆ ಅಡಿಗಡಿಗೆ ಬರುತ್ತಿರುವುದರಿಂದ ತುಂಗೆಗೆ ದಾರುಣವಾದ ಯಾತನೆಯೇ ಉಂಟಾಗುತ್ತಿದ್ದಿತು. ಕೃಷ್ಣವೇಣಿಯೆಂದರೋ ಕೇಣಕ್ಕಗಣಿ! ಕೇಳಬೇಕೆ? ಇಂದಿನವರೆಗೂ ಬಾರದಿದ್ದವಳು ಈಗೇಕ ಇಷ್ಟಾಗಿ ಬರುತ್ತಿರುವುದು? ಎಂಬಿವೇ ಮುಂತಾದ ಆಕ್ಷೇಪಗಳು ಅವಳ ಬಾಯಿಂದ ಪ್ರತಿನಿತ್ಯದಲ್ಲಿಯೂ ಹೊರಡುತ್ತಿರುವುವು. ಆದರೇನು? ಸತ್ವದ ಆಕರ್ಷಣಾಶಕ್ತಿಯಿಂದ ಕ್ಷಮೆಗೆ ಅದಾವುದೂ ಗಣನಾರ್ಹವಾಗಿಯೇ ತೋರಲಿಲ್ಲ. ಇದಲ್ಲವೇ ಈ ಎರಡರ ಪರಸ್ಪರ ಸಂಬಂಧಶಕ್ತಿಯೆಂಬುದು?

ಇನ್ನು ರಘುನಾಥನ ವಿಚಾರವನ್ನು ವಿಮರ್ಶಿಸಲು ಕುಳಿತರೆ ವಿಷಾದವೇ ಉಂಟಾಗುವುದು. ಚಂದ್ರಭಾಗೆಗೆ ಮಕರಂದನೆಂತು ಪ್ರತಿಕೂಲನಾಗಿ ವ್ಯಾಕುಲವನ್ನುಂಟುಮಾಡುವನೋ ಅಂತೆಯೇ ರಘುನಾಥನ ವ್ಯಾಕುಲವನ್ನು ವೃದ್ಧಿಪಡಿಸತಕ್ಕ ಮೂರ್ಖಸ್ವಭಾವವೂ ಕೃಷ್ಣವೇಣಿಯಲ್ಲೇ ನೆಲೆಗೊಂಡಿರುವುದು. ಏಕೆಂದರೆ—ಈತನು ಆಧುನಿಕಸುಧಾರಕ ಮಹಾಶಯರ ನಾಗರಿಕತೆಯಂತೆ ವಿಷಯಲೋಲುಪನಾಗಿ ಪತ್ನೀಪಾದಾಶ್ರಿತನಾಗಿರತಕ್ಕವನಲ್ಲ. ಜಿತೇಂದ್ರಿಯತೆ, ಸತ್ಯಸಂಧತೆ, ಭೂತದಯಾಪರತೆ, ದೇಶವತ್ಸಲತೆಗಳಲ್ಲಿ

ಈತನೇ ಅದ್ವಿತೀಯ ಪುಣ್ಯಪುರುಷನೆನ್ನಬೇಕು. ಆದುದರಿಂದ ಈತನ ಪರಿಶುದ್ಧಾತ್ಮಪ್ರೇರಿತಗಳಾದ ಸತ್ಕಾರ್ಯಗಳಾವುವೇ ಆಗಲಿ ಪತ್ನಿಯ ಸಂಕುಚಿತಚಿತ್ತದ ದುರಭಿಪ್ರಾಯ (ಪರಾಮರ್ಶ)ವನ್ನು ಕೇಳದೇ ಸಂಕಲ್ಪಸಿದ್ಧಿಯನ್ನು ಹೊಂದುತ್ತಿರುವುವು. ಈ ಕಾರಣ ದಿಂದಲೇ ಈತನು ಅಭಿಮಾನವತೀರಾಜ್ಞಿಯ ಆಗ್ರಹಕ್ಕೂ ಸ್ವಾರ್ಥ ಪರೆಯಾದ ಸಹಜಾತೆಯ ಆಕ್ಷೇಪಕ್ಕೂ ಪಕ್ಕಾಗಬೇಕಾದುದು? ಆದರೇನು? ತಾನು ಪತ್ನಿಯ ಆಗ್ರಹಕ್ಕೆ ಪಕ್ಕಾದೆನೆಂದು ಅವನೇ ನಾದರೂ ಅವಳನ್ನು ಧಿಕ್ಕರಿಸುವನೋ? ಎಂದೂ ಧಿಕ್ಕರಿಸಲಾ ರನು. "ಗಂಡ ಕೊಂಡಾಡಿದರೆ ಗುಂಡುಪಾವನ" ವೆಂದಿಲ್ಲವೇ? ಎನ್ನುವಿರಿ! ಅವನು ಪತ್ನಿಯನ್ನು ಕೊಂಡಾಡುತ್ತಿರಲಿಲ್ಲ ಸಮ ಯವರಿತು ತಕ್ಕ ರೀತಿ ನೀತಿಗಳನ್ನು ನಯಭಯದಿಂದ ಹೇಳುತ್ತ ಭಯ ಗೌರವವನ್ನುಂಟುಮಾಡಿಯೇ ಮಾಡುತ್ತಿದ್ದನು. ಅಲ್ಲದೆ ತನ್ನ ಹೃತ್ಕೋಶದಲ್ಲಿ ಅಡಗಿದ್ದ ಅನುರಾಗವನ್ನು ಕಾಲವರಿತು ಕ್ಲಿಪ್ತರೀತಿಯಿಂದ ಪ್ರಕಾಶಪಡಿಸುತ್ತಿರುವನಲ್ಲದೆ ಆವಾಗಲೂ ಅದ ನ್ನು ಹೊರಗೆಡಹುತ್ತಿರಲಿಲ್ಲ. ಮೂರ್ಖಹೃದಯದ ಶಠಭಾವವು ರಘುನಾಥನ ನಿರ್ದುಷ್ಟಪ್ರೇಮಪ್ರಕಾಶವನ್ನೆಂತು ತಿಳಿಯಬಲ್ಲುದು? ಹೇಗಾದರಿರಲಿ? ಮುಖ್ಯವಾಗಿ ರಘುನಾಥನ ಸದ್ಗುಣಗಳು ಕೃಷ್ಣ ವೇಣಿಯ ಅಭಿಮಾನಾಸೂಯೆಗಳೆಂಬ ಪ್ರಬಲ ದೌರ್ಜನ್ಯದಿಂ ದೆಯೂ, ಚಂದ್ರಭಾಗೆಯ ನಿರ್ದುಷ್ಟಶೀಲವೃತ್ತಗಳು ಕೃತಘ್ನನಾದ ಮಕರಂದನ ಪಾಪಾಚರಣದಿಂದೆಯೂ, ಸಂತಾಪಕ್ಕೆಡೆಯಾಗಿ ಮುಗಿ ಲಸಂದಣಿಯಲ್ಲಡಗಿದ ಚಂದ್ರಮನಂತೆ ಕಳೆಗುಂದುತ್ತಿದ್ದುವು.

ವಿರಾಗಿಣಿಯ ಆತ್ಮರಾಜನೋ? ಎಂದರೆ ಸರ್ವರನ್ನೂ ಸಮಭಾವನೆಯಿಂದಲೇ ಸಂಭಾವಿಸುವನು. ಆದರೂ ತುಂಗೆ,

ಕೃಷ್ಣವೇಣಿ. ನರಸಮ್ಮ, ಲಕ್ಷ್ಮೀದೇವಮ್ಮ ಇವರನ್ನೂ, ಚಂದ್ರಭಾಗೆ, ರಘುನಾಥರನ್ನೂ ಅವರವರ ಪ್ರಕೃತಿಧರ್ಮಕ್ಕೆ ತಕ್ಕಂತೆ ಅವರಲ್ಲಿ ಸನ್ಮಾನಿಸುತಿದ್ದನು. ಚಂದ್ರಭಾಗೆ, ರಘುನಾಥ ಇವರಿಬ್ಬರನ್ನೂ ಸ್ವಾತ್ಮಾನುಬಂಧಿಗಳೆಂದೇ ತಿಳಿದು ಸಂಭಾವಿಸುತ್ತಿರುವನು. ಇದಲ್ಲವೇ ಸತ್ವಮಯಮೂರ್ತಿಯ ಸ್ವರೂಪನಿರೂಪಣವು ? ಸಹೃದಯಸೋದರಿಯರೇ !

ಈ ವರೆಗೂ ವಿಚಾರಮಾಡಿದ ಪಾತ್ರಾಪಾತ್ರ ವಿಮರ್ಶನದಿಂದ ಏನನ್ನು ತಿಳಿದಿರಿ ? ಸತ್ವವು ತದುಪಾಶ್ರಯಗಳಾದ ಶೀಲಸತ್ಯ ಕ್ಷಮಾ ದಮಾದಿಗಳನ್ನೇ ವರಿಸಲುಳ್ಳುದೆಂದೂ, ರಾಜಸ ತಾಮಸ ಪ್ರಕೃತಿಗಳು ಸಂದರ್ಭಾನುಸಾರವಾಗಿ ಸುಗುಣ ದುರ್ಗುಣ ಸಮಾಜದಲ್ಲಿ ಸೇರಿ, ಮತ್ತೆ ಮತ್ತೆ ಹೊರಬೀಳುವುವೆಂದೂ ತಿಳಿದಿರಲ್ಲವೇ ? ಸಾಧು ! ಸಾಧು !! ಇಂತಹ ಸದಸದ್ವಿವೇಚನೆ ನಿಮ್ಮಲ್ಲಿ ನೆಲೆಗೊಂಡಿರಲು ನಿಮ್ಮ ನಾರೀಜನ್ಮಧಾರಣವೇ ಪರಮಸಾಧು !!!

(ಅಂತಾಗಲಿ !)

॥ ಶ್ರೀಃ ॥

## ಸಪ್ತಮ ಪರಿಚ್ಛೇದ.

(ಹಿತಬೋಧೆ.)

ಪ್ರಾತಃಕಾಲ ಒಂಭತ್ತು ಘಂಟೆಯಿರಬಹುದು. ವಿರಾಗಿಣಿ ವಿಮರ್ಶೆಯಲ್ಲಿ ಕುಳಿತಿರುವಳು. ಆಶ್ಚರ್ಯ! ಇಂದು ತುಂಗೆಯೊಬ್ಬಳೇ ವಿರಾಗಿಣಿಯೆಡೆಯಲ್ಲಿ ವಿಷಯಜಿಜ್ಞಾಸೆಯಿಂದ ಪ್ರಸಂಗಿಸುತ್ತಿರುವಳು! ಭಲೆ!! ಇದೇ ಪ್ರಸಂಗವೇ ನಮ್ಮ ಪ್ರಿಯ ಸೋದರಿಯರ ಅವಗಾಹನಕ್ಕೆ ಬರಬೇಕಾದುದೂ ಅವಶ್ಯವಾದುದೇ

ತುಂಗೆ—ವಿರಾಗಿಣಿ! ಆವುದನ್ನು ಹೇಳಿದರೂ ದೋಷಯುಕ್ತವೆಂದೇ ಹೇಳುತ್ತಿರುವೆ? ಇನ್ನು ನಿನಗೆ ಒಪ್ಪಿತವಾದುದಾದರೂ ಏನುಂಟೋ ಕಾಣೆನಮ್ಮ!

ವಿರಾ.—ತುಂಗೆ! ಪರಸ್ಪರ ವಿರೋಧಾರ್ಥಕಲ್ಪಗಳಾದ ವಿಷಯಗಳನ್ನು ನಂಬುವುದೆಂತು? ಆವುದು ಸಿರ್ವಿವಾದ ವಿಷಯವೋ ಅದನ್ನು ಒಪ್ಪಲೇಬೇಕು.

ತುಂಗ—ಹೋಗಲಿ, ಪೂರ್ವಿಕರ ಶಾಸ್ತ್ರಗಳಾದರೂ ಒಪ್ಪಿತವೊ ಇಲ್ಲವೊ?

ವಿರಾ:—ಅವುಗಳಲ್ಲಿಯೂ ಕೆಲವು ಸ್ವೀಯವು, ಉಳಿದುವು ಮಾಯಾವಾದವೇ?

ತುಂಗ—ಹಾಗೆಂದೇ ಹೇಳು! ನೀನು ಕೆರೆ, ಕೊಳ. ಕಟ್ಟೆಗಳಿಗೆಂದೂ ಹೋಗುವುದಿಲ್ಲವೇಕೆ?

ವಿರಾ:—ಹೋಗಬೇಕೆಂಬ ನಿರ್ಬಂಧವೇನು ?

ತುಂಗ:—ಆಹಾ ! ಹೋಗಬೇಡವೆ ?

ವಿರಾ:—ನಾನು ಸದ್ಯಸ್ಥಿತಿಯಲ್ಲಿ ಅಲ್ಲಿಗೆ ಹೋಗಬಾರದೆನ್ನುವೆನು.

ತುಂಗೆ:—ಏಕೆ ?

ವಿರಾ:—ಅವು ಅತೃಪ್ತಿಕರವಾದುವರಿಂದ

ತುಂಗೆ:—ಅತೃಪ್ತಿಯೆ ? ಏತರಿಂದ ?

ವಿರಾ:—ಏತರಿಂದ, ತುಂಗೆ ! ಆಧುನಿಕ ತರುಣ ಮಹಾಜನರ ಅವ್ಯವಸ್ಥಿತ ವ್ಯಾಪಾರದಿಂದ ! ಈಗ ಕೆರೆ-ಕೊಳ-ಕಟ್ಟೆ-ದೇವಾಲಯ-ಸಂಸ್ಥೆ-ಮೊದಲಾದೆಡೆಗಳಲ್ಲಿ ಎಂತೆಂತಹ ಅವಿಚಾರದ ಕಾರ್ಯಗಳು ಅಡಗಿರುವುವೆಂಬುದನ್ನು ತಿಳಿದು ಹೇಳಬಲ್ಲೆಯಾ ? ಹೋಗಲಿ, ಅವುಗಳಲ್ಲಿ ಒಂದೊಂದು ವಿಷಯವೇ ಆತ್ಮನಾಶಕ್ಕೆ ಸಾಕಾಗಿರುವುದೆಂದರೆ—ಗ್ರಹಿಸಲಾರೆಯೊ ?

ತುಂಗೆ:—ಓಹೋ ! ಅದೇನಂತಹ ಕೆಡುಕು ? ಹೇಳಬಾರದೊ ?

ವಿರಾ:—ಆಗಲಿ ; ನಾವು ದೇವಸ್ಥಾನಕ್ಕೆ ಹೋಗುವುದೇಕೆ ?

ತುಂಗೆ:—ದೇವರಸೇವೆಗೆ !

ವಿರಾ:—ಅಹುದಷ್ಟೆ ! ದೇವರ ಸೇವೆಗೆಂದು ಹೋಗುವವರಲ್ಲಿ ಸಾಮಾನ್ಯವಾಗಿ ದೊರೆಯಬಲ್ಲುದಾವುದು ? ಪರಸೇವೆಯೊಂದಲ್ಲವೆ ?

ತುಂಗೆ:—ಶ್ಲೇಷೋಕ್ತಿ ನನಗೆ ಅರ್ಥವಾಗದು ?

ವಿರಾ:—ಶ್ಲೇಷೋಕ್ತಿಯಲ್ಲ ; ನಾವು ದೇವಸ್ಥಾನಕ್ಕೆ ಹೋದ ವೇಳೆಯಲ್ಲಿ ಅಭ್ಯಾಸಯೋಗವರಿಯದೆ ದುರ್ಬಲಹೃದಯರಾಗಿರುವ ನಮ್ಮ ದೃಷ್ಟಿಯೂ, ಮನಸ್ಸೂ ದೇವರಲ್ಲಿರುವುದಕ್ಕೆ ಪ್ರತಿಯಾಗಿ ಮತ್ತೆಲ್ಲಿಲ್ಲಿ ಸುತ್ತುವುದೆಂಬುದನ್ನು ಆಲೋಚಿಸು !

ನಮ್ಮ ಸುತ್ತಲೂ ಆರಾರಿರಬಹುದು? ಅಂತಹರಲ್ಲಿ ಆವಾವ ಹೆಚ್ಚುಗೆಯು ತೋರುವುದು? ಯಾರಲ್ಲಿ ವಿಶೇಷ ವೈಭವಗಳು ಕಾಣುತ್ತಿರುವುವು ” ಎಂಬೀ ಲಂಪಟಗಳಲ್ಲವೇ ಮೊತ್ತಮೊದಲು ನಮ್ಮ ಕರ್ಮಸಗಳಿಗುಂಟಾಗುವ ಸೇವಾಫಲವು ”

ತುಂಗೆ:—ಅಷ್ಟುಮಾತ್ರಕ್ಕೇ ನಮಗಾಗುವ ಕುಂದೇನು ”

ವಿರಾ:—ಕುಂದಾವುದೆ? ತುಂಗ! ಪಾಪ. ನೀನೇನುಬಲ್ಲೆ ” ಅವುಗಳ ಸ್ಥೂಲ-ಸೂಕ್ಷ್ಮಗಳನ್ನು ತಿಳಿಯಲು ನಿನಗೆ ಅವಕಾಶವುಂಟಾಗಿದ್ದರಲ್ಲವೇ ಆ ಮಾತು ” ಈಗ ಅವುಗಳ ಸಾಧಕಬಾಧಕಗಳನ್ನು ಹೇಗೆತಾನೇ ಹೇಳಬಹುದು ”

ತುಂಗೆ:—ನನಗಾವುದೂ ತಿಳಿಯದಮ್ಮ? ನಾನೇನೋ ದೇವಸ್ಥಾನಕ್ಕೆ ಹೋಗುವುದೂ ದೇವರ ಸೇವೆ ಮಾಡುವುದೂ ಪುಣ್ಯಕಾರ್ಯವೆಂದು ನಂಬಿರುವೆನು ಅದರಂತೆಯೇ ಹರಿಕಥೆಯನ್ನು ಕೇಳುವುದೂ ಪುಣ್ಯನದಿಯಲ್ಲಿ ಸ್ನಾನಮಾಡುವುದೂ ಫಲಪ್ರದವೆಂದೇ ಭಾವಿಸಿರುತ್ತೇನೆ ನನಗೆ ಅವುಗಳಲ್ಲಿರುವ ದೋಷವೊಂದೂ ತಿಳಿಯುವುದಿಲ್ಲ.

ವಿರಾ:—(ತಲೆದೂಗುತ್ತ) ನಿರೀಕ್ಷಿಸುತ್ತಿದ್ದ ಸಮಯವಿಂದೇ ಮುಂದೆ ಬಂದಂತಿದೆ' ತುಂಗೆ' ಇಂದು ನಾನು ಎದ್ದವೇಳೆ ಬಲು ಒಳ್ಳೆಯದು. ಅಂದಿನಿಂದ ಹೇಳಬೇಕೆಂದಿದ್ದ ವಿಚಾರವು ಇಂದು ನಿನ್ನ ಬಾಯಿಂದ ತಾನಾಗಿ ಹೊರಬೀಳುವಂತೆ ಮಾಡಿತೆಂದು ನಲಿಯುತ್ತಿದ್ದೇನೆ. ನಿಧಾನವಾಗಿ ಕೇಳು. ದೇವಸ್ಥಾನದಲ್ಲಿ ಪ್ರತಿಷ್ಠಿತವಾಗಿರುವುದು ಶಿಲಾಮೂರ್ತಿ. ಮೂರ್ತಿಯ ಮುಂದೆ ಆವಾವ ತೆರದ ಅಕಾರ್ಯಗಳನ್ನು ಮಾಡಿ

ದರೂ ಅದರಿಂದ ಅಡ್ಡಿಯುಂಟಾಗದು. ನಮ್ಮ ಆರ್ಯರಾದ ಪುಣ್ಯಪುರುಷರು ಕ್ರೋಧಲೋಭಾದಿಗಳಿಂದ ಕೆಡುತ್ತಿರುವ ಪಾಮರರಲ್ಲಿ ಕನಿಕರವಿಟ್ಟು ದಿನಕ್ಕೆ ಒಂದೆರಡು ಗಳಿಗೆಯಾದರೂ ಒಂದೆಡೆಯಲ್ಲಿ ಸೇರಿ ಭಗವದ್ಗುಣಕಥನ ರೂಪದಿಂದ ತಮ್ಮತಮ್ಮ ಪಾಪಕೃತ್ಯಗಳನ್ನು ಒಪ್ಪಿಕೊಳ್ಳುವುದರ ಮೂಲಕ ಮುಂದೆ ಎಚ್ಚತ್ತುಕೊಳ್ಳಲೆಂದೆಣಿಸಿ, ದೇವಾಲಯಗಳನ್ನು ಕಟ್ಟಿಸಿದರು; ಮಾನವಪ್ರಕೃತಿಸಾಮಾನ್ಯದಲ್ಲಿ ಭಯ-ಭಕ್ತಿ-ವಿನಯಗಳು ನೆಲೆಗೊಳ್ಳಲು ಅನುಕೂಲಿಸುವಂತೆ ಭಗವಂತನ ಅದ್ಭುತ ವ್ಯಾಪಾರಗಳಲ್ಲಿ ಮುಖ್ಯಮುಖ್ಯಾಂಶಗಳನ್ನೇ ಸಂಗ್ರಹಿಸಿ ಅದೇ ಹೆಸರಿನಿಂದ ಅರ್ಚಾರೂಪವಾಗಿ ಮಾಡಿ ದೇವಾಲಯಗಳಲ್ಲಿ ಪ್ರತಿಷ್ಠಿಸಿದರು. ಮುಂದಾಳುಗಳಾಗಿ ತಾವೇ ಅರ್ಚಾರೂಪವನ್ನೂ ಪೂಜಿಸಿ ತಮ್ಮ ಅನುಯಾಯಿಗಳಿಗೆ ಪ್ರಬಲವಾದ ನಂಬುಗೆಯನ್ನೂ ಅಲಂಘ್ಯಗಳಾದ ಕೆಲವು ವಿಧಿಗಳನ್ನೂ ತೋರಿಸಿಟ್ಟರು. ವಿಧಿನಿಯಮಗಳನ್ನು ಮೀರದಿರುವುದಕ್ಕೆ ಸಾಕಾದಷ್ಟು ತತ್ತ್ವಸಾರಗಳನ್ನೂ ಸುಬೋಧಮಾರ್ಗದಲ್ಲಿ ತುಂಬಿಟ್ಟರು. ಎಷ್ಟುಮಾಡಿದರೇನು? ಆವುದನ್ನು ತುಂಬಿಟ್ಟರೇನು? ಎಂತೂ ನಮ್ಮ ದೌರ್ಭಾಗ್ಯವಿಶೇಷವು, ಅವೆಲ್ಲವನ್ನೂ ದೂರ ಸಾಗಿಸಿಬಿಟ್ಟು ಬಂದಿರುವುದು. ದೇವಾಲಯಪ್ರವೇಶವಾದೊಡನೆಯೇ ನಮ್ಮವರಿಗೆ ಮುಂದಾಗಿ ತಲೆದೋರಬೇಕಾದ ದೈವಭಕ್ತಿಯೂ ದಾಸ್ಯಭಾವವೂ ಎಲ್ಲಿಯೋ ಮಾಯವಾಗಿ, ಅದಕ್ಕೆ ಪ್ರತಿಯಾಗಿ ವಿನೋದ, ಪರಸ್ಪರ ದ್ವೇಷಾಸೂಯೆ, ಅಭಿಮಾನಾಂಧತೆಗಳೇ ಅಹಮಹಮಿಕೆಯಿಂದ ಮುಂದಾಗುತ್ತಿರುವುವು.

ಇದರಿಂದಲ್ಲವೇ ಅಲ್ಲಿ ಮೊದಲು ನಮ್ಮ ಆರ್ಯರ ಪುಣ್ಯಫಲದಿಂದ ಪ್ರಕಾಶಿಸುತ್ತಿದ್ದ ಮಾಹಾತ್ಮ್ಯವೇ ಮಾಯವಾಗಿ ನಮ್ಮ ದುರ್ಭಾವನೆಗೆ ಎಲ್ಲೆಯಿಲ್ಲದಂತಾಗಿರುವುದು ? ಅಂಕೆಯಿಲ್ಲದ ದುಶ್ಚಿಂತೆಗಳಿಗೆ ದುರ್ವಿಷಯಗಳು ಎಷ್ಟೆಷ್ಟಾದರೂ ದೊರೆಯಬಹುದು

ತುಂಗೆ —ಅಲ್ಲಿಗೆ ಹೋಗುವವರೆಲ್ಲರೂ ನಿನ್ನ ಅಭಿಪ್ರಾಯದಲ್ಲಿ ಅವಿಚಾರಿಗಳೇನು ?

ವಿರಾ —ತುಂಗೆ ! ನಾನು ಅವರನ್ನು ಅವಿಚಾರಿಗಳೆಂದೇನೂ ಹೇಳಲಿಲ್ಲವಾದರೂ ಇಷ್ಟನ್ನು ಮಾತ್ರ ಹೇಳದಿರಲಾರೆನು , ಏನೆಂದರೆ—ಇವೆಲ್ಲವನ್ನೂ ವಿಚಾರಮಾಡಿಯೋ ಮಾಡದೆಯೋ ತಮಗೆ ಇದೇ ಅವಶ್ಯಾಚಾರವೆಂದೋ ಹೇಗೂ ತಮ್ಮ ಕಾರ್ಯಕಲಾಪಗಳು ಬೆಟ್ಟದಷ್ಟು ಮುಂದೆ ಬಿಟ್ಟಿದ್ದರೂ ಇದ್ದುದರಲ್ಲೇ ವೇಳೆಯನ್ನು ಹೊಂದಿ. "ದೇವರಸೇವೆ" ಎಂಬೊಂದು ನೆವದಿಂದ ಮನೆಯನ್ನೂ ಮನೆಗೆಲಸಗಳನ್ನೂ ಕಟ್ಟಿಟ್ಟು ಹೋಗುವ ಮಹಿಳೆಯರೂ ನಮ್ಮಲ್ಲಿ ಅನೇಕರಿರುವರು. ಅವರು ತಮ್ಮ ಭವಿಷ್ಯತ್ ಜೀವನಮಾರ್ಗಕ್ಕೆ ತಾವೇ ತಮ್ಮ ಕೈಯಿಂದ ಕಲ್ಮುಳ್ಳುಗಳನ್ನು ತಂದೊಡ್ಡುತ್ತಿರುವುದೂ ಅದರ ಪರಿಣಾಮವು ಅವರಿಗೆಂತು ತಪ್ಪುವುದೆಂಬುದೂ ವಿಷಾದಕರವಾಗಿರುವುದು ! ಕಲಿಮಹಿಮಾ ಬದ್ಧರಾದವರ ದೆಸೆಯಿಂದ ದೇವಸ್ಥಾನದಲ್ಲಿಯೇ ಇಂತಹ ವಿಷಮಗುಣವು ಅಡಗಿರುವುದೆಂದರೆ ಮತ್ತಿನ ಹರಿಕಥೆ-ಪುರಾಣ-ಮೊದಲಾದ ಧಾಂಭಿಕ ಸಂಘಗಳಲ್ಲಿ ಇನ್ನೆಷ್ಟು ಅಡಗಿರುವುದೋ ಹೇಳಲಾದೀತೆ ? ಇದನ್ನು ತಿಳಿದಮೇಲಿನ್ನಾದರೂ ನಮ್ಮ ಸೋದರಿ

ಯರು ತಮಗೆ ಪತಿಸೇವೆಯೊಂದಲ್ಲದೆ ಮನೋವಿಕಾರಕ್ಕೆ ಕಾರಣವೂ ದೈವಭಕ್ತಿ ಸ್ವಕರ್ತವ್ಯನಿಷ್ಠೆಗಳಿಗೆ ಕುಠಾರ ಸ್ವರೂಪವೂ ಆದ ಇತರ ದುಶ್ಚಿಂತೆಗಳಿಗೆ ಮನಗೊಡಬಾರ ದೆಂದು ಸ್ಥಿರಸಂಕಲ್ಪರಾದರೆ, ಆನಂದಕ್ಕೆ ಮೇರೆಯುಂಟೆ ?

ತುಂಗ.—ಹೋಗಲಿ ; ಗಂಡನುಳ್ಳವರೇನೋ ಎಲ್ಲಿಗೂ ಹೋಗಬಾರದು ಎಲ್ಲವನ್ನೂ ಗಂಡನಿಂದೆಯೇ ಹೊಂದಬೇಕೆನ್ನುವೆ ? ಆದರೆ, ಗಂಡನಿಲ್ಲದವರಿಗೋ ?

ವಿರಾ.—ತುಂಗ ! ವಿಧವೆಯರೂ, ಪತಿ ವಿರಹಿತೆಯರೂ, ಇಂತಹ ಕಂಟಕಿತ ಸ್ಥಳಕ್ಕೆಂದೂ ಹೋಗಬೇಕೆಂದಾದರೂ ನೆನೆಯ ಬಾರದು.

ತುಂಗ:—ಅವರಿಗೆ ಮತ್ತೇತರಿಂದ ಗತಿಯಾಗಬೇಕು ? ಪುಣ್ಯನದೀ ಸ್ನಾನ-ದೇವತಾದರ್ಶನ-ಹರಿಕಥಾಶ್ರವಣಾನಂತರ ಸೇವೆ- ಇವುಗಳಲ್ಲದೆ ಅವರಿಗಿನ್ನಾವುದು ಪುಣ್ಯಸಂಪಾದಕವೃತ್ತಿ ?

ವಿರಾ:—ಅವೆಲ್ಲವೂ ಚಿತ್ತಸ್ಥೈರ್ಯ-ದೇಹದಾರ್ಢ್ಯವುಳ್ಳವರಿಗೆ ಮಾ ತ್ರವೇ ತಕ್ಕುವು ತಾರುಣ್ಯಭರದಿಂದ ಇಂದ್ರಿಯ ದಮನ ಶಕ್ತಿಯಿಲ್ಲದ ಅವ್ಯವಸ್ಥಿತ ಚಿತ್ತರಿಗೆ ಅದರಿಂದ ಹಾನಿಯೇ ಉಂಟಾಗುವುದು. ನಿರ್ದುಷ್ಟಶೀಲವೃತ್ತಗಳ ಆಶ್ರಯಬಲ ವೊಂದಲ್ಲದೆ ಅವರನ್ನು ಮತ್ತಾವುದೂ ಮೇಲ್ಮೆಗೆ ತರಲಾ ರದು ? ಎಂದರೆ, ಇವೆಲ್ಲವನ್ನೂ ಬಿಟ್ಟುಬಿಡಬೇಕೆಂದು ಹೇಳ ಲಾರೆನಾದರೂ ಹಿರಿಯರ ಮತದಂತೆ ಗುರು-ದೇವ-ಪೂಜೆ ಯನ್ನು ಚಿತ್ತಶುದ್ಧಿಯಿಂದ ಮಾಡಬೇಕೇ ಹೊರತು, ಚಪಲ ಚಿತ್ತರೊಡನೆ ಸೇರುವುದು ಮಾತ್ರ ಕೂಡದು ! ಅದರಿಂದ ಲ್ಲವೇ ಮೊದಲು ಮನವನ್ನು ಜಯಿಸಬೇಕೆಂಬುದು ?

ತುಂಗ:—ಹೇಗಾದೀತು ?

ವಿರಾ:—ಆಗದೆಂದರೆ, ಸ್ವಚ್ಛಂದತೆಯಲ್ಲಿ ಬಿದ್ದು, ನಿರಂತರವೂ ನರಕಾರ್ಣವದಲ್ಲಿ ಮುಳುಗಿ ನರಲಬೇಕಾಗುವುದು. ಅದಕ್ಕೆ ಅವಕಾಶವಾಗದಿರಬೇಕೆಂದೇ ನಾವು ಮನಸ್ಸನ್ನು ಅದು ಹೋಗಲೆಳಸುವಕಡೆಗೆ ಬಿಡಬಾರದೆಂದು ಬಲ್ಲವರಾಡುವರು.

ತುಂಗ:—(ಶಠಭಾವದಿಂದ) ಹಾಗಾದರೆ, ನಮಗೀ ಕಣ್ಣು ಕೈಕಾಲುಗಳುಂಟಾಗಿ ಫಲವೇನಾಯಿತು ?

ವಿರಾ:—ತುಂಗ ! ಇಷ್ಟುದಿನಗಳಮೇಲೆ ಇಂದಾದರೂ ನೀನು ವಿಚಾರವಿಮರ್ಶೆಗೆ ಕುಳಿತಿರುವುದರಿಂದ ಸಂತೋಷಪಡುತ್ತೇನೆ. ಆದರೆ, ಇದೇ ಆಸಕ್ತಿಯೇ ಅವುಗಳನ್ನು ಅನುಭವಕ್ಕೆ ತರುವವರೆಗೂ ಸ್ಥಿರವಾಗಿರಬೇಕೆಂದು ಕೋರುವೆನು.

ತುಂಗ:—(ಬೇಸರದಿಂದ) ಸರಿ, ಇನ್ನೂ ನಿನ್ನ ಪ್ರಸ್ತಾವನೆ ಮುಗಿವಂತಿಲ್ಲ.

ವಿರಾ:—ತುಂಗ ! ಬೇಸರಿಸಬೇಡ ಪ್ರಸ್ತಾವನೆಯು ಮುಗಿದಿತು. ಇನ್ನು ಕೇಳು : ಪ್ರಾಣಿವರ್ಗಕ್ಕೆ, ಅದರಲ್ಲಿಯೂ ಮುಖ್ಯವಾಗಿ ಮಾನವರ್ಗಕ್ಕೆ, ಕಣ್ಣು ಕೈ ಕಾಲುಗಳುಂಟಾಗಿರುವುದರಲ್ಲಿ ಭಗವದುದ್ದೇಶವೇನೆನ್ನುವೆಯೊ ? ಧರ್ಮಸಂಸ್ಥಾಪನೆಗೆಂದೇ ಭಗವನ್ನಿಯಾಮಕದಿಂದ ಜನ್ಮವನ್ನೆತ್ತುವ ಮಾನವವರ್ಗವು ತಮ್ಮ ನಿಯಮಿತಮಾರ್ಗದಲ್ಲಿ ಪ್ರತಿಬಂಧಕಗಳಾಗಿ ಬರುವ ವಿಷಮ ವಿಷಯಗಳ ಮೂಲೋತ್ಪಾಟನಕ್ಕೂ, ಭವಿಷ್ಯಜ್ಜೀವನವು ಸುಖಮಾರ್ಗದಲ್ಲಿ ನಡೆಯಿಸಲ್ಪಡಲು ಅವಲಂಬಿತವಾಗಿರಲಿಕ್ಕೂ ಈ ಕಣ್ಣುಗಳು ಜನ್ಮಸಹಜಗುಣವಾದ ಪ್ರಜ್ಞೆಗೆ ಆಧಾರಸೂತ್ರದಂತಿರುವುವು. ತುಚ್ಛಗಳಾದ ಕ್ಷಣಭಂಗುರತರ ವಿಷಮವಿಷಯಗಳನ್ನು

ನೋಡಬೇಕೆಂದಲ್ಲ. ಇನ್ನು ಕೈಗಳು ಆತ್ಮರಾಜನಿಗೆ ದ್ರೋಹಮಾಡಲು ಬರುವ ಹಿತಶತ್ರುಗಳಾದ ದಸ್ಯುಗಳ ಕೋಟಲೆಗೆ ದೇಹರಾಜ್ಯವು ಗುರಿಯಾಗದಂತೆ ರಕ್ಷಿಸಲಿಕ್ಕೆಂದೇ, ಅಲ್ಲದೆ, ಪರಸ್ವಾಪಹರಣದ ದಾರುಣಕೃತ್ಯಗಳಿಗಾಗಿ ವಿನಿಯೋಗಿಸಬೇಕೆಂದಲ್ಲ ಇನ್ನು ಕಾಲ್ಗಳಾದರೋ ಮಾನವನಿಗೆ ನೈಜಸುಖಾವಾಪ್ತಿಯೆಲ್ಲಿರುವುದೋ, ಅಂತಹ ಶಾಂತಿಪ್ರಾಸಾದವನ್ನು ಸೇರುವ ಸದಾಚಾರಮಾರ್ಗದಲ್ಲಿ ಕರೆದೊಯ್ಯಲಿಕ್ಕಲ್ಲದೆ ಸ್ವಚ್ಛಂದತೆಯ ಕುತ್ಸಿತಮಾರ್ಗದಲ್ಲಿ ಹೋಗಬೇಕೆಂದಲ್ಲ ತುಂಗೆ' ಕಣ್ಣು ಕೈ ಕಾಲುಗಳ ಸಾರ್ಥಕ್ಯತೆಯನ್ನು ಹೇಳಿದಂತಾಯ್ತಲ್ಲವೆ? ಇನ್ನು ಇಹಕ್ಕೂ ಪರಕ್ಕೂ ಸಾಧನವಾದ ನಾಲಗೆಯ ವಿಷಯವನ್ನು ಸ್ವಲ್ಪಮಟ್ಟಿಗೆ ಹೇಳುವೆನು ಕೇಳು. "ನರವಿಲ್ಲದುದು ನಾಲಗೆ" ಎಂಬ ನಾಣ್ಣುಡಿಯಂತೆ ಲೋಭಸಂಕರದಿಂದ ಕೆಡದೆ ಸತ್ತ್ವದಿಂದ ಶುಭ್ರರೂಪದಲ್ಲಿದ್ದು, ಸರ್ವಶಕ್ತನ, ಆ ಪರಮಾತ್ಮನ ಸೃಷ್ಟಿರಚನಾ ಚಮತ್ಕೃತಿವಿಮರ್ಶೆಯಲ್ಲಿಯೂ, ಆರ್ಯಮಹನೀಯರ ಪುಣ್ಯಕಥಾಪ್ರಶಂಸೆಗಳಲ್ಲಿಯೂ ಇನ್ನೂ ಇವಕ್ಕೆ ಸೇರಿದ ಸಾರಾಸಾರವಿಚಾರದಲ್ಲಿಯೂ, ಉಪಭೋಗಿಸುವುದಕ್ಕಲ್ಲದೆ, ಕಾಮ ಕಾಕರರ ಕುತ್ಸಿತವ್ಯಾಪಾರಗಳಲ್ಲಿ ಪ್ರಯೋಗಿಸಲ್ಪಟ್ಟು ಆತ್ಮರಾಜನನ್ನು ಎಂದೆಂದೂ ನಿಷ್ಕೃತಿಯಿಲ್ಲದ ಶೋಕಾರ್ಣವದಲ್ಲಿ ಮುಳುಗಿಸಬೇಕೆಂದಲ್ಲ. ಹೀಗೆಯೇ ಈ ನಮ್ಮ ಪ್ರತ್ಯಂಗಗಳಿಗೂ, ಬೇರೆಬೇರೆ ಗೊತ್ತಾದ ಕಾರ್ಯಗಳಿವೆಯೆಂದು ತಿಳಿ. ಇನ್ನೂ—

(ತುಂಗಭದ್ರೆಯು ಮುಂದೆ ಕೇಳಲಿಕ್ಕಾಗದೆ ಅಸೂಯೆಯಿಂದ ಮೊಗದಿರುಹಿ, ಎದ್ದು ಹೊರಡಲನುವಾದಳು.)

ವಿರಾ:—(ಬಿಡದೆ ತುಂಗೆಯ ಕೈಹಿಡಿದೆಳೆದು ಕುಳ್ಳಿರಿಸಿ ಕಿರುನಗೆ ಯಿಂದ) ‘ ತುಂಗ ! ಏಕೆ ಎದ್ದುಬಿಟ್ಟೆ ? ಇನ್ನೂ ಒಂದೆರಡು ಮಾತುಗಳನ್ನು ಕೇಳಲಾಗದೇ ?

ತುಂಗ:—ಇಲ್ಲವಮ್ಮ ಅವಸರದ ಕೆಲಸವಿದೆ

ವಿರಾ:—ಅಂತಹ ಅವಸರದ ಕೆಲಸವೇನು ?

ತುಂಗ:—ಹೇಳಬೇಕಾದುದೇನು ? ಅಮ್ಮನು ಬಯ್ಯುವಳು

ವಿರಾ —(ತಲೆದೂಗಿ) ಭಲೆ ? ತುಂಗೆ ! ಅಮ್ಮನಿಗೆ ಬಲು ಹೆದರುವೆ

ತುಂಗ —ಹೆದರುವೆನೋ ಇಲ್ಲವೋ ನೀನೇನುಬಲ್ಲೆ ?

ವಿರಾ —ನಾನರಿಯೆನಲ್ಲವೆ ? ತುಂಗ ! ನಾನು ಇಲ್ಲಿಗೆ ಬಂದ ಆರು ತಿಂಗಳಿಂದಲೂ ಹಗಲೂ ಇರುಳೂ ಒಂದೇ ಬಗೆಯಲ್ಲಿ ನೋಡುತ್ತಿರುವೆನು ! ನನಗಾವುದರಿಯದುದು ? ಪಾಪ ! ನಿನ್ನ ತಾಯಿ ನಿನ್ನದೊಂದು ಕೂಗಿಗೆ ಮರುಮಾತಿಲ್ಲದೆ ಸುಮ್ಮನಾ ಗುವಳು ನಿಮ್ಮ ಅತ್ತಿಗೆಗೆ ನಿನ್ನನ್ನು ಕಂಡರೆ ಸಾಕು, ಎದೆ ನಡುಕಹತ್ತುವುದು ! ನಿಮ್ಮಣ್ಣನಂತೂ ನಿನ್ನ ಗೊಡ ವೆಗೇ ಬರುವವನಲ್ಲ. ನಿನಗೆ ಮತ್ತಾರ ಭಯ ? ಈ ಮನೆ ಯಲ್ಲಿ ನಿನಗಿದಿರಾಗುವವರಾದರೂ ಇರುವರೊ ? ನೀನೇ ರಾಜ್ಞಿ ! ನಿನ್ನ ಮನೋರಾಜ್ಯಕ್ಕೆಲ್ಲಾ ನೀನೇ ಚಕ್ರವ ರ್ತಿನಿ !! ನನ್ನಲ್ಲೇಕೆ ವಂಚನೆ ?

ತುಂಗೆ;—(ದರ್ಪಿತಸ್ವರದಿಂದ) ಅಹುದು, ನಾನೇ ರಾಜ್ಞಿ ! ನಿಜ ! ಚಕ್ರವರ್ತಿನಿಯೂ ನಾನೇ ! ಸುಳ್ಳಲ್ಲ !! ಆರನ್ನಾದರೂ ಆಶ್ರ ಯಿಸಬೇಕಾದ ಹಣೆಯಬರೆಹವು ನನಗೇಕೆ? ಇರುವು ದನ್ನು ಅವರಿವರಪಾಲಿಗೆ ಬಿಟ್ಟು, ತಿರುಪಗೂಳಿಗೆ ಕೈಯೊಡ್ಡಿ ಸಾಯಬೇಕೇನು ? ನಾನೊಲ್ಲೆನು. ಬೇಕಾದವರಂತಿರಲಿ.

ವಿರಾ:—ತುಂಗ ! ಈ ಹೆಮ್ಮೆಯನ್ನು ಬಿಟ್ಟುಬಿಡು. ಹೆಮ್ಮೆಯಿಂದ

ಹಿಂದೆ ಆರಾರಿಗೆ ಎಂತೆಂತಹ ವಿಪತ್ತುಗಳುಂಟಾದುವೆಂಬುದನ್ನು ವಿಚಾರಮಾಡು? ಮತ್ತತೆಯೇ ಸ್ವರೂಪಕ್ಕೆ ಹಾನಿಕರವು. ಮುಂದೆಯಾದರೂ ಈ ಹೆಮ್ಮೆ ಹೆಚ್ಚದಂತೆ ಎಚ್ಚೆತ್ತುಕೊ? ತಾಯಿ! ನಾನು ನಿನ್ನ ಅಲಂಕಾರ ಭೋಜನಾದಿಗಳ ವಿಚಾರವಾಗಿ ಆಕ್ಷೇಪಿಸುವುದಿಲ್ಲ ಕಾಲವರಿತು ನೀನೇ ಕ್ರಮಪಡಿಸಿಕೊಳ್ಳಬಲ್ಲೆ ಈ ಸ್ವಾತಂತ್ರ್ಯವನ್ನು ದೂರಮಾಡು ಸ್ತ್ರೀಯರೆಂದೆಂದೂ ಸ್ವತಂತ್ರಪ್ರಿಯೆಯರಾಗಿರಬಾರದು ಸ್ವತಂತ್ರದಿಂದ ಸ್ವಚ್ಛಂದವರ್ತನವೂ, ಸ್ವಚ್ಛಂದತೆಯಿಂದ ಸ್ವಧರ್ಮಕರ್ತವ್ಯಪರಾಙ್ಮುಖತೆಯೂ, ತನ್ಮೂಲಕ್ಕ ಅಧಃಪತನವೂ ಸ್ವತಸ್ಸಿದ್ಧವೆಂದು ನಂಬು!! ಮತ್ತೊಮ್ಮೆ ಹೇಳುವೆನು. ತುಂಗೆ' ಮನಸ್ಸನ್ನು ಕೆಡಿಸತಕ್ಕ ಕುತ್ಸಿತವ್ಯಾಪಾರಕ್ಕೆ ಮನವನ್ನೆಂದಿಗೂ ಹೋಗಗೊಡದೆ, ವಿಚಾರವಿಮರ್ಶೆಯಲ್ಲಿ ನಿಲ್ಲಿಸಿ. ಸುಖಿಸುವುದು ಮೇಲು. "ಉಪ್ಪು ತಿಂದಷ್ಟೂ ದಾಹತಪ್ಪದು" ಅದನ್ನು ಆದಿಯಲ್ಲೇ ಮುರಿದಿಟ್ಟರೆ ಅದರಿಂದಾಗುವ ಸುಖವನ್ನು ಅನುಭವದಿಂದ ತಿಳಿಯಬಹುದು. ಇದಕ್ಕೆ ಚಂದ್ರಭಾಗೆಯೇ ಸಾಕ್ಷಿ.

ತುಂಗ—(ಸಿಟ್ಟಿನಿಂದ ಮೈಯ್ಮರೆತು ಕರ್ಕಶಸ್ವರದಿಂದ) ಸಾಕು; ನಿನ್ನ ಹಿತಬೋಧೆ, ನಿನ್ನಲ್ಲೇ ಇರಲಿ. ನನಗಾ ದೈನ್ಯವೃತ್ತಿಯು ಬೇಕಾಗಿಲ್ಲ. ದೇವರು ಕೊಟ್ಟುದನ್ನು ಮನದಣಿವಂತೆ ಅನುಭವಿಸುವೆನಲ್ಲದೆ ಯಾರ ಅಡ್ಡಿಗೂ ತಡೆಯಲೊಲ್ಲೆನು. ಆಮೇಲೆ ಬೇಕಾದುದಾಗಲಿ, ಆ ಕುಲುಕುವೈಯ್ಯಾರಿ ಚಂದ್ರಭಾಗೆಯೇ ನಿನ್ನ ಮೆಚ್ಚುಗೆಗೆ ರಾಣಿಯಾಗಿರಲಿ, (ಎಂದಾಡಿ ನಿಲ್ಲದೆ ಹೊರಟುಹೋದಳು.)

॥ ಶ್ರೀಃ ॥

## ಅಷ್ಟಮ ಪರಿಚ್ಛೇದ.

---

(ಗೂಢವಿಚಾರ)

ವಿರಾಗಿಣಿಯಿನ್ನೂ ಕುಳಿತಿದ್ದೆಡೆಯಿಂದ ಎದ್ದಿರಲಿಲ್ಲ. ತುಂಗಭದ್ರೆಯ ಅವಿಚಾರಾಂಧತೆಗಾಗಿ ಚಿಂತಿಸುತ್ತಿದ್ದಳು. ರಘುನಾಥನು ಊಟವಾದಮೇಲೆ ಶಾಲೆಗೆ ಹೊರಟಿದ್ದವನು ಹಾಗೆಯೇ ವಿರಾಗಿಣಿಯಿದ್ದೆಡೆಗೆ ಬಂದು ನಿಂತು, ಮೆಲ್ಲನೆ—ತಾಯಿ! ' ಇಂದಿನ ಪ್ರಸಂಗವೆಷ್ಟಾದಂತೆ ? "

ವಿರಾ:—(ತಲೆಯೆತ್ತಿ) ಅಣ್ಣಾ! ಕಾಲನಷ್ಟಕ್ಕೆ ಎಷ್ಟುಬೇಕೋ ಅಷ್ಟೂ ಆಯಿತು. ವ್ಯಕ್ತಿಯೂ ವ್ಯಗ್ರವಾಯ್ತು.

ರಘು:—(ನಿಟ್ಟುಸಿರಿಟ್ಟು) ಡೊಂಕುಬಾಲವು ನೆಟ್ಟಗಾಗುವುದೆ ? ಈ ಜನ್ಮದಲ್ಲಿ ಅದು ನೆಟ್ಟಗಾದೀತೆ ?

ವಿರಾ:—ಅಣ್ಣಾ! " ಕೆಡುವವರಿಗೆ ಹಿತರಿಲ್ಲ."

ರಘು:—ತಾಯಿ! ಬಿದಿರು ಎಳೆಯದಾಗಿರುವಾಗ ಬಗ್ಗುವುದಲ್ಲದೆ ಬಲಿತಮೇಲೆ ಬಗ್ಗೀತೆ ? ಮೊದಲು ನನ್ನ ಹಿತವಚನವು ತಾಯಿಗೆ ರುಚಿಸದಾಯ್ತು. ಅವಳಾ ಅಭಿಮಾನ-ಲಾಲನೆಗಳೇ ಈಗ ಇವಳಿಂತು ಬೀಗಿ ಬಿರಿದು ಮೆರೆವಂತೆ ಮಾಡಿತು! ಅಂದಂದೇ ಅವಳನ್ನು ಇಷ್ಟರ ವಿಲಾಸ-ವಿಡಂಬನೆಗಳಿಗೊಳಗಾಗದಂತೆ ತಡೆಯದೆ ಮನಬಂದಂತೆ ಬಿಟ್ಟಳು. ಈಗ

ಅನುದಿನವೂ ನೋಡಿನೋಡಿ ಕಣ್ಣೀರಿಡುವುದರಲ್ಲಿ ತಿರುಗಿತು. ಮಾಡತಕ್ಕುದೇನು ?

ವಿರಾ:—ಅಣ್ಣಾ ! ಎಷ್ಟೇ ಕೆಟ್ಟುಹೋಗಿರುವ ಪುರುಷರನ್ನಾದರೂ ಕ್ರಮದಿಂದ ಸನ್ಮಾರ್ಗಕ್ಕೆ ತರಬಹುದು : ಅಭಿಮಾನಾಂಧತೆಯಿಂದ ಬೀಗಿ ಬಿರಿದುಹೋಗುವ ಸ್ತ್ರೀಯರನ್ನು ದಾರಿಗೆ ತರುವುದು ಆಗದು.

ರಘು :—ತಾಯಿ ! ಪೆಣ್ಮಣಿ ಚಂದ್ರಭಾಗೆಯ ಅಂತಸ್ತಾಪವನ್ನು ಶಮನಮಾಡುವುದು ನಿನ್ನದಾಗಿದೆ ಪುರುಷರನ್ನು ದಾರಿಗೆ ತರುವುದಕ್ಕಾದೀತೆಂದೆಯಲ್ಲವೆ ? ಅದರಿಂದೀ ತಾಮಸಿಯ ದುರ್ವರ್ತನಕ್ಕೆ ಕಂಟಕವನ್ನು ತಂದೊಡ್ಡು. ಚಂದ್ರಭಾಗೆಯ ಸುಖಮಾರ್ಗವನ್ನು ಪ್ರಕಾಶಮಾಡು.

ವಿರಾ:—(ಚಕಿತೆಯಾಗಿ) ಏನು, ಏನೆಂದೆ ? ಅಣ್ಣಾ ! ಚಂದ್ರಭಾಗೆಯ ಚಿಂತೆಗೂ, ಇವಳ ನಡತೆಗೂ ಸಂಬಂಧವೇನು ?

ರಘು:—ತಾಯಿ ! ಹಿಂದೆಯೇ ಹೇಳಿದೆನಷ್ಟೆ ; ಇವಳನ್ನು ಒಡಹುಟ್ಟಿಲ್ಲವೆಂದು ! ಒಡಹುಟ್ಟಿ-ಒಡನಿದ್ದು-ಮಡಿಸುವ ಕುತ್ತವೇ ಇದೆಂದು ನಾನು ಅಂದಿನಿಂದೆಣಿಸಿರುವೆನು. ಈ ನಂಜಿನ ಜೊಂಬೆಯೇ ಚಂದ್ರಭಾಗೆಯ ಸಂತಾಪಕ್ಕೆ ಮೂಲವು ! ಇದೇ ಅವಳ ಜೀವನಸರ್ವಸ್ವವನ್ನು ಅಪಹರಿಸುತ್ತಿರುವ ಕಾಲಕೂಟವು ? ಇನ್ನೂ ಹೇಳಬೇಕೆ ? ಅವಿಚಾರಿ ಮುಕರಂದನು. ಊರಿಗೆಲ್ಲಾ ಬಳ್ಳಯವನು ಕೈಹಿಡಿದ ಕಾಂತೆಯಲ್ಲಿ ಮಾತ್ರ ಕ್ರೂರನು ಏನು ಹೇಳಲಿ ?

ವಿರಾ:—(ತಲೆದೂಗುತ್ತ) ಅಣ್ಣಾ ! ನಿನಗಾತನಲ್ಲಿ ಸಲುಗೆಯುಂಟೋ ಇಲ್ಲವೊ ?

ರಘು:— ಅಷ್ಟಾಗಿ ಅವಕಾಶ ಕೊಟ್ಟಿಲ್ಲ. ಆದರೂ ಅವನಾಗಿ ಮಾತನಾಡಿಸುವಂದೂ ಈ ಬಳಜೇಗೆ ಮುಂದಾಗಿ, ನಾನು ಮೌನದಲ್ಲಿರಬೇಕಾಗುವುದು.

ವಿರಾ.—ನೀನೆಂದೂ ಆತನಿಗೆ ವಿವೇಚನೆಯನ್ನು ಹೇಳಲಿಲ್ಲವೊ ?

ರಘು —ಆತನಿಗೆ ಹೇಳಿ ಫಲವೇನು ? ನನ್ನ ಗೌರವಕ್ಕಲ್ಲವೇ ಕೊರತೆ ? ನಮ್ಮ ವಸ್ತು ನೆಟ್ಟಗಿದ್ದಲ್ಲಿ ನಾವೇಕೆ ಚಿಂತಿಸ ಬೇಕು ? ಇದೇ ಕೆಟ್ಟುಹೋಗಿದೆ ! ಹಿಂದೆಯೊಮ್ಮೆ ಇದಕ್ಕ ನೀತಿಹೇಳಿ ನೋಡಿಯಾಯ್ತು . ನಾನು ನನ್ನ ಮನಬಂ ದಂತೆ ಇರುವೆನು ನನ್ನನ್ನಾರೂ ತಡೆಯಬೇಕಾಗಿಲ್ಲ. ಹೆಚ್ಚು ಹೇಳಿದರೆ ನನ್ನ ಹಣದೊಡನೆ ಇಷ್ಟಬಂದವರನ್ನು ಜೊತೆಗೊಂಡೇ ಹೊರಟುಹೋದೇನು ?" ಎಂದೊದರಿತು. ಅಷ್ಟಕ್ಕೆ ಬಿಟ್ಟುಕೊಟ್ಟರೆ ನಾವೇ ಅನೇಕ ಸಂಸಾರಗಳನ್ನು ಕೆಡಿಸಿದಂತಾದೀತು ! ಆ ಬಳಿಕ ಅಳಲುವ ನಮ್ಮ ಸೋದ ರಿಯರ ತಾಪಕ್ಕೆ ನಾವೇ ಪಕ್ಕಾಗಬೇಕಾಗುವುದು. ಇದ ಕ್ಕೆಂದೇ ನಾನಿಂದಿನವರೆಗೂ ಸುಮ್ಮನೆ ಕೊರಗುತ್ತಿರುವುದು'

ವಿರಾ:—ಅಣ್ಣ ! ನೀನು ಈಗ ಇರುವಂತಿರುವುದೇ ಒಳ್ಳಿತು. ನಾನೂ ಒಂದುಬಗೆಯಾಗಿ ಚಂದ್ರಭಾಗೆಗೆ ಮಾತುಕೊಟ್ಟಿ ರುವೆನು. ಅದನ್ನು ನೆರವೇರಿಸಲು ಇನ್ನು ಪ್ರಯತ್ನಪಡು ವೆನು. ದೈವಸಂಕಲ್ಪವೂ ಸಹಾಯವಾಗಿರಬೇಕು.

ರಘು:—ತಾಯಿ ! ನಿನ್ನ ಸಂಕಲ್ಪವು ಸ್ಥಿರವಾಗಿರಲಿ. ಮಾಡತಕ್ಕ ಪ್ರಯತ್ನದಲ್ಲಿ ಸ್ವಲ್ಪವೂ ಶಂಕೆಯಿಲ್ಲದಿರಲಿ. ನಿನ್ನ ಕಾರ್ಯ ಕಲಾಪದಲ್ಲಿ ಮಾತ್ರವೇ ಮುಖ್ಯ ಗುರಿಯಿರಬೇಕಲ್ಲದೆ ಮತ್ತಾರ ನಿಂದಾಸ್ತುತಿಗಳಿಗೂ ಕಿವಿಗೊಡಬಾರದು.

ವಿರಾ:—ಅದೇನೋ ವ್ಯಥವಾಗಿರುವುದು. ಇರಲಿ, ಪರೀಕ್ಷಾ ಫಲಿತಾಂಶವೆಂದು ತಿಳಿಯಬೇಕು ?

ರಘು:—ಇಂದೇ ತಿಳಿವುದು. ಧೈರ್ಯವಾಗಿರು. ತಕ್ಕಮಟ್ಟಿಗೂ ಉತ್ತಮವಾದ ಪ್ರಶಸ್ತಿಪತ್ರಿಕೆಯೊಡಗೂಡಿದ ಬಹುಮಾನಗಳೂ ದೊರೆವುವು.

ವಿರಾ:—ಅಣ್ಣಾ ! ಇವಲ್ಲವೂ ನಿನ್ನ ಕೃಪೆಯಿಂದಾದುವೇ ?

ರಘು:—ವಿರಾಗಿಣಿ ! ನಿನ್ನಂತೆ ತುಂಗೆಯೂ ನಲ್ಮೆಯಲ್ಲಿದ್ದರೆ ಎಷ್ಟೋ ಮೇಲ್ಮೆಗೆ ಬರುತ್ತಿದ್ದಳು. ಆದರೆ " ಶ್ವಾನಕ್ಕೆ ಜ್ಞಾನಸಾಮ್ರಾಜ್ಯವೆಂತು ? " ನಿನ್ನ ಅಕ್ಕನೂ ನನ್ನ ವಿವೇಚನೆಗೆ ಕಿವಿಗೊಡಲೊಲ್ಲಳು. ಮಾಡತಕ್ಕುದೇನು ? ಎಲ್ಲವೂ ದೈವೇಚ್ಛೆ ! ಆದರೆ ತಾಯಿ ! ನನ್ನೀದೀರ್ಘಕಾಲದ ಉಪಾಧ್ಯಾಯತನದಲ್ಲಿ ನಿನಗಾಗಿ ಕಳೆದ ಕಾಲವು ಅತ್ಯಲ್ಪವಾದರೂ ಅದರ ಬೆಲೆಯೇ ಅಮೋಘ ಫಲವನ್ನುಂಟುಮಾಡಿತೆಂದು ಸಂತೋಷಿಸುವೆನು

ವಿರಾ:—ಅಣ್ಣಾ ! ಹೊತ್ತುಮೀರುವುದಿಲ್ಲವೆ ?

ರಘು:—ಇದೊ ಹೊರಟೆ ! ಮನೆಗೆ ಬರುವುದಕ್ಕೂ ಇಂದು ಒಂದೆರಡು ಗಂಟೆ ಮೀರಬಹುದು ಎಂತೂ, ಬರುವಾಗ ಶುಭವರ್ತಮಾನದೊಡನೆಯೇ ಬರುವೆನು (ಎಂದು ಹೇಳಿ ಹೊರಟು ಹೋದನು.

" ಗೂಢವಿಚಾರವು ಹೊರಪಟ್ಟಿತೆಂದು ವಿರಾಗಿಣಿಯು ಚಿಂತಿಸುತ್ತ ನಡೆದಳು.")

॥ ಶ್ರೀಃ ॥

## ನವಮ ಪರಿಚ್ಛೇದ.

(ಕಾಳಕೂಟ)

ಸಾಯಂಕಾಲ ನಾಲ್ಕುಘಂಟೆಯ ಸಮಯ. ವಿರಾಗಿಣಿ ಕಾರ್ಯಸಾಧನ ಚಿಂತೆಯಲ್ಲಿ ಕುಳಿತಿದ್ದಳು ಅಲ್ಲಿಗೆ ಚಂದ್ರಭಾಗೆ ಬಂದು ಮೆಲ್ಲನೆ, "ತಂಗಿ! ಸಮಯವೇ?" ಎಂದು ಕೇಳಿದಳು.

ವಿರಾ:—(ಸಂಭ್ರಮದಿಂದ ಚಂದ್ರಭಾಗೆಯ ಕೈಹಿಡಿದು ಕುಳ್ಳಿರಿಸಿ ಕೊಂಡು) ಚಂದ್ರ! ನೀನು ಬಂದಾಗಲೇ ಸಮಯವಲ್ಲ ವೇನು? ಕೆಲಸವಾಯ್ತುಷ್ಟೆ?

ಚಂದ್ರ—ಕೆಲಸವಹೊರೆಯೇನೂ ನನಗೆ ಅಷ್ಟಾಗಿಲ್ಲ. ಅತ್ತೆಯವರೇ ಮಾಡಿಕೊಳ್ಳುವರು. ನೆರವಾಗಿ ಸಣ್ಣಪುಟ್ಟ ಕೆಲಸಗಳಷ್ಟು ನನ್ನ ಪಾಲಿನವು. ಅವೇನೂ ಆವಾಗಲೇ ಮಾಡಲ್ಪಡುವುವು.

ವಿರಾ:—ನಿನ್ನ ಸ್ವಾಮಿ ಇನ್ನೂ ಮನೆಗೆಬಂದಿಲ್ಲವೊ?

ಚಂದ್ರ:—ಈಗಲೇ ಬರಲಾರರು

ವಿರಾ:—ನಿನ್ನ ಮಗಳು ಶಾಲೆಗೆ ಹೋಗಿರುವಳೂ?

ಚಂದ್ರ:—ಅಹುದು

ವಿರಾ:—ಚಂದ್ರ! ನೀನಿಂದಿನವರೆಗೂ ನನಗೆ ಹೇಳದೆ ಬಯ್ತಿದ್ದ ವಿಚಾರವನ್ನು ನಾನು ತಿಳಿದೆನು. ಇನ್ನೂ ನಿನ್ನ ಸ್ವಾಮಿ ಪ್ರಸನ್ನನಾಗುವಂತಹ ಸುಸಂಧಿಯನ್ನು ಇಷ್ಟರಲ್ಲಿ ಕಾಣಬಲ್ಲೆ.

ಚಂದ್ರ:—ಮುನ್ನಿದ್ದ ತಳಮಳವು ಈಗ ನನ್ನಲ್ಲಿಲ್ಲ. ನನ್ನ ಮನವು ಶಾಂತವಾಗಿದೆ. ತಂಗಿ! ನನ್ನ ಸ್ವಾಮಿಯಲ್ಲಿ ನಾನು ಕೇಳ ಬೇಕಾದ ಪ್ರೇಮಭಿಕ್ಷೆಯೇನಿದೆ? ಎಂತೂ ಅವರು ಚಿರ ಸುಖಿಗಳಾಗಿರಬೇಕೆಂಬುದೊಂದೇ ನನ್ನ ಪ್ರಾರ್ಥನೆ. ಆದರೆ ವಿರಾಗಿಣಿ! ಅವುದಕ್ಕೂ ಕಾಲವೂ ಕ್ರಮವೂ ಸಹಕಾರಿ ಗಳೇ ಆಗಿರುವುವು ಸಹವಾಸಬಲವೇ ಮಾನವನ ಉನ್ನ ತಿಗೂ ಅವನತಿಗೂ ಕಾರಣವಾಗುವುದು ಇವನ್ನು ತಿಳಿದೂ ನಮ್ಮ ನಮ್ಮ ಕೆಲಸವೇನೆಂಬುದನ್ನು ಆಲೋಚಿ ಸದೆ ಕೊರಗಿವರಾದೀತೆ? ಎಂದಿಗೂ ಇಲ್ಲ.

ನನ್ನ ಸ್ವಾಮಿ ನನ್ನನ್ನೆಂದೂ ಕೊಂದುದಿಲ್ಲ ಮನೆ ಬಿಟ್ಟು ಹೋಗೆಂದುದೂ ಇಲ್ಲ, ಇನ್ನು ಅವರ ಅಪ್ರಸನ್ನತೆ ಯಾವುದು? ಅಡಿಗಡಿಗೆ ನನಗೆ ಅವರ ನಗೆಮೊಗವನ್ನು ನೋಡುತ್ತಿರುವುದರಿಂದಾಗುವ ಸುಖವು ಮತ್ತಾವುದರಿಂ ದೆಯೂ ಆಗಲೊಲ್ಲದು! ನನಗದೇ ಬ್ರಹ್ಮಾನಂದ" ಆದರೂ ಅವರು ಮುಂದೆಯಾದರೂ ಎಚ್ಚೆತ್ತು ಸತ್ಕೀರ್ತಿ ಹೊಂದ ಲೆಂಬುದೊಂದು ಅತ್ಯುತ್ಕಟೇಚ್ಛೆಯುಂಟು

ವಿರಾ:—ಚಂದ್ರ! ನಿನ್ನ ತಾಳ್ಮೆಯೇ ನಿನಗೆ ಮೇಲ್ಮೆಯುಂಟು ಮಾಡುವುದು ಸಂಶಯವಿಲ್ಲ.

ಚಂದ್ರ.—ಎಲ್ಲವೂ ಗುರುಕೃಪೆ! ಪೂಜ್ಯರಾದ ತಾಯ್ತಂದೆಗಳ ಸುಶಿಕ್ಷಣವೂ, ಅವರ ಅನಂತಾಶೀರ್ವಚನಕ್ಕೊಳಪಟ್ಟ ಸದ್ವಿದ್ಯಾಬುದ್ಧಿವಿವೇಚನೆಗಳೂ, ನನ್ನನ್ನು ಇದ್ದುದರಲ್ಲಿ ಷ್ಟರ ತಾಳ್ಮೆಯಿಂದ ಸುಖಿಯನ್ನಾಗಿ ಮಾಡುತ್ತಿರುವುದು. ಇಲ್ಲದೆ ನಾನು ಲಾಲನೆಯೊಂದಕ್ಕೇ ಪಾತ್ರಳಾಗಿ ಸ್ವೇಚ್ಛೆ

ಯಿಂದ ಅಶಿಕ್ಷಿತೆಯಾಗಿ ಬೆಳೆದಿದ್ದ ಪಕ್ಷದಲ್ಲಿ, ನನ್ನೀ ನಾರೀ ಜನ್ಮವೇ ವ್ಯರ್ಥವಾಗುತ್ತಿದ್ದಿತು. ಮುಂದಾದರೂ ಅವರ ಅನುಗ್ರಹವೇ ಅಭ್ಯುದಯವನ್ನುಂಟುಮಾಡದಿರಲಾರದು

ವಿರಾ—ಸತ್ಸಂಕಲ್ಪಕ್ಕೆ ಚ್ಯುತಿಯು ಬಾರದು. ಇರಲಿ, ನಿನ್ನ ಸ್ವಾಮಿ, ಮಗಳನ್ನಾದರೂ ಪ್ರೀತಿಸುವನೋ?

ಚಂದ್ರ—ನನ್ನನ್ನು ಪ್ರೀತಿಸುವುದಿಲ್ಲವೇನು? ಆದರೆ ನೋಡು ಪ್ರೇಮಸೂರ್ಯಪ್ರಕಾಶಕ್ಕೆ ಕ್ಷುದ್ರವಿಷಯವಾಸನಾಮೇಘದ ಮುತ್ತಿಗೆ! ವಿವೇಕವಾತೋದಯವಾದಬಳಿಕಲ್ಲವೇ ಮೇಘನ ಪರಾಜಯವೂ, ಸೂರ್ಯನ ಅಭ್ಯುದಯವೂ. ಮತ್ತೆ ಪ್ರಕಾಶಿಸಬೇಕು? ಅಳಿಕೆಯ ವಿಚಾರವು ಹಾಗಿಲ್ಲ, ಅವಳು ತಂದೆಯ ಪ್ರಾಣಪದಕವಂತಿರುವಳು. ಅವಳಿಗೆ ತಾಯಿಗೆ ಮಿಗಿಲು ತಂದೆಯಲ್ಲಿ ಸಲುಗೆ, ತಂದೆಯ ನಲವೇ ಅವಳನ್ನು ಅಡಿಗಡಿಗೆ ಹಿಂದೆಯೂ ಮುಂದೆಯೂ, ನಾಟಕಶಾಲೆ, ಸಂಗೀತ, ಸಂಘ, ಮುಂತಾದ ಕಡೆಗಳಲ್ಲಿ ಆಡಿಸುತ್ತಿರುವುದು

ವಿರಾ—(ತಲೆದೂಗಿ) ಸರಿಸರಿ. ಹಾಗಿದ್ದರಿನ್ನು ನಿನ್ನ ರೊಟ್ಟಿ ತುಪ್ಪದಲ್ಲಿ ಬಿದ್ದಂತೆಯೇ

ಚಂದ್ರ—ಈಗ ಬಿದ್ದಿಲ್ಲವೇ ವಿರಾಗಿಣಿ! ಏನಿದು? ಆಗಲೇ ನಾನು ಬಂದು ಎಷ್ಟು ಹೊತ್ತಾಯಿತು! ನಿನ್ನೊಡನೆ ಮಾತನಾಡುತಿದ್ದರೆ ನನಗಾವುದೂ ಗೊತ್ತಾಗುವುದಿಲ್ಲ. ನಿನ್ನ ನಿಷ್ಕಪಟಪ್ರೇಮವು ನನ್ನ ಕೆಲಸಗಳನ್ನೆಷ್ಟೆಷ್ಟು ಬೇಗನೆ ಮಾಡಿಟ್ಟು ಬರುವಂತೆ ಹುರಿಮಾಡುವುದೋ ಹೇಳಲಾರೆ. ಇಲ್ಲಿಗೆಂದರೆ ನಾನು ಕೇಳದೆಯೇ ಅತ್ತೆಯವರೇ ಕಳುಹುವರು. ಮತ್ತೆಲ್ಲಿ

ಗಾದರೂ ನಾನು, ಹೋಗೆಂದು ಅಟ್ಟಿದರೂ ಹೋಗಲೊಲ್ಲೆನು.

ವಿರಾ:—ಅದನ್ನು ನೀನು ಹೇಳಬೇಕೇ? ನೀನಿತ್ತಬಾರದಂದು ನನಗೂ ಬೇಸರವಾಗುವುದು. ಅದಿರಲಿ, ನೋಡು; ನೀನಿಲ್ಲಿಗೆ ಬರುವುದು ಕೃಷ್ಣವೇಣಿಗಾಗಲೀ, ತುಂಗಭದ್ರೆಗಾಗಲೀ, ಸಮ್ಮತವಿಲ್ಲ. ದಿನವೊಂದಕ್ಕೆ ಒಂದೆರಡಾದರೂ ಸಲ್ಲದ ಆಕ್ಷೇಪವು ಹೊರಬೀಳದಿರದು. ಆದರೆ ನಾವು ಅದನ್ನೆಣಿಸಬಾರದು.

ಚಂದ್ರ:—ಆರೇನನ್ನಾದರೂ ಹೇಳಲಿ; ನೀನಿರುವವರೆಗೂ ನಿನ್ನಲ್ಲಿಗೆ ಬರುವುದನ್ನು ಬಿಡಲೊಲ್ಲೆನು ನಿನ್ನ ಸಹವಾಸ, ಸಂಭಾಷಣೆ, ಹಿತಸೂಚನೆಗಳ ಬಲದಿಂದಲ್ಲವೇ ನಾನಿಂತು ಕಳೆಹೊಂದಿರುವುದು. (ಚಂದ್ರಭಾಗೆಯ ಮಾತು ಮುಗಿಯುವುದರಲ್ಲಿ ಎಂಟುವರ್ಷದ ಲಾವಣ್ಯಮೂರ್ತಿಯಾದ ಬಾಲಿಕೆಯೊಬ್ಬಳು ಸಡಗರದಿಂದ ಬಂದು ಚಂದ್ರಭಾಗೆಯ ಮುಂದೆ ನಿಂತಳು.)

ಚಂದ್ರ:—(ಕುತೂಹಲದಿಂದ) ಅಳಕ! ಏಕೆ ಬಂದೆ?

ಅಳಕೆ:—ಅಪ್ಪ ಬಂದರು.

ಚಂದ್ರ:—ಬರಹೇಳಿದರೆ?

ಅಳಕ:—ಇಲ್ಲ, "ಎಲ್ಲಿ" ಎಂದು ಮಾತ್ರವೇ ಕೇಳಿದರು. ಅಜ್ಜಿಯೇ ಇಲ್ಲಿಗೆ ನೀನು ಬಂದಿರುವುದನ್ನು ಹೇಳಿ, 'ಕರೆಯಲಿ" ಎಂದು ಕೇಳಿದಳು.

ಚಂದ್ರ:—ಏನೆಂದರು?

ಅಳಕ:—"ಬೇಡ, ನಿಧಾನವಾಗಿ ಬರಲಿ" ಎಂದು ಹೇಳಿ ಫಲಾಹಾರ ತೆಗೆದುಕೊಂಡು ಹಿತ್ತಿಲಕಡೆಗೆ ಹೋದರು.

ಚಂದ್ರ:—ನೀನು ಮನೆಗೆ ನಡೆ ; ನಾನೂ ಬೇಗಬರುವೆನು.

(ಅಳಕನಂದೆಯು ತಲೆದೂಗುತ) ಹೊರಟುಹೋದಳು. ಅಳಕೆ ಹೊರ ಹೊರಡುವುದಕ್ಕೆ ಸರಿಯಾಗಿ ತುಂಗಭದ್ರೆ ಬೀಳುವುದನ್ನೂ ಗಣಿಸದೆ, ಹಿತ್ತಿಲಕಡೆಗೆ ಓಡಿಹೋಗುತ್ತಿದ್ದವಳು, ಅಡುಗೆ ಮನೆಯಲ್ಲಿ ಆತುರದಿಂದ "ಎಲೆ ತುಂಗೆ ಬೇಗಬಂದು ಹೋಗು" ಎಂದು ಕೂಗಿಡುತ್ತಿದ್ದ ತಾಯ ನುಡಿಗೆ ಸಿಟ್ಟಾಗಿ, "ಎಂದೆಂದೂ ನಿನ್ನ ರಗಳ ತಪ್ಪದು" ಎಂದೊದರಿ ಹೊರಟೇಹೋದಳು. ಪಾಪ ! ಲಕ್ಷ್ಮೀದೇವಮ್ಮನೇನುಮಾಡಬಲ್ಲಳು ? ತನ್ನಲ್ಲಿತಾನೇ ಕನಲಿ ಕಣ್ಣಿಡುತ್ತ,-ಮನೆಹಾಳ ! ಎಂದು ಅಡಗೀತೋ ? ಹೊಟ್ಟೆಯುರಿ !! (ಎಂದಿಂತು ಬಯ್ದು ಸುಮ್ಮನಾದಳು )

ಚಂದ್ರ:—(ಕಿರುನಗೆಯಿಂದ ವಿರಾಗಿಣಿಯ ಕೈಹಿಡಿದು) ತಾಯಿ. ಏಳು ಹೋಗುವ "ಹೊಸನೋಟ"

ವಿರಾ —ಅದಾವುದು ?

ಚಂದ್ರ —ನೀನೆಂದೂ ನೋಡದ ನೋಟ !

ವಿರಾ:—ಎಲ್ಲಿ ?

ಚಂದ್ರ:—ಹಿತ್ತಿಲಲ್ಲೇ !

ವಿರಾ·—ಹಿತ್ತಿಲಲ್ಲಾಗುವುದನ್ನು ಬಿಡದಿಯ ಗವಾಕ್ಷದಿಂದ ನೋಡಬಹುದು.

ಚಂದ್ರ.—"ಅದಾದರೆ ಮತ್ತೂ ಅನುಕೂಲವೇ ನಡೆ" (ಎಂದಿಬ್ಬರೂ ಬಾಗಿಲನ್ನು ಹಾಕಿ ಗವಾಕ್ಷದ ಬಳಿಗೆ ಹೋದರು. ಚಂದ್ರಭಾಗೆಯು ಗವಾಕ್ಷದಲ್ಲಿ ಮುಖವಿಟ್ಟು ಹಿತ್ತಿಲಕಡೆ ನೋಡಿದಳು. ಹಿತ್ತಿಲ ದೊಡ್ಡತೋಟವೆಲ್ಲವೂ ಚೆನ್ನಾಗಿ ಕಂಡುಬಂದಿತು. ಅಷ್ಟೇ ಅಲ್ಲ. ತೋಟದೊಳಗಡೆಯಲ್ಲಿ,

ಗೋಡೆಯನ್ನು ನೆಮ್ಮಿ ನಿಂತಿದ್ದ ತುಂಗೆಯೂ, ಗೋಡೆಯ ಮೇಲೆ ಅರೆಬಾಗಿ ತುಂಗೆಯ ಕೃಷ್ಣಪಾಣಿಯಿಂದಾವೃತವಾದ ಕಲುಷಿತಹಸ್ತನಾದೊಬ್ಬ ಸುಂದರಪುರುಷನೂ ಸಹ ಕಣ್ಣಿಗೆ ಬಿದ್ದರು. ನವನವೀನಾಚಾರನಿಯಮವನ್ನನುಸರಿಸಿ ಆ ವಾಮಕೃಷ್ಣಕರಗಳೆರಡೂ ಅಭಿನಯವನ್ನು ತೋರುತಿದ್ದುವು.)

ಚಂದ್ರ:—(ತಲೆದೂಗಿ ವಿರಾಗಿಣಿಯ ಕೈಹಿಡಿದೆಳೆದು) ಒಮ್ಮೆ ನೋಡಬಾರದೆ ? ಇತ್ತಕಡೆ ಹೊಸನೋಟ ! ಇಂತಹ ನೋಟವನ್ನು ನೀನೆಂದೂ ನೋಡಿಯೂ ನೋಡಲೂ ಆರೆ. ಬೇಗನೋಡು.

ವಿರಾ:—(ನೋಡಿದಳು. ಸಂತಾಪಾಗ್ನಿಯಿಂದ ಮುಖವು ಕಣ್ಗೆಟ್ಟಿತು. ಹಿಂದಿರುಗಿ "ಚಂದ್ರಭಾಗೆ" ಈ ನೋಟವು ನೋಟವಲ್ಲ, ಕಾಲಕೂಟ ; ಈ ನೋಟವನ್ನು ನೋಡಿದ ಕಣ್ಣು ಕಣ್ಣಲ್ಲ ; ಕೆಟ್ಟ ಹುಣ್ಣು. ತಾಯಿ ! ಈಗ ಹೇಳು ಆ ಕೃಷ್ಣವ್ಯಾಗಿಯನ್ನು ಬಲ್ಲೆನು. ಆದರೆ ಅವನಾರು ?

ಚಂದ್ರ:—(ಕಿರುನಗೆಯಿಂದ) ತುಂಗೆ ! ನೀನರಿಯೆಯೇನು ? ಅವರೇ ನನ್ನ ಸ್ವಾಮಿ !

ವಿರಾ:—ಛೀ ! ಸುಡುಸುಡು " ಈ ಹೆಣ್ಣುಜನ್ಮವನ್ನು ಸುಡು !!' ಇಂತಿರುವೀ ಬಾಳ್ಕೆಯೇಕೆ ? ಅಯ್ಯೊ ! ಅಂತರ್ಯಾಮಿಗೆ, ಆ ಅಂತರ್ಗತಸ್ವಾಮಿಗೆ ಸರ್ವಾಂತರ್ಯಾಮಿಯಾದಾಭಗವಂತನಿಗೆ ದ್ರೋಹವೇ ? ತುಚ್ಛವಾದ, ಕ್ಷಣಿಕವಾದ, ಆತಂಕದಾಯಕವಾದ, ವಿಷಯಲಾಲಸೆಯಿಂದ,—ಅಕಟಾ ! ಪರಸ್ವಾಪಕ್ಕೆಳಸಿದ ಪತಿತೆ ! ಸುಡಬೇಡವೇ ಈ ಬಾಳನ್ನು !! ಜನನೀ !

ನೀನೆಂತು ಸಹಿಸುವೆಯೆ ? ನಿನ್ನೀ ಅಂತಸ್ತಾಪಕ್ಕೆ ನಿಸ್ತಾರ ವೆಲ್ಲಿ ? ತಾಯೀ ! ನಿನ್ನೀಸಂತಾನವೇ ನಿನ್ನೀಮಾಲಿನ್ಯಕ್ಕೆ ಕಾರಣವಾದರೆ ಶೋಕನಿವಾರಕರಿನ್ನಾರು ? ಆ ಮರಳು ನಾದರೂ, ನನ್ನ ಚಂದ್ರಭಾಗೆಯ ಪತಿಯಲ್ಲದಿದ್ದರೆ,—

ಚಂದ್ರ:—(ಕಾತರಸ್ವರದಿಂದ) ಇದೇಕೆ ? ವಿರಾಗಿಣಿ ! ಹೀಗೇಕೆ ಭ್ರಾಂತಳಾಗುವೆ ? ಈ ದುರ್ಭರ ಶೋಕಾಧಿಕ್ಯದಿಂದ ನೀನಿಂತು ಹೇಳುವೆಯಾದರೂ, ನನಗಾಗಿ ಎಚ್ಚತ್ತುಕೊ ! ಒಮ್ಮೆ ನೋಡು, ಅವರೇ ನನ್ನ ಸ್ವಾಮಿ ! ಅವರೇ ನನ್ನ ಆರಾಧ್ಯದೈವ !! ಅವರೇ ನನ್ನ ಜೀವನಸರ್ವಸ್ವ !!! ತಿಳಿ ಯಿತೆ ? ನನ್ನ ಸ್ವಾಮಿಯಲ್ಲದಿದ್ದರೆ ನಾನಿಲ್ಲಿಗೆ ಬರುತ್ತಿದ್ದೆನೆ ? ಈ ನೋಟವನ್ನು ನೋಡಲಿಕ್ಕಾದರೂ ಎಳಸುತ್ತಿದ್ದೆನೆ ? ಚೆನ್ನಾಗಿ ಆಲೋಚಿಸು.

ವಿರಾ:—(ಸುಖೇದಾಶ್ಚರ್ಯಗಳಿಂದ ಚಂದ್ರಭಾಗೆಯನ್ನೇ ನೋ ಡುತ್ತ) ತಾಯೀ ! ಈ ಕಾಳಕೂಟ ಪ್ರದರ್ಶನದಿಂದ ನಾನು ಅತ್ಯಂತ ಖೇದಕ್ಕೆ ಗುರಿಯಾದೆನು. ಇನ್ನು ನಿನ್ನ ಮನೋ ವ್ಯಥೆಗೆ ಎಲ್ಲೆಯುಂಟೆ ? ಹೇಗೆ ಸಹಿಸುವೆ !

ಚಂದ್ರ.—ಮುನ್ನಿನಂತಿದ್ದರೆ ತಳಮಳವಾಗುತ್ತಿದ್ದಿತು ; ಈಗ ಹಾಗಾಗದು. ತಂಗಿ ! ಹೇಗಾದರೂ ಅವರು ನಗೆಮೊಗ ದಲ್ಲಿದ್ದರೆ ನನಗದೇ ಮಹದಾನಂದವನ್ನುಂಟುಮಾಡಿದೆ.

ವಿರಾ:—ಅದು ನಿನ್ನ ಮುಖ್ಯಧರ್ಮವೇ ಸರಿ ! ಅದಿರಲಿ, ಚಂದ್ರ ! ಇದು ಮೊದಲು, ನೀನು ನಿನ್ನ ಮಗಳನ್ನು ಅಷ್ಟಾಗಿ ತಂದೆ ಯಬಳಿಗೆ ಹೋಗಗೊಡದೆ ನನ್ನಲ್ಲಿಗೆ ಕಳುಹುತ್ತಿರು. ಅವ ಳನ್ನು ಮುಂದೆ ನಾಟಕಶಾಲೆಗೆ ಹೋಗದಂತೆ ಕಟ್ಟುಮಾಡು.

ಕೆಲದಿನಗಳವರೆಗೆ. ಶಾಲೆಯಲ್ಲಿ ನಡೆಯಬೇಕಾದ ಬಾಲ ಶಿಕ್ಷಣವೂ ನನ್ನದಾಗಿರಲಿ, ಅಷ್ಟೇ ಅಲ್ಲ. ಇದಲ್ಲದೆ ನಿನ್ನ ಸ್ವಾಮಿಯ ಸುಧಾರಣೆಗೆ ನಿನ್ನಿಂದ ಮಾಡಲ್ಪಡಬೇಕಾದ ಕೆಲಸವೊಂದುಂಟು !

ಚಂದ್ರ:—ಅದಾವುದೊ ! ಹೇಳಬಹುದಲ್ಲವೆ ?

ವಿರಾ:—ಮೊದಲು ನಾನು ಕೊಡುವ ಲೇಖನವೊಂದನ್ನು ನಿನ್ನ ಸ್ವಾಮಿಯ ಅವಲೋಕನಕ್ಕೆ ತರಬೇಕು.

ಚಂದ್ರ:—ಅವರು ಕುಪಿತರಾಗದಿದ್ದರೆ· · ·, ಅವರಿಗೆ ವಿರೋಧವಾಗಿ ನಾನೆಂತೂ ನಡೆಯಲಾರೆ !

ವಿರಾ:—ಅಕ್ಕ ! ಇದೇಕೆ ಹೀಗೆ ಹೇಳುವೆ ! ನೀನು ನಿನ್ನ ಸ್ವಾಮಿಗೆ ಹಿತೈಷಿಣಿ ! ಆತನ ಸಹಧರ್ಮಿಣಿ !! ಅಲ್ಲದೆ ಪುರುಷಾರ್ಥ ಸಾಧನೆಗೆ ಮುಖ್ಯ ಕಾರ್ಯಕಾರಿಣಿ '!! ಇಷ್ಟಾದರೂ ಆತ ನನ್ನು ಸನ್ಮಾರ್ಗಕ್ಕೆ ತರಬೇಕಾದ ವಿಚಾರದಲ್ಲಿ ನಿನ್ನ ಮುಖ್ಯ ಕರ್ತವ್ಯಕರ್ಮದಲ್ಲಿ ಸಾಹಸದಿಂದಲಾದರೂ, ಕೈಚಾಚದಿದ್ದರೆ ಕುಂದಾಗದೆ ? ನೀನೇ ತಿಳಿದುತಿಳಿದೂ, ನಿನ್ನ ಸ್ವಾಮಿಯನ್ನು ಉಪೇಕ್ಷಿಸಿದ ಪಾತಕಕ್ಕೆ ಪಕ್ಕಾಗದಿರುವೆಯೇ ! ಸಾವಧಾನದಿಂದ ಸಮಾಲೋಚಿಸು !'

ಚಂದ್ರ:—ತಂಗಿ ! ಇನ್ನುಮುಂದೆ ಹಾಗಿಯೇ ಮಾಡುವೆನು. ಆದರೆ, ಈದಿನವೆಲ್ಲಿ ಬಿಡುವಾದೀತು ? ನಾಟಕ ಪ್ರಸಂಗದ ಸಡಗರವೇ ತುಂಬಿ ತುಳುಕಾಡುತಿದೆ.

ವಿರಾ:—(ತಲೆದೂಗಿ) ಸರಿಸರಿ ! ಈ ಕಾಲಕೂಟಕ್ಕೆ ಕಾರಣವೇನೆಂಬುದನ್ನು ಈಗ ತಿಳಿದೆನು ! ಆಗಲಿ, ಮುಳುಗಿಹೋದು

ದೇನು ? ನಾಳೆಯಾದರೂ ಮಾಡಬಹುದು. ಮಾಡಬೇಕಾದ ಕ್ರಮವನ್ನು ಮತ್ತೊಮ್ಮೆ ಹೇಳುವೆನು.

ಚಂದ್ರ—ತಾಯಿ! ನೀನೆನ್ನ ಪ್ರಾಣಾಪ್ತಸೋದರಿ! ನಿನಗೆಂತು ಹಿತವೆಂದು ತೋರುವುದೋ ಅಂತವನ್ನು ಕಟ್ಟುಮಾಡು, ಅದರಂತೆ ನಡೆವೆನು. ಎಂತೂ ನೀನೇ ನನ್ನ ಸುಖದುಃಖಗಳನ್ನು ಸಹಾನುಭೂತಿಯಿಂದ ವಿಮರ್ಶಿಸತಕ್ಕವಳಾಗಿರುವೆ! ಮತ್ತೇನು ಹೇಳಲಿ ? (ಎಂದು ಮತ್ತೊಮ್ಮೆ ಗವಾಕ್ಷದಿಂದಿಣಿಕಿನೋಡಿದಳು. ಅಲ್ಲೇನನ್ನು ಕಂಡಳೋ ನಮಗೆಂತೂ ತಿಳಿಯದು. ಆದರೆ ಚಂದ್ರಭಾಗೆ ಮಾತ್ರ ನಿಲ್ಲಲಾರದೆ ಅನುಕಂಪದಿಂದ ಆರ್ತಳಾಗಿ) "ಭಗವತಿ! ಕಾಪಾಡು" ಪಾರುಮಾಡು!!! ಎಂದು ಹೇಳುತ್ತ ನೆಲದಮೇಲೆ ಕುಕ್ಕರಿಸಿ ಬಿದ್ದಳು.

ವಿರಾಗಿಣಿ,—ಮರ್ಮಾಹತೆಯಾಗಿ ಕಣ್ಣೀರು ಸುರಿಸುತ್ತ, ಚಂದ್ರಭಾಗೆಯನ್ನು ಹಿಡಿದೆತ್ತಿ ಕುಳ್ಳಿರಿಸಿ, ಉಪಚರಿಸಿ, ಸಂತವಿಸಿ, ಮನೆಗೆ ಬೀಳ್ಕೊಟ್ಟಳು. ... .... —

ಪ್ರಿಯಸಹೋದರಿಯರೇ !

ಈ ಪರಿಚ್ಛೇದದ ಆದ್ಯಂತವೂ, ಮಥನಮಾಡಲ್ಪಟ್ಟಿದೆಯಷ್ಟೆ? ಏನೆನ್ನುವಿರಿ? ಪುರುಷಬಂಧುಗಳ ಉಚ್ಛೃಂಖಲ ಪ್ರವರ್ತನೆ! ವಿಧವಾಬಂಧುಗಳ ಹಾಗೂ, ವಿಚಾರಹೀನೆಯರ ಕಾಮಾಂಧತೆ!! ಇವೆರಡೂ ಸೇರಿದುದಾದರೆ, ಎಂತೆಂತಹ ದುರ್ಭರ ಸಂತಾಪಗಳುಂಟಾಗುವುವೆಂಬುದನ್ನು ತಿಳಿಯಹೇಳಬಲ್ಲಿರೇ? ಮೇಲೆ ವಿವರಿಸಲ್ಪಟ್ಟ ಕಾಲಕೂಟದ ವಿಷಜ್ವಾಲೆಗೆ ನಮ್ಮ ಚಂದ್ರಭಾಗೆಯರಂತಿರುವ ಸೋದರಿಯರೆಷ್ಟುಮಂದಿ ತುತ್ತಾಗಿಲ್ಲ? ಆದರೆ, ನಮ್ಮ

ವಿರಾಗಿಣಿಯ ಶೋಕವ್ಯಾಕುಲಗಳಲ್ಲಿ ಎಳ್ಳಷ್ಟಾದರೂ ನಿಮ್ಮಲ್ಲಿ ಹುಟ್ಟದಿದೆಯೇ? ಇರಲಿ. ಒಟ್ಟಿನಲ್ಲಿ ಒಂದೇ ಮಾತು! ಕ್ಷಮೆಯೊಂದು ನಿಮ್ಮ ಹೃತ್ಪಾತ್ರದಲ್ಲಿ ಸುರಕ್ಷಿತವಾಗಿರಲಿ! ತದುಪಾಶ್ರಯಗಳಾದ ದಮಾ ಸತ್ಯಗಳು ನಿಮ್ಮನ್ನು ಎಂದಿಗಾದರೂ ಬಿಡದೆ ನಿತ್ಯಾನಂದ ಸಾಮ್ರಾಜ್ಯವಲ್ಲಿ ನೆಲೆಗೊಳಿಸುವುದೆಂಬ ನಂಬುಗೆ ದೃಢವಾಗಿರಲಿ.

---

॥ ಶ್ರೀಃ ॥

## ದಶಮ ಪರಿಚ್ಛೇದ

---

(ವಿವೇಚನೆ—ವಿಡಂಬನೆ)

ಸಾಯಂಕಾಲ ಆರುಘಂಟೆ ಹೊಡೆದುಹೋಗಿದ್ದಿತು. ರಘುನಾಥನು ಕಲಾಶಾಲೆಯಿಂದ ಮನೆಗೆ ಬಂದು ನೋಡಿದನು. ನಡುವಣಾಂಗಣಳದಲ್ಲಿ, ಲಕ್ಷ್ಮೀದೇವಮ್ಮನೊಬ್ಬಳೇ ಕುಳಿತಿದ್ದಳು. ಮತ್ತಾರೂ ಕಾಣದಿರಲು, ಕುತೂಹಲದಿಂದ ತಾಯಿಯಬಳಿಯಲ್ಲಿ ನಿಂತು ಮೆಲ್ಲನೆ ಕೇಳಿದನು. "ಎಲ್ಲರೂ ಎಲ್ಲಿರುವರು? ಅಮ್ಮಾ!—"

ಲಕ್ಷ್ಮೀ;—ಅಪ್ಪಾ! ನಿನ್ನ ಹೆಂಡತಿ ಮುಹಡಿಯಮೇಲೆ; ವಿರಾಗಿಣಿ ಗ್ರಾಮದ ಪ್ರದಕ್ಷಿಣಕ್ಕೆಂದು ಹೋಗಿರುವಳು, ಇನ್ನೇನು ಬರುವವೇಳೆಯಾಯ್ತು. ಅವಳೆಲ್ಲಿ ಅಡಗಿರುವಳೋ ಎಲ್ಲಿ ಹಾಳಾಗಿಹೋಗಿರುವಳೋ ತಿಳಿದವರಾರು? ಅವಳಿಗಾರ ಭಯವಾದರೂ ಇದ್ದರಲ್ಲವೇ? ತುಟಿಮೀರಿದ ಹಲ್ಲು!

ರಘು:—(ತಲೆದೂಗಿ) ಅಮ್ಮ ! ವಿರಾಗಿಣೀ ಪರೀಕ್ಷಾಫಲಿತಾಂಶವು ತಿಳಿದುಬಂದಿದೆ. ಇದೇ ನೋಡು, ಪ್ರಶಸ್ತಿಪತ್ರಿಕೆ ಮತ್ತು ಬಹುಮಾನದ ಪುಸ್ತಕಗಳು.

ಲಕ್ಷ್ಮೀ:—ಏನು ? ಪರೀಕ್ಷೆಯಲ್ಲಿ ತೇರಿದಳ ?

ರಘು:—ಅಷ್ಟೇ ಅಲ್ಲ ! ಈಗ ಬಂದಿರುವ ಪುಸ್ತಕಗಳನ್ನು ಅವಳಲ್ಲಿಯೇ ಓದಿ ತಿಳಿದುಕೊಳ್ಳಬೇಕಲ್ಲದೆ, ಇಲ್ಲಿಯ ಬಾಲಿಕಾ ಪಾಠಶಾಲೆಗೂ ಆಡಿಗಡಿಗೆ ಹೋಗಿ ಹುಡುಗಿಯರಿಗೆ, ನೀತಿ, ಧರ್ಮ, ಮತ, ಸ್ತ್ರೀಕರ್ತವ್ಯ, ದೈವಭಕ್ತಿ ಮುಂತಾದುವನ್ನು ತಕ್ಕ ಉದಾಹರಣೆಗಳೊಡನೆ ಬೋಧಿಸುತ್ತಿರಬೇಕೆಂದೂ ನಿಯಮಿಸಿರುವರು.

ಲಕ್ಷ್ಮೀ —ಯಾರು ?

ರಘು —ವಿದ್ಯಾಂಗದ ಅಧ್ಯಕ್ಷರೇ '

ಲಕ್ಷ್ಮೀ —ಅದರಿಂದ ಲಾಭವೇನು ?

ರಘು —ಅಮ್ಮಾ ' ಇದನ್ನು ಮಾಡುವುದು ಲಾಭಕ್ಕೆಂವಲ್ಲ ; ಲೋಕಸ್ಥಿತಿಯಲ್ಲಿರುವ ಲೋಪಗಳನ್ನು ಕಂಡುಹಿಡಿದು, ಮೇಲ್ಮೆಗೆ ಬರುವಂತಾಗಲೆಂದೇ ಮಾಡುವುದು. ಇದರಿಂದ ಶಾಶ್ವತ ಕೀರ್ತಿಯೂ, ಅನಂತಪುಣ್ಯವೂ, ಲಾಭವಾಗುವುದಲ್ಲದೆ ಮತ್ತೇನೂ ಲಾಭವೆನಿಸದು. ಸರ್ಕಾರದವರಿಗೆ ಇಂತಹ ಸತ್ಪಾತ್ರಗಳು ದೊರೆತುದಾದರೆ, ಅವರ ಸದುದ್ದೇಶವು ನಿರುಪಾಧಿಕವಾಗಿಯೂ, ನಿಸ್ಸಂಶಯವಾಗಿಯೂ, ನೆರವೇರುವುದು. ಇದಕ್ಕೆಂದೇ ವಿರಾಗಿಣಿಗೆ ಬಹುಮಾನದ್ರವ್ಯವೆಂದು ವರ್ಷಕ್ಕೊಮ್ಮೆ ನೂರಿಪ್ಪತ್ತುರೂಪಾಯಿಗಳೂ ಬರುವುವು.

ಲಕ್ಷ್ಮಿ:—(ನನಿಗೆ ಮೈಯುಬ್ಬಿಹೋಯ್ತು ' ಆಶ್ಚರ್ಯಚಕಿತಕಂಠ

ದಿಂದ) ಅಬ್ಬ! ಹುಡುಗಿ ಎಷ್ಟುಬೇಗ ಮುಂದೆಬಂದಳು !! ನಮ್ಮ ಮನೆಯ ಪ್ರಾರಬ್ಧವೂ ಇದೆ, ಏಕೆ? ಹೆಗ್ಗಣದಂತೆ ತಿಂದು ತೇಗಲಿಕ್ಕೆ !! ಇಲ್ಲದ ಸಲ್ಲದ ರಗಳೆಯನ್ನೆಬ್ಬಿಸುವು ದಕ್ಕೆ !!! ಒಂದುದಿನವಾದರೂ ಇವಳಂತೆ ಓದಿದವಳೆಂಬ ಮಾತಿಲ್ಲವೊ.

ರಘು:—ಅಮ್ಮ! ನಿಮ್ಮ ಜೊತೆಯವರೆಲ್ಲರೂ, "ಹೆಂಗಸು ಓದಿ ಕೆಟ್ಟಳು" ಎಂದಾಡುತ್ತಿರುವರು. ನೀನೇನು ಇದನ್ನು ಸನ್ಮಾನಿಸುವೆ?

ಲಕ್ಷ್ಮೀ:—ಅಪ್ಪಾ! ನಾನೂ ಮೊದಲು ಅವರಂತೆಯೇ ಹೇಳುತಿ ದ್ದೆನು. ಆ ದುರ್ಭಾವನೆಯಿಂದಲೇ ನಿನ್ನ ಪ್ರಯತ್ನವನ್ನೂ ಮುಂದೆ ಸಾಗಲೀಯದೆ ಮುರಿದಿಟ್ಟೆನು. ಆದರೆ ಈಗ ವಿರಾ ಗಿಣಿ ಬಂದಂದಿನಿಂದ ನನ್ನ ಮುನ್ನಿನ ಭಾವನೆ, ತಪ್ಪೆಂದೂ, ವಿದ್ಯಾಭ್ಯಾಸಂಗದಿಂದ ತಕ್ಕಷ್ಟು, ಬುದ್ಧಿಕುಶಲತೆ, ಜಾಗರೂ ಕತೆ, ವಿಧೇಯತೆಗಳುಂಟಾಗುವುವೆಂದೂ ತಿಳಿಯುತ್ತಿರು ವೆನು. ಇದರಿಂದ ನನಗೆ ಒರಬರುತ್ತೆ ಮೊದಲಿದ್ದ ಅವಿ ವೇಕಕ್ಕಾಗಿ ತಕ್ಕ ಪಶ್ಚಾತ್ತಾಪವೂ ಬಲವಾಗುತ್ತಿರುವುದು.

ರಘು:—ಅಷ್ಟಲ್ಲದೇ ಬಲ್ಲವರಾಡುವರೇನಮ್ಮಾ? "ತಾಯ ತಿಳಿ ವೇ ಮಕ್ಕಳ ಗೆಲುವು" ಎಂದು. ಎಂತೂ ಅರಿವುಳ್ಳ ತಾಯಿ, ತನ್ನ ಮಕ್ಕಳನ್ನು ಅನುವರಿತು, ಮೇಲ್ಮೆಗೆ ತರಬಲ್ಲಳು. ಹಾಗಲ್ಲದೆ, ತಿಳಿವಿಲ್ಲದ ತಾಯಾದರೆ ಅವಳಲ್ಲಿ ನೆಲೆಗೊಂಡಿ ರುವ ಜಡತೆ, ಮೂರ್ಖತೆಗಳೇ ಅವಳ ಮಕ್ಕಳಿಗೂ ಬರು ವುವು. ಅಂತಹವುಗಳನ್ನು ದಾರಿಗೆ ತರಲಾರದೆ ಬಿಡುವುದೇ ಅವರ ದುರ್ಮಾರ್ಗತನಕ್ಕೆ ಎಡೆಮಾಡಿ ಕೊಟ್ಟಂತಾಗು

ವುದು. ಅರಿವೆಂಬುದೇ ಜ್ಞಾನವು, ಅದೇ ವಿದ್ಯೆ, ಅದೇ ಸಕಲ ಧರ್ಮಕ್ಕೆ ನೆಲೆ! ತಿಳಿಯಿತೆ?

ಲಕ್ಷ್ಮೀ:—ಅಪ್ಪ! ನನ್ನ ದುರದೃಷ್ಟದಿಂದಲ್ಲವೇ ನನಗಂತಹ ಮೂರ್ಖಬುದ್ಧಿಯುಂಟಾಗಿದ್ದುದು? ಈಗೇನುಮಾಡಬಲ್ಲೆನು? ಆ ಮಗನೆಂದರೆ ಕಾಮುಕಾಕರೊಡನೆ ಅಲೆದಲೆದು ಸಾಯುತ್ತಿರುವನು. ಇವಳೆಂದರೋ ಹೇಳುವಂತೆಯೇ ಇಲ್ಲ "ಕುಲಕ್ಕೆ ಮೃತ್ಯು ಕೊಡಲಿಯ ಕಾವು" ಎಂಬಂತಾಗಿದೆ. ಸಾಯುವವರೆಗೂ ಸಂಕಟ ತಪ್ಪಿದುದಲ್ಲ.

ರಘು—ಅಮ್ಮ! ಅಂದಿನ ಉಪೇಕ್ಷೆಯೇ ಇಂದಿನ ಸಂತಾಪಕ್ಕೆ ಮೂಲ! ಮಾಡುವುದೇನು? ಮನದಲ್ಲಿ ಮಿಡುಕಿದರೆ ಮುಗಿದುಹೋದೀತೆ? ಅವಳೇನಾದರೂ ನನ್ನ ಮಾತಿಗ ತಲೆವಾಗಿದ್ದರೆ ನನ್ನ ಮನದೆಣಿಕೆಯಲ್ಲಿದ್ದಂತೆ, ನಮ್ಮ ನವಾನಂದ ಮಂದಿರದಲ್ಲೆಂತು ಬಗೆಗೊಳ್ಳುತ್ತಿದ್ದಳೋ ಹೇಳಲಳವೇನು? ಈಗಲೂ ಮುಳುಗಿಹೋಗಲಿಲ್ಲ. ಪವಿತ್ರಚಿತ್ತಳಾದ ನಮ್ಮ ವಿರಾಗಿಣಿಯೇ ಅಲ್ಲಿ ಅಧಿಷ್ಠಾತ್ರಿಯಾಗಿ ಸಂಕಲ್ಪವನ್ನು ಸಾರ್ಥಕ್ಯಪಡಿಸುವಳೆಂಬ ನಿರೀಕ್ಷೆಯುಂಟು. ನನಗಿದೇ ಸಾಕಾಗಿದೆ.

ಲಕ್ಷ್ಮೀ:—ಮಗು! "ಶ್ವಾನಕ್ಕೆ ಮಾನವೆಲ್ಲಿ? ಕುಲಗೇಡಿಗೆ ಅಷ್ಟರ ಯೋಗ್ಯತೆ ಎಲ್ಲಿಯದು?" ವಿರಾಗಿಣಿಯಂತೆ ಪುಣ್ಯವತಿಯಾದವರಾರಿರುವರೋ ನಾನರಿಯೆನು. ಆದರೂ ನನಗೊಂದು ಬಲವಾದ ಶಂಕೆಯುಂಟಾಗಿರುವುದು.

ರಘು:—ಅದಾವುದು?

ಲಕ್ಷ್ಮೀ:—ಈಗಲೇ ಅವಳನ್ನು ಜನರಾಡಿಕೊಳ್ಳುವರು. ಇನ್ನೂ

ಮುಂದೆ ಶಾಲೆಗೆ ಹೋಗಿ, ಉಪನ್ಯಾಸಿಸುವುದೂ, ಸಂಬಳವನ್ನು ತರುವುದೂ ಮುಂತಾದ ಸಾಹಸವನ್ನು ಕೈಕೊಂಡರೆ ಮತ್ತೇನೇನು ಆಕ್ಷೇಪಗಳು ಮೇಲೆ ಬೀಳುವುವೋ ?

ರಘು:—ಅಮ್ಮ ! ಸೋಮಾರಿಗಳಾದ ಮೂರ್ಖರಿಗೆ ಮತ್ತಾವರೀತಿಯಿಂದ ಕಾಲಕಳೆಯಬೇಕು ? ನಿರ್ದೋಷಿಗಳನ್ನು ಅಲ್ಲದ ಸಲ್ಲದ ಆರೋಪಕ್ಕೆ ಗುರಿಮಾಡಿ, ಇಲ್ಲದ ಕಲಹವನ್ನು ತಂದೊಡ್ಡಿ, ನೋಡಿನೋಡಿ ನಲಿದಾಡುವುದೊಂದಲ್ಲದೆ ಅವರಿಗಿನ್ನಾವವೃತ್ತಿ ? ಬೇಕಾದವರು ಬೇಕಾದಂತೆ ಬೊಬ್ಬಿರಿದು, ಬಯ್ದು, ತೃಪ್ತರಾಗಲಿ ! ನಮಗಾಗುವ ನಷ್ಟವೇನು? ವಿರಾಗಿಣಿಗೆ ಬರತಕ್ಕ ಸಂಬಳವು ಬಾಲಿಕಾಜನೋಪಯೋಗಕ್ಕಲ್ಲದೆ ಅವಳಿಗಾಗಿ ಕೊಳ್ಳಲಾರಳು.

ಲಕ್ಷ್ಮಿ:—ಅದೇನೋ ನಿಜವೇ ! ನನಗೆ ಇಂದಿನವರೆಗೂ ಅವಳಲ್ಲಿ ಕಪಟಾಚರಣೆ ಎಳ್ಳಷ್ಟೂ ಕಂಡುಬಂದಿಲ್ಲ. ಅವಳಾವಾಗಲೂ ನಗೆಮೊಗದಿಂದಲೇ ಇರುವಳಲ್ಲದೆ ಮುಖಗೆಟ್ಟು ಕುಳಿತಳೆಂಬುದನ್ನು ನಾನು ತಿಳಿದುದಿಲ್ಲ. ಮಾಡತಕ್ಕ ಕೆಲಸವನ್ನು ಆಗಾಗಲೇ ಮಾಡಿಟ್ಟು, ನನಗೆಷ್ಟೋ ನೆರವಾಗಿರುವಳು. ಅವಳ ತಾಳ್ಮೆಯಾದರೂ ಎಷ್ಟಿರಬೇಕು ? ನಿನ್ನ ಹೆಂಡತಿ ಕಾರಣವಿಲ್ಲದೆಯೇ ಅವಳಲ್ಲಿ ಕರಬುವಳು. ಇವಳಿಗೆ ಎಳೆಬಸುರ ಬಳಲಿಕೆಯೊಂದುಕಡೆ, ಮೇಲೆ ಇಲ್ಲದ ಸಲ್ಲದ ಅಸಮಾಧಾನದಿಂದ ಅನ್ನಾಹಾರಗಳನ್ನು ಬಿಡುವ ಛಲವೊಂದೆಡೆ !! ಇವೆರಡರಿಂದಲೂ ಬರಬರುತ್ತ ಬಡವಾಗುತ್ತಿರುವಳು. ಮುಂದೇನಾಗುವುದೋ ತಿಳಿಯದೆ ಚಿಂತಿಸುವುದೇ ನನ್ನ ಕೆಲಸವಾಗಿದೆ.

ರಘು:—ಅಮ್ಮ ! ಹಿತೈಷಿಗಳ ಮಾತನ್ನು ಕೇಳದೆ, ತಮಗಾಗಿ ತಿಳಿವಿಲ್ಲದೆ ತಮ್ಮ ಸುಖಜೀವನಮಾರ್ಗಕ್ಕೆ ತಾವೇ ತಮ್ಮ ಕೈಯಿಂದೆಯೇ ಕಲ್ಮುಳ್ಳುಗಳನೊಡ್ಡುವಂತಹ ಮೂರ್ಖರಿಗೆ ಆರೇನು ಮಾಡಲಾದೀತು ? ಕರ್ಮಕ್ಕೆ ತಕ್ಕ ಫಲವಾವು ದೆಂಬುದು ಅನುಭವದಿಂದಲ್ಲವೇ ತಿಳಿಯಬೇಕು ? (ರಘು ನಾಥನ ಮಾತು ಪೂರಯಿಸುವುದರೊಳಗಾಗಿಯೇ ಬೀದಿ ಯಿಂದ ಜಗ್ಗು ಹಾಕುತ್ತೆ ಬಂದ ತುಂಗಬದ್ರೆ ಅಣ್ಣನ ಮುಂದೆ ನಿಂತಳು.)

ಲಕ್ಷ್ಮಿ:—(ಕಿಡಿಕಿಡಿಯಾಗಿ) "ಹಾಳು ನಗು ಉರಿದು ಗುಡ್ಡೆಬೀಳದೆ ?" (ಎಂದು ಮುಖವನ್ನು ತಿರುಗಿಸಿಕೊಂಡಳು.)

ತುಂಗ:—(ಹಲ್ಕಡಿದು ದುರದುರನೆ ನೋಡುತ್ತ) "ಸಾಕು ಸುಮ್ಮನಿರು, ಅಳಬೇಕಾದ ಗ್ರಹಚಾರ ನನಗೇನೂ ಇಲ್ಲ."

ಲಕ್ಷ್ಮಿ:—(ತಿರುಗಿ ಕೋಪದಿಂದ) "ಹಾಳಾದವಳೆ ! ನಿನ್ನ ನಾಲಗೆ ಸೇದಿದರೆ ಸುಖವಾದೀತು, ಎಷ್ಟುದ್ದದ ನಾಲಗೆ ? ಏತಕ್ಕೆ ಈ ಬಾಳು ? ಮಾನವಿಲ್ಲದ ಬಾಳು ! ವಿರಾಗಿಣಿಯ ಕಾಲ ಕೆಳಗಾದರೂ ದೂರು, ಬುದ್ಧಿ ಬರಲಿ !"

ತುಂಗೆ:—ನನಗೇನೂ ಅವಳ ಬುದ್ಧಿ ಬೇಕಾಗಿಲ್ಲ ; ನಿನಗಾಶೆಯಿ ಯಿದ್ದರೆ ಹೋಗಿ ದೂರಿಬಾ ! ಇನ್ನುಮೇಲೆ ನನ್ನ ಗೊಡವೆಗೆ ಬರಲಾಗದು !! ನಿಮ್ಮ ಕೈಕೆಳಗೆ ಸಿಕ್ಕಿ ಪ್ರಾಣಬಿಡುವವಳೂ ನಾನಲ್ಲ.

ಲಕ್ಷ್ಮಿ:—(ಜಿಗುಪ್ಸೆಯಿಂದ) ಚೀಃ ! ಏನಿದು ಜಗಳ ? ದೂರಸಾಗಿರಿ. ಅಮ್ಮಾ ! ಹೇಸಿಕೆಯಮೇಲೆಸೆದ ಕಲ್ಲು ಎಸೆದವರ ಮೇಲೆಯೇ ಹೇಸಿಗೆಯಡರಿಸುವುದು, ನೀನೇ ಸುಮ್ಮನಾಗಬೇ

ಕಮ್ಮ ! (ಲಕ್ಷ್ಮೀದೇವಮ್ಮನು ಮರುಮಾತಾಡದೆ ಸಿಟ್ಟುಸಿರಿಡುತ್ತ ಹೊರಟುಹೋದಳು.)

ತುಂಗೆ:—(ದರ್ಪಿತಸ್ವರದಿಂದ) ಆಗಲಿ ; ಅಣ್ಣನು ಬದುಕಿದ್ದಾಗಲೇ ನಾನು ಹೇಸಿಕೆಯಾದೆ.

ರಘು:—(ಒಮ್ಮೆ ತಿರಸ್ಕಾರಭಾವದಿಂದ ತುಂಗೆಯನ್ನು ನೋಡಿದನು.)

ತುಂಗೆ;—(ವ್ಯಂಗ್ಯವಾಗಿ ನಕ್ಕು) ಅಬ್ಬಬ್ಬಾ ! ಇದೇಕೆ ಹೀಗೆ ನೋಡುವೆ ? ನನ್ನನ್ನು ಸುಡಬೇಕೆಂದೊ ?

ರಘು:—(ಖತಿಗೊಂಡು) ತುಂಗೆ ! ನಿನಗಿಷ್ಟು ವರ್ಷಗಳಾದರೂ ವಿವೇಚನೆಯುಂಟಾಗಿಲ್ಲ. ನಿನಗೀ ದುರ್ಬುದ್ಧಿಯುಂಟಾಯ್ತೇಕೆ ? ತಾಯಿಗೂ ಇದಿರಾಗುವುದೇ ? ಇದೇ ನಿನ್ನ ಧರ್ಮವೆ ?

ತುಂಗೆ:—ಧರ್ಮವೊ-ಕರ್ಮವೊ ನನಗೊಂದೂ ಬೇಡ. ನನ್ನ ಇಷ್ಟಕ್ಕೆ ಪ್ರತಿಯಾಗಿ ಅವಳೇಕೆ ಹೇಳಬೇಕು ?

ರಘು:—ನಿನ್ನನ್ನು ಇಷ್ಟಬಂದಂತೆ ತಿರುಗೆಂದು ಬಿಡಲಾದೀತೆ ? ನಾವು ಕರ್ತರಾಗಿರುವುದೇಕೆ ? ನಿನ್ನನ್ನು ಕುಮಾರ್ಗದಿಂದುದ್ಧರಿಸದೆ ಕೆಟ್ಟುಹೋಗಲೆಂದು ಉಪೇಕ್ಷಿಸುವುದಕ್ಕೊ ?

ತುಂಗ:—ನೀನೊಬ್ಬನು ಏನನ್ನಾದರೂ ಹೇಳು, ಕೇಳುತ್ತೇನೆ. ಅವಳೇಕೆ ಬಯ್ಯಬೇಕು ?

ರಘು:—ತುಂಗೆ ! ನಿನಗೆ ಜ್ಞಾನವೆಲ್ಲಿದೆ ! ಅಮ್ಮನಿಲ್ಲದೆಯೇ ಅಣ್ಣನೆಂತಾಗುವನು ? ನೀನಾದರೂ ಆರಿಂದೊಗೆದೆ ? ಅಣ್ಣನಿಗೂ ಆರಾಧ್ಯದೈವವಾಗಿರುವ ಮಾತೃದೈವವು ನಿನಗೆ ಹಿತವನ್ನು ಹೇಳಕೂಡದೆಂದರೆ ನಿನ್ನ ದುರಭಿಮಾನವನ್ನು ಏನುಮಾಡಬೇಕು ! ತಾಯಿಪಟ್ಟ ಕಷ್ಟಗಳಲ್ಲಿ ಸಾಸಿವೆಕಾಳಷ್ಟಾದರೂ

ನಮ್ಮಿಂದ ತೀರಿಸಲಾದೀತೆ? ಅವಳ ಅಪಾರವಾದ ಅಕುಟಿಲವಾದ ಅವ್ಯಾಜವಾತ್ಸಲ್ಯದಿಂದಲ್ಲವೇ ನಾವು ಮುಂದಕ್ಕೆ ಬರಬೇಕು? ನಾವು ಈವರೆಗೂ ಜೀವಿಸಿರುವುದಾದರೂ ಆವ ಆಧಾರದಿಂದ ಹೇಳಬಲ್ಲೆಯಾ?

ತುಂಗ:—ಅವಳು ತನ್ನ ಹೊಟ್ಟೆಯ ಕಿಚ್ಚಿಗಾಗಿ ಮಾಡಿಕೊಂಡಳಲ್ಲದೆ ನನಗಾಗಿ ಏನೂ ಕಷ್ಟಪಟ್ಟಿಲ್ಲ. ಅವಳು ಮಾಡಲಿ-ಬಿಡಲಿ, ನನಗೇನೂ ಆ ರಗಳೆ ಬೇಕಾಗಿಲ್ಲ. ಹಾಗೂ ನಾನು ಅವಳ ಮುಂದೆ ನಾಲಗೆ ಹಿರಿದು ಸಾಯುವುದಕ್ಕೂ ಆಗುವಂತಿಲ್ಲ.

ರಘು:—ಚಿಃ, ತುಂಗೆ! ಏನೆಂದು ವಾಚಿಸುವೆ? ಸ್ವಲ್ಪಕ್ಕೆ-ಸ್ವಲ್ಪವಾದರೂ ಆಲೋಚಿಸಬೇಡವೆ? ಹೊತ್ತು, ಹೆತ್ತು, ಸಾಕಿ, ಸಲಹಿ, ಮುಂದಕ್ಕೆ ತಂದ ಮಕ್ಕಳನ್ನು ಆವ ತಾಯ್ತಂದೆಗಳು ಸಾಯಲೆನ್ನುವರು? ಎಂತಾದರೂ ಮೇಲ್ಮೆಗೆ ಬಂದರೆ ಸಾಕೆಂದು ಅವರನ್ನು ನಿರುಪಮ ಪ್ರೇಮದಿಂದ ಸರ್ವಪ್ರಕಾರದಿಂದಲೂ ಕಾಪಾಡುವರಲ್ಲದೆ ಕೆಡಲೆಂದಲ್ಲ!

ತುಂಗ:—ಅವಳಿಗೆ ನನ್ನಲ್ಲಿ ಅಷ್ಟರ ಪ್ರೇಮವಿದ್ದರೆ ನನ್ನನ್ನು ಕಂಡಾಗಲೆಲ್ಲಾ ಉರಿದುರಿದು ಬೀಳುತ್ತೆ ಅದೇಕೆ ಹಾಗೆ ಬಯ್ಯುವಳು? ಅವಳಿಗೆ ನನ್ನನ್ನು ಕಂಡರಾಗದುದರಿಂದಲ್ಲವೇ ಅಡಗಿಹೋಗಲೆಂದೂ, ಉರಿದುಬೀಳಲೆಂದೂ ಶಪಿಸುತ್ತಿರುವಳು.

ರಘು:—ಚಂಡಿ! ನಿನ್ನ ಮೂರ್ಖತೆಗಾಗಿ ಧಿಕ್ಕಾರ! ಹೆಂಗಸಿಗೆ ಶೀಲವೇ ಭೂಷಣವು. ಸತೀತ್ವವೇ ಸರ್ವಾಭರಣವು. ಶೀಲವು ಸುರಕ್ಷಿತವಾಗಿರಬೇಕಾದರೆ ಗುರುಜನರ ಹಿತ

ಬೋಧೆ ಮುಖ್ಯವಾಗಿರಬೇಕು. ನಿನ್ನಲ್ಲಿರತಕ್ಕ ಕುಂದು ಕೊರತೆಗಳನ್ನು ಕಳೆದು ಕಳಂಕವಿಲ್ಲದಂತೆ ಸಂಸ್ಕರಿಸಬೇಕಾದುದೇ ನಮ್ಮ ಕರ್ತವ್ಯವು. ನಿನ್ನನ್ನು ಎಷ್ಟುಮಾತ್ರಕ್ಕೂ ಕೆಡಲು ಬಿಡಲಾರೆವು.

ತುಂಗ:—ಬಿಡದೆ ಕಟ್ಟಿಹಾಕುವವರಾರು ? ನಾನಾರ ಕಟ್ಟಳೆಗೂ ಒಳಪಡಬೇಕಾದುದಿಲ್ಲ. ಈವರೆಗೂ ನಿನ್ನ ಮೇಲಿನ ಅಭಿಮಾನದಿಂದ ಇಲ್ಲಿದ್ದೆನು ನಿನಗೆ ಬೇಸರವಾದಮೇಲೆ ಒಂದು ಗಳಿಗೆಯಾದರೂ ಇಲ್ಲಿರಲಿಷ್ಟವಿಲ್ಲ ನನ್ನ ಮನಬಂದಲ್ಲಿಗೆ ಹೋಗಿ ಸುಖವಾಗಿರುವೆನು.

ರಘು:—(ಕ್ರೋಧಾಮರ್ಷನಾಗಿ ಕರ್ಕಶಸ್ವರದಿಂದ) ದುಷ್ಟೆ ' ಏನುಹೇಳಿದೆ ? ಮನೆಬಿಟ್ಟು ಮನಬಂದಲ್ಲಿಗೆ ಹೋಗುವೆನೆನ್ನುವೆಯೋ ? ಎಲ್ಲಿ. ಹೊರಡು ' ಈಗಲೇ ಹೊರಡು ' ಮತ್ತೆಲ್ಲಿಗೆಹೋಗಿ ಸುಖವಾಗಿರುವೆಯೋ ಮುಂದೆ ನೀನೇ ತಿಳಿಯುವೆ ! ನನ್ನನ್ನು ಸಾಮಾನ್ಯನೆಂದು ತಿಳಿದೆಯೊ ! ಮಲೆತು ಮಾತನಾಡುವೆ ಜೋಕೆ '!! ಎಚ್ಚತ್ತಿರು ! ನಾನು, ನಾನಾರು? ನಿನ್ನಂತಹ ತೊಂಡೆಮ್ಮೆಗಳಿಗೆ ಕಾಲಾಂತಕ ಯಮನೇ ; ಈ ಗಳಿಗೆಯಲ್ಲಿ, ಇಲ್ಲಿಂದಿಲ್ಲಿಯೇ, ಹೀಗೆಯೇ, ನಿನ್ನನ್ನು ಕಾರಾಗಾರಕ್ಕೆ ಅಟ್ಟಬಲ್ಲೆನು , ಅಷ್ಟೇಅಲ್ಲ— ನಿನ್ನ ಅನುರೋಧಕರನ್ನೂ ಈಗಲೇ ಹಿಡಿದು ಬಂಧಿಸಬಲ್ಲೆನು. ಆದರೆ, ನಿನ್ನೊಬ್ಬಳ ದುರ್ವೃತ್ತಿಗಾಗಿ ಆ ಮತ್ತ ಪಶುವೃತ್ತರನ್ನೆಲ್ಲಾ ಬಂಧಿಸಿ ಅವರನ್ನೇ ನೆರೆನಂಬಿ ಜೀವಧಾರಣಮಾಡಿಕೊಂಡಿರುವ ಆ ನಮ್ಮ ದೇಶಭಗಿನಿಯರ ದುಃಖವನ್ನು ಹೆಚ್ಚಿಸಲಾರದೆ ತಡೆದಿದ್ದೇನೆ. ಇನ್ನಾದರೂ

ತಿಳಿದೆಚ್ಚತ್ತು ನಡೆ ; ನಿನ್ನ ಆಶಾಂಧತೆಯನ್ನು ದೂರಮಾಡು; ಈ ಯಮನು ಬದುಕಿರುವಾಗಲೇ ನಿನಗಾಗುವ ಪ್ರಾಯಶ್ಚಿತ್ತವೇನೆಂಬುದನ್ನು ನೀನೇ ಊಹಿಸಿ, ಪರಿತಾಪವನ್ನು ಹೊಂದು. ವೃಥಾ ಭೂಭಾರವಾಗಬೇಡ! ಇದೆ, ನೋಡು ವಿರಾಗಿಣಿಗೆ ಬಂದ ಬಹುಮಾನ! ಎಲ್ಲಿ ನೀನು ಸಂಪಾದಿಸಿರುವ ಕೀರ್ತಿಯಾದರೂ ಎಂತಹುದು ?

ತುಂಗೆ:—(ಒಮ್ಮೆ ಅಣ್ಣನ ಮುಖವನ್ನು ನೋಡಿದಳು. ಅವನ ಆಗಳಿನ ಆರಕ್ತಮಭ್ರುಕುಟೀಮುಖದ, ಆ ಕ್ರೂರವೀಕ್ಷಣದ ಅವನಾಭರ್ತ್ಸನೆಯ ದೆಸೆಯಿಂದ ಮರ್ಮಾಹತೆಯಾದಳು. ಭಯದಿಂದ ಕಂಪಿಸಿದಳು. ಅಣ್ಣನ ಅಂದಿನ ಭೀಕರ ಸ್ವರೂಪವನ್ನು ಹಿಂದೆ ಅವಳಂದೂ ನೋಡಿರಲಿಲ್ಲವಾದುದರಿಂದ ಅವಳ ಕೆಚ್ಚೆದೆಯೂ ಕರಗಿ ನೀರಾಗಿ ಸುರಿಯಹತ್ತಿತು. ದ್ರವವಾರಿದ್ದ ನಾಲಗೆಯಿಂದ ತೊದಲುತ್ತ, ಕಂಪಿಸುತ್ತ, (ದೈನ್ಯದೃಷ್ಟಿಯಿಂದ) ಅಣ್ಣ ಶಾಂತನಾಗು! ಒಮ್ಮೆಯೇ ನನ್ನನ್ನು ಕೊಲ್ಲಬೇಡ!! ಇಂದಿನ ತಪ್ಪನ್ನು ಮನ್ನಿಸು. ಇನ್ನೆಂದೂ ನಾನು ಅಮ್ಮನಿಗೆ ಇದಿರಾಡೆನು ; ಇಂದಿನ ನಿನ್ನ ರೌದ್ರಾಕಾರವು ನನ್ನನ್ನು ನಿಲ್ಲಗೊಡದೆ ಸುಡುತಿರುವುದು ! ಅಣ್ಣ, ದಯವಿಟ್ಟು ಕ್ಷಮಿಸು (ಎಂದು ಹೇಳುತ್ತ ರಘುನಾಥನ ಕಾಲಮೇಲೆ ತಲೆಯನ್ನಿಟ್ಟಳು.)

ರಘು:—(ತನ್ನ ಕಾಲಮೇಲೆ ರೋದಿಸುತ್ತಿದರೂ ತಂಗಿಯನ್ನು ನೋಡದೆ, ನುಡಿಯದೆ ಖತಿಯಿಂದ ನಿಂತಿದ್ದನು. ಈ ವೇಳೆಯಲ್ಲಿಯೇ ವಿರಾಗಿಣಿಯೂ ಬಂದು ಸೇರಿದಳು. ವಿರಾಗಿಣಿಯನ್ನು ನೋಡಿದೊಡನೆಯೇ ರಘುನಾಥನ ಮುಖದಲ್ಲಿ ಪ್ರಸ

ನ್ನತೆಯೂ, ಕಣ್ಣುಗಳಲ್ಲಿ ಶೋಕಾಶ್ರುವೂ ಹೊರಹೊಮ್ಮಿದುವು. ವಿರಾಗಿಣಿಯು ರಘುನಾಥನ ಸ್ಥಿತಿಯನ್ನೂ, ತುಂಗೆಯ ಪ್ರಕೃತಿಪರಿವರ್ತನೆಯನ್ನೂ ನೋಡಿ ಬೆರಗಾಗಿ ನಿಂತಳು.)

ರಘು:—(ತುಂಗೆಯನ್ನು ಕುರಿತು ತಿರಸ್ಕಾರದಿಂದ ಸಾಕು! ತುಂಗೆ ನಿನ್ನೀವಿಡಂಬನವಿನ್ನು ಸಾಕು!! ಎದ್ದುಹೋಗು, ಇಷ್ಟಕ್ಕೇ ನಾನು ಶಾಂತನಾಗಲಾರೆನು. ನಿನ್ನ ಅಕ್ರಮಕ್ಕಾಗಿ ನಿನ್ನಲ್ಲಿ ಪಶ್ಚಾತ್ತಾಪವುತ್ಪನ್ನವಾಗುವವರೆಗೂ ನೀನು ನನ್ನ ಒಡಹುಟ್ಟಿನಿಸಲಾರೆ, ಚೆನ್ನಾಗಿ ತಿಳಿದಿರು. ಹೊರಟುಹೋಗು' (ವಿರಾಗಿಣಿಯ ಕಡೆ ತಿರುಗಿ ಕೈನೀಡಿ) ತಾಯಿ' ಇತ್ತಬಾ, ಇದೊ ಪ್ರಶಸ್ತಿಪತ್ರಿಕೆಯನ್ನೂ ಬಹುಮಾನ ಪುಸ್ತಕಗಳನ್ನೂ ತಂದಿರುವೆನು. ಕೈನೀಡಿ ತೆಗೆದುಕೊ! ಅಷ್ಟೇ ಅಲ್ಲ. ನಾಳಿನ ಮೊದಲು ನೀನು ಇಲ್ಲಿಯ ಬಾಲಿಕಾಶಾಲೆಗೆ ಉಪದೇಶಕಳಾಗಿ ನೇಮಿಸಲ್ಪಟ್ಟಿರುವೆ ಇದೋ ಆಜ್ಞಾಪತ್ರವಿಲ್ಲಿ.

ವಿರಾ:—(ತೆಗೆದುಕೊಂಡು ಮೃದುಮಧುರವಾಣಿಯಿಂದ) ಅಣ್ಣಾ' ಇವೆಲ್ಲವೂ ನಿನ್ನ ಸತ್ಸಂಕಲ್ಪದ ಫಲವಲ್ಲದೆ ಬೇರಿಲ್ಲ. ತುಂಗಭದ್ರೆಯು ಎದ್ದು ನಿಂತು ವಿರಾಗಿಣಿಯನ್ನೇ ದುರದುರನೆ ನೋಡುತಿದ್ದಳು.)

ರಘು:—ವಿರಾಗಿಣಿ! ನನ್ನ ಪ್ರಯತ್ನವೂ, ಉದ್ದೇಶವೂ, ಶ್ರಮವೂ ಸಾರ್ಥಕವಾಗುವಂತೆ ಮಾಡಿದೆ? ಇವಳಿರುವುದನ್ನೂ ನೋಡು. ಏಕೆ? ಇಂತಹ ಭಂಡಜೀವನ! ನಾಯಿಗೂ ಕೀಳಾದ ಜನ್ಮವೇ!!

ವಿರಾ;—ಅಣ್ಣಾ ! ಅಷ್ಟೊಂದು ಬಿರುನುಡಿ ಬೇಡ ! ತುಂಗೆಗೆ ತಡೆವುದಕ್ಕೂ ಸಾಗದು. (ಎಂದು ತುಂಗೆಯನ್ನು ನೋಡುತ್ತ) ತುಂಗ ! ಇನ್ನೂ ನನ್ನ ಮೇಲಿನ ಕೋಪವಾರಿಲ್ಲವೇನು ? ನನ್ನೊಡನೆ ಮಾತನಾಡಲೊಲ್ಲೆಯೇಕೆ ?

ರಘು:—ಛೀ ! ನಿನ್ನೊಡನೆ ಮಾತನಾಡುವುದು ತುಂಗೆಯ ಮಾನಕ್ಕೆಂತೂ ಸಲ್ಲದು. ನಿನ್ನೊಡನೆ ಸಂಭಾಷಿಸುವುದೆಂದರೆ, ನಾಲಗೆಗೆ ಪ್ರಾಯಶ್ಚಿತ್ತವೇ ಆಗಬೇಕು.

ವಿರಾ:—ಅಣ್ಣಾ ! ಸುಮ್ಮನೇಕೆ ನಿಷ್ಠುರಪಡಿಸುವೆ ? ತುಂಗೆಯ ಮನ ವಿಂದು ಎಷ್ಟು ನೊಂದುದೋ ತಿಳಿಯದು !

ರಘು:—ಪಾಪ ! ಬಹಳ ನೊಂದಳು. ನೋಯಲಿ ! ಘಾತುಕನಾದ ಅಣ್ಣನಿಂದ ನೋಯಲೇಬೇಕು.

ತುಂಗೆ:—ಅಣ್ಣಾ ! ನೀನೇನನ್ನಾದರೂ ಹೇಳು. ಇಂದು ನನ್ನ ಇಷ್ಟವನ್ನು ನಡೆಯಿಸಿಕೊಡು. ಮುಂದೆಂದೂ ನಿನಗೆ ನಾನು ಪ್ರತಿಮಾಡುವಳಲ್ಲ.

ರಘು:—(ವ್ಯಂಗ್ಯವಾಗಿ ನಕ್ಕು) ಏನು ನಿನ್ನ ಇಷ್ಟ ? ಆರೊಡನೆ ಓಡಬೇಕು ?

ತುಂಗೆ:—ಅಣ್ಣಾ ! ಹಂಗಿಸಬೇಡ. ಇಂದು "ನಿರುಪಮಾ" ನಾಟಕವಾಗುವುದು. ಅದನ್ನು ನೋಡಬೇಕೆಂಬ ಆಶೆ ಬಹುವಾಗಿದೆ.

ರಘು:—ಕೂಡದು, ಅದೆಂತೂ ಸಾಗದಮಾತು. ನಿನ್ನಂತಹ ಕಲುಷಿತೆಯರನ್ನು ಜೊತೆಗೊಂಡು ಹೋಗುವುದು ನನಗೊಳ್ಳಿತಲ್ಲ. ನಮ್ಮ ವಿರಾಗಿಣಿಯ ಪವಿತ್ರಚರಿತ್ರೆಯಲ್ಲಿಯೇ ಕಲಂಕವನ್ನು ತುಂಬಬೇಕೆಂದು ಅಪಲಪಿಸುವ ಕುತ್ಸಿತರಿಗೆ ನಾ

ನೆಂದೂ ಎಡೆಗುಡಲಾರನು. ನನ್ನನಿಂದು ಬರಹೇಳಿ ಬಲಾತ್ಕರಿಸಿರುವರು. ಹೋಗದಿದ್ದರೆ ತೀರದು. ನೀನು ನನ್ನ ಜೊತೆಯಲ್ಲಂತೂ ಬರಲಾಗದು.

ತುಂಗೆ:—ವಿರಾಗಿಣಿಯೂ ಬಂದರೆ ಕರೆದೊಯ್ವೆಯಾ ?

ರಘು:—ಅವಳೇಕೆ ಬಂದಾಳು ? ಏನಮ್ಮಾ ವಿರಾಗಿಣಿ ಬರುವೆಯಾ?

ವಿರಾ:—(ಕಿರುನಗೆಯಿಂದ) ಸನ್ಯಾಸಿಗೇಕೆ ಶೂಲಪ್ರಾಪ್ತಿ ?

ತುಂಗೆ:—ಬಂದರೆ ನಷ್ಟವೇನು ?

ವಿರಾ:—ನಷ್ಟವಷ್ಟಿಷ್ಟಲ್ಲ, ಬೇಕಾದಷ್ಟಿವೆ ; ಅದರಿಂದಾಗುವ ಕೆಡುಕು ನಿನಗಿನ್ನೂ ತಿಳಿದಿಲ್ಲ.

ತುಂಗ:—ಓಹೋ ! ಅದಾವುದೋ ಕೆಡುಕು ?

ವಿರಾ:—ಮಾನವಜನ್ಮಕ್ಕೆ ಮುಖ್ಯಭೂಷಣವೇ ಪ್ರಜ್ಞೆ. ಪ್ರಜ್ಞೆಗೆ ಮುಖ್ಯಾಂಗಗಳೇ ಧೃತಿ, ಕ್ಷಮೆ, ದಯೆ, ಸತ್ಯ, ಶೌಚ, ಭಕ್ತಿ, ಶ್ರದ್ಧೆ, ವೈರಾಗ್ಯವೆಂಬಿವುಗಳು. ಕಾಲವೆಂಬುದು ಅಮೌಲ್ಯವಾದುದು, ಅದನ್ನು ಮೇಲೆ ಹೇಳಲ್ಪಟ್ಟ ಸದ್ಗುಣ ಸಮೂಹಗಳಿಂದ ಸರಿಯಾದ ಮಾರ್ಗದಲ್ಲಿ ಉಪಯೋಗಿಸಿ ಕೊಳ್ಳಬೇಕಾದುದೇ ನಮ್ಮ ಕರ್ತವ್ಯವು ; ಹಾಗಲ್ಲದೆ ಕುತ್ಸಿತಗಳಾದ ನೋಟಗಳಿಂದಲೂ, ಕಲಂಕಿತವೃತ್ತಿಗಳಿಂದಲೂ, ಕಾಲಧನವನ್ನು ಇಚ್ಛೆ ಬಂದಂತೆ ದುರುಪಯೋಗಪಡಿಸಿದರೆ ಕೆಡುಕಲ್ಲದೆ ಮತ್ತೇನು ? ನಾಟಕವೆಂಬುದು, ಶೃಂಗಾರ, ಹಾಸ್ಯ, ವೀರರಸಪ್ರಧಾನಗಳಾದ ವಿಪರೀತ ವಿನ್ಯಾಸಭೇದಗಳಿಂದ, ನೋಟಕರ ಮನವನ್ನು ಕೆಡಿಸತಕ್ಕ ದುರ್ಗುಣವುಳ್ಳುದು. ನಾಟಕಾವಲೋಕನದಿಂದ ಕಾಲನಷ್ಟ, ಕ್ರಿಯಾನಷ್ಟ, ಕರಣನಷ್ಟಗಳೆಂಬ ನಷ್ಟತ್ರಯವುಂಟಾಗಿ ಮನ

ಸ್ಸನ್ನು ಉದ್ರಿಕ್ತವಾಗುವಂತೆ ಮಾಡುವುದು. ಈ ಬಗೆಯ ರಾಗಾಂಧತೆಯಾಯ್ತೆಂದರೆ ಹೇಳುವುದೇನು? ಮಾನವಪ್ರಕೃತಿಯೇ ಪರಿವರ್ತಿತವಾಗಿ ಆತ್ಮರಾಜನನ್ನೂ, ಆತನ ಆಶ್ರಯಸ್ಥಾನವಾದ ದೇಹವನ್ನೂ ನಾಶಪಡಿಸುವುವು ಅಷ್ಟಕ್ಕೆ ನಾವೆಂದೂ ಎಡೆಗುಡಬಾರದು.

ತುಂಗ—ಅಷ್ಟರವೈರಾಗ್ಯವು ನನಗಿನ್ನೂ ಹತ್ತಿಲ್ಲ, ಮೊದಲು, ಇಂದಿನ ಆಶೆಯನ್ನು ಸಲ್ಲಿಸಿಕೊಟ್ಟು, ನಾಳೆ ಮೊದಲು ನಿನ್ನ ತತ್ವವನ್ನು ವಿವರಿಸುವ ಆಲೋಚನೆಮಾಡು?

ವಿರಾ—ತುಂಗೆ' ನನ್ನ ಹಿತಬೋಧೆಯನ್ನು ಆಗಲೇ ಮರತೆಯಾ?

ರಘು—ನಿಜ! ಅವನ್ನು ಮರೆಯದೆ, ತೂರೆಯದೆ, ನೆನೆನೆನೆದೆಚ್ಚತ್ತಿರು'

ತುಂಗ—ಅಣ್ಣಾ' ಸುಮ್ಮನೆ, ಬಾಯಮಾತಿನಿಂದ ತಡೆವರೆ. ನನಗೇನು ತಿಳಿದೀತು? ಇದಿರಿಗೆ ಬಂದು, ಅವರಿಂದಾಗುವ ಸಾಧಕಬಾಧಕಗಳನ್ನು ಸಕಾರಣವಾಗಿ ಸ್ಪಷ್ಟಪಡಿಸಿದರೆ ಮನಸ್ಸಿಗೆ ಹಿಡಿವುದು. ಇಲ್ಲೇ ಹೇಳಿದರೇನು? ; ರಾಗಿಗಿಣಿಯೂ ಬಂದು, ಅವುಗಳಿಂದಾಗುವ ಕೆಡುಕನ್ನು ತೋರಿಸಲಿ!

ರಘು—ವಿರಾಗಿಣಿ' ಏನುಹೇಳುವೆ? ತುಂಗೆಯನ್ನು ಎಚ್ಚರಿಸುವುದಕ್ಕಾಗಿ ಬರಲಾರೆಯೋ?

ತುಂಗ:—ವಿರಾಗಿಣಿ! ನನಗಾಗಿ ಬಾ?

ವಿರಾ:—ನಿನ್ನ ಅತ್ತಿಗೆಯನ್ನೂ ಬರಹೇಳು?

ತುಂಗ.—(ಆಗಲೆಂದು ಹೊರಟುಹೋದಳು.)

ರಘು.—ತಾಯಿಾ! ಇಂದಿನ ನನ್ನ ಆಗ್ರಹದಿಂದ, ಇವಳೆಷ್ಟು ತಗ್ಗಿರುವಳು.

ವಿರಾ:—(ಕಿರುನಗೆಯಿಂದ) ಅಣ್ಣಾ! ವಿಡಂಬನೆಯೆಂಬುದರ ಸ್ವಭಾವವಲ್ಲವೇನು? ಇವೆಲ್ಲವನ್ನೂ ನಿಜವೆಂದು ಭಾವಿಸಲಾದೀತೆ?

ರಘು:—ಹೇಗಾದರೂ ಇರಲಿ; ಅವಳು ನಾಟಕಕ್ಕೆ ಹೋಗಲೇಬೇಕೆಂದು ಹಟವಿಡಿದಿರುವಳು. ನಾವು, ಬೇಡವೆಂದು ತಡೆದರೂ, ನಮ್ಮ ಕಣ್ಣಿಗೆ ಮಣ್ಣುಹಚ್ಚಿ ಹೋಗದೇಬಿಡಳು; ಹಾಗಾದರೆ, ನಾವೇ ಅವಳ ಕಳ್ಳ ಸುಳ್ಳುದಾರಿಗೆ ಎಡೆಮಾಡಿಕೊಟ್ಟಂತಾಗುವುದು. ಆದುದರಿಂದ ನೀನೇ ಜೊತೆಯಲ್ಲಿದ್ದು ಅದರ ಪ್ರತಿಯೊಂದು ವಿಚಾರವನ್ನೂ ವಿಮರ್ಶಿಸಿ ಹೇಳಿದರೆ, ಅದರಿಂದ ಎಳ್ಳಷ್ಟಾದರೂ ತಿಳಿವುಂಟಾಗಬಹುದು.

ವಿರಾ:—ಅಣ್ಣಾ! ನಾನು ನಿನಗೆ ಪ್ರತಿಹೇಳಲಾರೆನು. ಆದರೂ, ಅಮ್ಮನನ್ನು ಒಮ್ಮೆ ಕೇಳಿ, ಸಮ್ಮತಿಕೊಟ್ಟರೆ ಬರುವೆನು, ಎಂತೂ ಇಂದಿನ ನಟನೆಯೇ ನಿಜವಾದ ವಿನಯರಪದಲ್ಲಿ ತಿರುಗುವಂತಾಗಲೆಂದು ಪ್ರಾರ್ಥಿಸುವೆನು (ಎಂದು ಹೇಳಿ ಹೊರಟುಹೋದಳು,)

ಪ್ರಿಯಸೋದರೀ ಸೋದರರೆ!

ವಿವೇಚನೆಗೂ, ವಿಡಂಬನೆಗೂ ಇರತಕ್ಕ ಅಂತರಗಳೆಷ್ಟೆಂಬುದನ್ನು ತಿಳಿಯಲಾಯ್ತಲ್ಲವೇ? ತುಂಗಭದ್ರೆಯ ವಿಡಂಬನೆ, ಆಧುನಿಕ ಕಲಿಮಹಿಮಾಬದ್ಧ ಮಹಿಳೆಯರಲ್ಲಿ ಎಷ್ಟುಮಂದಿಯಲ್ಲಿ ಅಡಕಿರಿದಿಲ್ಲ? ವಿರಾಗಿಣಿಯ ವಿವೇಚನೆ, ಮನಸ್ಥೈರ್ಯಾದಿಗಳು ಎಷ್ಟುಮಂದಿಗಳಲ್ಲಿವೆ? ತಿಳಿದು ನೀವು ನೀವುಗಳೇ ಅವವುಗಳ ಅಂತರಾಂತರವನ್ನು ವಿಮರ್ಶಿಸಿ, ನಿಮ್ಮ ಅಶ್ರಿತಮಿತ್ರವರ್ಗವನ್ನೂ ಮೇಲ್ಮೆಗೆ ತರಲು ಪ್ರಯತ್ನಪಡಲಾರಿರೇನು?

---

|| ಶ್ರೀಃ ||

## ಏಕಾದಶ ಪರಿಚ್ಛೇದ.

(ಗುಣಾನುವಾದ)

ರಾತ್ರಿ ಊಟವಾದಮೇಲೆ ರಘುನಾಥನು ನಾಟಕಕ್ಕೆಂದು ಹೊರಟನು ವಿರಾಗಿಣಿಯನ್ನು ಕಳುಹಿಸಲು ತಾಯಿಗೆ ಹೇಳಿದನು. ಲಕ್ಷ್ಮೀದೇವಮ್ಮನು ಮೊದಲು ಶಂಕಿಸಿದಳು. ಆದರೆ, ಮಗನ ಸೂಚನೆಗೆ ಸಮ್ಮತಿಸಿ ಕಳುಹಿಸಿದಳು. ವಿರಾಗಿಣಿಯೂ ನಿರ್ವಾಹವಿಲ್ಲದೆ ಹೊರಟಳು. ತುಂಗಭದ್ರೆ ಓಡಿಬಂದು, "ಅಣ್ಣಾ! ಅತ್ತಿಗೆ ಬರುವುದಿಲ್ಲವಂತೆ, ಇಷ್ಟರಾದವರನ್ನು ಜೊತೆಗೊಂಡು ಹೋಗಬಹುದಂತೆ ?

ರಘುನಾಥನು ನಕ್ಕು, "ಸಂತೋಷ! ನನಗೆ ಬೇಕಾಗಿದ್ದುದೂ ಅಷ್ಟೇ! ಮನೆಯಲ್ಲಿಯೇ ಸುಖವಾಗಿರಲಿ." ಎಂದು ಹೇಳಿ ಮುಂದಾದನು. ಹಾದಿಯಲ್ಲಿ ಮತ್ತಾವ ಹೆಚ್ಚುಗೆಯೂ ನಡೆಯಲಿಲ್ಲ. ರಘುನಾಥನೂ ವಿರಾಗಿಣಿಯೂ, ಮೌನವಾಗಿ ನಡೆತರುತ್ತಿದ್ದರು. ತುಂಗಭದ್ರೆಯು ಅಭಿಮಾನಾನಂದೋದ್ರೇಕಗಳಿಂದ ಮದಿಸಿದ ಮದ್ದಾನೆಯಂತ ಜಗ್ಗುಹಾಕುತ್ತ ನಡೆತರುತ್ತಿದ್ದಳು, ಎಂತೂ, ಮೂವರೂ ನಾಟಕಶಾಲೆಯ ಹೊರಬಾಗಿಲಬಳಿಗೆ ಬಂದರು. ಅಷ್ಟರೊಳಗೆ ಬಾಗಿಲಲ್ಲೇ ಇದಿರುನೋಡುತ್ತ ನಿಂತಿದ್ದ ಮೋಜುಗಾರ ಮಕರಂದನು, ತುಂಗಭದ್ರೆಯಕಡೆಗೆ ಒಮ್ಮೆ ಕಟಾಕ್ಷಬಾಣ

ವನ್ನೆ ಸೆದು,—ರಘುನಾಥನ ಕೈವಿಡಿದು, "ಪರಮಾನಂದ! ಅಪೂರ್ವಲಾಭ!! ಬಹಳಸಂತೋಷ!! ಬರುವಿರೋ ಇಲ್ಲವೋ ಎಂದೇ ಚಿಂತಿಸುತ್ತ ನಿಂತಿದ್ದೆನು" ಎಂದನು.

ರಘು:—ಭಲೆ! ನನಗಾಗಿ ನಿರೀಕ್ಷೆ! ಇನ್ನೂ ನಾಟಕಾರಂಭವಾಗಿಲ್ಲ?

ಮಕ:—ಸುಳ್ಳಲ್ಲ, ನಿಜವಾಗಿಯೂ, ನಿಮ್ಮ ನಿರೀಕ್ಷೆಯಿಂದಲೇ ತಡೆದಿದ್ದುದು! ಎಲ್ಲರೂ ಬಂದಿರುತ್ತಾರೆಯೆ? (ಎಂದು ಒಮ್ಮೆ ವಿರಾಗಿಣಿಯನ್ನು ನೋಡಿ ಬೆರಗಾಗಿ ನಿಂತನು.)

ರಘು:—ಇವರಿಬ್ಬರುಮಾತ್ರವೇ ಬಂದಿರುವರು,

ಮಕ:—(ಮತ್ತೊಮ್ಮೆ ಕುತೂಹಲದೊಡನೆ ವಿರಾಗಿಣಿಯನ್ನು ನೋಡಿದನು, ಆದರೆ ಆತನ ದೃಷ್ಟಿಗೆ ವಿರಾಗಿಣಿಯ ಮುಖವು ಬೀಳದೆ, ಅೂಳಾ ಅಪ್ರಸನ್ನತೆಯನ್ನು ಸೂಚಿಸುವ ಹಿಂದಲೆಯೇ ಬಿದ್ದುದು. ಮಕರಂದನು ಅಪ್ರತಿಭನಂತಾಗಿ,) ಇದೇಕೆ ಕುಟುಂಬವು ಬಂದಿಲ್ಲ? ಈಕೆಯಾರು?

ರಘು;—ಈಕೆ ನನ್ನ ತಂಗಿ! ಒಳಗೆ ಹೆಂಗಸರಿಗೆ ಬೇರೆ ಸ್ಥಳವಿದೆಯಲ್ಲವೇ?

ಮಕ:—"ನಿಮಗೆಂದೇ ಪ್ರಶಸ್ತವಾದ ಸ್ಥಳವನ್ನು ಬಿಟ್ಟಿರುವೆನು. ಬರಬಹುದು" (ಎಂದು ಮೂವರನ್ನು ಒಳಗೆ ಕರದೊಯ್ದು, ನಾಟ್ಯರಂಗಕ್ಕಿದಿರಾಗಿ ಅಡ್ಡಗಟ್ಟೆಯನ್ನು ಕಟ್ಟಿ, ಕುರ್ಚಿಗಳನ್ನು ತಂದಿಟ್ಟು ಸಿದ್ಧಪಡಿಸಿದ್ದ ಸ್ಥಳದಲ್ಲಿ ನಿಲ್ಲಿಸಿ, ರಘುನಾಥನನ್ನು ಕುರಿತು,—"ಇದೇ ತಮಗೆ ಕುರ್ಚಿ" ಎಂದೊರೆದು ತುಂಗಭದ್ರೆಯನ್ನು ನೋಡಿ,) "ನೀವೂ ಈ ಕುರ್ಚಿಗಳಮೇಲೆ ಕುಳ್ಳಿರಬಹುದು."

ತುಂಗ:—(ನಗುತ್ತ ತಲೆದೂಗಿದಳು.)

ವಿರಾ:—(ಕುರ್ಚಿಯನ್ನು ಬಿಟ್ಟು ನೆಲದಮೇಲೆ ಕುಳ್ಳಿರಹೋದಳು.)

ತುಂಗ:—ವಿರಾಗಿಣೀ! ಇತ್ತಬಂದು ಕುಳಿತುಕೊ, ಅಲ್ಲೇಕೆ ಹೋಗುವೆ?

ವಿರಾ:—ನನಗಿದೇ ಸುಖಾಸನವು.

ಮಕ:—ಪರಮಾನಂದ! ಈಕೆ ಹೇಳುವುದೇನು?

ರಘು:—ಸರಿಯಾಗಿಯೇ ಹೇಳಿರುವಳು. ನನಗೂ ಸಮ್ಮತವೇ!

ತುಂಗ.—(ಒಮ್ಮೆ ಮಕರಂದನನ್ನು ನೋಡಿದಳು, ಅದರ ಉದ್ದೇಶವೇನೆಂಬುದೇ ನಮಗೆ ತಿಳಿಯದು. ಎಂತೂ, ಆ ಕಟಾಕ್ಷ ಪ್ರಭಾವದಿಂದ ಮಕರಂದನು ನಗುತ್ತ, ಅಮ್ಮಾ! ತಾಳಿರಿ, ತಾಳಿರಿ!! ಆ ಸ್ಥಲದಲ್ಲಿ ಕುಳಿತುಕೊಳ್ಳಬೇಡಿರಿ, ಆ ನೆಲವು ಶುದ್ಧವಾಗಿಲ್ಲ. ಸ್ವಲ್ಪ ನಿಧಾನಿಸಿರಿ, ಕಾಲುಮಣೆಯನ್ನಾದರೂ ತರಿಸಿಡುತ್ತೇನೆ. (ಎಂದು ಹೇಳಿ ಕೂಡಲೇ ಕಾಲು ಮಣೆಯನ್ನು ತರಿಸಿ ಮುಂದಿಟ್ಟನು.)

ವಿರಾ:—(ದುಗುಡದಿಂದ ರಘುನಾಥನನ್ನು ನೋಡಿ) ಅಣ್ಣಾ! ನನಗೀ ಲೋಭಶೃಂಖಲೆಯೇಕೆ? ಈಗಲೂ ನನ್ನನ್ನು ಇಲ್ಲಿಂದ ಪಾರುಮಾಡಲಾರೆಯಾ?

ರಘು:—ತಾಯಿ! ನಿಧಾನಿಸು, ಒಮ್ಮೆ ನಿನ್ನ ಸಂಕಲ್ಪ, ವಾಗ್ದಾನಗಳನ್ನು ಸ್ಮರಿಸು. ಹಾಗೂ ಸಮ್ಮತವಿಲ್ಲದಿದ್ದರೆ ನಡೆ! ನಾನೂ ಬರುವೆನು. ಆದರೆ, ತುಂಗೆ ಬರುವಳೋ ಇಲ್ಲವೋ?

ತುಂಗ:—(ವಿರಾಗಿಣಿಯ ಕೈಹಿಡಿದು) ವಿರಾಗಿಣಿ! ಇಷ್ಟುದೂರ ನೀನು ಬಂದುದೇಕೆ? ನನಗಿದರ ಸಾಧಕ ಬಾಧಕಗಳನ್ನು ತಿಳಿಸಲಿಕ್ಕೆಂದಲ್ಲವೇ? ಇದೇಕೆ ಹೀಗಾದೆ! ನನ್ನಾಣೆ!

ಇಂದು ಎಷ್ಟು ಕಷ್ಟವಾದರೂ ಸಹಿಸಿಕೊಂಡಿರು; ಹೋಗಬೇಡ.

ವಿರಾ:—ತುಂಗೆ! ಮೊದಲೇ ಹೇಳಲಿಲ್ಲವೇ? ನಾಟಕವೇ ವಿಷಮಯವೆಂದು ಆಗಲೇ ಮೊಳಕೆಯಲ್ಲಿಯೇ ವಿಷವು ತಲೆದೋರುತ್ತಿದೆ. ನನಗೆಂತೂ ಇದು ಸಹ್ಯವೆನ್ನಿಸದು!

ಮಕ:—(ರಘುನಾಥನನ್ನು ನೋಡಿ) ಪರಮಾನಂದ! ಈಕೆ ಹೇಳುವುದೇನು?.

ರಘು:—ಇಲ್ಲಿರಲಿಷ್ಟವಿಲ್ಲವೆಂದೂ, ಹೊರಟುಹೋಗುವೆನೆಂದೂ ಹೇಳುವಳು.

ಮಕ:—ಅದೆಂದೂ ಆಗದು! ನಾಟಕ ಪ್ರಾರಂಭವಾಗುವ ಸಮಯ, ಈಗ ಆರನ್ನೂ ಹೊರಗೆ ಬಿಡಗೊಡಲಾರೆವು.

ರಘು:—(ವಿರಾಗಿಣಿಯನ್ನು ನೋಡಿ) ತಾಯಿ! ಯತ್ನವಿಲ್ಲ; ನಿನ್ನ ಮನವೊಲ್ದಂತೆ ನೆಲದಮೇಲೆಯೇ ಕುಳ್ಳಿರು, ಆರ ಅಡ್ಡಿಯೂ ಇಲ್ಲ.

ಮಕ:—"ನಾನಿನ್ನು ಹೊರಡುವೆನು" (ಎಂದೊರೆದು ಮುಂವಕ್ಕಡಿಯಿಟ್ಟನು. ಮುಂದಾಗುತ್ತಿದ್ದವನ ದೃಷ್ಟಿಯು ಒಮ್ಮಿಂದೊಮ್ಮೆಗೇ—ವಿರಾಗಿಣಿಯಮೇಲೆ ಬಿದ್ದಿತು. ಅವಳಾ ಮಂದಸ್ಮಿತ ಮುಖಾರವಿಂದವು ಅವನಾಕಲಂಕದೃಷ್ಟಿಯಲ್ಲಿ ನಟ್ಟುಹೋಗಲು, ದೃಷ್ಟಿಯನ್ನು ತನ್ನ ಕಡೆಗೆ ಎಳೆದುಕೊಳ್ಳುವುದಕ್ಕೇ ಆತನಿಗೆ ಕಷ್ಟವಾಯ್ತು. ಆದರೆ ಏನುಮಾಡುವನು? ಪಾಪ! ಬೇಗನೆ ಹೋಗಿ ನಾಟಕರಂಗವನ್ನು ಸೇರಲೇಬೇಕು. ಅಡಿಗಡಿಗೆ ತಿರುತಿರುಗಿ ನಾಟ್ಯರಂಗವನ್ನು ಸೇರಿದನು.)

ರಘುನಾಥನು ಕುರ್ಚಿಯಮೇಲೆ ಕುಳಿತನು. ತುಂಗಭದ್ರೆ ಯೂ ತನಗಾಗಿ ಬಿಟ್ಟಿದ್ದ ಕುರ್ಚಿಯಮೇಲೆ ಕುಳಿತಳು, ವಿರಾ ಗಿಣಿಮಾತ್ರ, ಕಾಲುಮಣೆಗೆ ಬೆನ್ನುತಗಲಿಸಿ, ನೆಲದಮೇಲೆಯೇ ಕುಳಿತು, ಕ್ಷಮಾವಲೋಕನದಲ್ಲಿದ್ದಳು.

ನಾಟಕಕ್ಕೆ ಇನ್ನೂ ಹತ್ತಿಪ್ಪತ್ತು ನಿಮಿಷಗಳು ಸಾವಕಾಶ ವಿದ್ದಿತು ತುಂಗಭದ್ರೆಯ ಮುಖಮುದ್ರೆಯನ್ನೂ ಅವಳಾಸ್ಥಿತಿ ಯನ್ನೂ ನಾವೆಂತೂ ಇಲ್ಲಿ ವಿವರಿಸಲಾರೆವು. ಹೇಗೂ ಅವಳು ನಾಲ್ಕಾರುಕಡೆಗಳನ್ನೂ ನೋಡುತ್ತಲೇ ಕುಳಿತಿದ್ದಳು. ನೋಡು ತ್ತಿದ್ದಂತೆಯೇ ಒಮ್ಮೆ ಘಟ್ಟಿಯಾಗಿ, "ತಾರಾಮಣಿ" ಅಲ್ಲೆಲ್ಲಿ ಹೋಗುವೆ? ಇತ್ತಬಾ' ಎಂದು ಕೂಗಿದಳು. ತುಂಗೆಯ ಕೂಗು ನಿಲ್ಲುವುದರೊಳಗಾಗಿ ಲಾವಣ್ಯಮಯಿಯಾದ ಷೋಡಶಿಯೊಬ್ಬಳು ನಗುನಗುತ್ತ ಬಂದು ತುಂಗೆಯಮುಂದೆ ನಿಂತಳು.

ತುಂಗ —(ನವಯುವತಿಯ ಕರವನ್ನು ಹಿಡಿದು ಕೆಲದಲ್ಲಿದ್ದ ಕುರ್ಚಿ ಯಮೇಲೆ ಕುಳ್ಳಿರಿಸಿ) ತಾರಾ! ಏಕೆ ಹೊಸಬಳಾಗಿಬಿಟ್ಟೆ? ಆರೇಳುತಿಂಗಳಿಂದ ನಿನ್ನ ಮುಖವೇ ಕಾಣುತ್ತಿಲ್ಲವೇ?

ತಾರಾ:—ತುಂಗಮ್ಮ! ಈಚೆಗೆ ನದೀ ದೇವಸ್ಥಾನಗಳಿಗೂ, ನಾನು ಹೋಗುವುದಿಲ್ಲ. ನನಗಾವುದೂ ಬೇಕಾಗಿಲ್ಲ. ಆದರೆ, ಇಂದು ಅಣ್ಣನು ಬಿಡದೆ ಬಲಾತ್ಕರಿಸಿ ಕರೆತಂದನು,

ತುಂಗ:—ಅದೇನು' ಅಷ್ಟು ಷೈರಾಗ್ಯ!

ತಾರಾ:—ಮತ್ತೇನು? ಹೆಂಗಸಿಗೆ ಮೇಲಾದ ತೊಡವೇ ಮರೆಯಾ ಯ್ತೆಂದರೆ ಮತ್ತಾವ ನಲವುಂಟು?

ತುಂಗ:—ಮರೆಯಾಗಿ ಹೋದುದೇನು?

ತಾರಾ.—ಏನೆಂಬುದನ್ನು ನೀನೇ ವಿಚಾರದಿಂದ ತಿಳಿಯಬೇಕು.

ಸ್ತ್ರೀಯರಿಗೆ ಪತಿಯೇ ಸಮಸ್ತಾಭರಣವಲ್ಲವೇ ? ಅಂತಹ ಅನರ್ಘಾಭರಣವೇ ಮರೆಯಾಗಿರುವುದೆಂದರೆ—

ವಿರಾ.—(ಕೌತೂಹಲಾಧಿಕ್ಯದಿಂದ ತಲೆಯೆತ್ತಿ ನೋಡತೊಡಗಿದಳು.)

ತುಂಗ·—ಏಕೆ ? ನಿನ್ನ ಗಂಡನು ಇಲ್ಲಿಲ್ಲವೇ ?

ತಾರಾ.—ಇಲ್ಲದಿದ್ದುದರಿಂದಲ್ಲವೇ ನನಗಿಷ್ಟು ಕಳವಳವು ? ಊರನ್ನು ಬಿಟ್ಟು ಹೋದುದಕ್ಕೂ ಕಾಗದವಿಲ್ಲ ಕ್ಷೇಮವಾರ್ತೆಯನ್ನೂ ಅಟ್ಟದೆ, ಅಜ್ಞಾತವಾಸದಲ್ಲಿರುವರು ಇನ್ನಿವಕ್ಕೂ ಹೆಚ್ಚಾದ ಚಿಂತೆಯೇನುಂಟು ?

ತುಂಗ:—ಹಾಗಾಗಲು ಕಾರಣವೇನು ?

ತಾರಾ·—ಕಾರಣವೇ ? ನನ್ನ ದುರದೃಷ್ಟ ! ಮನೆಯವರ ಒಂದೆರಡು ಮಾತುಗಳೇ ಸಾಕು ! ನಮ್ಮ ಮನೆಯವರ ಸ್ಥಿತಿಯೇನೆಂದು ಹೇಳಲಿ ? ತುಂಗಮ್ಮ ! ಆ ನಮ್ಮ ಹಿರಿಯಣ್ಣನು ಅಳಿದುಹೋದನು, ಮುಪ್ಪಿನ ತಾಯ್ತಂದೆಗಳು, ಮಗನಳಿಂದೆ ಕುರುಡರಂತಾಗಿರುವರು. ಸಾಲದುದಕ್ಕೆ ಅಳಿಯನ ಅಜ್ಞಾತವಾಸದ ತಳಮಳವೂ ಸೇರಿದೆ. ಪಾಪ ! ನಮ್ಮ ಕಿರಿಯಣ್ಣನ ಪಾಡು ಹೇಳತೀರದು. ಆ ಹಿರಿಯಣ್ಣನೂ ಬದುಕಿದ್ದ ಪಕ್ಷದಲ್ಲಿ ನಮಗೆಷ್ಟೋ ಲೇಸಾಗಿತ್ತು: ನಮ್ಮ ದೌರ್ಭಾಗ್ಯಕ್ಕೆ ಆರೇನು ಮಾಡುವರು ?

ತುಂಗ:—(ಶಠಭಾವದಿಂದ) ನಿಮ್ಮ ದುರದೃಷ್ಟವೇ ? ಆ ನಿರ್ಭಾಗ್ಯೆ–ನಭೆಯ ದುರದೃಷ್ಟವೆಂದೇಕೆ ಹೇಳಲಿಲ್ಲ ? (ವಿರಾಗಿಣಿ ಮರ್ಮಾಹತೆಯಾದಳು. ಆದರೂ ತಾಳ್ಮೆಯಿಂದ ಉಸಿರ್ಗರೆಯದೆ ಕುಳಿತಿದ್ದಳು)

ತಾರಾ.—(ಕಣ್ಣೀರುತುಂಬಿ) ತಾಯಿಾ! ಹಾಗೆನ್ನದಿರು: ಪಾಪ! ಆ ನಮ್ಮ ಅತ್ತಿಗೆಯಲ್ಲಿ ದೋಷವೇನು? ಅವಳೇನಾದರೂ ಬರಲೊಲ್ಲೆನೆಂದಿದ್ದಳೇ? ಆಗಲೇ ಅವಳು ನಮ್ಮಲ್ಲಿ ತೋರಿದ್ದ ಅನಿಮಿತ್ತ ಪ್ರೇಮವನ್ನು ನಾವೆಂದಿಗಾದರೂ ಮರೆಯಬಲ್ಲೆವೆ? ನಮ್ಮ ಹಿರಿಯಣ್ಣನು ತಾನು ಸಾಯುವಾಗಲೂ ಅವಳನ್ನೇ ನೆನೆನೆನೆದು ಅಳುತ್ತಿದ್ದುದನ್ನು ನಾವು ಹೇಗೆ ಮರೆಯುವೆವು? ನಮ್ಮ ಅದೃಷ್ಟದಲ್ಲಿ ಪವಿತ್ರಮೂರ್ತಿಯಾದ ನಮ್ಮತ್ತಿಗೆಯ ಸಹವಾಸವಾದರೂ ಲಭಿಸುವಂತಿದೆಯೋ ಇಲ್ಲವೋ? ಅಣ್ಣನಳಿದರೂ, ಅತ್ತಿಗೆಯಾದರೂ ಇಲ್ಲಿರಬಾರದೇಕೆ? ಅವಳಿಗೂ ಅಂತಹ ಸ್ಥಾನಭ್ರಷ್ಟತೆಯೇ? ತುಂಗಮ್ಮ! ನಮ್ಮ ಕಿರಿಯಣ್ಣನು ತನ್ನ ಅತ್ತಿಗೆಯಲ್ಲಿ ಎಷ್ಟು ಗೌರವವಿಟ್ಟಿರುವನೆಂಬುದನ್ನು ನಾನೆಂತು ತಿಳಿಯಹೇಳಲಿ? ಅವಳ ನೆಲೆಯನ್ನು ತಿಳಿದು ಹೇಳುವ ಪುಣ್ಯಾತ್ಮರಾರಾದರಿರುವರೇ?

ತುಂಗ:—ಅದಿರಲಿ; ನಿಮ್ಮ ಅಣ್ಣನೇಕೆ ನಮ್ಮ ಮನೆಗೆ ಬರುವುದಿಲ್ಲ?

ತಾರಾ:—ಅಮ್ಮ! ಅವನಿಗೆ ಬಿಡುವೆಲ್ಲಿದೆ? ಮನೆಯಲ್ಲಿ ಶೋಕವ್ಯಾಕುಲದಿಂದ ಕಣ್ಗೆಟ್ಟಿರುವ ಮುಪ್ಪಿನ ತಾಯ್ತಂದೆಗಳ ಸೇವೆ; ಸಂಸಾರಚಿಂತೆ!! ನಾನೇನನ್ನು ತಾನೇ ಮಾಡಬಲ್ಲೆನು? ನನ್ನ ಕೈಯಲ್ಲಾಗುವ ಕೆಲಸಗಳನ್ನು ಮಾಡುವೆನು. ಮನದಳಲನ್ನು ಮುಚ್ಚಿಟ್ಟು ಅವರನ್ನು ಸಂತವಿಡಲಿಕ್ಕಾಗಿ ನಗುತ್ತಿರುವೆನು, ಎಷ್ಟೆಷ್ಟೋ ಹೇಳುವೆನು. ಆದರೂ ಅವರ ಅಳಲನ್ನು ಆರಿಸ-ತೀರಿಸಬಲ್ಲೆನೇ? ಅಣ್ಣನೆಂತೂ ಸುಮ್ಮನಿರಲೊಲ್ಲನು. ಅಡಿಗಡಿಗೆ ಆಸೆಯಿಟ್ಟು ತಡೆಯುವನು!

ಅತ್ತ ಸರ್ಕಾರದ ಕೆಲಸ, ಇತ್ತ ಮನೆಗೆಲಸ. ಸಾಲದು ದಕ್ಕೆ ಕೊಸರಾಗಿ ಮೇಲೆಮೇಲೆ ಬೀಳುತ್ತಿರುವ ಕಷ್ಟವದಕೆ ! ಈ ವೇಳೆಯಲ್ಲಿ ಅವನ ಮನಸ್ಸಿಗೆ ಉತ್ಸಾಹವನ್ನೂ ನಮ ಗೆಲ್ಲರಿಗೂ ಸಂತೋಷವನ್ನೂ ಉಂಟುಮಾಡುವಂತೆ ಚಿಕ್ಕ ಅತ್ತಿಗೆಯಾದರೂ ಬರುವಳೆಂದರೆ ಸದ್ಯಕ್ಕೆ ಬಾರಳು. ಇನ್ನು ದೊಡ್ಡವಳ ನೆಲೆಯನ್ನಾದರೂ ತಿಳಿಯಬರುವುದೊಂದು—

ತುಂಗ:—(ಹುಬ್ಬುಗಂಟಿಕ್ಕಿ) ಸಾಕು; ನಿಲ್ಲಿಸು ತಾರಾ ! ಸತ್ತು ಕೆಟ್ಟು ಹೋಗುವರೆಲ್ಲರೂ ಹೋಗಲಿ ; ಹೋದವರಿಗಾಗಿ ಅಳುವು ದೇಕೆ? ಇದ್ದಷ್ಟು ದಿನಗಳೂ ಸುಖಸಂತೋಷದಲ್ಲಿದ್ದರೆ ಸರಿ!

ವಿರಾ:—ತುಂಗ ! ಈ ಮಾತು ಹೆಂಗಸರ ಬಾಯಿಂದ ಎಂದೂ ಬರ ಬಾರದು. ಲೋಕದಲ್ಲಿ-ತಾಯಿ, ತಂದೆ, ಅಕ್ಕ, ಅಣ್ಣ, ತಂಗಿ, ತಮ್ಮ, ಮಾವ-ಭಾವ ಮುಂತಾದ ನಂಟರಿಷ್ಟರುಗ ಳಿಂದಾಗುವ ಸುಖಕ್ಕೆ ಎಲ್ಲೆಯುಂಟು. ಪತಿಯ ವಿಚಾರವು ಹಾಗಲ್ಲ. ಜೀವಿಸಿರುವಾಗಲೂ ಸತ್ತಮೇಲೆಯೂ ಆತನಿಂದ ದೊರೆಕೊಳ್ಳಬಹುದಾದ ಸುಖಾನಂದವೇ ನಿತ್ಯಾನಂದವೆನಿಸು ವುದು !! ಅದೇ ಅನಂತವಾದುದು. ಸತಿಯ ಸರ್ವಸ್ವವೂ ಅವಳ ಕೈಹಿಡಿದ ಸ್ವಾಮಿಯೇ ಅಲ್ಲದೆ ಬೇರಿಲ್ಲ. ಅಂತಹ ಸತೀಜೀವನಸಾರ ಸರ್ವಸ್ವಕ್ಕೆ, ತಮ್ಮ ಭೋಗ, ಸುಖಸಂ ಪದಗಳೆನಿಸುವ ತನುಮನೋಧನಗಳನ್ನು ಸಮರ್ಪಿಸಿಯೂ ಆತನ ಪರೋಕ್ಷದಲ್ಲಿ ಆತ್ಮನಿಗೆ ಅಹಿತವನ್ನುಂಟುಮಾಡುವ ದುರ್ವಿಷಯಕ್ಕೆ ಗಮನಿಸಬಹುದೇ ?

ತಾರಾ:—(ಸಂಭ್ರಮದಿಂದ ತಲೆಯೆತ್ತಿ ವಿರಾಗಿಣಿಯನ್ನು ನೋಡಿ ದಳು. ಅವಳಾ ಆಕೃತಿ ಸ್ಥಿತಿಗಳನ್ನು ನೋಡಿ, ಬೆರಗಾಗಿ ತುಂಗೆಯನ್ನು ಕೇಳಿದಳು) "ತುಂಗಮ್ಮ ಇವಳಾರು ?"

ತುಂಗ:—" ಅವಳೊಬ್ಬ ವಿರಕ್ತೆ " ನಿನ್ನ ಅತ್ತಿಗೆಯ ಸಹಾಧ್ಯಾಯಿನಿಯಂತೆ: ಅವಳಾವಾಗಲೂ ವಿರಕ್ತಳಾದ ತನ್ನ ಮರುಳ್ತನಕ್ಕೆ ಎಲ್ಲರನ್ನೂ ಸೆಳೆದುಕೊಳ್ಳಬೇಕೆಂದಾಡುವಳು.

ತಾರಾ:—(ತಲೆದೂಗುತ್ತ) ಮರುಳ್ತನದ ಮಾತಲ್ಲ. ಆ ಮರುಳೂ ಡೆಯನ ಮನೋರಮೆಯಾಡುವ ಮಾತೇ! ಅವರೀತಿ ಸೀತಿಗಳಿಂದ ಕೂಡಿದ ಮಾರ್ಗವು ನಮಗಾವಶ್ಯಕವ್ರೋ ಅದೇ ಮಾತೇ ಹೊರಟಿದೆ.

ತುಂಗ:—ವಿರಾಗಿಣಿ' ಇವಳಾರೆಂಬುದನ್ನು ಬಲ್ಲೆಯೊ'

ವಿರಾ.—ನಭೆಯ ನಾದಿನಿ, ಇವಳಲ್ಲವೇ ವೇಣುಗಂಗಾ-ಹರೀಶ್ವರ-

ತುಂಗ—ಅಹುದಹುದು, ಅವರ ಮಗಳೇ! ಅವಳೇ.

ವಿರಾ:—ಇವಳ ಅಣ್ಣನು ಈಗ ಆವ ಉದ್ಯೋಗವಲ್ಲಿರಬಹುದೋ?

ತಾರಾ:—ತಾಲ್ಲೂಕಿನ ಹೆಡ್ಮುನಿಷಿಯಾಗಿರುವನು. ತಾಯಿಾ! ನಮ್ಮ ಅತ್ತಿಗೆ ಎಲ್ಲಿರುವಳೆಂಬುದನ್ನು ಹೇಳಬಲ್ಲಿರಾ?

ವಿರಾ.—ಧಾರಾಳವಾಗಿ ಹೇಳಬಹುದು.

ತಾರಾ:—ಹಾಗಿದ್ದರೆ ದಯವಿಟ್ಟು ಈಗಲೇ ತಿಳಿಯಹೇಳಿರಿ?

ವಿರಾ:—ಸಹೋದರಿ, ಅದನ್ನು ಈಗಲೇ ಹೇಳಲಳವಲ್ಲ; ಮತ್ತೊಮ್ಮೆ ಕಂಡಂದು ಎಲ್ಲವನ್ನೂ ತಿಳಿಯ ಹೇಳಲಾದೀತು?

ತಾರಾ:—ಮತ್ತೆ ನಿಮ್ಮನ್ನು ನಾನೆಲ್ಲಿ ಕಾಣಲಿ?

ತುಂಗೆ:—ಅದೇಕೆ? ತಾರೆ ನಮ್ಮ ಮನೆಗೆ ಬಂದರಾಗದೊ?

ತಾರೆ:—ಈಕೆ ನಿಮ್ಮ ಮನೆಯಲ್ಲಿಯೇ ಇರುತ್ತಾರೆಯೇ?

ತುಂಗ:—ಅಹುದು.

ತಾರಾ:—ಎಷ್ಟುದಿನಗಳಿಂದ?

ತುಂಗ:—ಆರೇಳು ತಿಂಗಳಾದುವು.

ತಾರಾ.—ಮರೆತಿದ್ದೆನು, ನಿಜ. ನನ್ನ ಸ್ವಾಮಿ ದೇಶಯಾತ್ರೆಗೆ ತೆರಳಿದ ಬಂದೆರಡು ವಾರದೊಳಗಾಗಿಯೇ ಇದೊಂದು ಸುದ್ದಿಯೂರೊಳಗೆಲ್ಲಾ ಹರಡಿದ್ದಿತು. ಈಗಲೇ ಇವರೆಲ್ಲಿಗೂ ಹೋಗುವರಲ್ಲವಷ್ಟೆ ?

ತುಂಗೆ:—ಇಲ್ಲ. ಈಗಲೇ ಹೊರಡುವ ಆಲೋಚನೆಯಿಲ್ಲ.

ತಾರಾ·—(ವಿರಾಗಿಣಿಯನ್ನು ನೋಡಿ) ತಾಯಿ! ಇನ್ನು ಬಂದೆರಡು ವಾರಗಳೊಳಗೆ ನಾನು ತಮ್ಮನ್ನು ಕಾಣುವೆನು ನಿಮ್ಮ ಸತ್ಸಂಗತಿಯಿಂದಾದರೂ ಮನದಳಲು ಶಾಂತವಾದೀತು ?

ತುಂಗ—(ತಾರಾಮಣಿಯ ಬೆನ್ನ ತಟ್ಟಿ) ನಿನ್ನ ರಗಳೆ ಇನ್ನು ಸಾಕು? ಇತ್ತ ನೋಡು ? ತಾರೇ! ನಾಟಕಾರಂಭವಾಯ್ತು. ಇದೊ ಇದೊ ಸೂತ್ರಧಾರನು ಬರುವುದನ್ನು ನೋಡುನೋಡು !! ತೆರೆಯನ್ನು ಹಾರಿಸಿ, ಬಂದೇ ಬಂದನು. (ಎಂದು ಹಾರಿ ಹಾರಿ ನೋಡುತ್ತ ಕುಳಿತಳು.)

(ನೋಡುತ್ತಿದ್ದಂತೆಯೇ ಸೂತ್ರಧಾರನು ನಾಟ್ಯರಂಗದಲ್ಲಿ ಬಂದು ನಿಂದವನು ಒಮ್ಮೆ, ತುಂಗಭದ್ರೆಯಕಡೆಗೆ ಕಟಾಕ್ಷ ಬಾಣವನ್ನು ಬೀರಿದನು; ಅಷ್ಟಕ್ಕೇ ಸಾಲಲಿಲ್ಲ. ಅದೇ ಬಾಣವೇ ಮುಂದಕ್ಕಡರಿ, ವಿರಾಗಿಣಿಯನ್ನು ಸತ್ಕರಿಸಲು ಹೋಯ್ತು; ಆ ತೆರದ ಸತ್ಕಾರವು ವಿರಾಗಿಣಿಯನ್ನು ಪ್ರಸನ್ನೆಯನ್ನಾಗಿಮಾಡಿಕೊಳ್ಳಲಾರದೆ, ತಿರಸ್ಕೃತವಾಗಿ ಮರಳಬೇಕಾಯ್ತು! ಕಡೆಗೆ, ಸೂತ್ರಧಾರನು ಕಾರ್ಯತತ್ಪರನಾದನು.)

ತುಂಗ:—(ತಾರಾಮಣಿಯ ಕೈಯನ್ನು ಚುಚ್ಚಿ) ಎಲ್ಲಿನೋಡುವೆ ? ತಾರೆ! ಇತ್ತಲಿದೋನೋಡು; ಸೂತ್ರಧಾರನ ಅಂದಚೆಂದ,

ಭಾವಭಾವ, ವಿಲಾಸವಿಭ್ರಮಾದಿಗಳ ಅಭಿನಯನಗಳನ್ನಾದರೂ ನೋಡುನೋಡು !!! ಆ ಗಾನದ ಸೊಬಗನ್ನಾದರೂ ಕಿವಿಗೊಟ್ಟುಕೇಳು, ಇವನಿಗೆ ಸರಿಯಾದ ನಟಿಯೇ ಇಲ್ಲ.

ತಾರಾ —ನನೆಗಿದರಲ್ಲಿ ಅಭಿರುಚಿಹುಟ್ಟಿಲ್ಲ ; ನಾಟಕಕ್ಕೆ ನಾನೆಂದೂ ಬಂದಿಲ್ಲ, ಹೀಗಿರುವೆನಗೆ ಆವುದು ಸೊಗಯಿಸುವುದು ? ಮನೆಯಲ್ಲಿಯೇ ಇದ್ದರೆ, ತಾಯ್ತಂದೆಗಳ ಬಳಿಯಲ್ಲಿ, ಎಷ್ಟೋ ಕೆಲಸಗಳನ್ನು ಮಾಡಬಹುದಾಗಿದ್ದಿತು.

ತುಂಗೆ:—ಬಂದುದಕ್ಕೆ ನಿನಗಾದ ನಷ್ಟವೇನು ? ಕಣ್ಮನದಣಿವಂತೆ ನೋಟಗಳೂ ಬಂಧುದರ್ಶನವೂ ಆಗಲಿಲ್ಲವೊ ?

ತಾರಾ:—ಆಹಾ ! ಎಂತಹ ನೋಟವೊ ? ಏನು ದರ್ಶನವೊ ? ನನಗೆಂತೂ ಬಗೆಗೊಳ್ಳಲಿಲ್ಲ !

ತುಂಗ:—ಹೋಗಲಿ, ಆಮೇಲೆ ನೀನೇಹೇಳುವೆ ! ಈಗೇಕೆ ನಿಮ್ಮಣ್ಣನೆಲ್ಲಿ ?

ತಾರಾ.—ನಿರಂಜನನೊಡನೆ ಅತ್ತಕಡೆಯಲ್ಲಿ ಕುಳಿತಿರುವನು.

ತುಂಗ:—ಅವನೂ ಬಂದಿದ್ದಾನೆಯೋ ? ಸರಿ ; ಹಾಗಿದ್ದರೆ, ಇಂದು-ಎಲ್ಲರೂ ಒಂದೆಡೆಯಲ್ಲಿಯೇ ಸೇರಿದ್ದೇವೆ. (ವಿರಾಗಿಣಿಯನ್ನು ನೋಡಿ) ಏನಿದು ? ವಿರಾಗಿಣಿ ! ನೀನೇನುಮಾಡುತ್ತಿರುವೆ ? ಇತ್ತನೋಡಲಾಗದೇ ? ತಾರಾಮಣಿ, ತಿರುಗಿ ನೋಡಿದಳು, ಲೇಖನಕ್ರಿಯೆಯಲ್ಲಿ ನಿರತೆಯಾಗಿದ್ದ ವಿರಾಗಿಣಿಯನ್ನುನೋಡಿ ಬೆಜ್ಜರಗೊಂಡು "ತುಂಗಮ್ಮ ! ವಿರಾಗಿಣಿಯ ಕೆಲಸವನ್ನು ನೋಡು."

ತುಂಗ:—(ವಿರಾಗಿಣಿಯ ಬೆನ್ನಮೇಲೆ ಗುದ್ದಿ) ನೀನೇನು ! ಮಾನವೀವ್ಯಕ್ತಿಯಲ್ಲವೇ ? ವಿರಾಗಿಣಿ ; ನಿನಗೆ ಆಶೆಯೇ ಇಲ್ಲವೇ?

ಕಣ್ಣುಕಿವಿಗಳಿದ್ದೂ ವ್ಯರ್ಥವೇ? ಆವಾಗಲೂ, ಎಲ್ಲೆಲ್ಲಿಯೂ ಬರೆವುದೇಕೆಲಸವೇ? ಓದುಬರಹದ ಬ್ರಹ್ಮಪಿಶಾಚವೇ ನಿನ್ನನ್ನು ಹಿಡಿದಿದೆಯೇನೋ? ತಲೆಯೆತ್ತಿನೋಡು!

ವಿರಾ:—ಆವುದನ್ನು ನೋಡಬೇಕು?

ತುಂಗ:—ಆವುದನ್ನೇ! ಕಾಣುವದಿಲ್ಲವೆ? ನಾಟಕಾರಂಭವಾಗಿರುವುದು—

ವಿರಾ.—ಇವುಗಳಿಂದಾಗುವ ಪುರುಷಾರ್ಥಸಾಧನಗಳಾವುವು? ಏಕೆ ನೋಡಬೇಕು?

ತುಂಗ:—ನಿನ್ನ ವೇದಾಂತಗಳು ಮನೆಯಲ್ಲಾಗಲಿ, ಇತ್ತನೋಡು. ಈಗ ಹೇಳು. ಆ ನಟಿ-ಈ ಸೂತ್ರಧಾರನಿಗೆ ಸಾಟಿಯೇ?

ವಿರಾ·—(ತುಂಗೆಯನ್ನೊಮ್ಮೆ ವ್ಯಂಗ್ಯಭಾವದಿಂದ ನೋಡಿ ತಾರಾಮಣಿಯನ್ನು ಕುರಿತು, ಕಿರುನಗೆಯಿಂದ) "ತಾರಾ ಇವೆಲ್ಲವೂ ಬೂಟಕದಾಟಕವೇ ಅಲ್ಲದೆ ನಿಜವಾದುದಲ್ಲ. ಇಂದು ಸಾಯಂಕಾಲ ನಾನು ನಿಜವಾದ ಕಾಲಕೂಟದ ನೋಟವನ್ನೇ ನೋಡಿರುವೆನು—ಅದರಬೆಗಡೇ ನನಗಿನ್ನೂ ಕಡಿಮೆಯಾಗುವಂತಿಲ್ಲ! ಇದನ್ನೇಕೆ ನೋಡಲಿ?

ತಾರಾ.—ಅದೆಂತಹ ನೋಟವೊ?

ವಿರಾ.—ಮೊದಲೇ ಹೇಳಲಿಲ್ಲವೇ? ಕಾಲಕೂಟವೆಂದು!!

ತಾರಾ:—ಬೋಧೆಯಾಗಲಿಲ್ಲ.

ತಾರಾ:—ಒಂದು ಭಯಂಕರ-ಕರಾಳನೀವ್ಯಕ್ತಿಗೂ, ಮತ್ತೊಂದು ಕ್ಷಣಿಕರುಚಿರವ್ಯಕ್ತಿಗೂ, ನಡೆದ—ಪ್ರಣಯುಸವಾಗವು ವಿಪರ್ಯಾಸವೆ?

ತುಂಗೆ:—(ವಿವರ್ಣಮುಖದಿಂದ) "ಅದೆಲ್ಲಿ! ಹೇಗೆ? ನೀನೆಲ್ಲಿ ನೋಡಿದೆ?"

ವಿರಾ:—(ವ್ಯಂಗ್ಯಸ್ವರದಿಂದ) ಅದೆಲ್ಲಿನಡೆಯಿತೊ ?-ಹೇಗೋ ?-ಎಂತೂ-ಅದಕ್ಕಿದಿರಾಗಿಯೇ ನಿಂತುನೋಡಿದೆನು. ಆ ಮಿಂಚಿನ ಚಂಚಲತೆಯೇ ಈ ಸೂತ್ರಧಾರನ ವ್ಯಕ್ತಿತ್ವದಲ್ಲಿರಬೇಕು! ಅದೇ ಅಲ್ಲಿದ್ದ ಕರಾಳವ್ಯಕ್ತಿಯೇ ಇವನ ಕೆಲವನ್ನು ಸೇರಿದರೆ ಸಮಾನ ನಟಯಾಗಬಹುದು. ಅಷ್ಟೇ ಅಲ್ಲ; ಅದರಿಂದಾಗ.ವ ಸುಖ ಲಾಭಗಳು ಇದರಿಂದೆಂತಾಗುವುದು ? ತುಂಗೆ! ಮೊಳಕೆಯಲ್ಲಿಯೇ ವಿಷವನ್ನು ಕಾರುವ ಬೆಳಯನ್ನೇಕೆ ಬೆಳೆಯಿಸುವುದು ? ಈ ಕೆಟ್ಟನೋಟವನ್ನು ನೋಡಲಾರೆನು. (ಎಂದು ತಲೆಬಾಗಿಸಿದಳು.)

ತುಂಗ:—ಹೇಗಾದರೂ ಹೋಗಲಿ ಬಿಡು, ಅವಳನ್ನು ಮಾತನಾಡಿಸಬೇಡ. ತಾರಾ! ಈಗ ಹೊರಟುಹೋದ ಸೂತ್ರಧಾರನು ಯಾರೆಂದು ಗೊತ್ತೇ ?

ತಾರಾ:—ನನಗೇಕೆ ತಿಳವುದು ? ಪ್ರಕೃತವೇನಿದೆ ?

ತುಂಗ:—ಅವನೇ ಮಕರಂದಮಿತ್ರ ಬಾಬು!

ತಾರಾ:—ಏನು! ಚಂದ್ರಭಾಗೆಯ ಗಂಡನೇ ?

ತುಂಗ:—ಅಲ್ಲದಿನ್ನಾರು! ಈ ಆಕರ್ಷಣಾಯಂತ್ರವಾದರೂ ಮತ್ತೆಲ್ಲಿರುವುದು ? ಈ ಕರಕೌಶಲ್ಯವೂ, ಈ ಕಲಾಕೌಶಲ್ಯವೂ, ಈವಾಚಾಳಕತೆಯೂ ಅವನಲ್ಲೇ ಬೀಡುಗೊಂಡಿರುವುದಲ್ಲದೆ ಇನ್ನೆಲ್ಲಿರುವುವು? (ಇನ್ನೂ ಎಷ್ಟೆಷ್ಟೋ ವಿವಾದಗಳು ನಡೆಯುತ್ತಿದ್ದುವು. ಕ್ರಮಕ್ರಮವಾಗಿ ಕಥೆಯೂ ಮುಂದುವರೆದುದು. ವಿನೋದಚಂದ್ರವೇಷಧರನಾದ ಸಂತಾಪಕನೂ ಕಥಾಭಾಗವನ್ನು ರಂಜನಗೊಳಿಸುತ್ತ ಬಂದನು. "ಸಂತಾಪಕನ ವೇಷವು ಬಂದಾಗಲೆಲ್ಲಾ ತುಂಗೆಗಾಗುತ್ತಿದ್ದ ಆನಂ

ದೋದ್ರೇಕವು ಅವರ್ಣನೀಯವೇ ಸರಿ" ಎಂದಮೇಲೆ ಸಂತಾಪಕನ ಸ್ಥಿತಿಯನು ಹೇಳಬೇಕೆ? ಆದರೆ ಅಡ್ಡವಾಗಿ ಕಮಲಕುಮಾರೀ ವೇಷವೊಂದು ಮುಂದೆಬಂದು ನಿಂದಿತು.)

ತಾರಾ:—(ಅತ್ತಿತ್ತ ನೋಡದೆ ಕಮಲಕುಮಾರಿಯನ್ನೇ ನೋಡುತ್ತಿದ್ದಳು.)

ತುಂಗ:—ತಾರೆ! ಸಂತಾಪಕನೋ! ಸಾಕ್ಷಾದಿಂದ್ರನೋ!! ಆದರೂ ಅವನೆಷ್ಟು ಮೊರೆಯಿಟ್ಟರೂ, ಎಷ್ಟು ಕಾಡಿ ಬೇಡಿದರೂ, ಕಮಲೆಯು ಚಂಡಿತನವನ್ನು ಬಿಡಬೇಡವೆ? ಎಂತಹ ಕಲ್ಲೆದೆ!

ತಾರಾ:—ತುಂಗಮ್ಮ! ಸಂತಾಪಕನು ಸತ್ಯಸಂಧನಲ್ಲವೆಂಬುದು ವಿಜಯವರ್ಮನಿಂದ ತಿಳಿದು ಬಂದರೂ ಕಮಲೆಯು ಬೇರೆ ಆತನನ್ನು ನಿರಾಕರಿಸಲಿಲ್ಲ; ವಿಜಯವರ್ಮನನ್ನೇ ನಿರಾಕರಿಸಿದಳು. ಏಕೆ? ಒಮ್ಮೆ ಮನಸಾವರಿಸಿದ ಪತಿ ಸಂತಾಪಕನೇ ತನಗೆ ನಾಥನೆಂಬುದನ್ನು ಸ್ಥಿರಪಡಿಸಿದಳು. ತನ್ನ ಮನೋವಲ್ಲಭನು ಮುಂದೆಂದಾದರೂ ಸನ್ಮಾರ್ಗಿಯಾಗಲೆಂಬ ಸತ್ಸಂಕಲ್ಪದಿಂದೆಯೇ ಈ ಬಗೆಯಾದ ಆತನ ಉನ್ಮಾದ ರೋಗವನ್ನು ಪರಿಹರಿಸಲು ಪ್ರಯತ್ನಿಸುವಳು. ಅಲ್ಲದೆ ಅವಳು ಅವನನ್ನು ಮನದಲ್ಲಾದರೂ ತಿರಸ್ಕರಿಸಬಲ್ಲಳೇ? ಆತನ ಕೆಟ್ಟ ನಡತೆಗಾಗಿ, ಎಷ್ಟೆಷ್ಟುಬಗೆಯಿಂದ ಪರಿತಪಿಸುತ್ತಿರುವಳೆಂಬುದನ್ನು ತಿಳಿತಿಳಿದೂ, ನಾನು ಅವಳ ದುಃಖಜೀವನವನ್ನು ಕುರಿತು ನನ್ನ ಜೀವನಕ್ಕೆ ಹೋಲಿಸಿ ಸಹಭಾಗಿನಿಯಾಗಿ ದುಃಖಾನುಭವ ಮಾಡುತ್ತಿರುವೆನು.

ವಿರಾ:—ತಾರಾಮಣಿ! ನಾಟಕಾವಲೋಕನದಿಂದ ಹಾನಿಯೇ

ನೆಂದು ಕೇಳುವರಲ್ಲವೆ? ಹೇಳುವೆನು, ಕಿವಿಗೊಟ್ಟು ಕೇಳು! ಸೂತ್ರಧಾರನು ಬಂದುದು ಮೊದಲು, ಮುಗಿಯುತ್ತ ಬಂದಿರುವ ಈವರೆಗಿನ ನಾಟಕಾಭಿನಯದವರೆಗೂ ಹೊರ ಬಿದ್ದ ಮಾತುಗಳಾವುವೆಂಬುದನ್ನೂ, ಆರಾರಲ್ಲಿ ಎಂತೆಂತಹ ಕಲ್ಪನೆಗಳುಂಟಾಗಿರುವುವೆಂಬುದನ್ನೂ ಹೇಳಲಳವೇ? ಏಕೆಂದರೆ, ಈಗ ನೋಡು, ನಿನ್ನ ಮನವು ಕಮಲಕುಮಾರಿಯ ಸಂತಾಪವನ್ನು ನೋಡಿ, ನಿನ್ನ ಪತಿಯ ಉದಾಸೀನ ವೃತ್ತಿಗಾಗಿ ಸಂಕಟವಲ್ಲಿಯೂ, ಮತ್ತೊಬ್ಬರ ಬಗೆ, ಶೃಂಗಾರರಸಾಸ್ವಾದನೆಯಲ್ಲಿ ಲೀನವೂ, ಇನ್ನೊಬ್ಬರ ಚಿತ್ತವು ಹಾಸ್ಯರಸದಲ್ಲಿ ಎರಕವೂ, ಮತ್ತೊಬ್ಬರ ಭಾವನೆ ಚೌರ್ಯ ಕಲಾಭ್ಯಾಸನದಲ್ಲಿಯೂ, ಮುನ್ನೊಬ್ಬರ ಗುರ್ರ್ಕೊಲೆಯಲ್ಲಿಯೂ, ಇಂತಿವೇ ಮೊದಲಾದ ಬಗೆ ಬಗೆಯಾದ ಭಾವನೆಗಳು, ಅವರವರ ಸ್ವಭಾವ ಪ್ರಕೃತಿ ವರ್ತನೆಗಳಿಗೆ ತಕ್ಕಂತೆ ಮನೋವೇಗಮಾರ್ಗದಲ್ಲಿ ಬಗೆಗೊಳ್ಳುತ್ತಿರುವುವು. ಇಷ್ಟಾದರೂ, "ಕಥಾಸಾರಾಂಶವೇನು? ಕವಿಸಂದೇಶವೇನು? ನಾಟಕಯುಗಕಲ್ಪನೆಗೆ ಕಾರಣವೇನು? ನಮ್ಮ ಕರ್ತವ್ಯವಾವುದು?" ಎಂಬೀತೆರದ ವಿಚಾರವಿಮರ್ಶೆಯೇ ಆರ ಮನವನ್ನೂ ಮುಟ್ಟಿರುವಂತೆ ಕಾಣಲೊಲ್ಲದು! ಹೀಗಾದುದೇತರಿಂದ? ನಮ್ಮವರ ಮೋಹಾಂಧತೆಯು ಫಲದಿಂದಲ್ಲವೇನು?

ತಾರಾ:—ನಿಮ್ಮ ಹಿತಸೂಚನೆ, ಅಕ್ಷರಾಕ್ಷರಶಃ ನಿಜವಾದುದೇ ಸರಿ; ಆದರೆ, ನನಗೂ ತಿಳಿಯದ ವಿಚಾರವಿಮರ್ಶನವನ್ನು ದಯವಿಟ್ಟು ತಿಳಿಯ ಹೇಳಲಾರಿರೇ?

ವಿರಾ:—ಈಗ, ಅಂಕಾರಂಭವಾಗುವವರೆಗೂ ವಿರಾಮವಾಗಿದೆ,

ಹೇಳುವೆನು, ಕೇಳು. ತಾರಾ! ಸಾರಾಂಶವಿಷ್ಟೇ; ಆಧುನಿಕ ಪುರುಷವರ್ಗದಲ್ಲಿ, ಸಂತಾಪಕನಂತೆ ಕೃತಕವೇಷಧರರಾದ ಮಹಾಶಯರು ಹಲವರಿರುವರು. ಅವರು ಇನ್ನಾದರೂ, ತಮ್ಮ ಅವಿಚಾರಾಂಧತೆಯನ್ನು ಅನುತಾಪಜ್ಯೋತಿಯಿಂದ ಹೋಗಲಾಡಿಸಿಕೊಂಡು, ಸಂತಾಪಕನಂತೆ ತಾವೂ ಬಿಮ್ಮ ನೈರಾಶ್ಯದವಾನಲದಿಂದ ದಗ್ಧರಾದೇವೆಂಬ ತಿಳಿವನ್ನು ಹೊಂದಿ, ತಮ್ಮ ನಡೆವಳಿಕೆಗಳಲ್ಲಿರುವ ಕುಂದು ಕೊರತೆಗಳನ್ನು ತಿದ್ದಿಕೊಳ್ಳಬೇಕೆಂಬ ಬಲವತ್ಸಂದೇಶವೇ ಸಂತಾಪಕನ ನಾಯಕತ್ವ ನಿರೂಪಣಕ್ಕೆ ಗುರಿಯಾಗಿರುವುದು. ಹೇಗೆ? ಏಕೆ? ಏತರಿಂದ? ಎಂದೇನಾದರೂ ಕೇಳುವೆಯೊ? ಅದನ್ನೂ ಹೇಳುವೆನು. ಸಂತಾಪಕನು, ವಿನೋದಚಂದ್ರನಿಗೆ ಗೊತ್ತಾಗಿದ್ದ ಕಮಲೆಯನ್ನು ತಾನೇ ಅಪಹರಿಸಲೆಳಸಿದುದೂ, ವಿನೋದಚಂದ್ರನನ್ನು ಕೊಂದು, ಕೃತಕವೇಷದಿಂದ ತಾನೇ ಅವನೆಂದು ನಟಿಸಿ, ಕಮಲಕುಮಾರಿಯನ್ನು ವಂಚಿಸಿದುದೂ ಕಡೆಗೆ ಏನಾಗಿ ತಿರುಗಿದುವು? ಆಶಾಭಂಗ, ಅನುತಾಪ, ಕಡಗೆ ಸನ್ಯಾಸ ಇವಲ್ಲವೇ ಅವನಿಗಾದ ಮಹಾಫಲಗಳು? ಆದರೆ ಅವನಿಗೆ ಅಂತಹ ದುರಾಗತವುಂಟಾಗಲು ಕಾರಣವಾವುದು? ದುಸ್ಸಹವಾಸ, ಕುಡಿತ, ಜೂಜು, ಸುಳ್ಳು, ಮೋಸ, ಕೊಲೆ, ಕಡೆಗೆ ಜಾರತನ ಇವಲ್ಲವೆ? ಇಂತಹನಲ್ಲಿ ಮರುಳಾಗಿ ಮುಂದಿನ ಆಲೋಚನೆಯಿಲ್ಲದೆ, ಮನವನ್ನು ಹಿಡಿದು ನಿಲ್ಲಿಸಲಾರದೆ, ಸಡಿಲವಾಗಿ ಬಿಟ್ಟುಬಿಟ್ಟುದರಿಂದ ಕಮಲೆಗಾದ ಸುಖವೇನು? ಅಂತ್ಯಕಾಲದಲ್ಲಿಯೂ ಸಂತಾಪವೇ! ಇವಳೇನೋ ಸತೀತ್ವಕ್ಕೆ ತಕ್ಕುದನ್ನೇ

ಮಾಡಿದಳೆನ್ನಬಹುದು. ಆದರೆ, ವಿವಾಹವಾಗುವಮೊದಲೇ ಇವಳಿಂತಹ ಭೀಕರಾವಸ್ಥೆಗೆ ತುತ್ತಾದುದೇತಕ್ಕೆ? ಬಾಲ್ಯ ಸುಶಿಕ್ಷಣಾಕಾಲದಲ್ಲಿ ಹೊಂದಿದ ಲಾಲನೆ ಸ್ವಾತಂತ್ರ್ಯಗಳೇ ಮುಂದಾಗಿದ್ದು ವಸ್ತುವಿಚಾರವಿಮರ್ಶೆ ಹಿಂದಾದುವರಿಂದ ಲ್ಲವೆ? ಹೇಗಾದರೂ ಅವಳು ಒಮ್ಮೆ ಮನಸಾ ವರಿಸಿದಾತನೇ ತನ್ನ ನಾಥನೆಂದೆಣಿಸಿ, ತನ್ನ ಅಂತ್ಯಕಾಲದಲ್ಲಿ ತನ್ನ ಮನೋವಲ್ಲಭನು ಸನ್ಮಾರ್ಗಗಾಮಿಯಾಗಬೇಕೆಂದು ಹೇಳಿರುವ ನೀತಿವಾಕ್ಯಗಳು ಎಷ್ಟು ಸಂಕಟವನ್ನುಂಟುಮಾಡುತ್ತಿರುವುವು? ಅವು ಸಂತಾಪಕನನ್ನು ಮಾತ್ರವೇ ಅಲ್ಲ, ಆಪ್ತೇಷ್ಟರನ್ನೂ ಮರ್ಮಾಹತರನ್ನಾಗಿ ಮಾಡದಿರಲಾರವು ಹೀಗಿರುವಲ್ಲಿ ಸಂತಾಪಕನನ್ನು ಕುರಿತು ಹೇಳ-ಕೇಳಬೇಕಾದುದೇನು? ಹೋಗಲಿ, ಅವನು ಮೊದಲು ಮಾಡಿದ ಅತ್ಯಾಚಾರಗಳಿಗೂ ಅವನಾ ಘಾತಕಪ್ರಕೃತಿಗೂ, ಅವನಿಗಾದ ಪ್ರಾಯಶ್ಚಿತ್ತವೇ ಅವನಂತಿರುವ ಅಥವಾ ಅವನಂತೆಯೇ ಆಗಬೇಕೆಂದಿರುವ ಪುರುಷವರ್ಗವನ್ನೂ ತಕ್ಕಷ್ಟು ಎಚ್ಚರಿಸುತ್ತಿರಲಿ.

ಇನ್ನು ವಿಜಯವರ್ಮನನ್ನು ಕುರಿತು ವಿಚಾರಮಾಡುವ! ಆತನು ಸತ್ಯ, ಕ್ಷಮೆ, ದಮ, ದಯಾ ದಾಕ್ಷಿಣ್ಯಾಗಳಿಂದ ಅಲಂಕೃತನಾಗಿದ್ದುದರಿಂದಲ್ಲವೇ ಕಮಲೆಯ ತಂದೆಯನ್ನೂ ವಚನಭ್ರಷ್ಟನಾಗದಿರೆಂದು ಎಚ್ಚರಿಸಿದುದೂ, ಹಾಗೂ ಅವನು ವಚನಭ್ರಷ್ಟನಾಗಿ ಆಶಾಧೀನನಾದರೂ ಆತನನ್ನು ಕ್ಷಮಿಸಿ, ತನ್ನ ಕೃತಜ್ಞತೆಯನ್ನು ಪ್ರದರ್ಶಿಸಿದುದೂ, ಕಮಲಕುಮಾರಿಯಲ್ಲಿ ದಯಾದಾಕ್ಷಿಣ್ಯಾಗಳನ್ನಿರಿಸಿ ಎಚ್ಚರಿಸಿ

ದುದೂ ಪ್ರಕಾಶಿಸುತ್ತಿರುವುವು. ಅಲ್ಲದೆ ಅವನು ತನ್ನ ನಿಜತ್ವವನ್ನೂ, ಸಂತಾಪಕನ ಕೃತ್ರಿಮಸಂಧಾನವನ್ನೂ ನಿದರ್ಶನಕ್ಕೆ ತರಲು ಎಷ್ಟು ಪ್ರಯಾಸಪಟ್ಟನೆಂಬುದು ವಿಚಾರಪರರಿಗೆ ತಿಳಿಯದಿರುವುದೇ? ಆತನನ್ನು ನಿರಾಕರಿಸಿ, ಕಮಲೆ ತನ್ನ ಧರ್ಮಕ್ಕೆ ಕಟ್ಟುಬಿದ್ದು, ಅಕಾಲಮೃತ್ಯುವಶಳಾದರೂ, ಅವನಲ್ಲಿ ಬೀಡುಗೊಂಡಿದ್ದ ಸದ್ಗುಣಗಳ ಅಮೋಘಫಲವೇ ಸತ್ಕೀರ್ತಿರೂಪವಾದ ಅಭ್ಯುದಯ, ಅನುಕೂಲಭಾರ್ಯಾಲಾಭಗಳನ್ನು ಹೊಂದಿಸಿತೆನ್ನುವಲ್ಲಿ ಅತ್ಯುಕ್ತಿಯೇ? ಅದೂ ಹೋಗಲಿ.

ತಾರಾಮಣಿ! ನಾಟಕವನ್ನು ನೋಡಬಾರದೆಂಬುದೇಕೆನ್ನುವೆಯೋ? ಸತ್ಕರ್ಮ ದುಷ್ಕರ್ಮಗಳ ಫಲಾನುಭವಸ್ವರೂಪಗಳನ್ನೂ ಅವುಗಳ ಭಾವರೂಪಗಳನ್ನೂ ಸ್ಪಷ್ಟಪಡಿಸಲೊಲ್ಲದೆ ಉಪೇಕ್ಷಿಸುವ ನಾಟ್ಯವರ್ಗದವರ ಮಿತಿಮೀರಿದ ಅಭಿನಯವು ಕಥಾಸಾರಾಂಶವನ್ನು ಕೆಡಿಸಿ, ನೋಟಕರ ಮನಸ್ಸನ್ನೂ ವಿಕಾರಕ್ಕೆಡೆಮಾಡಿಬಿಡುವುದಿಲ್ಲವೆ? ಈ ಮಹಾಜನರು ಲೋಭಾಂಧತೆಯಿಂದ, ತಾವು ನಾಟಕವನ್ನಾಡುವುದೇಕೆಂದೂ, ತಮ್ಮಾ ನಾಟ್ಯಾಭಿನಯಗಳಿಂದ ಲೋಕಸ್ಥಿತಿ ಹೇಗಾಗುವುದೆಂದೂ, ನಾಟಕಯುಗವನ್ನು ನಿರ್ಮಿಸಿದ ಕವಿಗಳ ಮುಖ್ಯ ಸಂದೇಶವೇನಿರಬಹುದೆಂದೂ ವಿಚಾರಮಾಡದೆ, ಪಾಮರ ನೇತ್ರರಂಜನೆಯೇ ತಮ್ಮ ಪರಮಪುರುಷಾರ್ಥಸಾಧನೆಯೆಂದೂ, ಉದರಂಭರಣವೊಂದೇ ಮಾನವನ ಮುಖ್ಯ ನಿಯಮವೆಂದೂ ಬಗೆದು ಧನಾರ್ಜನೆಯಲ್ಲೇ ನಿಂತರೆ, ಇಂತಹ ಮಹಾಶಯರನ್ನು ಏನೆಂದು ಸ್ತುತಿಸ

ಬೇಕು ? ಆವ ನಾಮಾವಳಿಯಿಂದ ಸಂಬೋಧಿಸಬೇಕು ? ಆವಬಗೆಯಲ್ಲಿ ಧನ್ಯವಾದವನ್ನು ಸಮರ್ಪಿಸಬೇಕು ? ಇವರಿಂದಾಗುವ ಲೋಕೋಪಕಾರಗಳೆಂತಿರುವುವೆಂಬುದನ್ನೂ ಹೇಗೆ ಕೃತಜ್ಞತೆಯುಂಟಾಗಬೇಕೆಂಬುದನ್ನೂ, ಇವರಿಗೆ ಆವಮಾರ್ಗದಲ್ಲಿ ಮುಂದಿಡಬೇಕು? ತಿಳಿದು ಹೇಳಲಾದೀತೆ?

ಇಂತಹ ನಾಟ್ಯವರ್ಗದವರ ಅನಿಯಮಿತತ್ವದಿಂದ, ನಾಟಕಸಂಘಾಧ್ಯಕ್ಷರಿಗೂ, ವಿಚಾರಣಾಕರ್ತರಿಗೂ, ಪ್ರೋತ್ಸಾಹಕರಿಗೂ, ಇನ್ನುಳಿದ ಸಹಾಯಕರಿಗೂ ದೊರೆಯಬಹುದಾದ ಪುಣ್ಯಫಲ, ಸತ್ಕೀರ್ತಿಗಳಷ್ಟೆಂಬುದನ್ನು ಹೇಳಲವೆ? ಅವರಾದರೂ ಈ ನಾಟ್ಯವರ್ಗದವರನ್ನು ಅಡಿಗಡಿಗೆ ಸಹಜ ನೀತಿಬೋಧೆಗಳಿಂದ ಎಚ್ಚರಿಸುತ್ತಿದ್ದರೆ, ಈ ದುರಾಚಾರ ರೋಗಕ್ಕೆ ಅವಕಾಶವೆಲ್ಲಿರುವುದು ? ಇನ್ನುಮುಂದಾದರೂ, ಅವರು ಕರ್ಮಕ್ಷಮತೆಯನ್ನು ಗಮನಿಸಿ, ನಾಟಕಯುಗಪ್ರದರ್ಶನದಿಂದ ಕರ್ಮಫಲ ಭಾವಸ್ವರೂಪಗಳನ್ನು ಸಾಕ್ಷಾತ್ಕರಿಸಿಕೊಡುವಂತೆ ಸಂಕಲ್ಪಿಸಿ, ನಿಯಮವರಿತು ಜಾಗರೂಕರಾಗಿ ನಿಂತರೆ, ಅಂತವರಿಂದ ನಮ್ಮವರ ಚಿತ್ತವೃತ್ತಿ ಪರಿಷ್ಕೃತವಾಗಬಹುದೆಂದೂ, ಅಂತಿರುವ ನಾಟಕಾವಲೋಕನವೂ ಲೋಕಹಿತಕರವಾಗುವುದೆಂದೂ ಧಾರಾಳವಾಗಿ ಹೇಳಬಹುದಲ್ಲದೆ, ಇಂದಿನ ಈಬಗೆಯ ವೈಪರೀತ್ಯನೃತ್ಯವನ್ನು ನಾಟಕವೆಂದಾರೂ ಹೇಳಲಾಗದು. ಮತ್ತೊಂಮವಿಚಾರ, ತಾರಾಮಣಿ! ಈ ಸಂತಾಪಕವೇಷಧರನಾದ ಧೂರ್ತನು ಕಮಲಕುಮಾರಿಯಂತೆಯೇ ಅನನ್ಯಶರಣೆಯಾದ ಸಾಧ್ವೀಮಣಿ ಚಂದ್ರಭಾಗೆಯನ್ನು ಕೈಹಿಡಿದೂ,

ಮದಾಂಧನಾಗಿ ಧರ್ಮಪತ್ನಿಯಲ್ಲಿ ಎರಡೆಣಿಸುತ್ತಿರುವನು. ಅವಳ ಮನೋರೋಗಕ್ಕೆ ಮದ್ದಾವುದು? ಅವಳು ಪತಿ ಸನ್ಮಾರ್ಗಿಯಾಗಲೆಂದು ಪಡುತ್ತಿರುವ ಪ್ರಯಾಸವೂ, ಸಹಿಸುತ್ತಿರುವ ಅಂತಸ್ತಾಪವೂ, ಪ್ರತಿ ಕ್ಷಣದಲ್ಲಿಯೂ ಮಾಡುತ್ತಿರುವ ಪ್ರಾರ್ಥನೆಯೂ, ಎಂತಹ ಕಲ್ಲೆದೆಯವರನ್ನಾದರೂ ಕರಗಿಸದೆ ಇರಲಾರದು. ಅದನ್ನು ಲಕ್ಷ್ಯಮಾಡದೆ ಈ ದುರಾಚಾರನು ಸಂತಾಪಕನಂತೆ ಕಾಮುಕನಾಗಿ, ಕುಲಟಾ ಸಂಗಕಲುಷಿತನಾಗಿ, ಮುಂದೆಯೂ ಮಲೆತಿರುವವನಾದರೆ, ನಿಜವಾಗಿಯೂ ಸಂತಾಪಕನೇ ಆಗುವನು. ಪತಿಯ ದುರಾಚಾರಕ್ಕಾಗಿ ಪರಿತಪಿಸಿ, ಸಂತಾಪಾಗ್ನಿಗೆ ಬಲಿಯಾಗುವ ಸತೀಮಣಿಯ ವಿಯೋಗಕ್ಕೆ ಪಕ್ಕಾಗಿ ಅನುತಾಪದಿಂದ ಕಂದಿ, ಕುಂದಿ, ಬೆಂದು ಬೆಂಡಾಗಿ ಕಡೆಗೆ ಬೈರಾಗಿಗಳಂತೆ ಸುತ್ತುವುದೊಂದೇ ಇಂತಹ ಉನ್ಮತ್ತವಾನರನಿಗಾಗುವ ಪರಿಣಾಮವು! [ಮತ್ತೆ ನಾಟಕವು ಮುಂದರಿಯಿತು. ವಿರಾಗಿಣಿಯೂ ಮೌನವಾಗಿ ಕುಳಿತಳು.]

(ವಿರಾಗಿಣಿಯ ವಿಮರ್ಶೆಯಿಂದ ತುಂಗೆ ಕಿಡಿಕಿಡಿಯಾದಳು. ಆದರೆ ಪಾಪ! ಮಾತನಾಡಲಾರಳು, ತನ್ನಲ್ಲೇ ಬಯ್ಯುತ್ತ, ಬಿರಬಿರನೆ ನೋಡುತ್ತ ಕುಳಿತಿದ್ದಳು. ನಾಟಕವೂ ಮುಗಿಯಿತು; ಜನರ ಗುಂಪೂ ಕಡಿಮೆಯಾಗುತ್ತ ಬಂದಿತು. ರಘುನಾಥನು ಮುಂದೆ ಬಂದು ತುಂಗೆಯನ್ನು ನೋಡಿ, "ತುಂಗೆ ಚೆನ್ನಾಗಿ ನೋಡಿದೆಯಾ? ತೃಪ್ತಿಯಾಯ್ತಲ್ಲವೆ? ಇನ್ನು ಹೊರಡಬಹುದೋ?"

ತುಂಗ:—(ಎದ್ದು ನಿಂತು) "ನಾನಾಗಲೇ ಹೊರಡಲೆದ್ದೆನು."

ವಿರಾ:—ಆಗಲಿ, ಜನರ ಗುಂಪು ಕಳೆದುಹೋಗಲಿ.

ರಘು:—(ತಲೆದೂಗುತ್ತ ನಿಂತನು.)

ತಾರಾ:—(ವಿರಾಗಿಣಿಯ ಕೈಹಿಡಿದು) "ತಾಯಿ! ನಿನ್ನ ಇಂದಿನ ವಸ್ತುವಿಚಾರವಿಮರ್ಶೆಯಿಂದ ನಾನು ಎಷ್ಟೋ ಎಚ್ಚತ್ತು ಕೊಂಡೆನು. ಇಂದಿನ ಸುಸಂಧಿಯನ್ನು ನಾನೆಂದಿಗೂ ಮರೆಯಲಾರೆನು. ನನಗಿನ್ನು ಅನುಮತಿಯೇ? ಭಗವತ್ಸಂಕಲ್ಪದಿಂದ ಮತ್ತೊಮ್ಮೆ ನಾವಿಬ್ಬರೂ ಕಲೆತು ಸಂಭಾಷಿಸುವಂತಾಗಬೇಕು.

ವಿರಾ:—(ತಾರಾಮಣಿಯ ಬೆನ್ನು ತಟ್ಟುತ್ತ ಗ⁻ದಸ್ವರದಿಂದ) "ತಾರಾ, ಚಿರಕಾಲಬಾಳ್ವೆ!! ಮಾತೃಕಟ ‿ವು ನಿನ್ನನ್ನು ಸಂರಕ್ಷಿಸುತ್ತಿರುವಲ್ಲಿ, ನಿನಗಾವ ಉ⁻ ತಿಯೂ ಉಂಟಾಗದು ನೆನಪಿರಲಿ!"

(ಅಷ್ಟರಲ್ಲಿಯೇ ತಾರಾಮಣಿಯನ್ನು ಕರೆಯಲು, ಮುರಳೀನಾಥನೂ ನಿರಂಜನನೊಡನೆ ಬಂದನು.)

ರಘು:—(ಮುರಳೀನಾಥನ ಬೆನ್ನತಟ್ಟಿ) "ಭಲೆ! ಮುರಳೀನಾಥ! ಅಪೂರ್ವಲಾಭ!! ಬಹುಕಾಲಾನಂತರದ ಸಂಧಿ!!!

ಮುರಳೀ.—(ವಿನಯದಿಂದ ಕೈಮುಗಿದು,) ವಂದನೆ! ಪರಮಾನಂದ! ಕ್ಷಮಿಸಬೇಕು. ತೊಡಕಿನಲ್ಲಿ ಸಿಕ್ಕಿರುವೆನು.

ರಘು:—(ಕಿರುನಗೆಯಿಂದ) ಕ್ಷಮೆಯನ್ನು ಕೇಳಬೇಕಾಮದಿಲ್ಲ. ಆದರೆ, ತೊಡಕಿಂದ ಬಿಡುಗಡೆಯಾದಬಳಿಕಲಾದರೂ ಬರಬಹುದಷ್ಟೆ?

ಮುರಳೀ·—ತಡೆಯಿಲ್ಲದೆ ಬರುವೆನು, ಬಿಡುವೆಳ್ಳಷ್ಟು ಕಂಡರೂ, ಬಂದು ನೋಡುವೆನು. ಇನ್ನು ಹೊರಡಲೆ?

ರಘು:—ಹೊರಡಬಹುದು ; ಅವೇಳೆ, ತಂಗಿಯನ್ನು ಎಚ್ಚರದಿಂದ ಕರದೊಯ್ಯಬೇಕು.

(ಮುರಳೀನಾಥನು ತಲೆದೂಗುತ್ತ ತಾರಾಮಣಿಯನ್ನು ಜೊತೆಗೊಂಡು, ಹೊರಟುಹೋದನು.)

ನಿರಂಜನ:—(ರಘುನಾಥನ ಕೈಹಿಡಿದು) ರಘುನಾಥ್! ಮನೆಯಲ್ಲಿ ಎಲ್ಲರೂ ಕುಶಲಿಗಳೆ? ಕೃಷ್ಣವೇಣಿಗೆ ಆರೋಗ್ಯವೆ?

ರಘು:—ಎಲ್ಲರೂ ಕುಶಲಿಗಳೆಂದೇ ಭಾವನೆ. ನಿರಂಜನ! ನೀನೆಂದು ಬಂದುದು? ಮನೆಗೇಕೆ ಬಾರದಿರುವುದು? ಏನು? ಸಬ್ ರೆಜಿಸ್ಟ್ರಾರಾದೆನೆಂದು ನನ್ನನ್ನು ಮರೆಯಬೇಕೋ?

ನಿರಂ:—ಕ್ಷಮಿಸು; ಪರಮಾನಂದ! ಕ್ಷಮಿಸು. ನಿರಂಜನನು ತನ್ನ ಅಭ್ಯುದಯಕಾರಣನನ್ನೇ ಮರೆವಷ್ಟು ಕೃತಘ್ನನಾಗಿಲ್ಲ. ಬಂದ ಎಂಟು ದಿನಗಳಿಂದಲೂ, ಹಿಂದಿನ ಕಟ್ಟುಗಳನ್ನು ಕ್ರಮಪಡಿಸಿಕೊಳ್ಳುವ ಕೆಲಸವೇ ಬಿಡುವಿಲ್ಲದೆ ನಡೆಯುತ್ತಿದೆ. ಇಂದು ನಾಳೆಯಲ್ಲೇ ಮುಗಿಸಬೇಕಾಗಿದ್ದುದರಿಂದ ಬೇರೆ ಹಂಬಲಕ್ಕೆ ಅವಕಾಶವಿರಲಿಲ್ಲ. ಈಗಲೂ ನಾನು ಬಾರೆನೆಂದೇ ಇದ್ದೆನಾದರೂ ಮುರಳೀನಾಥನ ನಿರ್ಬಂಧವನ್ನೂ ಮಕರಂದನ ಪ್ರಾರ್ಥನೆಯನ್ನೂ ಮೀರಲಾರದೆ ಬಂದೆನು. ಈ ವಿಷಯದಲ್ಲಿ,—

ರಘು:—(ಅಷ್ಟಕ್ಕೇ ತಡೆದು) ಸಾಕು ಸಾಕು! ಮುಂದೆ ಹೇಳಬೇಕಾದುದಿಲ್ಲ. ನಾನೂ ವಿನೋದಕ್ಕೆಂದೇ ಹೇಳಿದುದು.

ನಿರಂ:—ನಿನ್ನ ಜೊತೆಯಲ್ಲಿ ತುಂಗೆ, ಬಂದಿರುವಂತಿದೆ!

ರಘು:—ತುಂಗೆಯೊಡನೆ ನನ್ನ ಇನ್ನೊಬ್ಬ ತಂಗಿಯೂ ಬಂದಿರುವಳು. ಇದೋ ನೋಡು. (ವಿರಾಗಿಣಿಯಕಡೆಗೆ ಕೈ ತೋರಿದನು)

(ನಿರಂಜನನು ಕುತೂಹಲದಿಂದ ವಿರಾಗಿಣಿಯನ್ನು ನೋಡಿದನು ; ವಿರಾಗಿಣಿಯೂ ತಲೆಯೆತ್ತಿ ನೋಡಿದಳು. ಇಬ್ಬರ ಕಣ್ಣುಗಳಲ್ಲಿಯೂ ನೀರು ತುಂಬಿತು. ಆದರೆ, ಆರಿಂದಲೂ ಮಾತು ಹೊರಡಲಿಲ್ಲ.)

ರಘು:—ನಿರಂಜನ ! ಈಗ ಕಣ್ಣೀರು ಸುರಿಸುವುದಕ್ಕೆ ಇದು ಸ್ಥಳವಲ್ಲ. ಮನೆಗೆ ಬಂದರೆ ಪರಿಚಯವಾದೀತು.

ನಿರಂ:—ನಿಜ ! ನನಗೂ ನೆನಪಿರುವುದಾದರೂ, ಭ್ರಾಂತಿಯಿಂದ ಹೇಳಲಾಗದಿರುವೆನು. ನಾನಿನ್ನು ಹೊರಡುವೆನು.

ರಘು:—ಹಾಗೆಯೇ ಮಾಡುವುದೊಳ್ಳೆಯದು ; ವಿರಾಮವಿದ್ದಂದು ಮನೆಗೆ ಬಂದು ತಿಳಿವೆ.

(ನಿರಂಜನನು ಹೊರಟುಹೋದನು. ರಘುನಾಥನೂ ವಿರಾಗಿಣೀ ತುಂಗೆಯರೊಡಗೊಂಡು ತೆರಳಿದನು.)

[ಸಹೃದಯವಾಚಕರೇ !

ನಿಮ್ಮ ಭಾವನಾಲೋಕದಲ್ಲಿ ಎಂತೆಂತಹ ವಿದ್ಯಮಾನಗಳನ್ನು ನೋಡುತ್ತಿರುವಿರಿ ? ತಾರಾ ವಿರಾಗಿಣಿಯರ ಸಂವಾದದಿಂದ ಹೊರಬಿದ್ದ ನಾಟಕ ವಿಮರ್ಶೆಗಾಗಿ ಏನೆನ್ನುವಿರಿ ? ಯುಕ್ತವೆನ್ನುವಿರೊ ? ಅಲ್ಲವೆನ್ನುವಿರೊ ? ಯುಕ್ತಭಾವವಿರುವುದಾದರೆ, ನಿಮ್ಮ ಪ್ರೇಷ್ಯವರ್ಗಕ್ಕೊಳಪಟ್ಟ ಸೋದರಿಯರನ್ನೂ ಎಚ್ಚರಿಸಿ ಕಾಪಾಡಬಲ್ಲಿರಲ್ಲವೆ ? ಸಂದೇಹವೇನು ? ಅಲ್ಲವೆಂದು ಸಲ್ಲದ ಅಭಿಮಾನದಿಂದ ಸ್ವದೇಶ ಸದ್ಧರ್ಮಗಳನ್ನು ಕಳದೀಡಾಡುವ ಕುಲಗೇಡಿಗಳಾರಿರುವರು ? ಹಾಗಿದ್ದರೂ, ಅಂತಹರೂ ಕಣ್ದೆರೆದು ಮೇಲಕ್ಕೆ ಬರಲೆಂದು ಪ್ರಾರ್ಥಿಸಬೇಕಲ್ಲವೇ ?]

॥ ಶ್ರೀಃ ॥

## ದ್ವಾದಶಪರಿಚ್ಛೇದ.

(ವಿಷಜ್ವಾಲೆ)

[ಬೆಳಗಾಗಿ ಆಗಲೇ ಒಂದು ತಾಸು ನಡೆದಿರುವುದು. ಆದರೆ, ಕೃಷ್ಣವೇಣಿಗಿನ್ನೂ ಬೆಳಗಾದಂತಿಲ್ಲ, ಹಾಸಿಗೆಯನ್ನು ಬಿಟ್ಟೇಳುವ ಮನಸ್ಸಿಲ್ಲ ; ಹಚ್ಚಡವನ್ನು ಮುಸುಕಿಟ್ಟು ಮಲಗಿರುವಳು. ಏಕೆ? ಏನುಹೇಳುವ ? ಬಲ್ಲಿದ ದುಗುಡದಿಂದ ! ಈ ವೇಳೆಯಲ್ಲಿ ಇವಳ ನ್ನಾರು ಸಂತವಿಸಬೇಕು ?

ತುಂಗಭದ್ರೆ ಮೆಲ್ಲಮೆಲ್ಲನೆ ಅಡಿಗಡಿಗೂ ನಿಟ್ಟುಸಿರಿಡುತ್ತ, ಕೃಷ್ಣವೇಣಿಯನ್ನು ನೋಡಬಂದಳು. ಬಂದವಳು ಹಾಸು ಗೆಯ ಬಳಿಯಲ್ಲಿ ಕುಳಿತು] “ಅತ್ತಿಗೆ! ಇನ್ನೂ ಎದ್ದಿಲ್ಲ ವೇಕೆ?” (ಎಂದು ಕೂಗಿದಳು, ಆದರೂ ಕೃಷ್ಣವೇಣಿಯಿಂದ ಉತ್ತರವು ದೊರೆಯದಿರಲು, ಕುತೂಹಲದಿಂದ ಮುಸುಕನ್ನು ತೆಗೆದು, ಮುಖದಮೇಲೆ ಕೈಯಿಟ್ಟಳು. ಇವಳ ಕೈ ಕಣ್ಣೀರಿಂದ ನೆನೆಯಿತು. ತಲೆಗಿಂಬನ್ನು ಮುಟ್ಟನೋಡಿದಳು, ಅದೂ ತೋಯ್ದು ಹೋಗಿದ್ದಿತು. ತುಂಗೆ ವಿಕೃತಸ್ವರದಿಂದ ಕೂಗಿ ಕೇಳಿದಳು.) “ಅತ್ತಿಗೆ! ಅಳುವುದೇಕೆ? ಅತ್ತು ನೀನೇನನ್ನು ಸಾಧಿಸಬಲ್ಲೆ ? ಎದ್ದು ಕುಳಿತುಕೋ. ಹೇಳುವುದನ್ನು ಕೇಳು.”

ಕೃಷ್ಣ:—ಮಲಗಿದ್ದಂತೆಯೇ, “ಸಾಧಿಸುವುದಿನ್ನೇನು ? ಮರಣ ವೊಂದೇ ! ನೀವು ಹೇಳುವುದಿನ್ನೇನು ?

ತುಂಗ:—ಅತ್ತಿಗೆ! ನನ್ನನ್ನು ಅವಿಶ್ವಾಸಿನಿಯೆಂದೇ ತಿಳದೆಯೋ? ನಾನೇನೂ ವಿರಾಗಿಣಿಯಂತೆ ನಟಿಸಿ, ಕುಟಿಲನೀತಿಗಳಿಂದ ಆರನ್ನೂ ಮರುಳುಮಾಡಿಲ್ಲ! ತತ್ವಬೋಧೆಯೆಂಬ ನೆವದಿಂದ ಆರ ಸ್ವತ್ತನ್ನೂ ಅಪಹರಿಸುತ್ತಿಲ್ಲ! ಅಲ್ಲದೆ, ನಿನಗೆ ಅಪ್ರಿಯವನ್ನು ಮಾಡಬೇಕೆಂದು ನಾನೆಂದೂ ಎಣಿಸಿದುದಿಲ್ಲ. ನನ್ನಲ್ಲೇಕೆ ನಿನಗಿಷ್ಟರ ನಿಷ್ಠುರ?

ಕೃಷ್ಣ.—(ಬಿರುಗಣ್ಣಿಂದ ತುಂಗೆಯಮುಖವನ್ನೇ ನೋಡುತ್ತ) ಏನಿದು? ಸೊಗಸಿನ ಗೆಳತಿಯನ್ನೇ ದೂರುವುದು?

ತುಂಗ:—ಅತ್ತಿಗೆ! ಆರಿಗೆ ಸೊಗಸಿನ ಗೆಳತಿ? ನನಗೋ-ಅಣ್ಣನಿಗೋ? ಅಣ್ಣನ ಭಯವಿಲ್ಲದಿದ್ದರೆ ಅವಳ ಮುಖವನ್ನೇ ನಾನು ನೋಡುತ್ತಿರಲಿಲ್ಲ. ಈಗಲಾದರೂ ತಿಳಿಯಲಿಲ್ಲವೇ?

ಕೃಷ್ಣ;—ಕೆಳೆತನವಿಲ್ಲದೆಯೇ ನಾಟಕಕ್ಕೆ ಹೋಗಿದ್ದುದಲ್ಲವೇ?

ತುಂಗ:—ಅಹುದು, ಹೋಗಿದ್ದೆನು. ಬುದ್ಧಿಯಿಲ್ಲದೆ ಅವಳೊಡನೆ ಹೋಗಿದ್ದುದರಿಂದಲೇ ತಕ್ಕ ಪ್ರಾಯಶ್ಚಿತ್ತವಾಯಿತು. ಸಾಲದುದಕ್ಕೆ ಪ್ರಾಯಶ್ಚಿತ್ತದ ಫಲವನ್ನೂ ಅನುಭವಿಸುತ್ತಿರುವೆನು. ನಿನ್ನಂತೆ ಮನೆಯಲ್ಲಿರುತ್ತಿದ್ದರೆ, ಈ ಅನರ್ಥವನ್ನು ನೋಡುತ್ತಿರಲಿಲ್ಲ.

ಕೃಷ್ಣ:—ಏನು-ಏನು? ಅನರ್ಥ!! ಏನನ್ನು ನೋಡಿದೆ?

ತುಂಗ:—ಏನೆನ್ನಲಿ? ಅತ್ತಿಗೆ! ಅಣ್ಣನಿಗೆ ನಿನ್ನಲ್ಲಿರುವ ಪ್ರೀತಿಯೆಂತಹುದೆಂಬುದನ್ನೂ, ಅವಳಲ್ಲಿರುವ ಪ್ರೀತಿ ಗೌರವಗಳೆಷ್ಟೆಂಬುದನ್ನೂ ಚನ್ನಾಗಿ ನೋಡಿದೆನು. ಇದಕ್ಕೂ ಅನರ್ಥವಿನ್ನಾವುದು?

ಕೃಷ್ಣ:—(ಎದ್ದುಕುಳಿತು ಆತುರದಿಂದ) ತುಂಗ! ಹೇಳು, ವಿಚಾರವೇನೆಂಬುದನ್ನು ದಯವಿಟ್ಟು ಹೇಳು. ಬಯ್ತಿಡಬೇಡ.

ತುಂಗ:—ಹೇಗೆ ಹೇಳಲಿ? ಅತ್ತಿಗೆ! ಅವಳು ನಿನ್ನ ತಂಗಿ; ಆತನೂ ನಿನ್ನ ಗಂಡನೇ! ಇಬ್ಬರೂ ನಿನ್ನವರೇ!! ನಿನ್ನವರ ತಪ್ಪುಒಪ್ಪುಗಳನ್ನು ತಂದು ನಿನ್ನಲ್ಲೇ ಹೇಗೆಹೇಳಲಿ? ಬೇಕುಬೇಕೆಂದು ನಾನೇ ನಿನ್ನ ಸಂತಾಪವನ್ನು ಹೆಚ್ಚಿಸಲೆ?

ಕೃಷ್ಣ:—(ತುಂಗೆಯ ಕೈಹಿಡಿದು) ತುಂಗ! ನಿಜವಾಗಿ ಹೇಳುವೆನು. ಅವಳು ಮನೆಗೆ ಬಂದಳೆಂದು ತಿಳಿದಾಗಲೇ ನನ್ನ ಹೊಟ್ಟೆಗೆ ಬೆಂಕಿ ಬಿದ್ದಂತೆ ತಿಳಿದೆನು. ಆಗಲೇ ನಿಮ್ಮಣ್ಣಂದಿರಿಗೆ ಎಷ್ಟೆಷ್ಟೋ ಹೇಳಿ ತಡೆದೆನು, ಆದರೂ ಕೇಳದೆ, ಆ ತಟವಾಣಿಯಲ್ಲಿ ಮರುಳಾಗಿ ಮಾರಿಯನ್ನೇ ಮನೆಗೆ ತಂದಂತೆ ಮಾಡಿಕೊಂಡರು. ಬರುತಬರುತ್ತ ನನಗದೇ ಬಲವಾದ ಜ್ವರಕ್ಕೆ ತಿರುಗಿರುವುದು. ನಾನು ಈ ಸಂಕಟವನ್ನು ಹೇಗೆ ತಡೆಯುತ್ತಿರುವೆನೋ ಹೇಳಲಾರೆನು. ಹೇಗೂ ನಾನು ಸಾಯುವುದೇ ನಿಜವಾದ ಮಾತು.

ತುಂಗ:—(ಕೆರಳಿ) ಅತ್ತಿಗೆ! ಏಕೆ ನಿನಗೀ ಹುಚ್ಚು? ಆರಿಗಾಗಿ ಸಾಯುವೆ? ನಿನ್ನ ಒಡವೆಯನ್ನು ನೀನು ಉಳಿಸಿಕೊಳ್ಳಲಾರದೆಯೊ? ಅಲ್ಲದೆ, ಹೆರವರಿಗಾಗಿ ಹೆದರಿ ಅಳುವುದೇ ಜಾಣತನವೆಂದೋ? ಇದಾವ ತಿಳಿಗೇಡಿತನವೋ ಹೀಗೇಕೆ ಹಲಬುವುದು? ನನಗೆಂತೂ ರುಚಿಸದು!! ಹೇಳುವುದನ್ನು ಕೇಳು, ಧೈರ್ಯದಿಂದ ಕೆಲಸವನ್ನು ಕೊನೆಗಾಣಿಸು."

ಕೃಷ್ಣ:—ಹೇಳು, ತಾಯಿ! ಬೇಗ ಹೇಳು; ಇನ್ನು ಕಲ್ಲೆದೆಯನ್ನೇ ಮಾಡಿಕೊಂಡು ಕೆಲಸವನ್ನು ಕೊನೆಗಾಣಿಸುವೆನು.

ತುಂಗ:—ಅತ್ತಿಗೆ! ನಾನು ಅವಳನ್ನು ಬಾರೆಂದು ಕರೆದುದಕ್ಕೆ, "ಬಾರೆ" ನೆಂದಳು. ಅಣ್ಣನೇ ಕರೆದುದಕ್ಕೆ ಬರಲೊಪ್ಪಿ ತಲೆದೂಗಿದಳು, ಅವಳೂ ಬರುವಳೆಂದು ತಿಳಿದಮೇಲ ಲ್ಲವೇ ಅಣ್ಣನು ಸಂತೋಷದಿಂದ ನಾಟಕಕ್ಕೆ ಕರೆದುಕೊಂ ಡುಹೋದುದು! ನೀನು ಇಲ್ಲಿಯೇ ಉಳಿದುದು, ಅವರಿಗೆ ಎಷ್ಟೋ ಅವಕಾಶ ಸಿಕ್ಕಿ, ಸರಸ ಸಲ್ಲಾಪಗಳಿಗೆ ತಡೆಯಿಲ್ಲ ದಿದ್ದಿತು.

ಕೃಷ್ಣ:—ಹೆಚ್ಚುಗೆ ಏನಾದರೂ ಉಂಟೆ?

ತುಂಗ:—ಹೆಚ್ಚುಗೆಯೋ-ಮೆಚ್ಚುಗೆಯೋ! ಆವುದೂ ನಾಟಕಶಾಲೆ ಯಲ್ಲಿ ನಡೆಯಲಿಲ್ಲ. ಬೀದಿಯಲ್ಲಿ ಬರುತ್ತ ನಡೆದುದಾಗಿ ಹೇಳಬಲ್ಲೆನು,

ಕೃಷ್ಣ:—(ಕುತೂಹಲದಿಂದ) ನೀನು ಜೊತೆಯಲ್ಲಿಯೇ ಇದ್ದೆ ಯಷ್ಟೆ! ಏನೇನು ನಡೆದುದು?

ತುಂಗ:—ಬರಿಯಮಾತಿಗೆ ಮಾತು: ಮತ್ತಿನ್ನೇನಾದರೂ ನಡೆದಿ ದ್ದರೆ, ತಿಳಿಯುತ್ತಿದ್ದೆನು.

ಕೃಷ್ಣ:—ಅದೆಂತಹ ಮಾತುಗಳೋ ನಿನಗೆ ತಿಳಿಯಲಿಲ್ಲವೆ?

ತುಂಗ:—ತಿಳಿಯದ ಭಾಷೆಯಲ್ಲಿ ಪ್ರಸಂಗಿಸಿದರೆ, ನನಗೆಂತು ಅರ್ಥವಾಗಬೇಕು?

ಕೃಷ್ಣ:—ಅದಾವಭಾಷೆ? ಹಾಳು, ಇಂಗ್ರಜಿಯೇ? (English)

ತುಂಗ:—ಅಹುದು, ಅಣ್ಣನಾಡುತಿದ್ದುದು ಅದೇ! ಆದರೆ ಅವಳಾ ಡುತಿದ್ದುದು ಅದಾವುದೋ ಸಂಕೇತವಂತೆ! ಎಲ್ಲವೂ ಸೇರಿ, ಸಂಗ್ರಹವಾಗಿ ಹೇಳುವಂತಿದ್ದಿತು.

ಕೃಷ್ಣ:—ಸ್ವಲ್ಪವೂ, ತಿಳಿಯಲಿಲ್ಲವೆ?

ತುಂಗ:—ತಿಳಿವುದೇನು? ಹೇಗೂ,–"ಮ್ಯಾನೇಜರ್, ಸಂತಾಪಕ, ಸೂತ್ರಧಾರ, ಚಂದ್ರ, ತಾರಾ, ತುಂಗೆ, ಕೃಷ್ಣ" ಎಂಬಿವು, ಅಡಿಗಡಿಗೆ ಹೊರಬೀಳುತ್ತಿದ್ದುದರಿಂದ ನಮ್ಮಿಬ್ಬರನ್ನೂ ದೂರುತ್ತಿದ್ದರೆಂದು ಊಹಿಸಬಹುದಾಗಿದ್ದಿತು.

ಕೃಷ್ಣ:—ಅವರ ಪ್ರಸಂಗಭರದಲ್ಲಿ, ಮುಖಭಾವವೇನೂ ವ್ಯತ್ಯಸ್ತವಾಗುತ್ತಿರಲಿಲ್ಲವೇ?

ತುಂಗ:—ಅಣ್ಣನು, ಒಂದೊಂದು ನುಡಿಗೂ, ಅವಳ ಮೋರೆಯನ್ನೇ ನೋಡಿ ನಗುತ್ತಿದ್ದನು. ಅವಳೇನೋ ಕಿರುನಗೆಯಿಂದ ನನ್ನನ್ನೇ ನೋಡುತ್ತಿದ್ದಳು.

ರಘು:—ಇಬ್ಬರಲ್ಲಿ ಯಾರೂ ನಿನ್ನನ್ನು ಮಾತನಾಡಿಸಲಿಲ್ಲವೇ?

ತುಂಗ:—ಅಣ್ಣನು ಮಾತ್ರ ಒಂದೆರಡು ಬಾರಿ ಮಾತನಾಡಿಸಿದನು.

ರಘು:—ಏನೆಂದು?

ತುಂಗ:—ಹಾಸ್ಯದಲ್ಲಿ, "ಏಕೆ ಸುಮ್ಮನಿರುವೆ? ಮಾತನಾಡಲೊಲ್ಲದೆಯೊ? ಬಾರದೆಯೊ?" ಎಂದು,—

ಕೃಷ್ಣ:—ನೀನೇನು ಹೇಳಿದೆ?

ತುಂಗ:—ನಾನು ಕೋಪದಿಂದ "ಇಬ್ಬರೂ ನೆಲೆ-ಕಲೆಗಳನ್ನು ತಿಳಿದವರು; ಅದಲ್ಲದೆ, ವಿದ್ಯಾವಂತರು: ಸರಿಸಮಾನರಂತೆ ವಾದಿಸಬಲ್ಲಿರಿ! ನನಗೇನು ತಿಳಿದೀತು? ನಿಮ್ಮ ಸಂಕೇತಭಾಷೆಯೇನೆಂಬುದೇ ನನಗೆ ತಿಳಿಯದು" ಎಂದು ಹೇಳಿಬಿಟ್ಟೆನು.

ಕೃಷ್ಣ:—ಚೆನ್ನಾಗಿ ಹೇಳಿದೆ; ಬಾಯಿಕಟ್ಟುವಂತ ಹೇಳಿದೆ!! ಆಗಲಾದರೂ ಸುಮ್ಮನಾದರೊ? ಇಲ್ಲವೊ?

ತುಂಗ.—ಅಬ್ಬ! ಅವರೇನು ಸಾಮಾನ್ಯದವರೇ? ಅಣ್ಣನೆಂತಹ ನೆಂದಿರುವೆ? ಕಲಿಪುರುಷನೇ!! ಅವಳಾದರೂ ಆದಿಮಾಯೆಯೇ!!! ಹೇಗಾದರೂ ಇರಲಿ: ಅವರು, ನನಗೆ ಉತ್ತರವಾಗಿ ನಗುತ ನಗುತ್ತ "ನೀನೂ ತಿಳಿದುಕೊಳ್ಳಬಹುದಲ್ಲವೇ?" ಎಂದು ಕೇಳಿದರು. ಆಗಲೂ ನಾನು ಸುಮ್ಮನಿರಲೊಲ್ಲದೆ, "ತಿಳಿವಂತೆ ಮಾಡಿದರೆ ತಿಳಿದೇನು" ಎಂದಾಡಿದೆನು. ಅದಕ್ಕೂ ಬಿಡದೆ ಅವರಿಬ್ಬರೂ ಒಬ್ಬರನ್ನೊಬ್ಬರು ನೋಡಿ ನಕ್ಕು ನನ್ನನ್ನು ಕುರಿತು, "ಇಲ್ಲ, ನೀನಿದನ್ನು ತಿಳಿಯಲಾರೆ; ನಾವು ಬಿಚ್ಚಿ ಹೇಳುವಂತಹದೂ ಅಲ್ಲ. ಗುಟ್ಟಿನ ಮಾತು." ಎಂದರು.

ಕೃಷ್ಣ.—ಗುಟ್ಟೇನು ಬಂದಿತೇ? ಸುಟ್ಟುಹೋರೆಗೆ!! ವಿಪತ್ತೇ!!'

ತುಂಗ—ಏನಾದರೂ ಬರಲಿ! ಅತ್ತಿಗೆ! ನನಗೆ ಮುಂದೆ ಮಾತನಾಡಲಾಗಲಿಲ್ಲ. "ಎಷ್ಟು ಹೊತ್ತಿಗೆ ನಿನ್ನನ್ನು ನೋಡುವೆನು? ಎಂದು ನಿನಗಿದೆಲ್ಲವನ್ನೂ ಹೇಳಿ ನೆಟ್ಟಗಾದೇನು? ಎಂಬ ಚಿಂತೆಯೇ ಮುಂದಾಗಿ, ಮತ್ತಿನ್ನಾವುದೂ ನನಗೆ ಬೇಕಾಗಲಿಲ್ಲ. ನಾನು, ಅವರ ಜೊತೆಯಲ್ಲಿ ನಿಲ್ಲದೆ, ಬೇಗ ಹೊರಟುಬಂದೆನು. ಅವರು ಬೀದಿಯ ಬಾಗಿಲಲ್ಲಿಯೂ ಬಲುಹೊತ್ತು ನಿಂತು ಪಿಸುಪಿಸುಗುಟ್ಟುತ್ತ ಕಿವಿಮಾತನಾಡುತ್ತಿದ್ದರು. ಅತ್ತಿಗೆ! ರಾತ್ರಿ ನಾನು ಬಂದಾಗಲೇ, ನಿನಗೆಲ್ಲವನ್ನೂ ಹೇಳಬೇಕೆಂದಿದ್ದೆನು. ಆದರೆ, ನಿನ್ನ ಮನಸ್ಸನ್ನು ತಿಳಿಯದೆ ದುಡುಕಬಾರದೆಂದು ಈವರೆಗೂ ತಡೆದೆನು.

ಕೃಷ್ಣ:—(ಕಣ್ಣೀರನ್ನು ಮಿಡುಕಿಸುತ್ತ, ಕಳವಳಗೊಂಡು) "ತುಂಗ! ನಿನ್ನಲ್ಲಲ್ಲದೆ ನಾನು ಮತ್ತಾರಲ್ಲಿ ಸಂಕಟವನ್ನು

ಹೇಳಿಕೊಳ್ಳಲಿ? ನನಗೆ ಆಪ್ತರಾದರೂ ಆರಿರುವರು? ತಾಯ್ತಂದೆಗಳು ಆಗಲೇ ಸತ್ತರು. ಅಣ್ಣನಾದರೋ ಸೆರೆಯಲ್ಲಿ ನನಗೂ ಹೆಚ್ಚಾಗಿ ಮಿಡುಕುತ್ತಿರುವನು! ಈಗ ನನ್ನ ದುಃಖವನ್ನು ಕೇಳುವವರಾರು? ಬೇಡವೆಂದು ಹೇಳುವವರಾರು? ಆರಿಂದ ಕೊನೆಗಾಣುವುದು? ಈ ಮನದಳಲೇ ಬಲವಾಗಿರುವಾಗ ಇನ್ನೊಂದು ಭಾರವೂ ಮೇಲೆಬಿದ್ದು ಬಳಲಿಸುತ್ತಿದೆ! ಬೇಗ ಪ್ರಾಣವಾದರೂ ಹೋಗಿ, ಎಲ್ಲರೂ ಸುಖವಾಗಿರಲೆಂದರೆ, ಅದೂ ಆಗುವಂತಿಲ್ಲ. ಏನುಮಾಡಲೇ? ತಾಯಿೞ! ಆ ಮಾರಿ, ಮನೆಗೆ ಬಂದಂದಿನಿಂದ ನನಗೆ ನಿತ್ಯವೂ ನಿಮ್ಮಣ್ಣನ ಬಾಯಿಯಿಂದ ಹೊರಡುವ ಬಯ್ಗುಳೇ ಉಡುಗೆ ತೊಡುಗೆಗಳಾಗಿವೆ ;—

ತುಂಗ:—ಅತ್ತಿಗೆ! ಅಷ್ಟರಲ್ಲೇ ಕೊನೆಗಂಡುದೆಂದಿರುವೆಯಾ? ಅವಳ ತಳಕುಬಳಕಿಗೆ ಅಣ್ಣನು ಮರುಳಾಗಿರುವುದೂ ಹಾಗಿರಲಿ. ಅಮ್ಮನಾದರೂ ನಮ್ಮವಳಾಗಿಲ್ಲ. ಅವಳೂ ವಿರಾಗಿಣಿಯೇ ತನ್ನ ಮೋಹದವಳಂದು ಹೆಮ್ಮೆಗೊಂಡು, ನಮ್ಮ ಮೇಲೆ ವಿಷವನ್ನೇ ಕಾರುವಳು!! ಸಾಲದುದಕ್ಕೆ ನೆರೆಮನೆಯವಳೂ ಜೊತೆಯಾಗಿರುವಳು, ಇವಳ ಹೇಳಿಕೆಯಿಂದಲೇ ನಿನ್ನೆ ಅಣ್ಣನು, ನನ್ನನ್ನು ಎಷ್ಟೆಷ್ಟು ಬಯ್ದನೋ ನೆನೆಯಿಸಿಕೊಂಡಂತೆಲ್ಲಾ ಮೆಯ್ಯುರಿಯುತ್ತಿದೆ. ಅವಳಿಲ್ಲಿಗೆ ಬಂದುದು ನಮ್ಮಿಬ್ಬರ ನಾಶಕ್ಕೆಂದೇ ನನ್ನ ಭಾವನೆ!

ಕೃಷ್ಣ:—(ಕಷ್ಟದಿಂದ) ಹಾಳಾಗಲಿ! ಕೆಟ್ಟವಳಸುದ್ದಿ!—

ತುಂಗ:—ಅಷ್ಟೇಅಲ್ಲ; ಅತ್ತಿಗೆ! ಅವಳೊಬ್ಬಳೇ ವಿದ್ಯಾವತಿಯಂತೆ! ಅದೆಂತಹ ವಿದ್ಯೆಯೋ! ಆರೂ ಗಣನೆಯೇ ಇಲ್ಲ!!

ಪುರುಷರೆಂದರೆ ಕಡ್ಡಿಗೂ ಕಡೆ! ಎಲ್ಲರಿದಿರಿಗೂ ವಿವಾದ ವಂತೆ! ನಾಚ್ಗೆಟ್ಟ ಹೆಂಗಸು!! ಕೆಟ್ಟ ಜನ್ಮ!!' ಊರೂರು ಸುತ್ತುವುದಂತೆ, ಉಪನ್ಯಾಸಿಸುವುದಂತೆ, ಇವೇ ಮುಖ್ಯಾ ಚಾರವಂತೆ! ಪುರಾಣ, ಹರಿಕಥೆಗಳನ್ನು ಕೇಳಬಾರದಂತೆ, ಅದೂ ಹಾಗಿರಲೆಂದರೆ, ನಾಟಕಕ್ಕೆ ಬಂದಾಗಲಾದರೂ ಸುಮ್ಮ ನಿದ್ದಳೆ? ಅಲ್ಲಿಯೂ ಅವಳ ಹೆಮ್ಮೆಯೇ! ಅಲ್ಲಿಯೂ ಹಾಳು ಬರೆಹವೇ!! ಏನೇನನ್ನೋ ಬರೆದಳು. ಆರಿಗೆ ಏನನ್ನು ಬರೆದಳೋ ದೇವರೇ ಬಲ್ಲನು.

ಕೃಷ್ಣ.—ತುಂಗೆ! ಕೇಳಲಾರೆನು!! ಇನ್ನು ಹೇಳದಿರು.

ತುಂಗ—ಅತ್ತಿಗೆ! ಇನ್ನೊಂದು ಮಾತು; ನಿನ್ನೆ ಅವಳ ಅಣ್ಣನೂ, ಮೈದುನ ನಾದಿನಿಯರೂ ಬಂದಿದ್ದರು. ಇಲ್ಲಿಗೂ ಬರಹೇಳಿ ಬಂದಿರುವೆನು. ಅವರೇನಾದರೂ ಬಂದರೆ ಈ ಶನಿಯನ್ನು ತೊಲಗಿಸಿ, ನೆಮ್ಮದಿಯಾಗಿರಬಹುದು.

ಕೃಷ್ಣ.—ನಿಜವಾಗಿಯೂ ತೊಲಗಿಸುವುದು ಸಾಧ್ಯವೇ? ಹೇಗೆ? ಎಂದಿಗೆ? ತುಂಗೆ! ಬೇಕುಬೇಕೆಂದೇ ಕರೆತಂದಿರುವವರು ಬಿಡಗೊಡುವರೇ? ಮೊದಲೇ ಅವಳಿಗೆ ಸರ್ವಾಧಿಕಾರವ ನ್ನು ಕೊಟ್ಟಿದ್ದರು. ಸಾಲದುದಕ್ಕೆ ಮೊನ್ನೆ ಬಂದ ಬಹು ಮಾನ-ಉದ್ಯೋಗಗಳಿಗೆ ಹಿಗ್ಗಿ, ಮರುಳಾಗಿ, ತಾವೇ ಅಡಿ ಯಾಳಾಗಿರುವರು! ಇಂತಿರುವವರಿಗೆ ಹೆಂಡತಿಯೇಕೆ? ಮನೆ,—(ಮುಂದೆ ಹೇಳಲಾರದೆ ಬಿಕ್ಕಿ ಬಿಕ್ಕಿ ಅತ್ತುಬಿಟ್ಟಳು.)

ತುಂಗ:—ಅತ್ತಿಗೆ! ಇದಕ್ಕೆಂದೇ ನಾನು ಹೇಳದೆ ತಡೆದಿದ್ದೆನು. ಹೀಗೆ ನೀನು ಅಳುವುದಾದರೆ ನಾನು ತಡೆಯಲಾರೆನು. ಇನ್ನಾದರೂ ಅಳುವನ್ನು ನಿಲ್ಲಿಸು. ಈ ರಾತ್ರಿಯೇ ನಿನ್ನ ಬುದ್ಧಿಯನ್ನೆಲ್ಲಾ ವ್ಯಯಮಾಡಿ, ಅಣ್ಣನನ್ನು ಎಚ್ಚರಿಸು!

ಅವನನ್ನು ಹೀಗೆಯೇ ಬಿಟ್ಟುಬಿಟ್ಟರೆ, ಕೆಟ್ಟುಹೋಗುವನು. ಆಮೇಲೆ ನಿನ್ನ ಪಾಡೆಂತೂ ಕಂಡಂತೆಯೇ ಇರುವುದು. ಹೀಗೆ ನಾನು ಹೇಳಿದೆನೆಂದು ಮಾತ್ರ ಹೊರಗೆ ಹರಡಬೇಡ! ಜೋಕೆ !! ನಾನಿನ್ನು ಹೋಗಲೆ ?

ಕೃಷ್ಣ:—ಅವರು ಕೊಂದರೂ ಕೊಂದುಬಿಡಲಿ, ಇನ್ನು ಸುಮ್ಮ ನಿರಲಾರೆನು. ನನ್ನ ಶಕ್ತಿಯನ್ನೆಲ್ಲಾ ವೆಚ್ಚಮಾಡಿಬಿಡು ವೆನು. ಆದುದಾಗಲಿ ; ನಾನೇಕೆ ನಿನ್ನನ್ನು ದೂರಿಗೆಳಯಲಿ? ಧೈರ್ಯವಾಗಿರು, ಹೋಗು. (ಕೃಷ್ಣವೇಣಿಯನ್ನು ವಿಷ ಜ್ವಾಲಾಮಧ್ಯದಲ್ಲಿ ನಿಲ್ಲಿಸಿ, ಪರಿತಪಿಸುವಂತೆ ಮಾಡಿ, ತುಂಗ ಭದ್ರೆ ಹೊರಟುಹೋದಳು.)

ಪ್ರಿಯಸೋದರಿಯರೇ !

ನಮ್ಮಾ ಅಬಲಾವರ್ಗದಲ್ಲಿ ಮೇಲಿನ ಘೋರವಿಷಜ್ವಾಲೆ ಯಿಂದ ಪರಿತಪಿಸುವವರೆಷ್ಟುಮಂದಿ ? ವಿಷಜ್ವಾಲೆಯನ್ನುಂಟುಮಾ ಡುವ ದುರ್ಮುಖಿಯರೆಷ್ಟುಮಂದಿ ? ಜ್ವಾಲೆಯನ್ನು ಹೊರಹೊ ಮ್ಮಿಸಿ, ಸೇರಿದವರನ್ನೂ, ಸಮೀಪಿಸಿದವರನ್ನೂ ಸುಡುತ್ತಿರುವ ರೆಷ್ಟುಮಂದಿ ? ಮೇಲಿನ ಹಾಲಾಹಲ ಸಂಸರ್ಗದಿಂದ ಪುರುಷಾರ್ಥ ವನ್ನು ಸಾಧಿಸಲಶಕ್ತರಾಗಿ, ಇಹಜೀವನವನ್ನೇ ವ್ಯರ್ಥವನ್ನಾಗಿ ಮಾಡಿ, ನರಲುವ ಪುರುಷರೆಷ್ಟುಮಂದಿ ? ಎಣಿಸಿ ಗುಣಿಸಿ ಹೇಳ ಲಾಗುವುದೇ ? ಸಾಮಾನ್ಯವಾಗಿ ಪ್ರತಿ ಗೃಹದಲ್ಲಿಯೂ, ಮೇಲಿನ ಹಾಲಾಹಲದ ಅಲ್ಪಾಂಶಗಳಾದರೂ, ಅಡಗಿರದೆ ಇಲ್ಲ ! ಇಂತಹ ಘೋರವಿಷಜ್ವಾಲೆಯೆಂದಿಗೆ ನಾಶವಾಗುವುದೋ ? ಎಂದು, ನಮ್ಮ ವರೆಲ್ಲರೂ, ಒಂದೇ ಜನಾಂಗವೆನ್ನುವ ನುಡಿಯನ್ನು ನಡೆಗೆ ತಂದು, ಬೆಳಗಿಸುವರೋ ನಿರೀಕ್ಷಿಸುವುದೇ ಈ ಪರಿಚ್ಛೇದದ ಸಂದೇಶ ವಾಗಿರುವುದು.

ಶ್ರೀಃ

## ತ್ರಯೋದಶಪರಿಚ್ಛೇದ.

(ನಿಷೇಧ)

[ದಿನಮಣಿ, ಅರುಣಚ್ಛಾಯೆಯಿಂದ, ಸಂಧ್ಯಾರಕ್ತನಾಗಿದ್ದಂತೆ ಪ್ರಕಾಶಿಸುತ್ತಿದ್ದನು. ದಿನಮಣಿಯ ರಕ್ತತೆಯನ್ನು ಅನುಮೋದಿಸಿದಂತೆ, ನಮ್ಮ ಮಕರಂದನೂ, ಸರಾಗದಿಂದ ಮನೆಗೆ ಬಂದು, ಪತ್ನಿಯನ್ನು ಕುರಿತು, ಆವಮಹಾಕಾರ್ಯಕ್ಕೆಂದೋ, ಕಿರುಮನೆ, ತೋಟ್ಟ, ಅಂಗಳ, ಹಿತ್ತಿಲು, ಮೊದಲಾಗಿ ಎಲ್ಲೆಲ್ಲಿಯೂ ಹುಡುಕುತ್ತಿರುವನು. ಆದರೇನು! ಕೆಳಗೆ ಹೆಂಡತಿಯ ಸುಳುವಿಲ್ಲ. 'ಇಷ್ಟು ಹೊತ್ತಿನಲ್ಲಿ ಮನೆ ಬಿಟ್ಟು ಹೊರಗೆಲ್ಲಿಯೂ ನಿಲ್ಲತಕ್ಕವಳಲ್ಲ. ಎಷ್ಟು ಕೆಲಸಗಳಿದ್ದರೂ ತಾನು ಬಂದವೇಳೆಯಲ್ಲಿ ತೋಟ್ಟಿಯಲ್ಲಿ ನಿಂತಿದ್ದು ನೀರನ್ನು ತಂದಿಟ್ಟಲ್ಲದೆ ಅತ್ತಿತ್ತ ಕದಲುತ್ತಿರಲಿಲ್ಲ. ಇಂದೇಕೆ, ಎಲ್ಲಿಯೂ ಅವಳ ಸುಳಿವೇ ಇಲ್ಲ?" ಎಂದು, ಆಲೋಚಿಸಿದನು; ಆತುರಗೊಂಡನು. ಕಡೆಗೆ ಮಹಡಿಯನ್ನೂ ನೋಡಿಬರುವೆನೆಂದು ಹಂತದಬಳಿಗೆ ಬರುವಷ್ಟರಲ್ಲಿ, ಇದಿರಿಗೆ ಬಂದ ತಾಯನ್ನು ಕಂಡು ತಡೆದು ನಿಂತು, ಕೇಳಿದನು.] ಅಮ್ಮ! ನಿನ್ನ ಸೊಸೆಯಲ್ಲಿ.?

ನರಸಮ್ಮ:—(ಕುತೂಹಲದಿಂದ) ಅದೇನಿಂದು, ಇಷ್ಟು ಧಾವಿಸಿ ಕೇಳುವೆ?

ಮಕ:—ಏನೋ ಇಂದು ಬೇಸರವಾಗಿದೆ. ಕೆಲಸವೇನೂ ಇಲ್ಲದಿದ್ದುದರಿಂದ ಮನೆಗೆ ಬಂದುಬಿಟ್ಟೆನು.

ನರ:—ನನ್ನ ಸೊಸೆಯನ್ನೇಕೆ ಕೇಳುವೆ? ಅವಳಿಂದೇನಾಗಬೇಕು? ಫಲಾಹಾರಕ್ಕೆ ಕೊಡಲೆ?

ಮುಕ:—ನನಗೆಲ್ಲವೂ ಬೇರೊಬ್ಬರಮನೆಯಲ್ಲಿ ದೊರೆದಿತು, ನಿನ್ನ ಸೊಸೆಯಲ್ಲಿ ಏನು ಕೆಲಸವೇ? ಅವಳಲ್ಲಿ ಕೆಲಸವಾಗಬೇಕಾದುದು ಬಂದೆರಡೇ? ಅದಿರಲಿ, ಇಂದೇಕೆ ಅವಳಲ್ಲಿ ಕಾಣುವುದಿಲ್ಲ, ನೆರೆಮನೆಯಲ್ಲಿರುವಳೇ—ನೋಡಿಬಾ.

ನರ:—ಇದ್ದರೂ ಇರಬಹುದು! ಹೇಗೂ ನಾನು, ಮಧ್ಯಾಹ್ನದಿಂದೀಚೆಗೆ ನೋಡಿಲ್ಲ. ಇಷ್ಟುಹೊತ್ತಿನಲ್ಲಿ ಅವಳೆಂದೂ ಮನೆಬಿಟ್ಟು ಹೊರಗೆ ನಿಲ್ಲುವವಳಲ್ಲ.

ಮುಕ:—(ಬೀದಿಯಕಡೆಗೆ ನೋಡಿ)—"ತಾಳು, ತಾಳು! ಅಳಕೆಯೇನಾದರೂ ಬಲ್ಲಳೇ ಕೇಳುವೆನು."

ಅಳಕ:—(ಓಡಿಬಂದು ನಗುತ್ತ) "ಏಕೆ ಕೂಗಿದೆ ಅಪ್ಪ?"

ಮುಕ:—ನಿಮ್ಮಮ್ಮನು ನೆರೆಮನೆಯಲ್ಲಿದ್ದರೆ, ಬೇಗ ಬರಹೇಳು.

ಅಳಕ:—ಅಪ್ಪ! ಇಂದು ಅವಳಲ್ಲಿಗೂ ಹೋಗಿಲ್ಲ. ಹೋಗುವಂತೆಯೂ ಇಲ್ಲ. ಆಯಾಸವೆಂದು ಮೇಲೆ ಮಲಗಿರುವಳು.

ಮುಕ—ಏನು? ಆಯಾಸವೇ? ಹೇಗೆ?

ಅಳಕ:—ಹೇಗೆಂಬುದನ್ನು ಹೇಳಲಿಲ್ಲ. ಆರಿಗೂ ಹೇಳಬೇಡವೆಂದೂ, ಹೇಳಬೇಕಾದಷ್ಟು ಭಯವೇನೂ ಇಲ್ಲವೆಂದೂ ಹೇಳಿ ಮಲಗಿಬಿಟ್ಟಳು. ಅದರಿಂದ ನಾನೂ ಸುಮ್ಮನಾಗಿರುವೆನು.

ನರಸಮ್ಮ.—ಅಪ್ಪ! ಹೋಗಿ ವಿಚಾರಿಸಿ ಬೇಗಬಾ. ಅವಳೆಂದೂ ಮಲಗಿದವಳಲ್ಲ. ಬೇಗ ನೋಡು.

ಮುಕ:—ಅಮ್ಮ! ಕಳವಳಪಡಬೇಡ. ನಾನೇ ಹೋಗಿ ನೋಡಿ

ಬಂದು ಹೇಳುವೆನು. ನೀನಿನ್ನು ಕೆಲಸವನ್ನು ನೋಡು. (ಅಳಕೆಯನ್ನು ನೋಡಿ) "ಅಳಕ! ನೀನಿಲ್ಲಿಯೇ ಆಡುತ್ತಿರು" ಎಂದು (ಮಹಡಿಯನ್ನು ಹತ್ತಿ ಮಲಗುವ ಕಿರುಮನೆಯೊಳಹೊಕ್ಕು ನೋಡಿದನು. ಚಂದ್ರಭಾಗೆ ಮಲಗಿರಲಿಲ್ಲ, ಚಾಪೆಯ ಮೇಲೆ ಕುಳಿತು, ಕೈಯಲ್ಲಿ ಆವುದೋ ಕೈಬರೆಹದ ಪತ್ರವನ್ನು ಹಿಡಿದು, ನೆಟ್ಟಕಣ್ಣಿಳಿಂದದನ್ನೇ ನೋಡುತ್ತಿದ್ದಳು. ಪತ್ರಾವಲೋಕನದಲ್ಲಿ ಏಕಾಗ್ರಚಿತ್ತಳಾಗಿ ಕುಳಿತಿದ್ದಾಕೆಗೆ, ತನ್ನ ಪತಿಯೇ ಇದಿರಾಗಿ ನಿಂತರೂ, ತಿಳಿವಿಗೆ ಬರಲಿಲ್ಲ. ಮಕರಂದನು, ವಿಸ್ಮಿತನಾಗಿ, ಕಾಲಿಂದ ಚಂದ್ರಭಾಗೆಯ ದೇಹವನ್ನು ಸೋಂಕಿಸಿ, ಪರಿಹಾಸದಿಂದ) "ಇದಲ್ಲವೇ ದಿಟದ ಯೋಗವು ?

ಚಂದ್ರ !—(ತಲೆಯೆತ್ತಿ ನೋಡಿದಳು, ಹರ್ಷ ವಿಷಾದಗಳಿಂದ ಕಂಪಿಸಿದಳು, ಒಡನೆಯೇ ಪತ್ರವನ್ನು ಮರೆಮಾಡಿ ಎದ್ದು ನಿಂತಳು.)

ಮಕ:—(ಕಿರುನಗೆಯಿಂದ)—"ಮುಗ್ಧೆ ! ಏನು ಮಾಡುತಿದ್ದೆ ?

ಚಂದ್ರ:—(ಉತ್ತರವಿಲ್ಲದೆ ಒಮ್ಮೆ ಮನೋವಲ್ಲಭನ ಮುಖವನ್ನು ನೋಡಿದಳು; ಕಣ್ಣುಗಳಲ್ಲಿ ನೀರು ತುಂಬಿ ತಲೆಬಾಗಿದಳು) (ಮಕರಂದನಿಗೆ ಮರೆಯಾಗಿದ್ದ ಪ್ರಣಯವು ಮತ್ತೆ ದ್ಯೋತವಾಗಲು, ಸಲುಗೆಯಿಂದ ಕೈನೀಡಿ;)—,,ಎಲ್ಲಿ ? ಪತ್ರವಾವುದೋ ನೋಡಬೇಕು ?"

ಚಂದ್ರ:—(ಆಗಲೂ, ಕದಲದೆ, ನುಡಿಯದೆ, ನೋಡದೆ ನಿಂತಿದ್ದಳು.)

ಮಕ:—(ತಡೆಯಲೊಲ್ಲದೆ, ಎಡದಕೈಯನ್ನು ಪತ್ನಿಯ ಭುಜದ ಮೇಲಿಟ್ಟು ಬಲಗೈಯಿಂದ ಅವಳ ಗಲ್ಲವನ್ನು ಹಿಡಿದೆತ್ತಿ ತಲೆ

ದೂಗುತ್ತ)—“ನೀನಾಗಿ ಕೊಟ್ಟರೆ ಸ್ವಾರಸ್ಯವಿಲ್ಲವೆಂದೂ, ತಾನಾಗಿ ತೆಗೆದುಕೊಳ್ಳುವುದಾದರೆ ಕೊಳ್ಳಲೆಂದೂ ಸುಮ್ಮನಿರುವೆಯಲ್ಲವೆ? ಆಗಬಹುದು. ನಿನ್ನ ಆಶೆಯನ್ನೇಕೆ ತಪ್ಪಿಸಬೇಕು? ನಾನೇ ತೆಗೆದುಕೊಳ್ಳುವೆನು” (ಎಂದು ಹೇಳಿ ಪತ್ನಿಯ ಉಡಿಗೆ ಕೈಯಿಡಹೋದನು.)

ಚಂದ್ರ:—(ಪತಿಯ ಕೈಗಳನ್ನು ನೂಕಿ ಕುಳಿತುಬಿಟ್ಟಳು.)

ಮಕ:—(ಮತ್ತೂ ವಿನೋದಕ್ಕೆ ಅಭಿಮುಖನಾದನು, ಪತ್ನಿಯ ಮುಂದೆ ತಾನೂ ಕುಳಿತು ತಲೆದೂಗುತ್ತ) “ಭಲೆ! ಬಹಳ ಬಲಿಷ್ಠೆ! ಇಂದಿನವರೆಗೂ ನಿನ್ನ ಬಲವನ್ನು ತಿಳಿದಿರಲಿಲ್ಲ, ದುಷ್ಟೆ! ನೀನು ನನ್ನನ್ನು ಬಲದಿಂದ ಜಯಿಸಿರುವೆ! ಎಲ್ಲಿ? ಜಯವನ್ನು ಹೊಂದಿದ ಮುಖವನ್ನು ನೋಡಬೇಕು!” (ಎಂದು ಹೇಳುತ್ತಲಿದ್ದಂತೆಯೇ ಪತ್ನಿಯ ಮುಖವನ್ನು ಮತ್ತೊಮ್ಮೆ ಎತ್ತಿನೋಡಿದನು ಅತ್ತು ಅತ್ತು ಕೆಂಪಾಗಿರುವ ಕಣ್ಣುಗಳನ್ನೂ ಬಾಡಿದ ಮುಖವನ್ನೂ ಕಂಡು ಭೀತನಾದನು. ಈವರೆಗೂ ಅವನು ಚಂದ್ರಭಾಗೆಯ ಕಣ್ಣುಗಳಲ್ಲಿ ನೀರುತುಂಬಿದ್ದುದನ್ನು ನೋಡಿರಲಿಲ್ಲ; ಅವಳೆಂದೂ ತನ್ನಿದಿರಲ್ಲಿ ಮೊಗಬಾಡಿಸಿ ಮಾತಿಲ್ಲದೆ ನಿಂತಿದ್ದುದನ್ನು ಕಂಡಿರಲಿಲ್ಲ; ಇಂದಿನ ವ್ಯಾಪಾರದಿಂದಾತನು ಖಿನ್ನನಾಗಿ ಕೇಳಿದನು.) “ಏಕೆ ಮಾತನಾಡಲೊಲ್ಲೆ? ಅಳುವುದೇಕೆ? (ಚಂದ್ರಭಾಗೆ ಆಗಲೂ ಮಾತನಾಡಲಶಕ್ತೆಯಾಗಿ, ಕಣ್ಣೀರನ್ನು ತಡೆದು, ಮುಖವನ್ನು ಸೆರಗಿನಿಂದೊರಸಿಕೊಂಡು ಕುಳಿತಳು.)

ಮಕ:—“ಇಷ್ಟೇಕೆ ಆಗ್ರಹವೋ!”

ಚಂದ್ರ:—ಆಗ್ರಹವಾರಲ್ಲಿ?

ಮಕ:—ಮತ್ತೇನು? ನಾನು ಕೇಳಿದುದಕ್ಕೆಲ್ಲಾ, ಕಣ್ಣೀರ್ಗರೆವುದೂ, ನಿಟ್ಟುಸಿರುಬಿಡುವುದೂ, ಇವೆರಡೇ ಉತ್ತರವಾಗಿದೆ.

ಚಂದ್ರ:—ದಕ್ಷಿಣವೇ ಇದಿರಾದಲ್ಲಿ ಉತ್ತರವೇಕೆ?

ಮಕ:—ಏನದು! ದಕ್ಷಿಣವೇ ಇದಿರಾಗಬೇಕೆ? ಅರ್ಥವೇನು? ಚಂದ್ರ!

ಚಂದ್ರ:—ಚಂದ್ರನು ರಾಹುಗ್ರಸ್ತನಾಗುವನು,—

ಮಕರಂದನಿಗೆ ತಲೆ ತಿರುಗಿತು, ಕಳವಳಿಸಿ, ಪತ್ನಿಯ ಮೆಯ್ಯನ್ನು ಮುಟ್ಟಿನೋಡಿದನು. ಅವಳ ದೇಹವಾದ್ಯಂತವೂ, ಜ್ವರದ ವೇಗದಿಂದ ನಡಗುತಿದ್ದುದನ್ನು ತಿಳಿದು ಭ್ರಾಂತನಂತೆ ಕೇಳಿದನು. "ಈಗಲಾದರೂ, ಹೇಳು! ಚಂದ್ರ! ದೇಹಸ್ಥಿತಿ ವಿಚಾರವೇನು? ಏಕೆ ಬಯ್ತಿಡುವೆ?"

ಚಂದ್ರ:—(ಕಿರುನಗೆಯಿಂದ) "ಬಯ್ತಿಟ್ಟರೆ ಕಷ್ಟವೇನೂ ಇಲ್ಲವೆಂದೇ!"

ಮಕ:—ಕಷ್ಟವಿಲ್ಲವೇ? ಹೀಗೇಕೆ ಹೇಳುವೆ? ನೀನು ರೋಗದಲ್ಲಿ ಬಿದ್ದರೆ, ಕಷ್ಟನಷ್ಟಗಳೆರಡೂ ಉಂಟಾಗುವುದಿಲ್ಲವೆ?

ಚಂದ್ರ:—ಅಂತಹುದೇನೂ ಇಲ್ಲ.

ಮಕ:—ಹಾಗಿದ್ದರೆ ಸಂತೋಷ. ಪತ್ರವನ್ನಿನ್ನು ಕೊಡಲಾಗದೊ?

ಚಂದ್ರ:—ಕೊಡಲು ತಡೆಯಿಲ್ಲ. ಆದರೆ ಪತ್ರಾಲೋಕನದಿಂದ ಮನಸ್ಥಿತಿಯೇ ಮಾರ್ಪಟ್ಟರೊ?

ಮಕ:—ಪಟ್ಟಕಾಲಕ್ಕೆ ವಿಚಾರವಿರಲಿ. ಮೊದಲು ಕೊಡು.

ಚಂದ್ರ:—"ನೋಡಬಹುದು" (ಎಂದು ಪತ್ರವನ್ನು ಪತಿಯ ಕೈಯಲ್ಲಿತ್ತಳು.)

ಮಕ:—(ಪತ್ರವನ್ನು ಬಿಚ್ಚಿನೋಡಿದನು. ಚೇಳು ಕುಟಕಿದಂ

ತಾಗಿ ಒಮ್ಮೆ ಬೆದರಿ, ಪತ್ನಿಯನ್ನು ನೋಡಿ) "ಇದನ್ನು ಬರೆದವರಾರು ?"

ಚಂದ್ರ:—ಪ್ರತ್ಯಕ್ಷದರ್ಶಿ!

ಮಕ:—ಏಕೆ ?

ಚಂದ್ರ:—ಪ್ರತ್ಯಕ್ಷವಿಚಾರವನ್ನು ಪ್ರಮಾಣಿಸಬೇಕೆಂದು.

ಮಕ:—(ವಿವರ್ಣಮುಖದಿಂದ ಪತ್ನಿಯ ಮುಖವನ್ನೇ ನೋಡುತ್ತ ಕುಳಿತನು)

ಚಂದ್ರ—(ಕಿರುನಗೆಯಿಂದ) "ಇದೇಕೆ ಮುಖಕಮಲವು ಬಾಡುತ್ತಿರುವುದು ? ಮಿತ್ರವಿಯೋಗವೆಂದೋ ? ಈ ಭ್ರಮರಗಳೇಕೆ ಹೀಗೆ ಕಳಕಳಿಸುವುದು ? ಮಧುಕರಿಯನ್ನು ಕಾಣಬೇಕೆಂದೆ ? ಹಿಡಿತರಲೆ ?"

ಮಕ—(ಅಪ್ರತಿಭನಾಗಿ) ಚಂದ್ರ! ಅದನ್ನು ಇಷ್ಟಕ್ಕೆ ಬಿಟ್ಟುಬಿಡು. ಹೋಗಲಿ, ಈ ಪತ್ರವನ್ನು ಓದು.

ಚಂದ್ರ:—ಬಿಟ್ಟುಬಿಟ್ಟೆನು. ಮುಂದೆ ಹೇಳುವುದಿಲ್ಲ. ನನಗೆ ಓದಲಿಕ್ಕೂ ಬಾರದು.

ಮಕ:—ಹಟವನ್ನು ಹೇಳಿಕೊಟ್ಟವರಾರು ?

ಚಂದ್ರ:—ಆತ್ಮರಾಜನ ಮಂತ್ರಿ.

ಮಕ:—ಈವರೆಗೂ ಇಲ್ಲದ ಕೊಂಕುನುಡಿಯ ಸೊಬಗಿಂದೇನು ?

ಚಂದ್ರ:—ಕಾಲಚಕ್ರ ಪರಿಭ್ರಮಣೆ.

ಮಕ:—ಇದರಿಂದಾಗುವ ಫಲವೇನು ?

ಚಂದ್ರ:—ಫಲಾಕಾಂಕ್ಷಿಣಿಯಾಗಿಲ್ಲ.

ಮಕ:—ನನಗಿನ್ನು ಸಿಟ್ಟಾಗುವುದು. ಮರುಮಾತಿಲ್ಲದೆ ಓದು.

ಚಂದ್ರ:—ಪ್ರಭುವಿನ ಆಗ್ರಹವೂ-ಅನುಗ್ರಹವೇ! ಆದರೂ, ಅಪ

ರಾಧಕ್ಷಮೆಯನ್ನು ಬೇಡುವೆನು. ನನ್ನ ವಾಚನವು ಹಿತವನ್ನುಂಟುಮಾಡಲಾರದು.

ಮಕ:—ಚಂದ್ರ! ಇನ್ನೂ ಹೆಚ್ಚಾಗಿ ವಾದಿಸಿದರೆ ನಾನೇನು ಮಾಡುವೆನೆಂಬುದನ್ನು ತಿಳಿದೇ ಇರುವೆ? ಈವರೆಗೂ ಇದ್ದಂತೆ ಇಂದೂ ಸುಮ್ಮನಿರುವೆನೆಂದು ತಿಳಿಯದಿರು! ನಾನಿಲ್ಲಿಗೆ ಬಂದಿರುವ ಬಗೆಯೇ ಬೇರೆ!! ಬೇಗ ಓದು, ತಡೆಮಾಡದೆ ಓದು. ನೀನು ಓದಿದುದನ್ನು ಕೇಳಿ ಬಹಳ ದಿನಗಳಾಗಿರುವುವು. ನಾನೇ ಕೇಳಬೇಕೆಂದು ಹೇಳುತ್ತಿದ್ದರೂ ನೀನು ಹಟವನ್ನು ತೊಡುವುದೇಕೆ? ಆರಲ್ಲಿ ಭಯ? ಸಂಕೋಚವಿದೇನು?

ಚಂದ್ರ:—(ಹರ್ಷ-ವಿಷಾದ-ಕಾತರಗಳಿಂದ ಕಂಪಿಸುತ್ತ) ಈಗಲೇ ಅಷ್ಟರ ಶಿಕ್ಷೆಗೆ ನಾನು ಪಕ್ಕಾಗಲಾರೆನು! ಪ್ರಭುಚಿತ್ತವು ಪರಿವರ್ತಿತವಾಗಿರುವುದೆಂದೂ ನಿರ್ಧರಿಸಲಾರೆನು. ನನಗೆ ಬಹುಮಾನಗಳೂ ಬೇಕಾಗಿಲ್ಲ. ಹಟವನ್ನು ತೊಡಬೇಕೆಂಬ ಇಷ್ಟವೂ ಇಲ್ಲ. ಆದರೆ ಭಯ ಸಂಕೋಚಗಳೊಂದೂ ಕುಂದುವುದಿಲ್ಲ.

ಮಕ;—ನನ್ನನ್ನು ಕಪಿಯನ್ನಾಗಿ ಮಾಡಿ ಕುಣಿಸುವುದು ನಿನ್ನ ಇಷ್ಟವೋ? ಇನ್ನಾದರೂ ವಿಳಂಬವೇಕೆ?

ಚಂದ್ರ:—(ಪತ್ರವನ್ನು ಕೈಕೊಂಡು ಕಂಪಿಸುತ್ತ ಬಹು ಕಷ್ಟದಿಂದ ವಾಚಿಸತೊಡಗಿದಳು, ಮಕರಂದನೂ ಪತ್ನಿಯ ಮುಖವನ್ನೇ ನೋಡುತ್ತ ಪತ್ರಸ್ಥವಿಚಾರವನ್ನು ಕೇಳುತ್ತಿದ್ದನು. ಪತ್ರವಿವರವೂ ವಾಚಕರ ಅವಗಾಹನೆಗಾಗಿ ಕೆಳಗೆ ಉಲ್ಲೇಖಿಸಲ್ಪಟ್ಟಿರುವುದು.)

## ಪತ್ರ.

" ಹೇ, ಉನ್ಮತ್ತವಾನರ !

ನಿನ್ನ ನೆಲೆಯಾವುದು ? ಆರಾಮವೆಲ್ಲಿ ? ಆಶಾಪಾತ್ರವಾವುದು ? ನಿನ್ನ ಕಲಾಕೌಶಲ್ಯವೇನು ? ಎಲ್ಲವೂ ವಿಪರ್ಯಾಸವೇ ! ಎಲ್ಲವೂ ವಿಪತ್ಕಾರಕವೇ !! ಹೀಗಾದುದೇಕೆ ? ವಿಚಾರಮಾಡು, ವಿಚಾರಮಾಡಿ ತಿಳಿ !! ಮುಂದಣ ಕುಂದೆಣಿಸದೆ ಮಂದತ್ವದಿಂದ ಕಂದು ಬಣ್ಣವನ್ನೇ ಕಾಮಿಸಿರುವೆಯಲ್ಲವೇ ? ಅಯೋಗ್ಯವಾದೆಡೆಯಲ್ಲಿ ಅಡಗಿ, ಅಹಿತಪಾತ್ರದಲ್ಲಿ ಅನುರಕ್ತನಾಗಿ, ಆಪದವನ್ನೇ ಇದಿರ್ಗೊಳ್ಳುತ್ತಿರುವೆಯಲ್ಲವೆ, ? ಈ ದುರಾಶೆಯುಂಟಾದುದೇಕೆ ? ಕೆಡಬೇಕೆಂದೋ ? ಇಂದ್ರಿಯದಮನಶಕ್ತನಾಗದೆಯೊ ? ನೀನಾವುದನ್ನೂ ತಿಳಿಯದಿರುವೆ ! ಇನ್ನಾದರೂ ಕ್ಷಣಕಾಲ ವಿಚಾರಮಾಡಿ ನೋಡು ?

ಮೂರ್ಖ !

ತಿರುಗಿನೋಡು, ನಿನ್ನ ನಿತ್ಯಾನಂದಪಾತ್ರವು ಮೃತ್ಯುಮುಖದಲ್ಲಿ ಬಿದ್ದಿದೆ ! ನಿನ್ನ ಆಶಾರಾಮವೂ ಕೃಶಾನುವಶವಾಗುತ್ತಿದೆ ಇಷ್ಟಾಗಿದ್ದರೂ ಉನ್ಮತ್ತನಂತೆ ನೀನೇಕಿಂತು, ಕಾಲ-ದೇಶ-ವಸ್ತುಗಳ ಸ್ಥಿತಿ-ಗತಿ-ಸ್ವಭಾವಗಳನ್ನು ವಿಚಾರಮಾಡದೆ ಬಹುಳಸಂಕಟಸಂಕೀರ್ಣವಾದ ಗಹನಮಾರ್ಗದಲ್ಲಿ ಪ್ರವೇಶಿಸಿದೆ ? ಮತ್ತೆ ಮತ್ತೇಕೆ ಸುತ್ತುತ್ತಿರುವೆ ? ಈ ಎಡೆಯೇ ನಿನಗೆ ಸರ್ವನಾಶಕರವೆಂಬುದನ್ನು ಇನ್ನೂ ನೀನೇಕೆ ತಿಳಿಯದಿರುವೆ ?

ಜಡಚೇತನ !

ಈಗಲೂ ಹೇಳುವೆನು, ಕಿವಿಗೊಡು ! ತ್ವರೆಮಾಡು !! ತ್ವರೆಮಾಡು !!! ಅಂಧಕಾಭ್ರದಲ್ಲಿ ಅಡಗಿ, ಕ್ಷಣಕ್ಷಣಕ್ಕೆ ತಲೆದೋರಿ

ಮರೆಯಾಗುತ್ತಿರುವ ಮಿಂಚಿನಲ್ಲಿ ಮರುಳಾಗಿ ತಿರುಗುವ ಮರುಳ್ತನವನ್ನು ದೂರಮಾಡು. ನಿತ್ಯಾನಂದಪ್ರದವಾದ ಶಾನ್ತಿಪ್ರಾಸಾದವನ್ನು ಜರಿದು, ತೊರೆದು, ಈ ವರೆಗೂ ಅಲೆದಲೆದು ಬೆಂದುದಕ್ಕಾಗಿ ಪಶ್ಚಾತ್ತಾಪಪಡು!! ಮತ್ತೆ ನಿನ್ನ ಆರಾಮುವನ್ನು ಕಳೆಯೇರಿಸಿ, ಬೆಳಗಿಸುವೆನೆಂದು ಪಂಥವನ್ನು ತೊಡು! ಬಿಡದೆ ಪ್ರಯತ್ನಮಾಡು!! ಆಗಲಿಲ್ಲವೇ ರಾಹುಗ್ರಸ್ತನಾಗುತ್ತಿರುವ ಚಂದ್ರನು ನಿರ್ಮುಕ್ತನಾಗಿ ಪೂರ್ಣಕಳೆಯಿಂದ ಪ್ರಕಾಶಿಸಬೇಕು? ಆಗಲಿಲ್ಲವೇ—ನಿನ್ನ ಆರಾಮುದಲ್ಲಿ ಬ್ರಹ್ಮಾನಂದವು ನೆಲೆಗೊಳ್ಳಬೇಕು? ಆಗಲಿಲ್ಲವೇ, ಇಹಜನ್ಮಧಾರಣೆಯ ಪರಾಕಾಷ್ಠೆಯನ್ನು ನೋಡಲು ನೀನೂ ಪಾತ್ರನೆನಿಸಬೇಕು? ಮರುಳ, ಮರುಳ! ಮತ್ತೆ ಮತ್ತೆ ಒತ್ತಿಯೊತ್ತಿ ಹೇಳುತ್ತಿರುವೆನು. ಮುಳಿಯದಿರು, ಹಳಿಯದಿರು, ಮರೆಯದಿರು, ತೊರೆಯದಿರು, ನಿನಗೆ ಸುಖಸಂಗತಿ ಸಂಗಡಿಸಲಿ.

ಇಂತಾಶಿಸುವ ಶಾಂತಿಸಖೀ"

[ಚಂದ್ರಭಾಗೆಯು ಕಡೆಯ ವಾಕ್ಯಮಾಲೆಯನ್ನು ಓದುತ್ತಿರ್ದಾಗಲೇ ಕೊರಳು ಕಟ್ಟಿತು; ಆದರೂ ಕಡುಕಷ್ಟದಿಂದ ಪತ್ರವನ್ನು ಮುಗಿಸಿ ಪತಿಯ ಪಾದತಲದಲ್ಲಿ ಬಿದ್ದುಬಿಟ್ಟಳು. ಮಕರಂದನು ಪ್ರಣಯವನ್ನು ದೂರಮಾಡಿ ಪ್ರಳಯಭೈರವನಂತೆ ಕೆರಳಿ ಎದ್ದುನಿಂತು ಕರ್ಕಶಸ್ವರದಿಂದ ಹೇಳಿದನು]—"ಸಾಯಬೇಕೆಂಬುದೇ ನಿನ್ನ ಇಷ್ಟವಾದರೆ, ಅಳುವನ್ನೇ ಹಿಡಿ. ಇನ್ನುಮುಂದೆ ವಿರಾಗಿಣಿಯ ಬಳಿಗೆ ಹೋಗಲಾಗದು. ತಿಳಿದೆಚ್ಚತ್ತಿರು!!!

ಚಂದ:—ಎಲ್ಲಿಗೂ ಹೋಗಬೇಕಾದುದಿಲ್ಲ. ಆದರೆ ಬಂದುಭಿಕ್ಷೆ?

ಮಕ:—"ಇನ್ನೇನು ನಿನ್ನಭಿಕ್ಷೆ! ಬೇಗಬಗುಳು!!

**ಚಂದ್ರ**:—ನನಗೆ ಇಹಭೋಗಾನುಭವವು ಸ್ವಾಮಿಕೃಪೆಯಿಂದ ತಕ್ಕಷ್ಟು ದೊರೆದಿದೆ. ಇನ್ನುಳಿದಿರುವುದಾವುದೂ ಇಲ್ಲ. ಆದರೆ, ನನ್ನಸ್ವಾಮಿ, (ಕಂಠವು ಕಂಪಿತವಾಯ್ತು) ಕುಲಟಾ-ಸಂಗತ್ಯಾಗ-ವಿಚಾರವಾಗ್ದ್ದನ" ಅಷ್ಟಕ್ಕೇ ನಿಲ್ಲಿಸಿಬಿಟ್ಟಳು.

**ಮಕ**:—ಹೂಂ: ಮುಂದೆ ಉಸಿರೆತ್ತದೆ ನಿಲ್ಲಿಸು: ಮನೆಬಿಟ್ಟು ಹೋಗಬೇಕಾಗುವುದು; ನನ್ನವೃತ್ತಿ, ನನ್ನಆಶೆ, ನನ್ನ ಸ್ವಾತಂತ್ರ್ಯಗಳನ್ನು ನೀನು ಎಂದೂ ತಡೆಯಲಾರೆ. ಎಚ್ಚರಿಕೆ! ಎಚ್ಚರಿಕೆ!! ಇಂದಿನ ನಿಷೇಧವನ್ನು ಚೆನ್ನಾಗಿ ನೆನನೆನದಿಟ್ಟಿರು? ಎಂದು ಧಿಕ್ಕರಿಸಿ ಹೊರಟುಹೋದನು.

ಪ್ರಿಯ ಸೋದರಿಯರೇ,

ಏನೆನ್ನುವ? ಉನ್ಮತ್ತ ವಾನರರಿಗೆ ಉಪದೇಶಿಸುವವರೇ ಉನ್ಮತ್ತರೆನ್ನಬೇಕಲ್ಲವೇ? ಸಹಜ; ಅಷ್ಟಲ್ಲದೆಯೇ "ಅಪ್ರಾರ್ಥಿತರಾಗಿ ಉಪದೇಶಿಸಬಾರ" ದೆಂಬ ನೀತಿಯುಂಟಾಗಿದೆಯೇ? ಮಾಡುವುದಿನ್ನೇನು? ಮಧುಪಾನಾಸಕ್ತರಾಗಿ, ಮಾನವಧರ್ಮವನ್ನೇ ತೊರೆದು, ಪಶುಜೀವಿಗಳಾಗಿರುವ ಕುಲಹೀನವಾನರರನ್ನು ನೋಡಿ ನೋಡಿ, ಕಣ್ಣೀರ್ಗರೆವುದೊಂದಲ್ಲವೇ ಮಾಡತಕ್ಕುದು? ವಿಚಾರಶಕ್ತಿಹೀನತೆಯಿಂದ, ಅವ್ಯವಸ್ಥಿತಚಿತ್ತರೆನಿಸುವ ತರುಣರನ್ನು ಅಶಿಕ್ಷಾರೂಪದ ಹಾವ-ಭಾವ ವಿಲಾಸಾದಿಗಳಿಂದ ಉನ್ಮತ್ತಕಪಿಗಳನ್ನಾಗಿ ಮಾಡಿ, ಅವರ ಸರ್ವಸ್ವವನ್ನೂ ಸೂರೆಗೊಳ್ಳುವ ಭುಜಂಗಶೇಖರಿಯರ ಕಾಮಾಂಧತೆಗಾಗಿ ಪರಿತಾಪಪಡುವುದಲ್ಲವೇ ನಮಗೆ ಮಾಡತಕ್ಕುದು? ವಿರಾಗಿಣಿಯು, ಪಾಪ! ಮೂರ್ಖ ಮಕ

ರಂದನು ಮಾರ್ಗಕ್ಕೆ ಬರಲೆಂದು ಮಾಡಿದುದೇ ಹೀಗಾದಮೇಲೆ ಹೇಳುವುದಿನ್ನೇನು? ಕಾಲಮಹಿಮೆಯೆಂಬುದೊಂದೇ! ಕಂಬಳಿ ಯೆಂದು ಹಿಡಿದಂದು, ಕರಡಿಯಾಗಿ ಕೈಕಡಿದಂತಾದುದಲ್ಲವೇ? ಆಗಲಿ, ಆಗಲಿ! ಕರ್ಮಫಲಾನುಭವವು ಆರಿಗೂ ತಪ್ಪಿಸುವಲ್ಲ. ಮಕರಂದನೂ ಅವನಂತಿರುವವರೂ ತಾವು ಅಟ್ಟುವನ್ನು ತಾವೇ ಉಣುವಾಗಳಲ್ಲವೇ ಗೋಣಗಬೇಕು? ಚಂದ್ರಭಾಗೆಯರೇ! ಶಾಂತಿ ಯನ್ನು ಹಿಡಿಯಿರಿ!!

---

॥ ಶ್ರೀಃ ॥

## ಚತುರ್ದಶ ಪರಿಚ್ಛೇದ.

---

(ಭೀಷಣಪ್ರತಿಜ್ಞೆ)

ಸಹೃದಯ ಸೋದರಿಯರೆ! ನಮ್ಮ ಅಬಲಾಸಾಮಾನ್ಯಕ್ಕೆ ಪ್ರಬ ಲವಾದ ಆಯುಧವಾವುದು? ಅಳುವುದು. ಅಬಲೆಯರ ಪ್ರಬಲ ವಾದ ಅಳುವೊಂದರಿಂದಲೇ ಅವರು ಎಷ್ಟೆಷ್ಟು ದೊಡ್ಡ ದೊಡ್ಡ ಕೆಲಸಗಳನ್ನು ಮಾಡಿ, ಮಾಡುತ್ತಿಲ್ಲ? ಅಳುವುದು, ಹಳಿವುದು, ಹಲಬುವುದು, ಕಡೆಗೆ ಮುಸುಕಿಟ್ಟು ಮಲಗುವುದು, ಅನ್ನನಿದ್ರೆಗ ಳನ್ನುಳಿದು, ಕಲ್ಲುಮರಗಳಂತೆ ಕದಲದೆ ಬಿದ್ದು, ಆಪ್ತೇಷ್ಟರನ್ನು ಅಣ್ಣೆಕಲ್ಲುಗಳಂತ ಕುಣಿದಾಡಿಸಿಬಿಡುವುದೂ—ಇವಲ್ಲವೇ ನಮ್ಮವ ರಿಗೆ ವಾಡಿಕೆಯಾಗಿ ಬಂದಿರುವ ಸಾಹಸೋದ್ಯಮವು? ಸಂದೇಹ

ವೇನು ? ಇದರಿಂದಲೇ ಕೈಕೆಯ ಕೀರ್ತಿಲತೆಯು ಆಚಂದ್ರಾರ್ಕ ವಾಗಿ ಮೆರೆದುದು ! ಈ ಗುಣವೇ ಹಿಂದೆ ಅನೇಕ ರಾಜಾಧಿರಾಜ ರನ್ನೂ ತನ್ನ ಪಾಶದಿಂದ ಬಂಧಿಸಿದುದು !! ಈ ಗುಣವೇ ಈಗಲೂ, ಪ್ರತಿಕ್ಷಣದಲ್ಲಿಯೂ, ಪ್ರತಿಗೃಹದಲ್ಲಿಯೂ ಅಬಲಾ ಸಾಮಾನ್ಯ ದಲ್ಲಿ ಆವೇಶಿಸುವಂತೆ ಮಾಡಿ, ಮಾಡುತ್ತ, ರಾಜೇಂದ್ರಪತ್ನಿಯಾದ "ಚಿತ್ರಾಂಗಿ-ಚಿತ್ರಾಂಗಿ" ಎಂಬ ಪ್ರಖ್ಯಾತಿಯನ್ನು ಪ್ರಕಾಶಪಡಿ ಸುತ್ತಿರುವುದು !!! ಅದಿರಲಿ ; ಸದ್ಯಃಸ್ಥಿತಿಯಲ್ಲಿ ಈ ಚರಿತ್ರಭಾಗ ದಲ್ಲಿ ಚಿತ್ರಾಂಗಿ ಯಾರು ? ಕಾಮಾಂಧವೃತ್ತಿಯಲ್ಲಿ ತುಂಗೆ ; ಕಾಠಿ ಣ್ಯವೃತ್ತಿಯಲ್ಲಿ ಕೃಷ್ಣೆ—ಇವರಿಬ್ಬರನ್ನು ಮಾತ್ರ ಉದಾಹರಿಸ ಬಹುದು.

ತುಂಗಭದ್ರೆ ಅಂದು ತಂದೊಡ್ಡಿದ ವಿಷಜ್ವಾಲೆ ಕೃಷ್ಣವೇ ಣಿಯ ಸುತ್ತಲೂ ಆಕ್ರಮಿಸಿರುವುದು. ಅದರ ಮಹತ್ತಿನಿಂದ ಅವ ಳಿಗಾವುದೂ ಬೇಕಾಗಿರದು. ಮೊದಲಿನದಿನ ಏಕಾಶನ ! ಮರು ದಿನ ನಿರಶನ !! ನುಡಿಯಿಲ್ಲ, ನಡೆಯಿಲ್ಲ. ಆದರೆ ಕಣ್ಣೀರ್ಬಿಡುವು ದೊಂದಿದ್ದಿತು. ಮತ್ತಿನ್ನಾವ ಹಂಬಲಕ್ಕೂ ಎಡೆಯೇ ಸಿಲುಕು ವಂತಿಲ್ಲ. ಈಗೇನುಮಾಡಬೇಕು ? "ಪತಿಯೇ ಬರಬೇಕು ! ಪಾದಾಕ್ರಾಂತನಾಗಿ ಕ್ಷಮೆಯನ್ನೇ ಬೇಡಬೇಕು !! ಅಂತಾದರೂ ಬೇಡುವ ಪತಿಯನ್ನು ನೋಡಲೊಲ್ಲದೆ, ನಿಷ್ಠುರವಚನದಿಂದ ಚನ್ನಾಗಿ ಶಿಕ್ಷಿಸಿ, ಮನದಳಲನ್ನು ಕಳದುಕೊಳ್ಳಬೇಕು." ಆದರೆ ಹೇಗಾಗುವುದು ? ರಘುನಾಥನು ನವನಾಗರಿಕತೆಯ ಸುಧಾರಕ ಮಂಡಲಿಯಲ್ಲಿ ಸೇರಿದವನಾಗಿಲ್ಲ. ನಾಗರಿಕತೆಗೆ ಮುಖ್ಯಲಕ್ಷಣ ವೆನ್ನಿಸುವ ಶೃಂಗಾರರಸವೆಂಬುದೇ ಈತನಿಗೆ ಅನುಭವವಿಲ್ಲದು ದಾಗಿರುವುದು. ಇಂತಿರುವಾ ನಿಶ್ಚಲಮತಿಗೆ ವರ್ತಮಾನವನ್ನು

ಕೊಡುವವರಾರು ? ಏನೆಂದುಹೇಳಿ ಆ ಉದ್ಧೃತಪುರುಷನನ್ನು ಕರೆತರಬೇಕು ? ಹೇಗೂ ಸಾಧ್ಯವಿಲ್ಲ. ಆದರೂ ತುಂಗಭದ್ರೆಯು "ಅತ್ತಿಗೆ, ಅನ್ನನೀರಿಲ್ಲದೆ ಸಾಯುತ್ತಿರುವಳೆಂದು" ಅಣ್ಣನಲ್ಲಿ ಹೇಳಿದಳು. ಆದರೆ,—"ಕರ್ಮಫಲವನ್ನು ಅನುಭವಿಸಲಿ ! ಹಿತಸೂಚನೆಗೆ ಕಿವಿಗೊಡದವರನ್ನು ಆರೇನುಮಾಡಲಾದೀತು ?" ಎಂಬ ಉದಾಸೀನೋಕ್ತಿಯೊಂದೇ ಪ್ರತ್ಯುತ್ತರವಾಯ್ತು, ಮತ್ತೇನು ? ಹೇಗಾದರೂ ತಾಯಿ ದೊಡ್ಡವಳಲ್ಲವೆ ? ಆರ ಮಾತನ್ನಾದರೂ ಮೀರಲಾಗುವುದು ; ತಾಯಿಮಾತು ? ರಘುನಾಥನು, ಲಕ್ಷ್ಮೀದೇವಮ್ಮನು ಹೇಳಿದಮೇಲೆ ಮೀರಲಾರದೆ ರಾತ್ರಿಯೂಟಕ್ಕೆ ಪತ್ನಿಯನ್ನು ಎಬ್ಬಿಸಲಿಕ್ಕೆಂದು ಬಂದನು ಬಂದವನು ಕೃಷ್ಣವೇಣಿಯ ಹಾಸುಗೆಯಮೇಲೆ ಕುಳಿತು, ಅವಳ ಬೆನ್ನಮೇಲೆ ಕೈಯನ್ನಿರಿಸಿ,— "ಏಳು, ಕೃಷ್ಣಾ ! ಏಳು ಏಳು ! ಎಷ್ಟು ದಿನಗಳು ಊಟವಿಲ್ಲದಿರಬಹುದು ? ಎದ್ದುಹೋಗಿ ಊಟಮಾಡಿಬಾ ! ಉಳಿದುವೆಲ್ಲವೂ ಹಾಗಿರಲಿ."

ಕೃಷ್ಣ—(ಮುಸುಕಿನೊಳಗಿದ್ದೇ ಕರ್ಕಶದಿಂದ) ಹೊಟ್ಟೆತುಂಬಿರುವುದು ;

ರಘು—ಹೊಟ್ಟೆ ತುಂಬಿದೆಯೊ ? ಏನೇನನ್ನು ತಿಂದೆ ?

ಕೃಷ್ಣ:—ಮಾಡಿದುದನ್ನೇ ತಿಂದೆನು ; ತಿನ್ನುತ್ತಿರುವೆನು. ಕೇಳುವುದೇಕೆ ?

ರಘು·—ಮಾಡಿದುದನ್ನು ಉಣಬೇಕಾದುದೇ ಮಾನವರ ಮುಖ್ಯಕಾರ್ಯವು. ಅದಿರಲಿ ; ಇನ್ನೂ ಅಳುವುದೇಕೆ ?

ಕೃಷ್ಣ:—ಹಣೆಯಬರೆಹಕ್ಕೆ,

ರಘು·—(ವ್ಯಂಗ್ಯವಾಗಿ)—"ಹಣೆಯಬರೆಹವೊ ? ಅದೆಂತಿರುವುದು ? ಅಳಬೇಕೆಂದಿರುವುದೊ ?

ಕೃಷ್ಣ:—ಇಲ್ಲದಿದ್ದರೆ ಅಳುತ್ತಿರಲಿಲ್ಲ !

ರಘು:—ಎಲ್ಲಿ ? ಏನೆಂದು ? ಹೇಗೆಬರೆದಿರುವುದೋ ನೋಡುವೆನು! ಹಣೆಯನ್ನಾದರೂ ತೋರಿಸು ?

ಕೃಷ್ಣ:—ನೋಡಿ ಮಾಡತಕ್ಕುದೇನೂ ಇಲ್ಲ. ಹೋಗಿ ಕೆಲಸವನ್ನು ನೋಡಬಹುದು.

ರಘು:—ಅದಕ್ಕೆಂದೇ ಬಂದಿರುವುದು.

ಕೃಷ್ಣ:—ಇಲ್ಲಿ ಕೆಲಸವಿಲ್ಲ ; ಮಂತ್ರಾಲೋಚನೆಗೆ ತೆರಳಬಹುದು.

ರಘು:—ಮಂತ್ರವೊ ! ಏಕಾಂತವೊ !! ಎಂತೂ ಕಾಂತಾಸೇವೆಗೆಂದೇ ಬಂದಿರುವೆನು.

ಕೃಷ್ಣ;—ಅವಶ್ಯವಿಲ್ಲ. ಹೊರಟುಹೋಗಬಹುದು.

ರಘು:—"ಓಹೋ ! ರಾಜ್ಞಿಯವರ ಮಹದಾಜ್ಞೆ !! ಆಗಲಿ ! ಎಲ್ಲಿಗೆ."

ಕೃಷ್ಣ:—ಸರಸಸಲ್ಲಾಪವಿಲ್ಲೇಕೆ ! ಆಪ್ತೇಷ್ಟರಲ್ಲಿಗೆ ಹೋಗವೆ–

ರಘು.—ಹೋ ! ಅದೇನು ? ಆಪ್ತೇಷ್ಟರ ಬಳಿಗೆ ಹೋಗುವಂದು ಕೇಳಬೇಕೊ ?

ಕೃಷ್ಣ:—ಇಲ್ಲೇಕೆ ಕುಳಿತಿರಬೇಕು ?

ರಘು:—ನಷ್ಟವೇನು ?

ಕೃಷ್ಣ.—ನಾನು ಅವಿಶ್ವಾಸಿನಿ ! ನನ್ನನ್ನು ಕೆಣಕಿ, ಸುಮ್ಮನೇ ನಿಷ್ಠುರವನ್ನೇಕೆ ಕೇಳಬೇಕು ?

ರಘು:—ನಿನ್ನಲ್ಲಿ ಅವಿಶ್ವಾಸವಿದ್ದರೆ, ನನ್ನನ್ನೇನು ಮಾಡಬಲ್ಲುದು? ನಿಷ್ಠುರವೊ, ಶಿಷ್ಟಾಚಾರವೊ- ಆವುದಾದರೂ ಬಂದಕ್ಕೆ ಇಂದು ಜಯವಾಗಲಿ ! ನೋಡಿ ಹೋಗುವೆನು, ಇನ್ನೂ ಎಷ್ಟು ಹೊತ್ತು ಮುಸುಕಿನಲ್ಲೇ ಅಡಗಿರಲಾದೀತೆಂಬುದ

ನ್ನೂ ಊಟಬಿಟ್ಟು ಹಟಸಾಧಿಸುವುದೇನೆಂಬುದನ್ನೂ ತಿಳಿಯಲಾರೆನೇನು ?

ಕೃಷ್ಣ:—(ಪೆಟ್ಟುತಿಂದ ನಾಗರಹಾವಿನಂತೆ ಬುಸುಗುಟ್ಟುತ್ತ ಮುಸುಕನ್ನು ತೆಗೆದೆಸೆದು, ಹಾಸುಗೆಯನ್ನುಳಿದು, ದೂರಸಾರಿ ಶಠಭಾವದಲ್ಲಿ ಕುಳಿತಳು.)

ರಘು:—(ತಲೆದೂಗುತ್ತ ವ್ಯಂಗ್ಯವಾಗಿ)—ಭಲೆ ! ಭಲೆ !! ಇಂದಿನ ಸೊಗಸೇ ಸೊಗಸು ! ಇಂದಿನ ಸೊಬಗಿನ ಸುಗ್ಗಿಯೇ ಸುಗ್ಗಿ !!

ಕೃಷ್ಣ:—ಈ ಸೊಗಸು, ಈ ಸೊಬಗುಗಳಾವಕೆಲಸಕ್ಕೆ ಬರುವುವು ? ಕಾವಿಯನ್ನುಟ್ಟು, ವಿರಕ್ತವೇಷದಿಂದ ತುಣುಕು ಮಿಣುಕು ಕಲಿತಿದ್ದರಲ್ಲವೇ ' ಸೊಗುಸು-ಸೊಗಸೆನ್ನಿಸುವುದು ?

ರಘು:—(ಖತಿಗೊಂಡು),—" ಅನಿಷ್ಟಕ್ಕೆ ಶನೀಶ್ವರನೇ ಗುರಿ " ಯೆಂದು ವಿರಾಗಿಣಿಯನ್ನೇಕೆ ದೂರಿಗೆಳೆಯಬೇಕು? ಅವಳಲ್ಲಿ ಕಾಣುವ ತುಣುಕುಮಿಣುಕೇನು ?

ಕೃಷ್ಣ:—ತುಣುಕುಮಿಣುಕಲ್ಲದಿದ್ದರೆ, ತಳುಕುಬಳುಕು ನಟನೆ ! ಉನ್ಮಾದವಿದ್ಯೆ ' ಗಂಡುಬೀರತನ !!

ರಘು:—(ದರ್ಪಿತಸ್ವರದಿಂದ)—" ಅವಳ ಉನ್ಮಾದರೋಗದಲ್ಲಿ, ಸ್ವಲ್ಪಕ್ಕೆ ಸ್ವಲ್ಪವಾದರೂ, ನಮ್ಮ ಇತರ ವಿಧವಾ ವಿಯೋಗಿನೀ ಸೋದರಿಯರಿಂದ ಅನುಸರಿಸಲ್ಪಟ್ಟರೆ, ಈ ನಮ್ಮ ಭಾರತಮಾತೆಗೆ, ಹಾಗೂ, ನಮ್ಮ ಕರ್ನಾಟಕ ಭೂಮಾತೆಗೆ ಈಗುಂಟಾಗಿರುವ ಭ್ರೂಣಹತ್ಯೆ ಪ್ರಾಣಹತ್ಯೆ ಬ್ರಹ್ಮಹತ್ಯೆ ಸ್ತ್ರೀಹತ್ಯಾದಿ ಘೋರಪಾತಕ ಸಂಬಂಧವಾದ ಕ್ಷಯ

ರೋಗವಮಾಲಿನ್ಯವು ಬಹು ಜಾಗ್ರತೆಯಾಗಿ ನಿವಾರಣೆಯಾಗುವುದೆಂದು ಹೇಳಬಲ್ಲೆನು. ಅವಳಲ್ಲಿರುವ ತಳಕುಬಳಕಾವುದೋ ಅದೇ ನಟನೆಯೇ ನಮ್ಮ ದೇಶೀಯಸೋದರೀವರ್ಗದಲ್ಲಿಯೂ ಸರ್ವತ್ರಪ್ರಕಾಶವಾಗಲೆಂಬುದೇ ನನ್ನ ಪ್ರಾರ್ಥನೆ! ಮತ್ತೇನು? ಗಂಡುಬೀರತನವೆಂತು?

ಕೃಷ್ಣ:—ನಾನೇಕೆ ಹೇಳಬೇಕು? ಓದುಬರೆಹದ ನೆವದಿಂದ ನಾಣ್ಗೇಡಿಯಾಗಿ, ಕಂಡಕಂಡವರಲ್ಲಿ ವಾದಿಸುವುದೂ, ಸಿಕ್ಕಿದ ಗಂಡಸರಿಗೆ ಲೇಖನವನ್ನು ಕಳುಹುವುದೂ, ಜನರ ಗುಂಪಿನಲ್ಲಿ ನುಗ್ಗಿ ಉಪನ್ಯಾಸಿಸುವುದೂ, ಇವೆಲ್ಲವೂ ಆರಿಗೂ ರುಚಿಸವು! ಮಾನವಿಲ್ಲದ ಈ ಬಾಳು, ನಿಮಗೇ ಮೆಚ್ಚಿನದಾಗಿರುವುದು.

ರಘುನಾಥ.—(ಕಿರುನಗೆಯಿಂದ) ಸಹಜವೇ! ಸತ್ವಮಯಪ್ರಕಾಶವಾದ ಚಂದ್ರಕಿರಣಕ್ಕೂ, ಸುಖಸಮಾಧಾನದ ನೆಲೆಯಾದ ಶಾಂತಿಗೇಹಕ್ಕೂ ಎಷ್ಟೋ ಕೆಳತನವುಂಟು! ಅಲ್ಲದೆ, ಶಾಂತಿಗೆ ಭೀಭತ್ಸವು ಹಿತವಲ್ಲ, ಶಾಂತಿಪೂರ್ಣವಾದ ವಿರಾಗಿಣಿಯ ಅನಿಂದಿತಚಿತ್ತವು, ನನ್ನನ್ನು ಪ್ರೋತ್ಸಾಹಿಸುತ್ತಿರುವುದು. ಇಷ್ಟಕ್ಕೇ ತಿಳಿಗೇಡಿಗಳೂ, ಕುಲಗೇಡಿಗಳೂ ಬೇಕಾದಂತೆ ಹಳಿದಳಿದು ಧನ್ಯರೆನ್ನಿಸಲಿ! ನಮಗಾಗುವ ಕುಂದೇನು?

ಕೃಷ್ಣ:—ನಾನೂ ಅದನ್ನೇ ಹೇಳುತ್ತಿರುವುದು,

ರಘು:—ಮತ್ತೇಕೆ, ಇಷ್ಟು ಅಸಮಾಧಾನಪಡುವೆ?

ಕೃಷ್ಣ:—ನಿಮ್ಮ ಗೊಡವೆಗೆ ಬಾರದಿರುವ ನನ್ನನ್ನೇಕೆ ದೂಷಿಸಬೇಕು

ರಘು —ದೂಷಣೆಯೇ ? ಹೇಳುವವರಾರು ? ತುಂಗೆಯೊ ?

ಕೃಷ್ಣ—ಆರಾದರಾಗಲಿ, ದೂಷಿಸಿದುದುಂಟೊ ?

ರಘು:—ನಾವು ದೂಷಿಸಿಮದೇನೆಂಬುದನ್ನು ನಿನ್ನಲ್ಲಿಯೂ ಹೇಳಲು ಕೇಳುವೆಯೊ ?

ಕೃಷ್ಣ —ಕಿವಿಕೇಳ ಬರುವುದು

ರಘು:—ಸರಿ, ನಿನ್ನಿನ ಸಾಯಂಕಾಲದಲ್ಲಿ ನಡದ ತುಂಗೆಯ ದುರಾಚಾರ, ನಾಟಕಮಧ್ಯದಲ್ಲಿ ನಡದ ಮಾತುಗಳು, ಮುಕರಂದನ ಅವಿಚಾರ, ಆತನು ಪತ್ನಿಯಲ್ಲಿ ತೋರುವ ಕೃತಘ್ನತ, ಚಂದ್ರಭಾಗೆಯ ಶಾಂತತ, ಮತ್ತೂ ನಿನ್ನ ಅಭಿಮಾನ ಅಹಂಕಾರಗಳು, ಇವೇ ನಮ್ಮ ದೂಷಣೆಗೊಳಪಟ್ಟ ವಿಚಾರಗಳು.

ಕೃಷ್ಣ —ಆ ಮನೆ ಹಾಳಿಗೆ ಈ ತಲೆಹರಟೆ ಯೇಕಂತೆ ?

ರಘು :—(ಹುಬ್ಬುಗಂಟ್ಟಿಕ್ಕಿ) ಬಯ್ದು ನಾಲಗೆಯನ್ನೇಕೆ ಹೊಲಗೆಡಿಸುವೆ ? ಆವಳಷ್ಟೋ ಮಿತವಾಗಿ, ನನ್ನ ಪ್ರಶ್ನೆಗೆ ಉತ್ತರವನ್ನು ಕೊಡುತ್ತಿದ್ದಳು, ತಲೆಹರಟೆಯೆಂಬ ರೋಗವೇನೂ ಆಕೆಗಿಲ್ಲ !

ಕೃಷ್ಣ—ಅಹುದು ಅವಳೇ ನಿಮಗೆ ಸುಪ್ರೀತೆ ? ಒಡಹುಟ್ಟಿದ ತುಂಗ ಅಹಿತೆ ! ಅಲ್ಲವೆ ?

ರಘು:—ದಾರಾಳವಾಗಿ ಹೇಳುವೆನು ! ಆರ ನಡತೆಯಲ್ಲಿ ಕಪಟವಿಲ್ಲವೋ ಆರ ಮನವು ಪವಿತ್ರವಾದುದೋ ಆರ ಆತ್ಮನು ಸರ್ವಭೂತಸಮತ್ವವನ್ನು ಹೊಂದಿರುವನೋ ಅಂತಹರೇ ಲೋಕಪ್ರಿಯರು ! ಪವಿತ್ರತಮೆಯಾದ ವಿರಾಗಿಣಿ, ನನಗೆ ಮಾತ್ರವಲ್ಲ, ಜಗತ್ತಿಗೇ ಆಪ್ತಸಖಿ !

ಕೃಷ್ಣ:—ಬಲ್ಲೆನು! ಬಹು ಸಜ್ಜನೆ!

ರಘು:—ಆಕೆಗೆ ಅಹಿತವನ್ನು ಕೋರುವವರು ನೀವುಮಾತ್ರವೇ!

ಕೃಷ್ಣ:—ಅಹುದಹುದು, ಹುತ್ತದಲ್ಲಿರುವ ಹಾವು! ಹೊರಬಿದ್ದಾಗಲೇ ತಿಳಿಯಬೇಕು! ನಾವೇ ಅಹಿತರ ಬಳಿಯಲ್ಲಾದರೂ ನರಲುತ್ತಿರುವುದೇಕೆ?

ರಘು:—(ಕ್ಷುಣ್ಣನಾಗಿ) ನಿನ್ನಾಶಯವೇನು? ವಿರಾಗಿಣಿಯನ್ನು ಅಟ್ಟಿಬಿಡಬೇಕೆಂದೊ?

ಕೃಷ್ಣ:—ಅಟ್ಟಲೊಲ್ಲದಿದ್ದರೆ, ಕಟ್ಟಿಕೊಂಡು ಅಳಬಹುದು! ಆರಿಗೇನು? ಅಂದೇ ವಿಪತ್ತಿಗೆ ಗುರಿಯಾದೆನೆಂದು ನಿರ್ಧರಿಸಿದುದಾಯ್ತು! ಕಡೆಗೆ ನೀವೇ ನೋಡಿ ಸಂತೋಷಪಡಬಹುದು. ಈವರೆಗೂ, ಕಷ್ಟಪಟ್ಟು ಗಳಿಸಿದ ಕೀರ್ತಿಯನ್ನು, ಬೀದಿಯ ಮಾರಿಗಾಗಿ ಕಳೆದುಕೊಳ್ಳುವಿರಿ! ನಾನು. ಸಾಯಲು (ರಘುನಾಥನು, ಎದ್ದು ನಿಂತನು; ತಾನು ಎಲ್ಲಿರುವನೆಂಬುದೂ, ತನ್ನಿದಿರೆ ನಿಷ್ಠುರವಾಡುವ ವ್ಯಕ್ತಿಯಾರೆಂಬುದೂ, ಈತನ ಮಿದುಳನ್ನು ಬಿಟ್ಟು ಬಹು ದೂರದಲ್ಲಿದ್ದುವು. ಉಗ್ರಭಾವದಿಂದ ಕೂಗಿ ಹೇಳಿದನು.) ಕೃಷ್ಣೆ! ಈಗಲೀಗ ಹೇಳುವೆನು? ನೀನು ನನ್ನ ಸಹಧರ್ಮಿಣಿಯಲ್ಲ; ಧರ್ಮವೃಷಹಂತಕಾರಿಣಿ! ನಾನು, ನಿನ್ನನ್ನು ಕಾಮಪೂರ್ತಿಗಾಗಿಯೇ ವಿವಾಹವಾದೆನೆಂದೆಣಿಸಬೇಡ? ನನಗಾಕಾಮವಾಸನೆ, ಬಹು ದೂರದಲ್ಲಿರುವುದು! ನಡೆದ ವಿಚಾರದಲ್ಲಿ ಮಿಡುಕಬಾರದೆಂದು ಸುಮ್ಮನಿರಬೇಕಾಗಿದೆ! ಆದರೆ, ನಿನ್ನಿಂದ ಶಾಂತಿಕೆಟ್ಟಿದೆ, ನಿಷ್ಠುರೆ! ನಿನ್ನ ನಾಮಕೃಷ್ಣಾತ್ವವೇ ನಿನ್ನ ಪ್ರಕೃತಿ ಸ್ವಭಾವಗಳನ್ನು ಆಕ್ರಮಿಸಿಕೊಂಡಿರುವುದು.

ಮಾತ್ಸರ್ಯವೆಂಬ ಘೋರವಿಷವನ್ನು, ಆ ಕುಲಗೇಡಿಯ ಹೇಳಿಕೆಯಿಂದ ಹೊರಹೊಮ್ಮಿಸುತ್ತಿರುವೆ! ಅದರ ಫಲಾನುಭವವು ನಿನಗೆಂದೂ ತಪ್ಪಲಾರದು! ಇಂದು ನಿನ್ನಲ್ಲಿ ಅಪಲಕ್ಷಿಸಿವ ಕಾಳವ್ಯಕ್ತಿಯು ವರ್ತನವೂ ನಿದರ್ಶನಕ್ಕೆ ಬಾರದಿರದು. ಈಗಳಾಮಾತೇಕೆ?

ದುರಭಿಮಾನಪರೆ!

ನಮ್ಮ ವಿರಾಗಿಣಿಯನ್ನು ನಾನು ಬೇರೆಯಾಗಿ ಭಾವಿಸಲಿಲ್ಲ. ಅವಳನ್ನು ನನ್ನ ಹೊರಗಿನ ಪ್ರಾಣವೆಂದೇ ತಿಳಿದಿರುವೆನು. ನನ್ನ ದಿಟದ ತಂಗಿಯೆಂದರೆ ಅವಳೊಬ್ಬಳೇ. ಒಡಹುಟ್ಟಿದಮಾತ್ರಕ್ಕೆ ತುಂಗೆ ನನ್ನ ತಂಗಿಯಾಗಿಲ್ಲ. ಆ ನಮ್ಮ ವಿರಾಗಿಣಿಯನ್ನು ನನ್ನ ಸಂಕಲ್ಪದಂತೆ ಆನಂದಮಂದಿರದಲ್ಲಿ ನೆಲೆಗೊಳಿಸುವವರೆಗೂ, ಈ ಮನೆಯಿಂದ ಅವಳನ್ನು ಬೀಳ್ಕೊಡಲಾರೆನು. ನಿನ್ನ ಕ್ಷುದ್ರವಾಕ್ಯಗಳಿಗೆ ಕಿವಿಗೊಟ್ಟು, ಕರ್ತವ್ಯವನ್ನು ಕೆಡಿಸಿಕೊಳ್ಳುವ ಮರುಳನು ಈ ರಘುನಾಥನಲ್ಲ! ತಿಳಿದೆಚ್ಚತ್ತುಹೇಳು! ಕೃಷ್ಣೆ! ನೀನು ನನ್ನಲ್ಲಿ ದೋಷವನ್ನೇ ಕಲ್ಪಿಸಿ ಕಲುಷಿತೆಯಾದೆ! ಆದರೂ, ನಾನು ನಿನ್ನನ್ನು ಕ್ಷಮಿಸಿರುವೆನು. ನಾನು ಆಕ್ರಮಿಯಾಗಿಲ್ಲ, ನನ್ನ ಶಕ್ತಿಗೆ ತಕ್ಕಷ್ಟು ಮನೋಜಯವನ್ನು ಹೊಂದಿಯೇ ಇರುವೆನು. ಈಗಲೇ ನಾನು, ವಿರಕ್ತನಾಗಿ ಹೊರಟುಹೋಗಬಲ್ಲೆನಾದರೂ, ಅದರಿಂದ ದೇಶೋದ್ಧಾರಕಾರ್ಯದಲ್ಲಿ ಕೃತಕೃತ್ಯನಾಗಲಾರೆನೆಂದೂ, ಈ ನಿಮ್ಮ ದುರಾಶೆಗಾಗಿಯೇ ಈ ಸಂಪತ್ತು ದುರ್ವಿನಿಯೋಗವಾಗುವುದಕ್ಕೆ ಅವಕಾಶವನ್ನು ಕೊಡಬಾರದೆಂದೂ ಕಾಲಚಕ್ರವನ್ನು ಈ ರೀತಿ ನಡೆಯಿಸುತ್ತಿರುವೆನು. ಇಷ್ಟಾದರೂ, ನೀನು ನನ್ನ

ಸಹವಾಸದಲ್ಲಿ ಇಷ್ಟು ಕಾಲವಿದ್ದರೂ, ನನ್ನ ಅಂತಶ್ಶುದ್ಧಿಯನ್ನು ತಿಳಿಯಲಾರದೆ ನಿನ್ನ ಮಾತ್ಸರ್ಯ ಕ್ರೋಧಗಳನ್ನೇ ಮುಂದು ಮಾಡಿವೆ; ಆಗಲಿ, ಶರಾವತಿಯ ದೌರ್ಜನ್ಯಫಲವು ಮರೆವಂತಿಲ್ಲ? ಕ್ಷಿಪ್ರವಲ್ಲಿಯೇ ನೀನೂ ಅನುಭವಕ್ಕೆ ತೆಗೆದುಕೊಳ್ಳುವೆ (ಎಂದು ಹೇಳುತ್ತಿದ್ದಂತೆಯೇ ಮುಂದಕ್ಕಡಿಯಿಟ್ಟನು. ಕುಳಿತಿದ್ದ ಕೃಷ್ಣ ವೇಣಿ, ಹಾರಿಬಂದು, ಪತಿಯ ಉತ್ತರೀಯವನ್ನು ಹಿಡಿದೆಳೆದು ನಿಲ್ಲಿಸಲು ಪ್ರಯತ್ನಿಸಿದಳು. ಪತ್ನಿಯ ನಿರೋಧವು ರಘುನಾಥ ನಿಗೆ ಅಸಹ್ಯವಾಗಿಯೇ ಕಂಡುದು.) "ಧೂರ್ತೆ! ನನ್ನನ್ನು ಮು ಟ್ಟಲಾಗದು! ದೂರಸರಿ!! ನಿನ್ನನ್ನಾಕ್ರಮಿಸಿರುವ ಈ ಮಾತ್ಸರ್ಯ ರೋಗವು ಸಮೂಲನಾಶವಾಗಿ, ಭೂತದಯಾ, ಪಶ್ಚಾತ್ತಾಪಗಳೂ ನ್ಯಾಯಾನ್ಯಾಯವಿಮರ್ಶೆಯೂ, ನಿನಗೆ ತಲೆದೋರುವವರೆಗೆ ನಿನ್ನೀ ದುರ್ಭಾವನೆ ದೂರಸಾಗಿ, ಅಭಿಮಾನಾಂಧತೆ ನಾಶವಾಗಿ, ಕರ್ತವ್ಯ ನಿಷ್ಠಾ ಕ್ಷಮಾಪ್ರಕಾಶಗಳು ನಿನ್ನಲ್ಲಿ ಬೇರೂರುವವರೆಗೆ ನೀನು ನನಗೆ ಪತ್ನಿಯಲ್ಲ. ನಾನು ನಿನ್ನ ಪತಿಯೂ ಅಲ್ಲ. ನಿನ್ನ ನಿಷ್ಠುರ ಹೃದಯಕ್ಕಾಗಿ ನಿನ್ನಲ್ಲಿ ಅನುತಾಪಜ್ಯೋತಿಯುಂಟಾಗುವವರೆಗೂ, ನಾನು ನಿನ್ನಲ್ಲಿ ಸಂಭಾಷಿಸಲಾರೆನು. ಆವರೆಗೂ, ನಿನ್ನ ಕೈಹತ್ತಿದ ಈ ಉತ್ತರೀಯವೂ ನಿನ್ನಲ್ಲಿಯೇ ಇರಲಿ! (ಎಂದಿಂತು ಭೀಷಣ ಪ್ರತಿಜ್ಞೆಯಿಂದ ಪ್ರತ್ಯಕ್ಷ ಭೀಷ್ಮನೆನ್ನಿಸಿ, ಉತ್ತರೀಯವನ್ನು ಪತ್ನಿಯಮೇಲೆಸೆದು ಹೊರಟುಹೋದನು.)

ಸುಹೃದ್ಬಾಂಧವರೇ! ಸೋದರೀಮಣಿಯರೇ!!

ಏನೆನ್ನುವಿರಿ? ಸತ್ಯವ್ರತನಾದ ರಘುನಾಥನನ್ನೇ ನಿಂದಿಸು ವಿರೊ? ನಿಷ್ಠುರಹೃದಯೆಯಾದ ಕೃಷ್ಣವೇಣಿಯನ್ನೇ ಧಿಕ್ಕರಿಸು

ವಿರೊ? ಅಲ್ಲದಿದ್ದರೆ ಈ ಕಲಹಕ್ಕೆ ಕಾರಣರಾದ ವಿರಾಗಿಣೀ, ತುಂಗೆಯರನ್ನೇ ಶಪಿಸುವಿರೊ? ಹೇಗಾದರೂ ಮಾಡಿರಿ, ಆದರೆ ದಯವಿಟ್ಟು ಭ್ರಾತೃವರ್ಗವಿಲ್ಲಿ ವಿಚಾರಮಾಡಲಿ! ತಮ್ಮಲ್ಲಿ ರಘುನಾಥ ಪರಮಾನಂದರು, ಎಷ್ಟುಮಂದಿ ಇರಬಹುದೆಂಬುದನ್ನು ದಯವಿಟ್ಟು ಧೈರ್ಯದಿಂದ ಪ್ರಕಾಶಪಡಿಸಲಿ, ಆ ಮೂಲಕ ಕೃಷ್ಣವೇಣಿಯಂತಿರುವವರು, ಕರ್ಮಕ್ಷಮತೆಯಲ್ಲಿ ಜಾಗರೂಕರಾಗುವಂತೆ ಮಾಡಲಿ! ಆಗಳಲ್ಲವೇ ನಮ್ಮ ಸೋದರೀವರ್ಗವೂ ಸಹಾನುಭೂತಿಯನ್ನು ಪ್ರದರ್ಶಿಸುವ ಶಕ್ತಿಯನ್ನು ಹೊಂದುವುದು? ಅಂತಾಗಲಿ!

॥ ಶ್ರೀಃ ॥

# ದ್ವಿತೀಯಭಾಗ.

## ಪ್ರ ಥ ಮ ಪ ರಿ ಚ್ಛೇ ದ.

(ಸ್ಪಷ್ಟಪರಿಚಯ)

ಮಾಧ್ಯಂದಿನ ಮಾರ್ತಾಂಡಪ್ರತಾಪವು, ಜಗತ್ತನ್ನೇ ಆಕ್ರಮಿಸಿ ಪ್ರಜ್ವಲಿಸುತ್ತಿದ್ದಿತು. ಕಚ್ಚೇರಿಗೆ ಹೋಗುತಿದ್ದ ನಿರಂಜನನು, ಹಾಗೆಯೇ ರಘುನಾಥನ ಮನೆಯೊಳಹೊಕ್ಕನು. ರಘುನಾಥನಿಗೆ ಅಂದು ಶಾಲೆಯಲ್ಲಿ ಕೆಲಸವಿರಲಿಲ್ಲ. ಮನೆಯಲ್ಲಿಯೇ ಪುಸ್ತಕಾವಲೋಕನದಲ್ಲಿ ನಿರತನಾಗಿ ಕುಳಿತಿದ್ದನು. ನಿರಂಜನನು ಬಂದು ಮುಂದೆನಿಂತುದನ್ನು ನೋಡಿ ತಲೆಯೆತ್ತಿ ಕೇಳಿದನು ;

"ಏನಯ್ಯಾ ! ನಿರಂಜನ ! ಬಿಡುವಾಯ್ತೆ ? ಕುಳಿತುಕೊ"

ನಿರಂ:—(ಕುಳಿತು) ಬಿಡುವೆಲ್ಲಿಯದು ; ಇದ್ದುದರಲ್ಲಿಯೇ ನೋಡಿ ಹೋಗಬೇಕೆಂದು ಬಂದೆನು.

ರಘು —ಭಾರ್ಯಾಗಮನವೆಂದೊ ?

ನಿರಂ:—ಈಗಲೇ ಎಲ್ಲಿ ? ಇನ್ನೂ ಎರಡು ತಿಂಗಳಾಗಬೇಕು.

ರಘು:—ಶ್ಯಾಮನಗರ, ಶಂಕರಪೇಟೆಗಳಲ್ಲಿ ನಿಮ್ಮವರೆಲ್ಲರೂ ಕುಶಲಿಗಳೊ ?

ನಿರಂ:—ಎಲ್ಲರೂ ಕುಶಲಿಗಳೇ ? ಕುಶಲಕ್ಕೆ ಕಡಮೆಯೇನೂ ಇಲ್ಲ ; ಶಂಕರಪೇಟೆಯಲ್ಲಿ ನಿನ್ನ ತಮ್ಮ ಸೌಬಲನೂ ಕುಶಲನೇ !

ರಘು:—ನೋಡಿದವರಾರು ?

ನಿರಂ:—ಸಭಾ ನಾದಿನಿಯ ಮೈದುನ ವಿನಯಚಂದ್ರನೇ, ಮೊನ್ನೆ ನೋಡಿಬಂದನು !

ರಘು:—ಸಂತೋಷ. ಎಲ್ಲಾದರೂ ಸುಖವಾಗಿರುವುದೊಂದೇ ಸಾಕು ! ಸಭೆಯ ವಿಚಾರವ್ರೊ ?

ನಿರಂ:—ಅಷ್ಟರ ಅದೃಷ್ಟವಿಲ್ಲ.

ರಘು:—(ಕಿರುನಗೆಯಿಂದ) "ಅದೇಕೆ ? ಅದೃಷ್ಟವಿಲ್ಲದುದೇನು ? ಅವಳಲ್ಲಿಗೆ ಹೋಗಬಲ್ಲಳು ? ಮಾರುವೇಷದಲ್ಲಿ ಎಲ್ಲಿಯೋ ಇರುವಳು !

ನಿರಂ:—ಅದಾದರೂ ತಿಳಿಯುವ ದಾರಿ ?—(ಇಷ್ಟರಲ್ಲಿ ಬಿಡದಿಯ ಕಡೆಯಿಂದ, "ಅಳಕಾ ಮತ್ತೊಂದು ಮಾತು" ಎಂಬುದೊಂದು ವಾಕ್ಯವು ಹೊರಹೊರಟು ಈತನನ್ನು ಚಕಿತನನ್ನಾಗಿ ಮಾಡಿತು)

ನಿರಂ:—ಇದಾರ ಕಂಠ !

ರಘು:—ಏಕೆ ? ಇದು ನಮ್ಮ ವಿರಾಗಿಣಿಯ ಕಂಠ !

ನಿರಂ:—ಇದು, ನಮ್ಮ ಸಭೆಯ ಕಂಠವೆಂಬುದೇ ನನ್ನ ಭಾವನೆ ! ಮತ್ತೆಲ್ಲಿಯೂ ಈ ಮಾರ್ದವವಿರಲಾರದು.

ರಘು:—ಅದೇನು ? ಸಭೆಯೊಬ್ಬಳೇ ಮೃದುಸ್ವನೆಯೊ ? ನಮ್ಮ ವಿರಾಗಿಣಿ ನಿನ್ನ ಸಭೆಗೆ ನೂರ್ಮಡಿ ಹೆಚ್ಚಿನವಳು ?

ನಿರಂ:—ಅವಳನ್ನು ನೋಡಿ ನುಡಿಯಿಸಿದಮೇಲಲ್ಲವೇ ಆ ಮಾತು!

ರಘು:—ನೋಡು ; ತಡೆಯೇನು ?

ನಿರಂ:—ನನ್ನ ತಡೆಯಿಲ್ಲ. ನೀನೇ ಕರೆದೊಯ್ದು ತೋರಬೇಕು !

ರಘು:—"ನಡೆ, ಈಗಲೇ ವಿರಾಗಿಣಿಯನ್ನು ನೋಡುವೆ," ಎಂದು ನಿರಂಜನನೊಡನೆ ಬಿಡದಿಯ ಬಳಿಗೆ ಬಂದನು ಬಿಡದಿಯ ಬಳಿಯಲ್ಲಿ ಬೃಂದಾವನದವುುಂದೆ ಕುಳಿತು, ಅಳಕಗೆ ವಿವೇಕವನ್ನು ಹೇಳುತ್ತಿದ್ದ ವಿರಾಗಿಣಿಯನ್ನು ಕಂಡು, ಬೃಂದಾವನದ ಮತ್ತೊಂದೆಡೆಯಲ್ಲಿ ಮರೆಯಾಗಿ ನಿಂತು, "ನಿರಂಜನ ! ಸ್ವಲ್ಪತಡೆ, ಇವಳಾಡುತಿರುವ ನುಡಿಗಳನ್ನು ಕೇಳಿ ತಿಳಿದು, ಬಳಿಕ ಮುಂದೆನಿಲ್ಲುವೆ" (ನಿರಂಜನನು ಸಮ್ಮತಿಸಿ, ಬೃಂದಾವನದ ಮತ್ತೊಂದು ಕಡೆಯಲ್ಲಿ ರಘುನಾಥನೊಡನೆ ನಿಂತನು.)

ವಿರಾ:—ಅಳಕ ! ನಿಮ್ಮ ಅಮ್ಮನಿಗೆ ಮತ್ತೆ ಮತ್ತೆ ನಾನು ಹೀಗೆ ಹೇಳಿದೆನೆಂದು ಮರೆಯದೆ ಹೇಳು. "ಕಣ್ಣೀರನ್ನು ಸುರಿಸುವುದು ಸರಿಯಲ್ಲ. ಇಲ್ಲಿಗೆ ಬಾರದಿದ್ದಮಾತ್ರಕ್ಕೆ ನನ್ನ ನಿನ್ನ ಸ್ನೇಹವು ಕೆಡುವುದಿಲ್ಲ. ಇದಕ್ಕಾಗಿ ಕೊರಗಿಕೊರಗಿ, ಮನೆಯವರ ಕೋಪಕ್ಕೆ ಗುರಿಯಾಗಬೇಡ."

ಅಳಕ:—ಆಗಲಿ, ಹೇಳುವೆನು.

ವಿರಾ:—ಅಳಕ! ಇನ್ನು ನಿನಗೆ ಒಂದೆರಡು ಮಾತನ್ನು ಹೇಳುವೆನು ಕೇಳು. ನೀನು ಇನ್ನುಮುಂದೆ ನಾಟಕಶಾಲೆಗಾಗಲೀ ಮತ್ತಾವ ನೋಟಕ್ಕಾಗಲೀ ಹೋಗಬಾರದು. ಸಿಕ್ಕಿದ ಹಾಡುಗಳನ್ನು ಹೇಳಬಾರದು. ಶಾಲೆಯಿಂದ ಮನೆಗೆ ಬಂದ ಬಳಿಕ ತಾಯ್ತಂದೆಗಳ ಮಾತಿನಂತೆ ನಿನ್ನ ಕೆಲಸವನ್ನು ಮಾಡಿ ಇಲ್ಲಿಗೆ ಬರಬೇಕು. ತಾಯ್ತಂದೆಗಳು ಕರೆಯುತ್ತಿದ್ದರೆ ನೀನು ತಲೆತಪ್ಪಿಸಿಕೊಂಡು ಓಡಿಹೋಗಬಾರದು.

ಅಳಕ:—ಆಗಲಿ, ಆದರೆ ಅವರು ಆವಾಗಲೂ ನನ್ನನ್ನು ಆಟಕ್ಕೆ ಬಿಡದೆ, ಕೆಲಸಕ್ಕೆ ನಿಲ್ಲಿಸಿಕೊಂಡಿದ್ದರೊ ?

ವಿರಾ:—ಕೆಲಸವೆಂದರೆ ನಿನಗೆ ಎಂತಹ ಕೆಲಸವಿದೆ? ಅಳಕ ! ನಿನ್ನ ವಯಸ್ಸಿಗೆ ತಕ್ಕಷ್ಟು ಆಟದ ಕೆಲಸಗಳನ್ನೇ ಹೇಳುವರಲ್ಲದೆ ಅವರೂ ಕಷ್ಟವಾದುದನ್ನು ಹೇಳುವರಲ್ಲ. ಕೆಲಸಮಾಡುವುದನ್ನು ಈಗಳಿಂದಲೂ ಕಷ್ಟಪಟ್ಟು ಕಲಿತಿರಬೇಕು. ಕುಳಿತು ತಿನ್ನುವವರಿಗೆ ಸುಖವೆಂದಿಗೂ ಇಲ್ಲ. ಕೆಲಸ ಮಾಡುವವರಿಗೂ, ವಿದ್ಯೆಕಲಿತವರಿಗೂ, ಸುಖ, ಸನ್ಮಾನ ಗಳುಂಟಾಗುವುವಲ್ಲದೆ, ಇತರರಿಗೆ ಉಂಟಾಗದು. ಇದಕ್ಕೆ ನಿಮ್ಮ ಅಮ್ಮನೇ ಸಾಕಲ್ಲವೇ ? ಅಮ್ಮನಂತೆಯೇ ನೀನೂ ಹೊಗಳಿಸಿಕೊಳ್ಳಲಾರೆಯೊ ? ಕೆಲಸಮಾಡದ ಸೋಮಾರಿ ಹುಡುಗಿಯೆಂದರೆ ನಿನ್ನನ್ನು ಆರು ಮದುವೆಯಾಗುವರು ?

ಅಳಕೆ:—ಇನ್ನುಮುಂದೆ ನೀವು ಹೇಳಿದಂತೆಯೇ ಕೇಳುವೆನು. ನಾನಿನ್ನು ಹೊರಡಲೆ ?

ವಿರಾ:—ಹೊರಡು, ನಿಮ್ಮಮ್ಮನಿಗೆ ನನ್ನ ಮಾತನ್ನು ಮರೆಯದೆ ಹೇಳು. (ಅಳಕೆ ಹೊರಟುಹೋದಳು.)

ರಘು:—ವಿರಾಗಿಣಿ ! ಇತ್ತನೋಡು, ನಿಂತು ನೋಡುವವರಾರು ?

ವಿರಾ.—ತಿರುಗಿನೋಡಿದಳು ; ನಿರಂಜನನು ಮುಂದೆಬಂದು ನಿಂತನು. ಅಣ್ಣನನ್ನು ನೋಡಿ ತಂಗಿಯ ಕಣ್ಣುಗಳಲ್ಲಿ ನೀರು ತುಂಬಿತು. ಆದರೂ, ಹೊರಗೆಡಹದೆ ಅಡಿಗಡಿಗೆ ಕಿರುಬೆರಲ ತುದಿಯಿಂದ ತಡೆಯುತ್ತ, ನಿಂತು ನೋಡುತ್ತಿದ್ದಳು. ನಿರಂಜನನಿಗೂ ಅದೇ ಸ್ಥಿತಿಯೇ ಆಗಿದ್ದಿತು. ಸಾಲದುದಕ್ಕೆ ಸಂಕುಚಿತಭಾವವೂ ಸೇರಿದ್ದುದರಿಂದ ನಾಲಗೆಯನ್ನು ತಡೆದು ನೋಡುತಿದ್ದನು.

ರಘು:--(ತಲೆದೂಗುತ್ತ) "ಭಲೆ, ಸ್ಥಿರಸನ್ಯಾಸ! ಧೀರಪುರುಷತ್ವ!! ನೋಡಬೇಕು! ಆರು ಮೊದಲು ಮಾತನಾಡಬಲ್ಲರೋ?

ವಿರಾಗಿಣಿ:—(ತಲೆಬಾಗಿದಳು.)

ನಿರಂ:—(ಧೈರ್ಯದಿಂದ)—"ನಭಾ! ನನ್ನ ನಭಾ" ಎಂದು ವಿರಾಗಿಣಿಯ ತಲೆಯಮೇಲೆ ಕೈಬಿಟ್ಟನು.

ವಿರಾ:—ಅಣ್ಣಾ! ಆ ಹೆಸರನ್ನು ಬಿಟ್ಟುಬಿಡು. ಈಗ ನಾನು ವಿರಾಗಿಣಿ, ಕುಳಿತಿಕೊ! (ರಘುನಾಥನನ್ನು ನೋಡಿ) ಇದೇಕೆ ನಿಂತಿರುವೆ? ಅಣ್ಣಾ!

ರಘು:—ಇಲ್ಲ, ಹೋಗುವೆನು. ನಿರಂಜನನಿಗೆ ನಿನ್ನ ಪರಿಚಯವನ್ನುಂಟುಮಾಡಲು ಬಂದೆನು." (ಎಂದು ಹೊರಟು ಹೋದನು.)

ನಿರಂ:—(ಕುಳಿತು)–"ನೀನೇನೋ ವಿರಾಗಿಣಿಯಾಗಿರುವೆ' ಆದರೆ, ಶಾಂತಿಸದನದ ಕಾಂತಿಯೇ ನಿನ್ನೊಡನೆ ಮಾಯವಾಗಿದೆ. ಚಿಕ್ಕಮ್ಮ ರಮಾಮಣಿಯ ಮನೋವ್ಯಾಕುಲವಂತೂ ಹೇಳತೀರದು. ಆವಾಗಲೂ ನಿನಗಾಗಿ ಉಸಿರ್ಗರೆವುದೇ ಕೆಲಸವಾಗಿರುವುದು. ಅಲ್ಲದೆ, ರಾಜಶೇಖರನ ದುರ್ದಶೆ ಬೇರೆ ಶೋಕಾಗ್ನಿಗೆ ಆಜ್ಯಾಹುತಿಯಂತಿರುವುದು. ಆಕೆಯ ಸಂತಾಪವನ್ನು ಹೇಳಲಳವಲ್ಲ. ಅಪ್ಪನೂ, ಚಿಕ್ಕಮ್ಮನೂ, ಎಷ್ಟೆಷ್ಟೋ ಹೇಳುವರು. ಆದರೂ ಸಮಾಧಾನವಿಲ್ಲ. ನಿನ್ನ ನೆಲೆಯಾದರೂ ತಿಳಿದಿದ್ದಲ್ಲಿ ಇಷ್ಟಕ್ಕೆ ಅವಕಾಶವಿರುತ್ತಿರಲಿಲ್ಲ. ನನ್ನ ಮನಸ್ಸೂ ಜಡವಾಗಿದ್ದಿತು. ಅದರಿಂದಲೇ ನನಗೆ ಕೆಲಸದಮೇಲೆ ಬಂದಿರುವುದಕ್ಕೆ ಆಜ್ಞಾಪತ್ರವು ಬಂದು ಆರು ತಿಂಗಳಾದರೂ, ಈವರೆಗೂ, ಅವಕಾಶ

ವನ್ನು ಕೇಳಿಕೊಂಡಿದ್ದೆನು. ಕಡೆಗೂ ತೀರದುದಕ್ಕಾಗಿ ಬಂದೆನು. ತಾಯೀ! ನಿನ್ನನ್ನು ಅಂದು ನಾಟಕಶಾಲೆಯಲ್ಲಿ ನೋಡಿದೊಡನೆಯೇ ಕೌತುಕಕ್ಕೆಡೆಯಾದೆನು. ಆದರೆ, ರಘುನಾಥನು ಅವಸರಪಡಿಸಿದುದರಿಂದ ಹಿಂದೆಗೆದು ಹೊರಟು ಹೋಗಬೇಕಾಯಿತು.

ವಿರಾ:—ನಿರಂಜನ! ನಾನು ಆಗಲೇ ತಿಳಿಸಬಹುದಾಗಿದ್ದಿತು, ಆದರೆ ನನ್ನ ವಿರಕ್ತವೃತ್ತಿಗೆ ಅದರಿಂದ ಅಭ್ಯಂತರವುಂಟಾಗುವ ಸಂಭವವಿರುವುದೆಂದು ತಡೆದನು. ಅಲ್ಲದೆ, ರಾಜಶೇಖರನ ದುಸ್ಸ್ಥಿತಿಗೆ ನಾನೇ ಕಾರಣಳಾದೆನೆಂಬ ಅನುತಾಪವೂ ಸೇರಿ, ನನ್ನನ್ನು ಅಜ್ಞಾತವಾಸದಲ್ಲಿರಲು ಬಲಪಡಿಸುತ್ತಿದ್ದಿತು. ನನಗಿಲ್ಲಿ ಜ್ಞಾನದಾತೃವಾದ ರಘುನಾಥನೇ ಅಭಿಮಾನಪಿತೃವಿನಂತೆ ಪೂಜ್ಯನಾಗಿರುವನು. ಆತನ ವಾತ್ಸಲ್ಯವನ್ನು ಅಷ್ಟಿಷ್ಟೆಂದು ಹೇಳುವುದಕ್ಕಾಗಲೀ, ಮರೆವುದಕ್ಕಾಗಲೀ ನನ್ನಿಂದಳವಲ್ಲ! ಆತನ ಸುಶಿಕ್ಷಣದಿಂದ ನನಗೆ ಈ ವಿಶ್ವವೇ ಭ್ರಾತೃಭಾವನಾಪರಿಶುದ್ಧಸ್ನೇಹರಸದಲ್ಲಿ ನಲಿದಾಡುವಂತೆ ಕಾಣುತ್ತಿದೆ. ಆವೆಡೆಯಲ್ಲಿಯೂ ಏನೊಂದು ಭೇದವೂ ಕಾಣುವುದಿಲ್ಲ.

ನಿರಂ:—ತಂಗಿ! ನಿನ್ನ ಮಾರ್ಗವು ಪ್ರಕಾಶಿಸುತ್ತಿದೆ; ಸಂತೋಷ. ನನಗೀಗ ನಿನ್ನನ್ನು ಅಗಲಿರುವುದಕ್ಕಾಗಲೀ ಜೊತೆಗೊಂಡು ಹೋಗುವುದಕ್ಕಾಗಲೀ ಅವಕಾಶವಿಲ್ಲದೆ ಕಳವಳಿಸುತ್ತಿರುವೆನು

ವಿರಾ:—ಕಳವಳವೇಕೆ? ನೀನು ಹೆಂಗಸಲ್ಲವಷ್ಟೆ? ಎಲ್ಲಿದ್ದರೇನು? ಅಭಿಮಾನಕ್ಕೂ ದೂರವೆ? ಅದಿರಲಿ, ಅತ್ತಿಗೆ ಬರುವುದೆಂದು? ಆವರೆಗೂ ನಿನಗೆ ಸಹಾಯಕರಾರು?

ನಿರಂ:—ನಿನ್ನ ನಾದಿನಿಯ ಮೈದುನನೇ ನನ್ನ ಬಳಿಯಲ್ಲಿ ಗುಮಾಸ್ತೆಯಾಗಿರುವನು. ಆವಭಾಗದಲ್ಲಿಯೂ ಆಲೋಚಿಸಬೇಕಾದುದಿಲ್ಲ. ವಿರಾಗಿಣಿ! ಈವರೆಗೂ ನಿನ್ನ ಮೈದುನನು ನಿನ್ನ ವಿಷಯವಾಗಿ ಎಷ್ಟೋ ಪಶ್ಚಾತ್ತಾಪಪಡುತ್ತಿದ್ದನು. ಇನ್ನು ತಿಳಿದರೆ, ಎಷ್ಟು ಸಂತೋಷಿಸುವನೋ ತಿಳಿಯದು.

ವಿರಾ:—ನೀನಾಗಿ ನನ್ನ ವಿಚಾರವನ್ನು ಹೊರಗೆಡಬಾರದು.

ನಿರಂ:—ನಿನ್ನಿಚ್ಛೆಯನ್ನೇ ಅನುಮೋದಿಸುವೆನು. ನಾನಿನ್ನು ಹೊರಡಲೆ ?

ವಿರಾ:—ಹೊರಡು, ನಾನೂ ಹೋಗುವೆನು. (ಎಂದಿಬ್ಬರೂ ಹೊರಟರು. ನಿರಂಜನನು ಅಂಗಳದವರೆಗೂ ಬಂದನು. ತುಂಗೆ ದಾರಿಯಲ್ಲೇ ನಿಂತಿದ್ದಳು. ನಿರಂಜನನನ್ನು ನೋಡಿ,) ಏನು ? ನಿರಂಜನರಾಯ ? ಅಪೂರ್ವಲಾಭ ? ವಿರಾಗಿಣೀ ಸಂದರ್ಶನ-ಸಂಭಾಷಣೆಗಳಾದುವೊ ? ಈವರೆಗೂ ಬಾರದಿದ್ದುದೇಕೆ ?

ನಿರಂ:—ಎಲ್ಲವೂ ಆಗಿವೆ. ನಿನ್ನಲ್ಲಿ ನನಗೆ ಚರ್ಚೆಬೇಕಾಗಿಲ್ಲವಾದುದರಿಂದಲೇ ಬರಲಿಲ್ಲ. ನಾನಿನ್ನು ಹೋಗುವೆನು ದಾರಿಬಿಟ್ಟು ನಿಲ್ಲು.

ತುಂಗ:—ಅದೇಕೆ ? ನಮ್ಮ ಅತ್ತಿಗೆಯನ್ನು ನೋಡದೆಯೇ ಹೋಗುವೆ ?

ನಿರಂ:—ಮತ್ತೊಮ್ಮೆ ಬಂದು ನೋಡುವೆನು.

ತುಂಗ:—ಮನೆಗೆಬಂದೂ ಒಬ್ಬರನ್ನೂ ನೋಡದೆ ಹೋಗುವುದೇನು ? ವಿರಾಗಿಣಿಯೊಬ್ಬಳೇ ಬೇಕಾದವಳೋ ?

ನಿರಂ:—ಅಹುದು, ಹಾಗೆಂದೇ ಹೇಳು, ನನಗೆ ಅಡ್ಡಿಯಾಗದೆ ಸರಿದುನಿಲ್ಲು. ನುಗ್ಗಿ ಹೋಗಲಾರೆನು. (ತುಂಗೆ ಸರಿದು ನಿಂತಳು. ನಿರಂಜನನು ಹೊರಟುಹೋದನು.)

॥ ಶ್ರೀಃ ॥

## ದ್ವಿತೀಯ ಪರಿಚ್ಛೇದ.

(ದುರಾಗ್ರಹ)

ಆಗ್ರಹವೆಂಬುದು ಬಲವತ್ತರವಾದುದು. ಆಗ್ರಹವನ್ನು ತಡೆದು ನಿಲ್ಲಿಸುವವರಾರೋ ಅವರೇ ಧನ್ಯರು. ಆಗ್ರಹವೆಂಬುದು ಅನೇಕ ವಿಧವಾಗಿ ತಿರುಗಬಲ್ಲುದು. ಪತಿಗೆ ಪತ್ನಿಯಲ್ಲಿ ಹುಟ್ಟುವ ಆಗ್ರಹವು ಪ್ರೀತಿಪೂರ್ವಕವಾದ ಸ್ವಾತಂತ್ರ್ಯರೂಪದಿಂದಲೂ, ಪತಿಯಲ್ಲಿ ಪತ್ನಿಯು ತೊಡುವ ಆಗ್ರಹವು ಅಭಿಮಾನಪೂರ್ವಕ ಅನುಮಾನಾಸೂಯೆಗಳುಳ್ಳುದಾಗಿಯೂ, ಪಿತನಿಗೆ ಪುತ್ರನಲ್ಲಿರುವ ಆಗ್ರಹವು ವಾತ್ಸಲ್ಯಪೂರಿತ ಪರಿತಾಪರೂಪವಾಗಿಯೂ, ಪಿತನಲ್ಲಿ ಪುತ್ರನ ಆಗ್ರಹವು ದ್ವೇಷಭಾವವಾಗಿಯೂ ಮಾತೆಗೆ ಸುತೆಯಲ್ಲಿ ಆದರರೂಪವಾಗಿಯೂ, ಸುತೆಗೆ ಮಾತೆಯಲ್ಲಿ ಹಠರೂಪವಾಗಿಯೂ—ಇನ್ನೂ ಹೀಗೆಯೇ ಎಷ್ಟೆಷ್ಟೋ ಬಗೆಯಿಂದ ತಿರುಗುವುದು. ಪ್ರಕೃತಸ್ಥಿತಿಯಲ್ಲಿ ಹಿಂದೆ ಸೂಚಿಸಿರುವಂತೆ ಪತಿಪತ್ನೀಸಂಬಂಧದ ಆಗ್ರಹಭೇದ ವಿಚಾರಗಳು ರಘುನಾಥ ಕೃಷ್ಣವೇಣಿಯರೇ ಆದಿಯಾಗಿ ಈ ಕಥಾಸ್ಥಪಾತ್ರವಿಮರ್ಶೆಯಿಂದರಿಯಲಾದೀತು. ಅದಿರಲಿ.

ಪತ್ನಿಯ ಅಸೂಯಾಭಿಮಾನಗಳಿಂದ ವ್ಯಗ್ರನಾಗಿ ಭೀಷಣ ಪ್ರತಿಜ್ಞೆಯಿಂದ ಪತ್ನಿಯನ್ನು ಧಿಕ್ಕರಿಸಿ ಹೊರಟುಹೋದ ರಘುನಾಥನು ನಾಲ್ಕೈದು ದಿನಗಳಾದರೂ ಪತ್ನಿಯ ಮುಖವನ್ನು ನೋಡಬಂದುದಿಲ್ಲ. ಮಾತನಾಡುವುದೆಂದರೆ, ವಿರಾಗಿಣಿಯಲ್ಲಲ್ಲದೆ ಮತ್ತಾರಲ್ಲಿಯೂ ಇಲ್ಲ. ಹೇಳುವುದೇನು? ಕೃಷ್ಣವೇಣಿ ಮೊದಲೇ ಶಂಕಾಪ್ರಕೃತಿ; ಸಾಲದುದಕ್ಕೆ ಪತಿಯ ವ್ಯಗ್ರತೆಯೂ ಸೇರಿದರೆ ಹೇಗಾಗಬೇಕು? ತಾನಾಗಿಹೋಗಿ ಪತಿಯನ್ನು ನುಡಿಯಿಸಲೊಲ್ಲಳು. ಏಕೆಂದರೆ—ಆ ವಿಚಾರವು ನಮ್ಮ ಸೋದರೀಸಾಮಾನ್ಯವರ್ಗದಲ್ಲಿ ಚೆನ್ನಾಗಿ ಅನುಭವಕ್ಕೆ ಬಂದಿರುವುದು. ಆ ಬಗೆಯ ಕೋಣದ ನೇಣಿಂದಲೇ ಅವರು ತಮ್ಮ ಪ್ರಾಣವಲ್ಲಭರ ಗೋಣ ಮುರಿಯಬಲ್ಲ ಮಾನವತಿಯರೆನಿಸಿರುವರು. ಅಂತಹರ ಮುಂದೆ ಹೆಚ್ಚಾಗಿ ಹೇಳಬೇಕಾದುದೇನು? ತಾವೇ ಊಹಿಸಬಲ್ಲರು! ಹೇಗಾದರೂ ಇರಲಿ; ಕೃಷ್ಣವೇಣಿ, ಮೂರುದಿನಗಳವರೆಗೂ ಈ ವಿಚಾರವನ್ನು ಹೊರಪಡಿಸಲಿಲ್ಲ. ಅನ್ನಾಹಾರದಲ್ಲಿಯೂ ಹೆಚ್ಚು ಬೇಸರಗೊಂಡಂತೆ ತೋರಿಸಲಿಲ್ಲ; ಆದರೆ, ಇನ್ನೆಷ್ಟು ದಿನಗಳನ್ನು ಹೀಗೆ ಕಳೆಯಲಾದೀತು? ಮನದಳಲನ್ನು ಆರಿಗಾದರೂ ಹೇಳದಿದ್ದರೆ ಸಾಗದು. ಹೇಳಿಯೇ ಉಬ್ಬುಸವನ್ನು ತಗ್ಗಿಸಬೇಕು. ಅಂತಾದರಿನ್ನು ಆಪ್ತರಾರನ್ನು ತರಬೇಕು? ಏಕೆ? "ವಿಷಮುಕ್ಕೆ ಸನ್ನಿಪಾತವೇ ಸಹಕಾರಿ" ಯಲ್ಲವೆ? ಸರಿ! ತುಂಗೆಯೇ ಇಂದು ಅತ್ತಿಗೆಯನ್ನು ನೋಡಲಿಕ್ಕೆಂದು ಬಂದು ಕೆಲದಲ್ಲಿ ಕುಳಿತಿರುವಳು. ಅತ್ತಿಗೆ ನಾದಿನಿಯರಿಬ್ಬರಿಗೂ ಪಿಸುಪಿಸುಮಾತು. ನಡನಡುವೆ ಗಳದಲ್ಲಿ ಕಳಕಳ; ಕಣ್ಣುಗಳಲ್ಲಿ ಗಳಗಳ; ಮೂಗಿನಲ್ಲಿ ಸೊರಸೊರ; ಎದೆಯೊಳಗೆ ದಡದಡ; ಇಷ್ಟೇ ಅಲ್ಲ, ಇನ್ನೂ ಎಷ್ಟೆ

ಷ್ಟೋ ವಿನ್ಯಾಸಗಳುಂಟು. ಹಾಗೂ ಕೃಷ್ಣವೇಣಿಯ ಕೆಂದಾವರೆ ಮೊಗವಿಂದು ಕಂದುಬಣ್ಣಕ್ಕೆ ತಿರುಗಿದೆ! ತುಂಗಭದ್ರೆಯ ಕರಾಳ ವದನದಿಂದ ಕೆಂಡವೇ ಸುರಿವಂತೆ ತೋರುತ್ತಿದೆ! ಅದೆಂತಹ ವಿಚಾರವಿಮರ್ಶೆಯೊ! ಹೇಗೂ ಇಬ್ಬರ ಮಾತಿನ ನಡುವೆ ಲಕ್ಷ್ಮೀ ದೇವಮ್ಮನೂ ಬಂದು ಸೇರಿದಳು. ಅತ್ತೆಯು ಬಂದಳೆಂದು ಕೃಷ್ಣ ವೇಣಿ ಜೋಲುಮುಖದಿಂದೆ ನೆಲವನ್ನೇ ನೋಡುತ್ತ ಕುಳಿತಳು.

ಲಕ್ಷ್ಮಿ:—ಇದೇಕೆ? ಕೃಷ್ಣವೇಣಿ! ಮೆಯ್ ಹಗುರವಾಗಿಲ್ಲವೆ!

ಕೃಷ್ಣ:—ಮನಸ್ಸೇ ಜಡವಾಗಿದ್ದರೆ ಮೆಯ್ಯಿಂದೇನು?

ಲಕ್ಷ್ಮಿ:—ಮನಸ್ಸೇಕೆ ಜಡವಾಗಿದೆ? ವಿಚಾರವೇನು?

ಕೃಷ್ಣ:—ವಿಚಾರವನ್ನು ಕೇಳುವುದೇನು? ಹೇಳುವುದೇನು? ಎಲ್ಲವೂ ನನ್ನ ಹಣೆಯಬರೆಹವೆ?

ಲಕ್ಷ್ಮಿ.—(ಚಕಿತೆಯಾಗಿ) ಇದೇಕೆ? ಕೃಷ್ಣ! ಏನು ಸಂಗತಿ? ನಿನ್ನ ಗಂಡನೇನಾದರೂ ಕೋಪಮಾಡಿದರೆ!

ಕೃಷ್ಣ—ಕೋಪವೊಂದೇಯೇನು?

ಲಕ್ಷ್ಮಿ:—ಏನು? ಮಾತೂ ಇಲ್ಲವೆ?

ತುಂಗ:—ಇಂದಿಗೆ ನಾಲ್ಕುದಿನಗಳಿಂದ.

ಲಕ್ಷ್ಮಿ.—ಏತರಿಂದ ಹೀಗಾಯ್ತು? ಕೃಷ್ಣವೇಣಿ!

ಕೃಷ್ಣ:—ಅದನ್ನೆಲ್ಲಾ ಏಕೆ ಕೇಳುವಿರಿ? ಅವರಾವಾಗಲೂ ವಿರಾಗಿಣಿಯೊಡನೆ ನಗೆಯಾಟದಲ್ಲಿರುವರೆಂದೂ, ಕಿವಿಮಾತಲ್ಲದೆ ಬೇರಿಲ್ಲವೆಂದೂ, ಬಗೆಬಗೆಯಾಗಿ ದೂರುತ್ತಿರುವ ನೆರೆಹೊರೆಯವರ ದೂರನ್ನು ಕೇಳಿ ಕೇಳಿ ಬೇಸತ್ತೆನು. ಕಡೆಗೆ ಈಗ ನಾಲ್ಕುದಿನಗಳ ಕೆಳಗೆ ಹೀಗೇಕೆಮಾಡಬೇಕೆಂದು ಕೇಳಿದೆನು. ಅದರಿಂದಲೇ ಕೆರಳಿ ಮನಬಂದಂತೆ ಬಯ್ದು ಆಣೆ

ಯಿಟ್ಟು ಹೋದರು. ಇಂದಿನವರೆಗೂ ಕಾಣಿಸಿಕೊಂಡು ದಿಲ್ಲ. ಹೇಗಾದರೂ ಸುಖವಾಗಿರಲೆಂದರೆ ನನ್ನ ಕಾಟ ವಿನ್ನೂ ತಪ್ಪದಿದೆ. (ನಿಟ್ಟುಸಿರಿಟ್ಟಳು.)

ಲಕ್ಷ್ಮಿ:—ಸುಮ್ಮನಿರು; ಅಳಬೇಡ; ಅವನಿಗೀಬುದ್ಧಿ ಏಕೆಬಂತೊ? ಹೀಗೇಕೆ ಹೆಂಡತಿಯನ್ನು ಕಾಡುವನೊ? ಅವನ ಜ್ಞಾನವೆಲ್ಲಿ ದೆಯೋ ? ತಿಳಿದು ಹೇಳುವವರೇ ಇಲ್ಲವಲ್ಲ !

ತುಂಗ:—ಹೇಳುವವರ ಮಾತು ಹಾಗಿರಲಿ · ಕೇಳುವವರಾರಮ್ಮ? ಹೇಳಹೋದಾಗಲೇ ಆವೇಶಬಂದರೆ, ಮತ್ತೇನುಮಾಡಲಾ ದೀತು ? ವಿರಾಗಿಣಿಯೊಬ್ಬಳಲ್ಲದೆ ಈ ಮನೆಯಲ್ಲಿ ಮಾತ ನಾಡಬಲ್ಲವರಾರು ? ಅವನೆಷ್ಟು ಆಯಾಸದಲ್ಲಿರಲಿ ; ಸಿಟ್ಟಿ ನಲ್ಲಿರಲಿ ; ಅವಳ ಸದ್ದು ಕಿವಿಗೆ ಬಿದ್ದರೆ ಸಾಕು . ನಗೆಮೊಗ ದಿಂದ ಹಮ್ಮೈಸಿ ನೋಡುವನು. ಅದಾವಮಾಟವೊ ?

ಲಕ್ಷ್ಮಿ:—ಅವಳೇಕೆ ಸುಮ್ಮನಿರುವಳು ! ಊರವರಿಗೆಲ್ಲಾ ಬೋ ಧಿಸುವವಳು, ಮನೆಯವರನ್ನು ನೋಡಿ ವಿಚಾರಿಸಬಾರ ದೇಕೆ? ಇವೆಲ್ಲವನ್ನೂ ಹೇಗೆ ಒಪ್ಪುವಳು ?

ಕೃಷ್ಣ:—(ಮೊಗವನ್ನು ಗಂಟಿಕ್ಕಿ) ಹೇಗೆಂದರೆ–" ಪುಸ್ತಕದೊಳ ಗಣ ಬದನೆಕಾಯಿ!" ಅವಳಿಗೇಕೆ ಆತಂಟೆ ? ಎಲ್ಲರೂ ಹೊಗಳಲೆಂದು ನಾಲ್ಕಾರು ವೈರಾಗ್ಯವೇದಾಂತಗಳ ಕಂತೆಗ ಳನ್ನು ತೆಗೆದು ಮುಂದಿಡಲಿಕ್ಕೆ ಆರಿಗೆಬಾರದು !

ಲಕ್ಷ್ಮಿ:—ಹಾಗೆಂದರೇನು ? ಬರಿಯ ನಟನೆಯೆ ? ಒಳಗುಟ್ಟೇನಾ ದರೂ ಉಂಟೊ ?

ಕೃಷ್ಣ:—ಗುಟ್ಟೋ-ರಟ್ಟೋ ಹೇಗಾದರೂ ಹೋಗಲಿ ; ಗಂಡು ಸರ ಮನಸ್ಸು ಆವಕಾಲಕ್ಕೆ ಹೇಗೆ ತಿರುಗುವುದೋ ಬಲ್ಲವ

ರಾರು? ಆವಾಗ ನೋಡಿದರೂ ಗುಸಗುಸ-ಪಿಸಪಿಸ ಎಂಬುದಿದ್ದೇ ಇದೆ. ಕಿವಿಮಾತು! ಮನೆಗೆ ಬಂದೊಡನೆಯೇ ಆ ಸಿಭಾಗ್ಯಳ ಮುಖವನ್ನು ನೋಡದಿದ್ದರೆ ಸಾಗದು.

ಲಕ್ಷ್ಮೀ:—(ಮೂಗಿನಮೇಲೆ ಬೆರಲನಿಟ್ಟು) ನನಗೀ ಸಂಗತಿಯೇ ತಿಳಿಯದು. ಅವರು ನಗೆಮೊಗದಿಂದ ಮಾತನಾಡುತ್ತಿದ್ದುದನ್ನು ಅಷ್ಟಾಗಿ ನಾನು ನೋಡುತ್ತಿರಲಿಲ್ಲ. (ಲಕ್ಷ್ಮೀದೇವಮ್ಮನ ಮಾತು ಪೂರಯಿಸುವುದಕ್ಕೆ ಮೊದಲೇ ಕೆಳಗಡೆ "ಲಕ್ಷ್ಮೀದೇವಮ್ಮಾ!" ಎಂದು ಕೂಗಿದಂತೆ ಧ್ವನಿಯಾಯಿತು.

ಲಕ್ಷ್ಮೀ:—ನರಸಮ್ಮ! ಇಲ್ಲಿಯೇ ಇರುವೆನು. ಬನ್ನಿರಿ (ನರಸಮ್ಮನು ಮೇಲಕ್ಕೆ ಬಂದಳು.)

ನರ:—ಏನು? ಎಲ್ಲರೂ ಒಟ್ಟಿಗೆ ಕುಳಿತು ಮಾತಾಡುವಿರಿ? ಕೃಷ್ಣವೇಣಿ, ಹೀಗೇಕೆ ಕುಗ್ಗಿರುವಳು?

ಲಕ್ಷ್ಮೀ:—ಏನೋ ಬಳಲಿಕೆಯಿಂದಿರುವಳು. ನಿಮ್ಮ ಸೊಸೆಯೇಕೆ ಇತ್ತ ಬರುವುದಿಲ್ಲ?

ನರ:—ಮಗನೇನೋ ಹೋಗಕೂಡದೆಂದು ತಡೆಮಾಡಿವನಂತೆ!

ಲಕ್ಷ್ಮೀ:—ಅದೇಕೆ?

ನರ:—ವಿರಾಗಿಣಿಯೊಡನೆ ಸೇರಬಾರದೆಂದು!

ಲಕ್ಷ್ಮೀ:—ವಿರಾಗಿಣಿಯಲ್ಲೇಕೆ ಸೇರಬಾರದಂತೆ?

ಕೃಷ್ಣ:—ತಿಳಿಯಲಿಲ್ಲವೇ ಈಗಲಾದರೂ? ನೆರೆಮನೆಯ ಗಂಡುಸಿಗೆ ತಿಳಿದಿದೆ; ನೀವರಿಯೆನೆಂಬಿರಿ.

ನರ:—ಅದೇನದೇನು?

ಕೃಷ್ಣ:—ನೀವೇ ತಿಳಿಯಹೇಳಲಾಗದೆ? ಅವಳ ವಿಚಾರವಾಗಿ—

ನರ:—ಹೇಳಲಾರೆನಮ್ಮ! ಕೆಟ್ಟಸುದ್ದಿ!! ನಗೆಗೇಡಿನಮಾತು!!! ಎಂತೂ, ಆರೊಡನೆಯೂ ಜಗಳಾಟವೇ! ಆರೊಡನೆಯೂ ಬಡಿವಾರವೇ! ಎಲ್ಲರಲ್ಲಿಯೂ ವಿವಾದವೆ! ಪಾಠಶಾಲೆಗೆ ಹೋಗಬೇಕು; ಉಪನ್ಯಾಸಮಾಡಬೇಕು! ಏನೇನು ವಿಚಿತ್ರದ ಮಾತುಗಳೊ? ಹೇಳಲಾರೆನು! ನಮ್ಮ ಕಾಲದಲ್ಲಿ ಇದನ್ನಾರೂ ಕಂಡುದಿಲ್ಲ. ಹಾಗೂ ಇದರ ಒಳಗುಟ್ಟೇನೋ! ಎಂತೋ!! ದೇವರೇ ಬಲ್ಲನಮ್ಮ!!!

ಕೃಷ್ಣ:—ಗುಟ್ಟೇನು ರಟ್ಟು! ಕಣಿಯೂ ಬೇಕೋ?

ಲಕ್ಷ್ಮಿ:—(ಕಿಡಿಕಿಡಿಯಾಗಿ) ವೇಷವನ್ನು ಸುಟ್ಟರು! ನರಸಮ್ಮ ನಿನ್ನ ಸೊಸೆ ಮನೆಗೆ ಬಂದರೆ ಮತ್ತಾರೊಡನೆಯೂ ಮಾತನಾಡುತ್ತಿರಲಿಲ್ಲ. "ಅವಳ ಕಿವಿಗೆ-ಇವಳ ಬಾಯಿ" ನಾನೂ ನೋಡಿನೋಡಿ ಬೆರಗಾಗುತ್ತಿದ್ದೆ.

ನರ:—(ನಿಟ್ಟುಸಿರಿಟ್ಟು) ಅಮ್ಮ! ನಮ್ಮ ಮನೆಯ ಸ್ಥಿತಿಯನ್ನು ಏನೆಂದು ಹೇಳುವ! ಗಂಡುಸರು ಇವಳ ಮಾತಿಗೆ ಮರುಳಾಗುವುದು ಹೆಚ್ಚಲ್ಲ; ಹೆಂಗುಸಾದ ನನ್ನ ಸೊಸೆ ಈಗ ಹೇಗಾಗಿರುವಳೆಂದಿರಿ? ಗಂಡನು ಬೇಡವೆಂದು ತಡೆದು ಬಯ್ದು ಹೋದುದು ಮೊದಲು ಹಾಸಿಗೆ ಹತ್ತಿ ಮಲಗಿರುವಳು. ಅವಳು ಈವರೆಗೆ ಒಂದುದಿನವಾದರೂ ಮಲಗಿದಳೆಂಬ ಮಾತಿರಲಿಲ್ಲ. ಈಗ ಉಗ್ರಜ್ವರದಲ್ಲಿ ಬಿದ್ದು ತಪಿಸುತ್ತಿರುವಳು. ಆವಾಗಲೂ ಇವಳ ಹೆಸರಲ್ಲದೆ ಮತ್ತಾವಮಾತೂ ಇಲ್ಲ. ಇದೇನು ಮಾಟವೊ?

ಕೃಷ್ಣ:—ಅವಳನ್ನೇ ಕೇಳಿದರೆ ಹೇಳುವಳು,

ನರ:—ನಾನು ಬಂದುದೂ ಅದಕ್ಕೆಂದೇ! ಆದರೆ ಮೊದಲು ನಿಮ್ಮನ್ನು ಕೇಳಿ ಹೋಗಲು ಇಲ್ಲಿಗೆ ಬಂದೆನು.

ತುಂಗೆ:—ಇನ್ನು ಹೊತ್ತು ಕಳೆದರೆ, ಅವಳು ಬೀದಿಬೀದಿ ಸುತ್ತಲು ಹೊರಟುಹೋಗುವಳು.

ನರ:—ನಾನೇಕೆ ವಿಳಂಬಿಸಲಿ? (ಎಂದು ಹೇಳಿ ನರಸಮ್ಮನು ಉಪ್ಪರಿಗೆಯಿಂದಿಳಿದುಬಂದು, ಬೃಂದಾವನದ ಕಟ್ಟೆಯಮೇಲೆ ಕುಳಿತು "ತತ್ವಾರ್ಥಸಂಗ್ರಹ" ವೆಂಬ ಗ್ರಂಥಸಮಾಲೋಚನೆಯಲ್ಲಿದ್ದ ವಿರಾಗಿಣಿಯನ್ನು ಕಂಡು ಕಿಡಿಕಿಡಿಯಾದಳು. ಮತ್ತೆ ಬಿರುನುಡಿಯಿಂದೆ ಬಯ್ದು ಕೇಳಿದಳು.) ಎಲೆ ಮಾಟಗಾರ್ತಿ! ಏನನ್ನು ಮಾಡುತಿರುವೆಯೆ? ಆವಾವ ಮಂತ್ರತಂತ್ರವನ್ನು ಕಲ್ತಿರುವೆಯೆ?

ವಿರಾ:—ಏನು, ಏನೆಂದಿರಿ? ತಾಯಿ!

ನರ:—ನಿನ್ನ ರಾಗದ ಮಾತಾರಿಗೆ ಬೇಕು? ನಿನ್ನೀ ಬೆಳ್ತನಕ್ಕೆ ನಾನೇಕೆ ಮರುಳಾದೇನು? ಈ ಕುಟಿಲನಟನೆಯಿಂದ ಎಷ್ಟೆಷ್ಟು ಮನೆಗಳನ್ನು ಮುರಿಯಬೇಕೆಂದಿರುವೆ?

ವಿರಾ:—(ಚಕಿತೆಯಾಗಿ) ಅಮ್ಮಾ ಕಾರಣವಿಲ್ಲದೆಯೇ ಕೋಪವೇ? ಬರಿದೆ ಬಯ್ಯುವುದೇಕೆ?

ನರ:—ತಟವಾಣಿ! ಇನ್ನೂ ಕಾರಣವೇ? ಚಂದ್ರಭಾಗೆಯನ್ನು ಮರುಳ್ಮಾಡಿ ನರಲಿಸುತ್ತಿರುವುದೇ ಸಾಲದೋ? ಬಾಯ್ಮುಚ್ಚು! ನಾಣ್ಗೆಟ್ಟ ಹೆಂಗಸೆ!

ವಿರಾ:—(ಗದ್ಗದಸ್ವರದಿಂದ) ಅಮ್ಮಾ! ನೀವು ದೊಡ್ಡವರು; ಬಲ್ಲವರು. ಹೇಗಾದರೂ ಹೇಳಿರಿ. ಏನನಾದರೂ ಕಲ್ಪಿಸಿರಿ. ನನಗೆ ಕುಂದೇನು? ನ್ಯಾಯಾನ್ಯಾಯ ವಿಚಾರಣಾಕರ್ತನು ಪರಮಾತ್ಮನಿಲ್ಲವೆ? ಕರ್ಮಕ್ಕೆ ತಕ್ಕ ಫಲಾನುಭವವು ತಪ್ಪುವುದೆ? ಸುಮ್ಮನೇಕೆ ಕನಲುವುದು? (ಎಂದು ಹೇಳಿ ಹೊರ

ಟುಹೋದಳು. ನರಸಮ್ಮನೂ ವಿರಾಗಿಣಿಯ ಉದಾಸೀನೋಕ್ತಿಗೆ ಖತಿಗೊಂಡು ದುರಾಗ್ರಹದಿಂದ ಸ್ಮೃತಿಯಿಲ್ಲದೆ ಮನಸ್ಸಿಕಪಿಸುತ್ತ ಮನೆಗೆ ನಡೆದಳು.)

॥ ಶ್ರೀಃ ॥

## ತೃತೀಯ ಪರಿಚ್ಛೇದ.

(ಪ್ರಾರ್ಥನೆ)

ಮಧ್ಯಾಹ್ನಾತ್ಪರದಲ್ಲಿ, ಸುಮಾರು ಎರಡು ಗಂಟೆಯ ವೇಳೆಯಲ್ಲಿ ವಿರಾಗಿಣಿ ಬಿಡದಿಯಿಂದೆ ಹೊರಹೊರಡುತ್ತಿದ್ದಳು. ಇಂದವಳ ಮುಖವು ಆರಿಂದಲೂ ನೋಡಿ ಸಹಿಸುವಂತಿರಲಿಲ್ಲ. ಕಳೆಗುಂಧಿ, ಸುಕ್ಕುಹಿಡಿದು, ಅತಿಯಾದ ಮನದಳಲಿಂದ ಬಳಲುತ್ತಿರುವಳೆಂಬುದನ್ನು ಸೂಚಿಸುತ್ತಿರುವುದು ಕಾರಣವೇನೆಂಬುದನ್ನು ವಿಧವಾವರ್ಗದ ಸ್ಥಿತಿಗತಿಗಳಲ್ಲಿ ಅನುಭವಶಾಲಿಗಳಾದವರಿಗೆ ಹೇಳಬೇಕಾದುದಿಲ್ಲವಷ್ಟೆ? ಅದಿರಲಿ, ವಿರಾಗಿಣಿ ಹೊರಗೆ ಕಾಲಿಡುತ್ತಿದ್ದ ವೇಳೆಗೆ ಸರಿಯಾಗಿ ತಾರಾಮಣಿ ಬಂದು ಸೇರಿದಳು. ತಾರೆಯನ್ನು ನೋಡಿ ವಿರಾಗಿಣಿಯ ವದನಾರವಿಂದದಲ್ಲಿ ಮತ್ತೆ ರಸೋತ್ಪನ್ನವಾಯಿತು. ತಾರೆಯ ಕೈಹಿಡಿದು, ತಂಗಿ! ಎರಡು ತಿಂಗಳ ಮೇಲೆ ಇಂದು ಈ ವೇಳೆಯಲ್ಲಿ ಬಂದೆಯಲ್ಲವೆ? ನಲವಾಯ್ತು; ಕುಳಿತುಕೊ; ಎಂದು ಅವಳೊಡನೆ ತಾನೂ ಅಲ್ಲಿಯೇ ಕುಳಿತಳು.

**ತಾರಾ:**—ತಾಯೀ ! ಮನೆಯ ಸಂಗತಿ ಅಂದೇ ತಿಳಿದೆಯಲ್ಲವೆ ? ಇಂದು ಅಣ್ಣನು ಕಚೇರಿಗೆ ಹೋಗಲಿಲ್ಲವಾದುದರಿಂದ ನನಗೂ ಇತ್ತ ಬರಲು ಬಿಡುವಾಯ್ತು. ಇಲ್ಲದಿದ್ದರೆ ಇಂದೂ ಆಗುತ್ತಿರಲಿಲ್ಲ.

**ವಿರಾ;**—ತಾರಾ ! ಇನ್ನು ಅರ್ಧಘಂಟೆಗ ಮಾರಿ ಬಂದಿದ್ದರೆ, ನೀನು ನನ್ನನ್ನು ನೋಡುತ್ತಿರಲಿಲ್ಲ.

**ತಾರಾ:**—ಅದೇನು ? ಎಲ್ಲಿಗೆ ಹೋಗುತ್ತಿರುವುದು ?

**ವಿರಾ:**—ಎಲ್ಲಿಗೆಂದರೆ, ಸಂಸಾರಿಕರ ಮನೆಯಲ್ಲಿ ನನ್ನಂತಹರು ನೆಲೆಯಾಗಿರಬಾರದಲ್ಲವೆ ? ಇದ್ದರೆ ದೌರ್ಭಾಗ್ಯವಿಶೇಷವು ಆರಾರನ್ನು ಹೇಗೆ ಹೇಗೆ ಕಾಡುವುದೋ ತಿಳಿಯಲಳವಲ್ಲ. ಆದರೆ ಇಲ್ಲಿ ಅಂತಹ ಅನುಮಾನಕ್ಕೆ ಕಾರಣವಿಲ್ಲ, ಹೇಗಾದರೂ ಇರಲಿ, ನಾನು ಈಗ ಮನೆಯಲ್ಲಿ ಹೆಚ್ಚಾಗಿ ನಿಲ್ಲುವುಕ್ಕೂ ಅವಕಾಶವಿಲ್ಲ. ಸರ್ಕಾರದವರ ಆಜ್ಞೆಗೆ ಬದ್ಧಳಾಗಿರುವೆನು. ಶಾಲೆಯ ಕೆಲಸದಲ್ಲಿಯೇ ಹಗಲೆಲ್ಲವನ್ನೂ ಕಳಯುತ್ತಿರುವೆನು. ಆದರೆ ಮಧ್ಯಾಹ್ನದವರೆಗೆಮನೆಬಿಟ್ಟು ಹೊರಡುವುದಿಲ್ಲ. ಮಧ್ಯಾಹ್ನದಿಂದ ಹೊರಟರೆ ಮತ್ತೆ ರಾತ್ರಿಯೇ ಬಂದು ವಿಶ್ರಾಂತಿಹೊಂದುವೆನು.

**ತಾರಾ:**—ತಾಯೀ ! ಇನ್ನುಮುಂದೆ ಕೇಳುವುದಕ್ಕೆ ನಾನು ಶಕ್ತಳಲ್ಲ. ದಯವಿಟ್ಟು ಅತ್ತಿಗೆಯ ವಿಚಾರವನ್ನು ತಿಳಿಯಹೇಳಿದರೆ ಸಂತೋಷವಾಗುವುದು.

**ವಿರಾ:**—ಆ ನಿರ್ಭಾಗ್ಯೆಯ ಮಾತನ್ನೇಕೆ ಕೇಳುವೆ ? ಅವಳು ಅಜ್ಞಾತವಾಸದಲ್ಲಿ, ಮಿಥ್ಯಾವಾದಿಗಳ ಕ್ರೋಧಾಗ್ನಿಯಲ್ಲಿ, ಸಿಕ್ಕಿ ಸುಟ್ಟು ಸತ್ತಂತಿರುವಳು !

ತಾರಾ:—ಇದೇಕೆ, ಈ ನಿಷ್ಠುರ? ದೂಷಕರಿಗೂ ಮೂಷಕಗಳಿಗೂ ಭೇದವೇನು? ಹೊಗಳುವವರು ಹೊಗಳಲಿ; ತೆಗಳುವವರು ತೆಗಳಲಿ. ಅವರ ಅಲ್ಲದ–ಸಲ್ಲದ ಹೊಗಳು–ತೆಗಳಿಂದ ನಮ ಗಾಗುವ ನಲವು ಕುಂದುಗಳೇನು? ಪಾಪ! ಅವರ ವೃತ್ತಿ ಯೇ ಅದಾಗಿದ್ದರೆ ಬೇಡವೆನಲೇಕೆ? ಮಧ್ಯಾಹ್ನವಾಯ್ತೆಂ ದರೆ ಮನೆಬಾಗಿಲ ಮುಂದೆ, ಇಲ್ಲವೆ ಪಾಳುದೇಗುಲಗಳಲ್ಲಿ, ಗುಂಪುಗೂಡಿ ಇದ್ದವರನ್ನೂ ಇಲ್ಲದವರನ್ನೂ ಇರುವವ ರನ್ನೂ ಹೋದವರನ್ನೂ ಹಲವು ತೆರದಿಂದ ಹಳಿಹಳಿದು, ನಾಲಗೆಯ ನವೆಯನ್ನಾರಿಸಿಕೊಳ್ಳುವುದೊಂದಲ್ಲದೆ ಅವರಿಗಿ ನ್ನಾವುದು ಸೊಗಯಿಸುವುದು? ಇನ್ನಾವ ಕೆಲಸದಿಂದ ಅವರು ಉಂಡು, ತಿಂದು, ಕುಡಿದುದು ಕರಗಬೇಕು? ಅವರು ಬೇಡವೆಂದರೂ ಬಿಡುವುದು ಹೇಗೆ? ಒಬ್ಬಿಬ್ಬರಾದರೆ ಕಳ ವಳಿಸಬೇಕು. ನಮ್ಮವರೆಲ್ಲರಿಗೂ ಕುಲಾಚಾರವೇ ಇದೊಂ ದಾಗಿ ಬಂದಿರುವುದೆಂದರೆ ಹೇಳುವುದಿನ್ನೇನು? ನಾನು ಇದಕ್ಕೆಲ್ಲಾ ಕಿವಿಗೊಟ್ಟು ಎದೆಗುಂದಿ ಕುಳಿತುಕೊಳ್ಳಲೊ ಲ್ಲೆನು. ನಮ್ಮಲ್ಲಿ ಸತೀತ್ವವೊಂದು ಜಾಗ್ರತವಾಗಿರುವುದಕ್ಕೆ ಎಷ್ಟು ಬೇಕೋ ಅಷ್ಟನ್ನೇ ನಾವು ನೋಡತಕ್ಕದಾಗಿದೆ.

ವಿರಾ:—ತಾರಾ! ಅವೆಲ್ಲವೂ ಹಾಗಿರಲಿ. ನೀನಿನ್ನು ಒಂದೆರಡು ತಿಂಗಳಲ್ಲಿಯೇ ಸ್ವಾಮಿಯನ್ನು ಹೊಂದುವಂತಾಗುವೆ!

ತಾರಾ:—ಇನ್ನಾ ಭಾಗ್ಯವುಂಟಾದೀತೆ? ಇಲ್ಲದ ಆಶೆಯೊಂದನ್ನುಂ ಟುಮಾಡುವುದೇಕೆ?

ವಿರಾ:—ಇಲ್ಲದ ಆಶೆಯಲ್ಲ, ಇದ್ದುದೇ! ವಿರಾಗಿಣಿಯ ನುಡಿಯು ಸುಳ್ಳಾಗುವುದೇ? ನಿನ್ನ ಮೈದುನನು ನಿರಂಜನನ ಬಳಿಯ ಲ್ಲಿಲ್ಲವೇನು?

ತಾರಾ:—ಇರಬಹುದು, ಏಕೆ?

ವಿರಾ:—ಆತನ ಮೂಲಕವೇ ನಿನ್ನ ಸ್ವಾಮಿಯ ನೆಲೆಯನ್ನು ಕಂಡು ಹಿಡಿವೆನು, ಸಂಶಯವಿಲ್ಲ. ನಿಮ್ಮ ತಾಯ್ತಂದೆಗಳಿಗೆ ನಿನ್ನ ತ್ತಿಗೆ ತನ್ನ ವಂದನೆಯನ್ನು ಸಮರ್ಪಿಸಲು ಕೋರಿರುವಳು.

ತಾರಾ:—ಎಲ್ಲಿರುವಳು? ಕಾಣುವುದೆಂದು?

ವಿರಾ:—ಇಲ್ಲಿಯ ಗುಪ್ತವಿದ್ಯಾಭವನದಲ್ಲಿಯೇ ಇರುವಳು. ಇನ್ನೂ ಕೆಲವು ಕಾಲದ ವರೆಗೆ ಆರಿಗೂ ಕಾಣಿಸಿಕೊಳ್ಳಲಾರಳು.

ತಾರಾ:—ನಿಮ್ಮಿಬ್ಬರಿಗೂ ನಂಟುತನವೇ?

ವಿರಾ:—ನಾವಿಬ್ಬರೂ ಬಾಲ್ಯಸಖಿಯರು, ಒಬ್ಬ ಗುರುವಿನ ಅಂತೇವಾಸಿನಿಯರು. ನಮ್ಮಿಬ್ಬರಿಗೂ ಭೇದವಿಲ್ಲ. (ತಾರಾಮಣಿ ಕುತೂಹಲದಿಂದ ವಿರಾಗಿಣಿಯ ಮುಖವನ್ನೇ ನೋಡುತ್ತಿದ್ದಳು. ಹಿತ್ತಿಲ ಕಡೆಗೆ ಅವಸರದಿಂದ ಬರುತ್ತಿದ್ದ ಕೃಷ್ಣವೇಣಿಯರು ತಾರಾಮಣಿಯನ್ನು ನೋಡಿ ಬಾವಿಯ ಬಳಿಗೆ ಬಂದು ನಿಂತರು.)

ತಾರಾ:—(ನಗೆಮೊಗದಿಂದ) ಏನಮ್ಮಾ! ಸೌಖ್ಯವೆ?

ಕೃಷ್ಣ:—ತಾರೆ! ಇದೇನು? ಆಶ್ಚರ್ಯ!

ತಾರಾ:—ವಿರಾಗಿಣಿಯ ಬಳಿಯಲ್ಲಿ ಮುಖ್ಯವಿಚಾರವೊಂದನ್ನು ತಿಳಿಯಬಂದೆನು.

ಕೃಷ್ಣ:—ನ್ಯಾಯವೇ ಸರಿ. ನಮ್ಮಂತಲ್ಲವೇ? ಅತ್ತಿಗೆ ನಾದಿನಿಯರು ಮತ್ತೆ ಹೇಗಿರಬೇಕು? ಸಂತೋಷ! ಅತ್ತಿಗೆಯನ್ನು ಚೆನ್ನಾಗಿ ವಿಚಾರಿಸಮ್ಮ. ಪಾಪ! ನಮ್ಮ ಮನೆಯಲ್ಲಿ ಬಹುಕಷ್ಟ

ತಾರಾ.—(ದಿಂಗುಬಡಿದಂತೆ) ಎಲ್ಲಿರುವಳು? ನಮ್ಮತ್ತಿಗೆ ಯಾರು? ನಾನೆಲ್ಲಿ ವಿಚಾರಿಸುವುದು?

ತುಂಗೆ:—ಮತ್ತಾರು? ನಿಮ್ಮತ್ತಿಗೆ ವಿರಾಗಿಣಿಯಲ್ಲವೇನು?

ತಾರಾ:—ನಿಜವಾಗಿ, ಇವಳೇ ನಮ್ಮತ್ತಿಗೆಯೇ? ತುಂಗಮ್ಮ! ಅಂದು ಇವಳು ನಮ್ಮ ಅತ್ತಿಗೆಯ ಒಡನಾಡಿಯೆಂದು ನೀನೂ ಹೇಳಿದೆಯಲ್ಲವೆ?

ಕೃಷ್ಣ—ಆಗಲೇನೋ ರಗಳೆಯಾದೀತೆಂದು ಹೇಳಲಿಲ್ಲ. ಇವಳೇ ನಿಜವಾಗಿ ನಿಮ್ಮ ಅತ್ತಿಗೆ. ನಾವೇನಾದರೂ ಹೇಳುವೆವೆಂದು ಭ್ರಮಿಸಿ, ಇವಳು ಸುಮ್ಮನಿರಬಹುದು. ಇನ್ನು ನಮ್ಮ ಅಡ್ಡಿಯೇನೂ ಇಲ್ಲ. ಇಷ್ಟವಿದ್ದಲ್ಲಿಗೆ ಇಷ್ಟಬಂದಾಗ ಹೋಗಬಹುದು.

ತಾರಾ:—ಆನಂದೋದ್ರೇಕದಿಂದ ಬೇಗ ವಿರಾಗಿಣಿಯನ್ನು ಆಲಿಂಗಿಸಿ) "ಅತ್ತಿಗೆ ಬಯ್ತಿಟ್ಟುದೇಕೆ?"

ವಿರಾ:—ತಾರಾ! ನಿಧಾನಿಸು. ದುಡುಕಬಾರದು ಈಗಲೇ ನನ್ನ ಸ್ಪಷ್ಟ ಪರಿಚಯಕ್ಕೆ ಕಾಲವಲ್ಲ. ಸಕಾಲವೊದಗುವವರೆಗೂ ಈ ವಿಚಾರವನ್ನು ಆರಲ್ಲಿಯೂ ಹೇಳಬಾರದು. ನಿಮ್ಮ ಅಣ್ಣನಿಗಾಗಲೀ, ತಾಯ್ತಂದೆಗಳಿಗಾಗಲೀ ಹೇಳಲಾಗದೆಂದು ಕೋರುವೆನು. ಮರೆಯದಿರು. (ಕೃಷ್ಣವೇಣಿ, ತುಂಗಭದ್ರೆಯರು ನಿಂತಲ್ಲಿಯೇ ಬೆರಗಾಗಿ ನಿಂತರು. ಅದೇ ವೇಳೆಯಲ್ಲಿಯೇ ಅಳಕನಂದೆಯೂ ಓಡಿಬಂದು, ವಿರಾಗಿಣಿಯ ಕೈಹಿಡಿದು, ಬಿಕ್ಕಿಬಿಕ್ಕಿ ಅಳುತ್ತ)—"ಅಮ್ಮಾ! ನಮ್ಮ ತಾಯಿ ನೋಡಬೇಕಂತೆ! ಅಪ್ಪನು ನಿಮ್ಮನ್ನು ಈಗಲೇ ಕರೆತರ ಹೇಳಿರುವನು"

ವಿರಾ:—(ಚಕಿತೆಯಾಗಿ) ಏನು? ಏನು? ನಿಮ್ಮ ತಂದೆ ಬರಹೇಳಿರುವರೆ? ಎಲ್ಲಿಗೆ? ಏತಕ್ಕೆ?

ಅಳಕ:—ನಮ್ಮ ತಾಯಬಳಿಯಲ್ಲಿಯೇ ಇರುವರು. ಅಲ್ಲಿಗೇ ಬರಬೇಕಂತೆ!

ವಿರಾ:—ಒಂದೆರಡು ಗಳಿಗೆಯೊಳಗಾಗಿ ಬರುವೆನೆಂದುಹೇಳು, ನಡೆ. (ಅಳಕೆ ಹೊರಟುಹೋದಳು. ತಾರಾಮಣಿಯೂ ಎದ್ದು ನಿಂತು) ಅತ್ತಿಗೆ! ಇನ್ನೆಂದಿಗೆ ನಿನ್ನನ್ನು ನೋಡಿ ನುಡಿಯ ಲಾದೀತೋ ತಿಳಿಯೆನು! ನಾನಿನ್ನು ಹೊರಡಲೆ ?

ವಿರಾ:—ಹೊರಡಬಹುದು. ನನ್ನ ಮಾತು ನೆನಪಿರಲಿ, ಮರೆತಾ ದರೂ ಹೇಳದಿರಬೇಕು. (ತಾರಾಮಣಿ ಹೊರಟಳು. ಉತ್ತ ರಕ್ಷಣವೇ ನರಸಮ್ಮನೇ ಓಡಿಬಂದು ವಿರಾಗಿಣಿಯ ಕೈಹಿ ಡಿದು) ವಿರಾಗಿಣಿ' ಹಿಂದಿನ ತಪ್ಪನ್ನು ಮನ್ನಿಸು. ನನ್ನ ಸೊಸೆ ಇಂದು ಮೃತ್ಯುಮುಖದಲ್ಲಿ ಬಿದ್ದಿರುವಳು. ಹೊತ್ತು ಕಳಯದೆ ದಯವಿಟ್ಟು ಬಂದುನೋಡು.

ವಿರಾ:—(ವಿವರ್ಣಮುಖಿಯಾಗಿ ಅನುಕಂಪಿತಸ್ವರದಿಂದ) ಸಂಗ ತಿಯೇನು ?

ನರ:—ಏನನ್ನಲಿ ? ವಿರಾಗಿಣಿ ! ನಿನ್ನ ಸಹವಾಸವನ್ನು ಬಿಟ್ಟುದು ಮೊದಲು ಹಾಸಿಗೆ ಹತ್ತಿ ಮಲಗಿದ್ದಳು. ನಿನ್ನಿನಿಂದ ಇಹ ಲೋಕದ ಆಶೆಯೇ ಇಲ್ಲದಂತಿದೆ. ಇನ್ನು ಹೆಚ್ಚುಹೊತ್ತು ನಿಲ್ಲುವಂತಿಲ್ಲ, ತಾಯಿಾ! ತಪ್ಪನ್ನು ಮನ್ನಿಸು. ಒಮ್ಮೆ ಬಂದುನೋಡು. ಇದೇ ನನ್ನ ಪ್ರಾರ್ಥನೆ.

ವಿರಾ:—(ಎದ್ದುನಿಂತು ಮೇಲೆ ನೋಡಿದಳು. ಮತ್ತೆ ಸ್ಥಿರಭಾವ ದಿಂದ ನರಸಮ್ಮನನ್ನು ಕುರಿತು) ಅಮ್ಮ! ಭಯಪಡಬಾ ರದು. ಸತ್ಯಕ್ಕೆ ಜಯವು ಶಾಶ್ವತವಾಗಿದ್ದರೆ, ಸತೀತ್ವಕ್ಕೆ ಕ್ಷೋಭೆಯುಂಟಾಗದಿರುವುದಾದರೆ, ಚಂದ್ರಭಾಗೆಗೆ ಮೃತ್ಯು ಭೀತಿಯಿಲ್ಲ! ಹೊರಡಿರಿ (ಕೃಷ್ಣವೇಣಿಯನ್ನು ನೋಡಿ) ಅಕ್ಕಾ! ನಾನು ಹೋಗಿ ನೋಡಿ ಬರುವೆನು. (ಕೃಷ್ಣ

ವೇಣಿ, ಮರುನುಡಿಯಿಲ್ಲದೆ ತುಂಗೆಯೊಡನೆ ಹೊರಟುಹೋದಳು. ನರಸಮ್ಮನು ಪ್ರಾರ್ಥನಾದ್ವಾರ ವಿರಾಗಿಣಿಯನ್ನು ಪ್ರಸನ್ನೆಯನ್ನಾಗಿ ಮಾಡಿಕೊಂಡು ಮನೆಗೆ ಕರೆದೊಯ್ದಳು)

---

॥ ಶ್ರೀಃ ॥

## ಚತುರ್ಥ ಪರಿಚ್ಛೇದ.

---

( ಅಭ್ಯುದಯ )

ಪೂರ್ಣಿಮಾಚಂದ್ರನು, ಇಂದು ರಾಹುಮುಖದಲ್ಲಿರುವನು ! ಗಗನಮಂಡಲಕ್ಕೆ ಕಪ್ಪು ಸುತ್ತಿದೆ. ತಾರಾಗಣಗಳೂ ಮಿಣುಗುತ್ತಿವೆ. ಆದರೇನು ? ದಿಕ್ಪ್ರಕಾಶಕ್ಕೆ ಶಕ್ತಿಯುಂಟೆ ? ಗತಿಗಾಣುವಂತಿಲ್ಲ. ಕಗ್ಗತ್ತಲೆ!' ವ್ಯಸ್ತರಾಗುವುದೇಕೆ ? ಸುಹೃದರೇ ! ಕರ್ಮಫಲವು ಆರನ್ನು ಬಿಡುವುದು ? ಅದಾವಾಗಲೂ ಪ್ರತಿಪ್ರಾಣಿಯ ಬೆನ್ನುಹತ್ತಿ ತನ್ನ ತುಚ್ಛೋಚ್ಚ ಫಲಗಳನ್ನು ಕೊಟ್ಟು, ಕೊಡುತ್ತಿರುವುದಲ್ಲವೆ ? ಆವಪ್ರಾಣಿ, ಕರ್ಮಕಾಲದಲ್ಲಿ ಹಿಂದೆ ಮುಂದೆ ನೋಡಿ ಮಾಡುವುದೋ ಅದಕ್ಕೆ ಫಲವು ಹಿತಕರವೇ ಆದೀತು ! ದುಡುಕಿ ಮಾಡಿದುದನ್ನು ಮಾರ್ಪಡಿಸಲಾದೀತೆ ? ಮತ್ತೆ ಬೇರೆ ಬಗೆಯಿಂದ ಬಯಸಿದರೆ ಬಂದೀತೆ ? ಅಲ್ಲದೇನಾದರೂ ಅತ್ತರೆ ಮನದಿಚ್ಛೆ ಕಯ್ಗೂಡಲಾಗುವುದೊ ? ನಮಗಿನ್ನು ನಿದರ್ಶನಕ್ಕೆ ಮಕರಂದನಿಗೂ ಬೇರೆ ಪಾತ್ರವು ಬೇಕೋ ?

ಮೂರ್ಖಮಕರಂದನ ಸೌಭಾಗ್ಯರೇಖೆ, ಆ ಗೃಹರಾಜ್ಯಲಕ್ಷ್ಮಿ, ಆ ನಮ್ಮ ಸತೀಮಣಿ, ಚಂದ್ರಭಾಗೆ ಇಂದು ರುಗ್ಣಶಯ್ಯೆಯಲ್ಲಿ, ಹಾಗೂ ನಿರ್ವಾಣೋನ್ಮುಖದೀಪದಂತೆ ಮೃತ್ಯುಪದ ಸನ್ನಿಹಿತೆಯಾಗಿ ಕದಲದೆ ಬಿದ್ದಿರುವಳೇಕೆ? ಏತರಿಂದ? ಅವಳ ಈ ಬಗೆಯ ಉತ್ಕ್ರಮಣಾವಸ್ಥೆಯಲ್ಲಿಯೂ ಈ ಮುಚ್ಚಿಹೋಗಿರುವ ಕಣ್ಣುಗಳಿಂದಲೂ ಈ ತೆರದ ಬೆನ್ನೀರು ಸುರಿಯುತ್ತಿಹುದೇಕೆ? ಹೇಳಲಾರಿರೆ? ಹೇಗೆ ಹೇಳಲಾದೀತು? ಮನದಲ್ಲಿಯೇ ನೆನೆನೆನೆದು ಕನವರಿಸುವಿರಲ್ಲವೇ? ಪಾಪ! ಮಕರಂದನಿಗೆ ಈಗಲೀಗ ಜ್ಞಾನೋದಯವಾಗಿದೆ! ಆದರೆ ಉದಯಕ್ಕೆ ಸರಿಯಾಗಿ ಘನಮೇಘವೇ ಆಕ್ರಮಿಸಿದರೆ ಪ್ರಕಾಶವೆಲ್ಲಿ? ಅಪರಾಧಕ್ಕಾಗಿ ಅನುಕಂಪಿಸುತ್ತ, ಪತ್ನಿಯ ತಲೆಯಕಡೆಯಲ್ಲಿ ಕುಳಿತು, ಮ್ಲಾನಮುಖದಿಂದ ಚಿಂತಿಸುತ್ತಿರುವ ಈತನನ್ನು ನೋಡಿ ಸಹಿಸಲಾರಿಂದಾದೀತು? ಅಂದು, ಪತ್ನಿಯನ್ನು ಆವೆಡೆಯಲ್ಲಿ ಧಿಕ್ಕರಿಸಿದನೋ ಅದೇ ಎಡೆಯಲ್ಲಿಯೇ ಇಂದು, ಅದೇ ಪತ್ನಿಯ ರುಗ್ಣಶಯ್ಯೆಯಮೇಲೆ ಕುಳಿತು ಚಿಂತಿಸುತ್ತಿರುವನಲ್ಲವೆ? ಈಗಲಲ್ಲವೇ ವಿರಾಗಿಣಿಯ ಅಂದಿನ ನುಡಿ ನಿಜವಾಗಿ ತೋರುತ್ತಿರುವುದು? ಕಷ್ಟ! ಕಷ್ಟ!! ಕೃಪೆಮಾಡು! ಕಮಲಾಪತೇ! ಕೃಪೆಮಾಡಿ ಕಾಪಾಡು!!! "ಸಂಕಟಬಂದಲ್ಲಿ ವೇಂಕಟರಮಣ" ನೆಂಬೊಂದು ಲೋಕವಾರ್ತೆಯುಂಟಲ್ಲವೇ? ಇನ್ನು ವಿವರವು ಸಾಕು. ಮಕರಂದನು ಅಡಿಗಡಿಗೆ ಪತ್ನಿಯ ಮುಖವನ್ನೇ ನೋಡಿನೋಡಿ ನಿಟ್ಟುಸಿರಿಡುತ್ತಿದ್ದನು. ಕಿರುಮನೆಯ ಬಾಗಿಲ ಬಳಿಯಲ್ಲಿಯೇ ನಿಂತಿದ್ದ ಅಳಕೆ ಓಡಿಬಂದು— "ಅಪ್ಪ! ವಿರಾಗಿಣಿ ಬಂದಳು." ಎಂದು ಹೇಳಿದಳು. ಮಕರಂದನು ನಿದ್ದೆ ತಿಳಿದೆಚ್ಚತ್ತವನಂತೆ ತಲೆಯೆತ್ತಿ,—ಎಲ್ಲಿ? ಎಂದು ಕಿರುಮನೆಯ ಕದದ ಕಡೆಗೆ ನೋಡಿದನು.

ವಿರಾ:—(ಕಿರುಮನೆಯ ಕದವನ್ನೇ ನೆಮ್ಮಿ, ಕರುಣಾದೃಷ್ಟಿಯಿಂದ ನೋಡುತ್ತ ನಿಂತಿದ್ದಳು.)

ಮಕ:—(ಗದ್ಗದಸ್ವರದಿಂದ) "ಅಮ್ಮಾ! ಬನ್ನಿರಿ; ನಿಮ್ಮನ್ನು ನೋಡಲಿಕ್ಕೆಂದೇ ತಡೆದಿರಬಹುದು. ಬಂದು ಕಾಣಿಸಿ ಕೊಳ್ಳಿರಿ."

ವಿರಾ.—(ಕಂಪಿತಸ್ವರದಿಂದ) ಅಣ್ಣಾ! ನನಗೀ ಬಹುಮಾನಗಳೇಕೆ? ಭಗವತ್ಕೃಪೆಯನ್ನೂ, ಭವಿತವ್ಯವನ್ನೂ ನಿರ್ಧರಿಸಲಾರಿಗೂ ಸಾಧ್ಯವಿಲ್ಲ. ಒಮ್ಮೆಯೇ ನಿರಾಶರಾಗಬಾರದು. ನಾನು ಬಂದಿರುವುದನ್ನು ಮೆಲ್ಲನೆ ತಿಳಿಯಹೇಳಬೇಕು.

ಮಕ:—(ಚಂದ್ರಭಾಗೆಯ ಹಣೆಯಮೇಲೆ ಎಡಗೈಯನ್ನಿರಿಸಿ, ಬಲಗೈಯಿಂದ ಗಲ್ಲವನ್ನಲುಗಿಸುತ್ತ),—ಚಂದ್ರಾ! ವಿರಾಗಿಣಿಯನ್ನು ನೋಡು; ಕಣ್ದೆರೆ; ಚಂದ್ರಾ! ಒಮ್ಮೆ ಕಣ್ದೆರೆದು ನೋಡು.

ಚಂದ್ರ:—(ಅರೆಗಣ್ಣಿಂದ ನೋಡಿದಳು.)

ಮಕ.—ವಿರಾಗಿಣಿ! ಇದೊ ಕಣ್ದೆರೆದಿರುವಳು; ಇನ್ನು ಬಂದು ಮಾತನಾಡಿಸಬಹುದು. (ಎಂದೊರೆದು ಹಾಲಿನಪಾತ್ರೆ—ಔಷಧದ ಕುಪ್ಪಿಗಳನ್ನು ಹಾಸಿಗೆಯಮೇಲಿಟ್ಟು, ವಿರಾಗಿಣಿಗೆ ಸ್ಥಲವನ್ನು ಬಿಟ್ಟು ತಾನು ಎದ್ದುಹೋಗಿ ಕದದ ಬಳಿಯಲ್ಲಿ ನಿಂತನು.)

ವಿರಾ:—(ಮಕರಂದನು ಕುಳಿತಿದ್ದೆಡೆಯಲ್ಲಿಯೇ ತಾನು ಬಂದು ಕುಳಿತು, ಸೋರುತ್ತಿದ್ದ ಕಣ್ಣುಗಳಿಂದ ಚಂದ್ರಭಾಗೆಯನ್ನೇ ನೋಡುತ್ತ ಎಡಗೈಯಿಂದ ಅವಳ ತಲೆಯನ್ನು ನೇವರಿಸಿ ಬಲಗೈಯಿಂದ ರೋಗಿಯ ಬಲಗೈಯನ್ನು ಹಿಡಿದೆತ್ತಿ ತನ್ನ

ಕೆನ್ನೆಯಮೇಲಿಟ್ಟು ಪ್ರೀತಿವ್ಯಂಜಕ ಸ್ವರದಿಂದ) ಚಂದ್ರಾ! ಪ್ರಿಯಚಂದ್ರಾ! ಹೀಗಾದುದೇಕೆ ?

ಚಂದ್ರಾ:—ಕೆಂಗಾವಿಯ ಕಲ್ಲುಗಳಂತಾಗಿದ್ದ ತನ್ನ ಕಣ್ಣುಗಳನ್ನು ತೆರೆದು ವಿರಾಗಿಣಿಯನ್ನೇ ಬಿರಬಿರನೆ ನೋಡಿದಳು. ಆಗವಳ ನೋಟವಗತಿವೇಗವೂ, ಅವಳ ಮುಖಭಾವವೂ, ಮತ್ತಾರಿಗಾದರೂ ಭಯವನ್ನುಂಟುಮಾಡದಿರುತಿರಲಿಲ್ಲ. ಆದರೆ, ವಿರಾಗಿಣಿಯ ಶೋಕವ್ಯಾಕುಲಿತಹೃದಯವು, ಮತ್ತೆ, ಆಶಾಭಿಮಾನಗಳ ಕಡೆಗೆ ತಿರುಗುವಂತಾಯ್ತು ! ಕೂಡಲೇ, ಬಳಿಯಲ್ಲಿದ್ದ ಹಾಲಿಗೆ ಔಷಧವನ್ನು ಬೆರಸಿ) ಅಕ್ಕಾ ! ನಿನ್ನ ಮನದಳಲನ್ನು ದೂರಮಾಡು ; ಈ ನಿನ್ನ ತಂಗಿಯ ಉಪಚಾರವನ್ನು ಸಾರ್ಥಕ್ಯವೆನ್ನಿಸು. ಭಗವಂತನನ್ನು ಸ್ಮರಿಸು !! (ಎಂದು ಹೇಳುತ್ತ ಕೈಯಲ್ಲಿದ್ದ ಔಷಧವನ್ನು ಕುಡಿಸಿವಳು ವಿರಾಗಿಣಿಯ ಪವಿತ್ರಸ್ನೇಹಪ್ರಭಾವವೂ, ಅವಳಾಕಾರುಣ್ಯಸ್ವರಶಕ್ತಿಯೂ, ಆ ಸಾದರೋಪಚಾರವೂ ಮೋಹಿನೀವಿದ್ಯಾಪ್ರದರ್ಶನದಂತೆ, ಚಂದ್ರಭಾಗೆಯ ಸರ್ವಾಂಗವಲ್ಲಿಯೂ ವ್ಯಾಪಿಸಿ, ಉದ್ದೀಪಿಸುವಂತಾಯ್ತು. ಚಂದ್ರಭಾಗೆಯ ಮುಖವೂ, ಕಳೆಯೇರುತ್ತಿದ್ದಿತು.

ವಿರಾ.—(ಹರ್ಷಬಾಷ್ಪಾಕುಲಿತಲೋಚನೆಯಾಗಿ) ಚಂದ್ರ! ಈಗ ಹೇಳು ? ನಿನ್ನ ಮನದೆಣಿಕೆಯೇನುಂಟು ?

ಚಂದ್ರ:—(ಕ್ಷೀಣಸ್ವರದಿಂದ) ತಂಗಿ! ನಿನ್ನನ್ನು ನೋಡಿದೆ ; ಸಾಕು. ಅಳಕೆ, ನಿನ್ನವಶ. ಅತ್ತೆಗೆ ಸಮಾಧಾನ-ಆದರೆ- ನನ್ನ ಸ್ವಾಮಿ, ಹೀಗೆ ತಡೆತಡೆದು ಇಷ್ಟು ಮಾತುಗಳನ್ನು ಬಹು ಕಷ್ಟದಿಂದ ಹೇಳಿ, (ಮುಂದೆ ಹೇಳಲಾಗದೆ ನೋಡುತ್ತಿದ್ದಳು.)

ವಿರಾ:—(ಎದ್ದುನಿಂತಳು ; ತಿರುಗಿನೋಡಿದಳು. ಮಕರಂದನು, ದೇಹಸ್ಮೃತಿಯಿಲ್ಲದೆ ಕವದ ಬಳಿಯಲ್ಲಿ ನಿಂತು ನೆಲವನ್ನೇ ನೋಡುತ್ತಿದ್ದನು. ನರಸಮ್ಮನು ಹೊರಗಡೆಯಲ್ಲಿ ಅಳಕೆ ಯನ್ನು ಸಂತವಿಸುತ್ತ ಕುಳಿತಿದ್ದಳು. ವಿರಾಗಿಣಿಗೆ ಈ ವಿದ್ಯಮಾನಗಳು ಸಹ್ಯವಾಗದೆ ರೋಷಕ್ಲೇಶದಿಂದ ಪರವಶೆ ಯಾಗಿ, ಕರ್ಕಶಸ್ವರದಿಂದ ಮಕರಂದನನ್ನು ಕುರಿತು ಹೇಳಿ ದಳು) ಧೂರ್ತ ! ನಿಂತೇನುಮಾಡುತ್ತಿರುವೆ ? ಬಂದುನೋ ಡು. ಇನ್ನಾದರೂ ಅನುತಾಪದಿಂದ ವರ್ತಿಸು.

ಮಕ:—(ಗಾಬರಿಯಿಂ) ಏನುಏನಾಯ್ತು ? ಮುಗಿದುಹೋಯ್ತು ?

ವಿರಾ.—(ದರ್ಪಿತಸ್ವರದಿಂದ) ಮೂರ್ಖ ! ಮುಗಿದಮೇಲೇನುಮಾ ಡುವೆ ? ಇವಳ ನೆಳಲನ್ನಾದರೂ ಕಾಣಬಲ್ಲೆಯಾ ? ಆ ಬಳಿಕ ಸುಖಪಡುವೆನೆಂದೆಣಿಸಿರುವೆಯಾ ? ಮದಾಂಧನಾದ ನೀನು ಎಷ್ಟೆಷ್ಟು ಪಾತಕಗಳನ್ನು ಮಾಡಿರುವೆ ? ಗುಣಿಸಿ ನೋಡು ? ಧರ್ಮಪತ್ನಿಯಲ್ಲಿ ದ್ರೋಹಿ ! ಪರಮಾತ್ಮನಲ್ಲಿ ದ್ರೋಹಿ !! ಇನ್ನೂ ಹೇಳಬೇಕೆ ! ನಿನ್ನ ಪತ್ನಿಯು ಜೀವಿ ತಾಶೆ, ನಿನಗಿಲ್ಲವೇ ? (ವಿರಾಗಿಣಿಯ ಭರ್ತ್ಸನೆಯಿಂದ ಮಕ ರಂದನು ಬೆದರಿದನು. ಮುಂದೋರದೆ ದೈನ್ಯದಿಂದ ತಾಯಿ! ಕ್ಷಮಿಸು ! ಮೊದಲೇ ಬೆಂದುಹೋಗುತ್ತಿರುವ ನನ್ನನ್ನು ಬಿರುನುಡಿಯಿಂದ ಕಡಿಯದಿರು. ಈ ನಿರ್ಭಾಗ್ಯನಿಂದ ಈಗ ಲೇನಾದರೂ ಮಾಡುವುದಿದ್ದರೆ—

ವಿರಾ:—ಸಾಕು ! ಈ ವಿವೇಕವು ಅಂದೇ ಬಾರದೆಹೋದುದೇಕೆ ? ಇದಕ್ಕೆಂದಲ್ಲವೇ ನಾನಂದು, ಪತ್ರಮೂಲಕವಾಗಿ ನಿನಗೆ ಸಾರಿಸಾರಿ ಎಚ್ಚರಿಸಿದ್ದುದು ? ನಿನಗೆ ನನ್ನ ಹಿತವಚನ

ವೆಂತು ರುಜುಯಿಸುವುದು ? ಭುಜಂಗಶೇಖರಿಯ ದುರ್ಬೋಧನೆಯಿಂದ, ಆ ಕುಲಟೆಯ ಕುಮಂತ್ರದಿಂದ, ಕಾಂತಾಮಣಿಯನ್ನೇ ಕಳದುಕೊಳ್ಳುವವನೆಂತಹ ಕುನ್ನಿಯೋ ? ತಿಳಿದು ಹೇಳು ಈಗಲಾದರೂ ಬಂದು, ಈ ನಿನ್ನ ಪತ್ನಿಯ ಇಷ್ಟವೇನಂಬುದನ್ನು ತಿಳಿದುಮಾಡು, ಇದೇ ನಿನ್ನ ಅದೃಷ್ಟವನ್ನು ತೂಗುವ ತಕ್ಕಡಿ. ಇತ್ತಬಾ. (ಎಂದು ಹೇಳಿ ಸರಿದುಹೋಗಿ ದೂರದಲ್ಲಿ ನಿಂತಳು)

ಮಕ — (ಆಗಳಿನ ವೇಳೆಯಲ್ಲಿ ಹೇಗಾಗಿದ್ದನೆಂಬುದನ್ನು, ನಮ್ಮ ವಾಚಕಮಂಡಲಿಯಲ್ಲಿಯೂ, ಅಂತಹರೇ ಆರಾದರಿರುವುದಾದರೆ, ಅವರೇ ಊಹಿಸಬೇಕಲ್ಲದೆ, ಮುಂದಾದರೂ ತಮ್ಮ ನಡೆನುಡಿಯನ್ನು ಸರಿಪಡಿಸಕೊಳ್ಳಲಾದೀತೆಂದೂ ನಿರೀಕ್ಷಿಸಬೇಕಾಗುವುದು. ಹೇಗೂ ಕುಲಟೆಯರ ಹೇಳಿಕೆಕೇಳಿಕೆಯಿಂದ, ತಮ್ಮತಮ್ಮ ಕಣ್ಮಣಿಯರನ್ನೇ ಕಳದುಕೊಂಡು ಕಂದಿ ಕುಂದುವವರನ್ನು ಏನೆಂದು ಕರೆಯಬೇಕೋ ತಿಳಿಯದು. ಪಾಪ! ನಮ್ಮ ಮಕರಂದನು, ವಿರಾಗಿಣಿಯ ನಿಷ್ಠುರೋಕ್ತಿಗೆ ಕ್ಷಣಕಾಲಸ್ತಬ್ಧನಾಗಿದ್ದು, ಚೇತರಿಸಿಕೊಂಡು ಬಂದು ಪತ್ನಿಯ ಶಿರೋಭಾಗದಲ್ಲಿ ಕುಳಿತನು. ನಡುಗುತ್ತಿದ್ದ ನಿಜಕರದಿಂದ, ಮಡದಿಯ ಗಲ್ಲವನ್ನಲುಗಿಸುತ್ತ, ಎಡಗಯ್ಯಿಂದ ಹಣೆಯನ್ನು ನೇವರಿಸುತ್ತ) ಚಂದ್ರಾ! ನಿರ್ಭಾಗ್ಯನಿಗೇನುಹೇಳುವೆ ? ಹೇಳು !

ಚಂದ್ರ:—(ಕಣ್ದೆರೆದು ಎವೆಯಿಕ್ಕದೆ ಪತಿಯ ಮುಖವನ್ನೇ ನೋಡುತ್ತ ನಿಜಕರಕಿಸಲಯದಿಂದ ಪತಿಪಾದತಲವನ್ನು ಮುಟ್ಟಿ, ಕಣ್ಣಿಗೊತ್ತಿಕೊಂಡಳು.)

ಮಕ:—(ಪತ್ನಿಯ ಕೋಮಲಹಸ್ತವನ್ನು ಹಿಡಿದೆತ್ತಿ ಕಪೋಲಪ್ರದೇಶದಲ್ಲಿಟ್ಟು ಕಾತರಸ್ವರದಿಂದ) ಚಂದ್ರಾ! ಕ್ಷಮಿಸಲಾರೆಯಾ? ಕೃತಘ್ನನೆಂದು ಕನಲಿ ಕಯ್ಬಿಡುವೆಯಾ? ಏಕೆ ಮಾತನಾಡೆ? ಅಪರಾಧಿಯೆಂದೇ?

ಚಂದ್ರಾ:—(ಪ್ರಸನ್ನಮುಖಿಯಾಗಿ ಪತಿಯ ತೊಡೆಯಮೇಲೆ ಮುಖವನ್ನಿಟ್ಟು) ಪ್ರಾಣಪದಕ! ಆರಲ್ಲಿ ಕೋಪ! ನಾನು ದಾಸಿ, ನನಗೆ ನೀವು ಸ್ವಾಮಿ! ನಿಮ್ಮಲ್ಲಿ ಕೋಪವೇ ವಾಗ್ದಾನವಾಗಲಿ! ಅಪ್ಪಣೆ! ಹೀಗೆ ನಿಧಾನವಾಗಿ ಹೇಳಿದಳು.

ಮಕ:(—ಪತ್ನಿಯ ಕೊರಲನ್ನಪ್ಪಿ, ಅವಳಾಕೇಶಭಾರವನ್ನು ಕಣ್ಣೀರಿಂದೆ ತೋಯಿಸುತ್ತೆ,) ಚಂದ್ರ! ಅಪ್ಪಣೆಯೇನು? ನನ್ನನ್ನು ಕಯ್ಬಿಡಲಾಗದೆಂದಲ್ಲವೇ? ವಾಗ್ದಾನ ವಿನ್ನಾವುದು? ಇನ್ನೆಂದೆಂದೂ ನಾನು ಸುಳ್ಳಾಡಲೊಲ್ಲೆನು. ಬೇಗಹೇಳು.

ಚಂದ್ರಾ:—(ಕಂಪಿತಸ್ವರದಿಂದ,) "ಕುಲಟಾಸಂಗತ್ಯಾಗ" ಸತ್ಯಾಲಂಬನ!

ಮಕ:—(ಪತ್ನಿಯ ಭುಜದಮೇಲೆ ಕಯ್ಯಿಟ್ಟು, ದೈನ್ಯದಿಂದ) ಹೃದಯೇಶ್ವರಿ! ಹಿಂದಿನ ತಪ್ಪನ್ನು ಮರೆತುಬಿಡು, ಈವರೆಗಿದ್ದ ಕ್ರುತಘ್ನತೆಯು ಇನ್ನು ನನ್ನನ್ನು ಕನಸಿನಲ್ಲಿಯೂ ಸೇರಲಾರದು. ಈಗ ನಾನು, ಅನುತಾಪಾಗ್ನಿಯಿಂದ ಬೇಯುತ್ತಿರುವೆನು. ಪಂಚಭೂತಸಾಕ್ಷಿಯಾಗಿಯೂ, ತ್ರಿಕರಣ ಪರಿಶುದ್ಧವಾಗಿಯೂ. ತ್ರಿಕಾಲಗಳಲ್ಲಿಯೂ ನಾನೂ, ನಿನ್ನನ್ನುಳಿದು ಅನ್ಯಾಂಗನೆಯರನ್ನು ಕಣ್ಣೆತ್ತಿಯೂ ನೋಡಲೊಲ್ಲೆನು. ಇದನ್ನು ಪ್ರಮಾಣವೆಂದು ನಂಬು! ಈ ಭಾಷೆಗೆ ಪರಮಾ

ತ್ಮನೇ ಸಾಕ್ಷಿಯಾಗಿರಲಿ! ಪ್ರಿಯೆ! ಈವರೆಗೂ ನಾನು, ಅನುಭವಿಸಿದ ವಿಷಯೋಪಭೋಗಗಳು, ಇಂದು ಈಗ ನಿನ್ನ ಬಳಿಯಲ್ಲಿ ಹೊಂದುತ್ತಿರುವ ಆತ್ಮಾನಂದಕ್ಕೆ ಎಷ್ಟುಮಾತ್ರ ಕ್ಕೂ ಸರಿಯಾಗವು. ಆತಂಕವರ್ಧಕಗಳಾದ ತುಚ್ಛವಿಷ ಯಗಳಿಗೆ ಮರುಳಾಗಿ, ನನ್ನ ಸರ್ವಸ್ವವನ್ನೇ ಕಳೆದುಕೊಳ್ಳು ತ್ತಿದ್ದೆನಲ್ಲವೆ? ಇನ್ನೇಕುನ್ನಿಗೆ ಗತಿಯೇನು! ಆತ್ಮಘಾತಿಗೆ ಭಗವತ್ಕೃಪೆಯುಂಟೆ? ಕೃಪೆಯಿದ್ದರೆ ಈ ಪಾಪಿಯ ಅದೃ ಷ್ಟದಲ್ಲಿ ಮತ್ತೆ ಸೌಖ್ಯರೇಖೆಯೇನಾದರೂ ಉಳಿದಿದ್ದರೆ, ನೀನು ಉಳಿದೂ ಉಳಿವೆ, ಈ ಅಧಮನ ಮುಂದಿನ ನಡೆ ಯನ್ನು ನೋಡಿ ಸುಖವನ್ನೂ ಹೊಂದುವೆ! ಹಾಗಲ್ಲದೆ, ಒಂದುವೇಳೆ, ನಿನಗೆ ಈಗಲೇ ಮೃತ್ಯು, ಕಾದಿದ್ದರೂ ನಾನು ನಿನ್ನ ಹಿಂದೆಯೇ ಇರುವೆನೆಂದು ತಿಳಿ? ಪ್ರಾಣೇಶ್ವರಿ! ನಾನು ನಿನಗೆ ನಿಜವಾಗಿಯೂ ಸ್ವಾಮಿಯಾಗಿದ್ದರೆ, ನೀನು ಅಕಾ ಲದಲ್ಲಿ ನನ್ನನ್ನು ಕಯ್ಬಿಟ್ಟುಹೋಗದೆ ನನ್ನ ಸ್ವಾಮಿನಿಯಾ ಗಿದ್ದು ತಣಿಸುವೆ! ಇನ್ನೂ ಹೇಳಬೇಕೆ?

ಚಂದ್ರಾ:—(ತನ್ನ ನಳಿದೋಳಿಂದ ಸ್ವಾಮಿಯ ಕೊರಲನ್ನು ಸುತ್ತಿ) ಜೀವನಸರ್ವಸ್ವ! ನನಗೆ ಸಾವಿಲ್ಲ; ಏಳಿರಿ! ನನ್ನ ಹೃಚ್ಛೂ ಲವು ಕಳೆಯಲ್ಪಟ್ಟುದು!

ಮಕರಂದ:—(ಆನಂದೋದ್ರೇಕದಿಂದ ಪತ್ನಿಯ ಮುಖವನ್ನು ಮುತ್ತಿಟ್ಟು, ಬಳಿಕಲೆಚ್ಚತ್ತು ಸರಿಯಾಗಿ ಕುಳಿತನು.)

ವಿರಾ:—(ಪತಿಪತ್ನಿಯರ ಸಂಭಾಷಣೆ, ವಾಗ್ದಾನ, ಪ್ರೇಮನಿರೂ ಪಣೆ ಇತ್ಯಾದಿಗಳನ್ನು ನೋಡುತ್ತಿದ್ದವಳು ಮುಂದೆಬಂದು ಇದಿರಾಗಿ ನಿಂತು,) ಸೋದರಿ' ಈಗೇನುಹೇಳುವೆ? ವಿರಾ ಗಿಣಿ! ಅನೃತವಾದಿನಿಯೋ?

ಚಂದ್ರಾ:—(ಬಾಷ್ಪಾಕುಲಿತಲೋಚನೆಯಾಗಿ ನೋಡುತ್ತ) ವಿರಾಗಿಣಿ! ನೀನಲ್ಲವೇ ನನ್ನ ಇಷ್ಟದೇವತೆ?

ಮಕ.—ಭಗವತಿ! ಈವರೆಗೂ, ನಾನು, ನಿನ್ನನ್ನು ಮಾನವೀವ್ಯಕ್ತಿಯೆಂದೇ ತಿಳಿದಿದ್ದೆನು. ಆ ಅಭಿಮಾನದಿಂದಲೇ ಅಂದಿನ ನಿನ್ನ ಹಿತೋಪದೇಶವನ್ನು ಕಡೆಗಣಿಸಿದೆನು; ಆದರೂ, ಪಾಮರನಾಗಿ ಕೆಡುತ್ತಿದ್ದ ನನ್ನನ್ನು, ಪಾವನನಾಗುವಂತೆ ಸುಬೋಧಾಮೃತವರ್ಷದಿಂದ ಇಂದು ಉದ್ಧರಿಸಿದೆ! ಮೂರ್ಖನ ಕೃತಘ್ನತೆಯನ್ನು ಕಡಿದು, ಪತ್ನೀಪ್ರಾಣದಾನಮಾಡಿದೆ! ಇಂತಿರುವ ಅನಿಮಿತ್ತಪ್ರೇಮಮೂರ್ತಿಯಾದ ನಿನ್ನನ್ನು ಏನೆಂದು ಕರೆಯಲಿ? ಅಪ್ರಾರ್ಥಿತೆಯಾಗಿಯೇ ಪ್ರಸನ್ನೆಯಾಗಿರುವ ನಿನ್ನಲ್ಲಿ ಪ್ರಾರ್ಥಿಸುವುದಾದರೂ ಏನಿದೆ? ತಾಯಿ! ಆದರೂ ಈ ನಿನ್ನ ಸಹಚಾರಿಣಿ, ಚೇತರಿಸಿಕೊಳ್ಳುವವರೆಗೂ ಅಡಿಗಡಿಗೆ ಬಂದು ನೋಡಿ ಪ್ರೋತ್ಸಾಹಿಸುತ್ತಿರಬೇಕೆಂದು ಪ್ರಾರ್ಥಿಸುತ್ತಿರುವೆನು?

ವಿರಾ:—ಅಣ್ಣಾ! ನನ್ನ ಕೆಲಸವನ್ನು ನಾನು ಮಾಡುವಲ್ಲಿ, ನನಗೇಕೆ ಈ ಅಬ್ಬರದ ಮನ್ನಣೆ? ನಾನಾವ ಮಹತ್ಕಾರ್ಯವನ್ನು ಮಾಡಿದೆನೆಂದೀಕೃತಜ್ಞತೆ? ಇದೆಲ್ಲವೂ ಮಾತೃಕಟಾಕ್ಷವಲ್ಲವೇ? ಹೇಗೂ, ನಿನ್ನಿಂದಿನ ಹಿತವಚನ, ಸನ್ಮಾನಗಳು ಆ ಮಾತೃದೈವಕ್ಕೇ ನಿವೇದಿಸಲ್ಪಟ್ಟಿವೆ. ಆದರೆ, ನನ್ನ ಕಠಿಣೋಕ್ತಿಗಳನ್ನು ಮರೆತುಬಿಡಬೇಕು. ನಾನಿನ್ನು ಹೊರಡಲೆ? ಚಂದ್ರಾ! ಏನುಹೇಳುವೆ?

(ಮಕರಂದನು, ಸಮ್ಮತಿಸಿದನು, ಚಂದ್ರಭಾಗೆಯೂ ತಲೆದೂಗಿ, ಸಂತೋಷವನ್ನು ಸೂಚಿಸಿದಳು. ವಿರಾಗಿಣಿ, ಕಿರುನಗೆ

ಯಿಂದ ಕಿರುಮನೆಯನ್ನು ಬಿಟ್ಟು ಹೊರಗೆ ಕಾಲಿಟ್ಟೊಡನೆಯೇ ಎಲ್ಲವನ್ನೂ ಕೇಳಿ ನೋಡುತ್ತ ನಿಂತಿದ್ದ ನರಸಮ್ಮನು, ಈಕೆ ಯನ್ನು ಆಲಿಂಗಿಸಿ ಉಚ್ಚಸ್ವರದಿಂದ) ಸುಭಗೆ !

ವಿರಾ —(ಅಷ್ಟಕ್ಕೇ ತಡೆದು,) ಹೋ ! ಏನಿದು ? ಆರಿಗೆಸ್ತುತಿ ? ಭಗವತಿಗಾಗಲಿ ! ನನಗೇಕೆ ? ನರಸಮ್ಮ ! ನಮ್ಮ ಚಂದ್ರ ಭಾಗೆ, ಜೀವಿಸಿದುದೂ, ನಿಮ್ಮ ಗೃಹರಾಜ್ಯ ಲಕ್ಷ್ಮಿ, ಪ್ರಕಾ ಶೀಕೃತೆಯಾದುದೂ, ಜಗನ್ಮಾತೆಯ ಪ್ರಸಾದವು.

ನರ —ವಿರಾಗಿಣಿ ! ಕುಲಟೆಯ ಜಾಡಿಗೆ ಮರುಳಾಗಿ, ನಾನಂದು ನಿನ್ನಲ್ಲಿ ಕಲಂಕವನ್ನು ಚಿಂತಿಸಿ ಮನಬಂದಂತೆ ಬಯ್ದುಬಂ ದೆನು. ಆದರೂ, ಆದಾವುದನ್ನೂ ನೆನೆಯದೆ ಕರೆದೊಡನೆ ಬಂದು ನಮಗೆ ಮಾಡಿದ ಮಹೋಪಕಾರಕ್ಕೆ ನಾವೇ ನನ್ನು ಕೊಡಬಹುದು ? ನಮ್ಮ ಮನೆತನವನ್ನುಳಿಸಿದ ನಿನ್ನ ದಯೆಗೆ ನಾವು ಯಾವಜ್ಜೀವವೂ, ದಾಸಾನುದಾಸಿಯರಲ್ಲದೆ ಮತ್ತೇನು ? ಭಗವಂತನು ನಿನಗೆ ಬೆಂಬಲವಾಗಿ ರಕ್ಷಿ ಸುತ್ತಿರಲಿ !

ವಿರಾ —ನರಸಮ್ಮ, ಸಾಕು ! ನಿಮಗೆ ಭಟ್ಟತನವನ್ನಾಗಲೀ ವೈತಾ ಳಿಕ ವೃತ್ತಿಯನ್ನಾಗಲೀ ನಾನು ಕೊಟ್ಟುದಿಲ್ಲ ? ಸುಮ್ಮ ನೇಕೆ ಬಳಲುವಿರಿ ? ಭಗವಂತನನ್ನು ವಂದಿಸಿರಿ ? ಭಗವತೀ ಮಾತೆಗೆ ಧನ್ಯವಾದ ಮಾಡಿರಿ !! ತಮ್ಮ ಅಂತಃಕರಣ ಪೂರ್ವಕವಾದ ಆಶೀರ್ವಾದವೊಂದೇ, ನನಗೆ ಸಾಕಲ್ಲದೆ ಮತ್ತಿನ ಹೊಗಳಿಕೆ ಸಲ್ಲದು. ನಾನಿನ್ನು ಹೋಗುವೆನು. (ಎಂದು ಅಳಿಕೆಯೊಡನೆ ಹೊರಟಳು.)

[ಪ್ರಿಯಸೋದರಿಯರೇ !

ಆವವ್ಯಕ್ತಿ, ನಿಷ್ಠುರಕ್ಕೆಪಕ್ಕಾಗಿ, ಹಾಗದಕಾಸಿಗೂ ಬೇಡದು ದಾಗಿದ್ದುದೋ, ಅದೇವ್ಯಕ್ತಿ, ಇಂದು ಏನೇನುಮಾಡಿತೆಂಬುದೂ, ಎಷ್ಟರ ಸನ್ಮಾನಕ್ಕೆಪಕ್ಕಾಗಿರುವುದೆಂಬುದೂ ತಿಳಿದುದಲ್ಲವೆ ? ಸರಿ; ಸತ್ವಸ್ವರೂಪವು ಸಾಕ್ಷಾತ್ಕರಿಸಿ ನಿಲ್ಲುವವರೆಗೂ ಲೋಭವನ್ನು ಜಯಿಸಿ ಸ್ವಾಧೀನಪಡಿಸಿಕೊಳ್ಳುವ ಸುಯೋಗವು, ಕ್ಷಮೆಗೆ ಉಂ ಟಾಗಿರಲಿಲ್ಲವೆಂದೂ, ಸತ್ವವೇ ಪ್ರತ್ಯಕ್ಷದಲ್ಲಿ ನಿಂದು, ಹುರಿಗೊಳಿ ಸುತ್ತಿರುವಂದು, ಅತಿ ಸುಲಭವಾಗಿ ಸ್ವಾಧೀನಮಾಡಿಕೊಂಡು ದೆಂದೂ ಮತ್ತೆಮತ್ತೆ ಹೇಳಬೇಕೆ ?]

---

॥ ಶ್ರೀಃ ॥

## ಪಂಚಮ ಪರಿಚ್ಛೇದ.

(ಕಾಲಚಕ್ರಗತಿ)

ಹೇ ಕಾಲಪುರುಷ ! ನೀನೇ ಪ್ರಬಲನಾದವನು ? ನಿನ್ನ ಗತಿ ಮತಿಗಳನ್ನು ತಿಳಿದು ಹೇಳಲಾರಿಂದಳವು ? ಇಂದು ಕಟುವಾಗಿ ತೋರುವ ನೀನೇ ಮುಂದೆ ಅಮೃತಪ್ರಾಯನಾಗಿ ಕಾಣುವೆ ! ಮತ್ತೊಮ್ಮೆ ಅಮೃತಮಧ್ಯದಲ್ಲಿಯೇ ಹಾಲಾಹಲವೂ ಬೆದರಿರು ವಂತೆ ಮಾಟಮಾಡುವೆ ! ಭಲೆ ! ಕಾಲಪುರುಷ ! ಭಲೆಭಲೆ !! ಪಾಮರನನ್ನು ಪಶ್ಚಾತ್ತಾಪಾಗ್ನಿ ಸಂತಪ್ತನನ್ನಾಗಿ ಮಾಡಿ, ಪಾವನ

ನೆನ್ನಿಸುವೆ? ಪಂಡಿತನನ್ನೂ ಪಾಮರಬೋಧೆಯಿಂದ, ಪರಿತಪಿಸು ವಂತೆ ಮಾಡುವೆ! ಪಂಡಿತ, ಪಾಮರರೀರ್ವರನ್ನೂ ಒಂದುಗೂಡಿಸಿ, ಗಂಡುಗಲಿತನದಿಂದ ಕುಣಿಕುಣಿದಾಡುವೆ!! ಇದಲ್ಲವೇ ನಿನ್ನ ಚಕ್ರ ಗತಿ? ಸಂಶಯವೇನು? ಅದರಿಂದಲೇ—ಕಾಮಮೋಹಿತನಾಗಿ ಅಧಃಪಾತಾಲದಲ್ಲಿ ಬೀಳುತ್ತಿದ್ದ ಮಕರಂದನನ್ನು, ವಿರಾಗಿಣೀ ರೂಪದಿಂದಿದಿರಾಗಿ ಬಂದು ಮೆಲ್ಲನೆತ್ತಿ, ವಸ್ತುವಿಚಾರವೇದಿಕೆಯಲ್ಲಿ ನೆಲೆಗೊಳಿಸಿದೆ! ಆವನು ತುಚ್ಛ ಭೋಗಾಭಿರತಿಗಾಗಿ, ಪತ್ನೀ ವಿಮುಖನಾಗಿದ್ದನೋ? ಅವನೇ, ಪತ್ನಿಯನ್ನೆಡೆಬಿಡದೆ ಹಾಸ್ಯ, ವಿನೋದ, ಕ್ಷಮಾಪ್ರಾರ್ಥನೆ, ವಿವಿಧ ಕಥಾಪ್ರಸಂಗಗಳಿಂದ ನಲಿ ದಾಡುತ್ತಿರುವಂತೆ ಮಾಡಿದೆ. ಅಂತಹನಿಂದಲೇ ಮೊದಲು, ಉಪ ಭೋಗಾರ್ಹವಸ್ತುವೆಂದು ಕಾಮಿಸಲ್ಪಡುತ್ತಿದ್ದುದಾವುದೋ, ಅದೇ ವಸ್ತು, ಈಗ ಹಾಲಾಹಲಸದೃಶವೆಂಬ ತಿರಸ್ಕಾರಕ್ಕೆ ತಿರುಗಿ ದ್ವೇಷಿಸಲ್ಪಡುವಂತ ಮಾಡಿರುವೆ; ಆವವಸ್ತು ಆವವ್ಯಕ್ತಿಬಲ ದಿಂದ ಹೆಮ್ಮೆಗೊಂಡು. ಮೆರೆಯುತ್ತಿದ್ದುದೋ ಅದೇ ಈಗ, ಆ ವ್ಯಕ್ತಿಪರಾಙ್ಮುಖತ್ವದಿಂದ ಕುದಿವ ಕಣ್ಣೀರನ್ನುಗುಳ್ವಂತೆ ಮಾಡಿ ಮಾಡುತ್ತಿರುವೆ!! ಅಷ್ಟೇಅಲ್ಲ!

ಹೇ! ಅಜೇಯ್ಯಾಪುರುಷ! ಧನ್ಯ!! ನಿನ್ನ ಸದುದ್ಯಮಬಲ ದಿಂದ ಚಂದ್ರಭಾಗೆ, ಪುನರುಜ್ಜೀವಿತೆಯಾದಳು. ವಿರಾಗಿಣಿ, ತನ್ನ ದೀರ್ಘವ್ರತದಲ್ಲಿ, ಮೊದಲ ಹಂತವನ್ನು ಭದ್ರಪಡಿಸಿದೆನೆಂದುಬ್ಬಿ ದಳು; ಕರಾಳಿನಿಯ ಕುಲಟಾವರ್ತನಕ್ಕೆ ಕಲ್ಮುಳ್ಳುಗಳನ್ನು ತಂದೊ ಡ್ಡುವ ಕೆಲಸಕ್ಕಾಗಿ, ಮಕರಂದನನ್ನೇ ನಿಯಮಿಸಿದಳು. "ಕಳ್ಳನ ಜಾಡುಕಳ್ಳನಿಗರಿವು" ಎಂಬಂತೆ ಚೋರಮಾರ್ಗಸಂಚಾರದಲ್ಲಿ ಪೂರ್ಣಪಂಡಿತನಾದ ಮಕರಂದನೇ ಪ್ರಯತ್ನಗೊಂಡುನಿಂದರೆ,

ಕೇಳಬೇಕೆ? ಕರಾಳಿನಿಯ ಮಾರ್ಗಾನುರೋಧಕರನ್ನು ಸಾಮ ಮಂತ್ರದಿಂದಲೇ ಸ್ವಾಧೀನಪಡಿಸಿಕೊಂಡನು. ನಾಟಕಸಂಘವನ್ನುಳಿದು ಕಲಿವಿಮುಕ್ತನಾದನು. ದೇಶಸೇವೆಗೆ ಬದ್ಧಕಂಕಣನಾಗಿ, ನಾಟಕಸಂಘವಿಕ್ರಮದಿಂದ ಬಂದ ದ್ರವ್ಯದಿಂದ ಮುದ್ರಾಯಂತ್ರಗಳನ್ನು ಕೊಂಡು, ವೃತ್ತಪತ್ರಮುಖೇನ ಮೂರ್ಖವರ್ಗವನ್ನೆಚ್ಚರಿಸಲು ನಿಂದನು. ಹೆಚ್ಚಾಗಿ ಹೇಳುವುದೇನು? ಬಟ್ಟನಲ್ಲಿ, ತುಂಗಭದ್ರೆಯ ಉನ್ಮಾದರೋಗಕ್ಕೆ ಆರನ್ನೂ ಹೊಣೆಯಾಗದಂತೆ ಮಾಡಿದನು. ರಘುನಾಥನಲ್ಲಿ ಅನಿಮಿತ್ತ ಸ್ನೇಹಬಾಂಧವ್ಯವನ್ನು ಬಳೆಯಿಸಿದನು. ರಘುನಾಥನ ಮನೆಗೆ ಬಂದಾಗಲೆಲ್ಲಾ, ವಿರಾಗಿಣಿಯಲ್ಲಿ ಪ್ರಸಂಗಿಸದೆ ಹೋಗುತ್ತಿರಲಿಲ್ಲ. ತುಂಗೆ, ತಾನಾಗಿ ಬಂದು ಇದಿರಿನಲ್ಲಿ ನಿಂತರೂ ತಲೆಯೆತ್ತಿ ನೋಡುತ್ತಿರಲಿಲ್ಲ. ಹೀಗಾದುದೇತರಿಂದ? ಕಾಲಗತಿಯಿಂದಲ್ಲವೆ? "ಕಳ್ಳನ ಹೆಂಡತಿ ಎಂದಿದ್ದರೂ ಮುಣ್ಣಗೆ" ಎಂಬಂತೆ, ತುಂಗಭದ್ರೆಗೆ ಎಂದಿದ್ದರೂ, ನಿಂದೆ ನರಕಯಾತನೆಗಳು ತಪ್ಪಲಾರವೆಂಬುದು ನಿದರ್ಶನಕ್ಕೆ ಬಂದಿತು. ಭುಜಂಗಶೇಖರಿಯ ಬಂಧನದಲ್ಲಿದ್ದ ಭುಜಂಗಗಳು, ಬಂಧವಿಮೋಚನೆ ಹೊಂದಿದುದರಿಂದಲೂ ಭುಜಂಗಮಹಿಷಿಯರ ಮುನ್ನಿನ ಮನದಳಲು, ತುಂಗಭದ್ರೆಯನ್ನೇ ತಿನ್ನಬಂದುದರಿಂದಲೂ, ನರಸಮ್ಮನು, ಬಗೆಬಗೆಯಾಗಿ ತನ್ನ ಮಗನು, ವಿವರಿಸಿ ಹೇಳಿದುದರಿಂದ ತಿಳಿದುದರಲ್ಲಿ ಕೆಲಕೆಲವು ಸಂಗತಿಗಳನ್ನೇ ಪೋಣಿಸಿ, ಕಂಡವರ ಮುಂದಿಡುತ್ತ ತುಂಗೆಯ ಕಲ್ಯಾಣಗುಣಗಳನ್ನೂ, ವಿರಾಗಿಣಿಯ ನಿಷ್ಠುರಹೃದಯವೆಂತಿರುವುದೆಂಬುದನ್ನೂ ಅದರಿಂದ ಆರಾರಿಗೆ ಏನೇನಾಗಿರುವುವೆಂಬುದನ್ನೂ ವಿವರಿಸುತ್ತ ಬಂದುದರಿಂದಲೂ ತುಂಗಭದ್ರೆಯ ಸ್ಥಿತಿಗತಿಗಳೇನಾಗಿದ್ದುವೆಂಬುದನ್ನು ಹೇಳಲಾದೀತೆ?

ಹೇಗೂ, ಚಂದ್ರಭಾಗೆ ಚೇತರಿಸಿಕೊಳ್ಳುವವರೆಗೆ ಒಂದು ಪಕ್ಷ ಕಾಲಾವಧಿ, ವಿರಾಗಿಣಿ ಶಾಲಾಕಾರ್ಯಕ್ಕೆ ವಿಶೇಷವಾಗಿ ಹೋಗುತ್ತಿರಲಿಲ್ಲ. ಹೋಗುವಾಗಲೂ ಬರುವಾಗಲೂ ಆವಾಗಲೂ ಅಳಕನಂದೆಯೊಡನೆಯೇ ಇರುತ್ತಿದ್ದಳು.

ಇನ್ನು ರಘುನಾಥನ ಮನೆಯಲ್ಲಿ ವಿರಾಗಿಣಿಯ ವಿಚಾರವಾಗಿ ಆರಾರು ಹೇಗೆಹೇಗೆ ಇದ್ದರೆಂದು ಇಲ್ಲಿ ಹೇಳಬೇಕಾದುದೇನೂ ಇಲ್ಲ. ಅಡಿಗಡಿಗೆ ವಿರಾಗಿಣಿ ಚಂದ್ರಭಾಗೆಯಲ್ಲಿಗೆ ಹೋಗುವುದೂ, ಮಕರಂದನು ವಿರಾಗಿಣಿಯಲ್ಲಿ ಮತ್ತು ರಘುನಾಥನಲ್ಲಿ ಅಧಿಕವಾಗಿ ಸ್ನೇಹವನ್ನು ಬಳಯಿಸಿದುದೂ, ರಘುನಾಥ ಮಕರಂದರೊಂದಾಗಿ ವಿರಾಗಿಣೀ ಗುಣಕಥನದಿಂದ ನಲಿನಲಿದಾಡುತ್ತಿರುವುದೂ, ಕೃಷ್ಣವೇಣಿ, ಲಕ್ಷ್ಮೀದೇವಮ್ಮನವರ ಮನಸ್ಸಿಗೆ ಸರಿಬೀಳಲಿಲ್ಲ. ಅದರಿಂದ ಅಷ್ಟಕ್ಕಷ್ಟಕ್ಕೂ ಅವಳ ವಿಚಾರವಾಗಿ ಕಲಂಕಭಾವವೇ ಹೆಚ್ಚುತ್ತಿದ್ದಿತು. ತುಂಗಭದ್ರೆಯೆಂತೂ ಉನ್ಮಾದಿನಿಯೇ ' ಪಾಪ ! ಅವಳ ಉನ್ಮಾದರೋಗಕ್ಕೆ ಶಾಂತಿಯುಂಟೆ ? ಹೇಗೆ ? ನಮಗೆಂತೂ ಈಗಲೇ ಹೇಳಕೇಳುವಂತಿಲ್ಲ. ಮತ್ತೇನುಮಾಡಬಹುದು ? ಅವಳಾಗಿ ತಾನೇ ತನ್ನ ಉನ್ಮಾದರೋಗನಿವಾರಣೆಗೆ ವಿರಾಗಿಣೀ ಪರಿತ್ಯಾಗವೊಂದೇ ಮಾರ್ಗವೆಂದೂ, ಅದನ್ನು ಎಂದಾದರೂ ಮಾಡಿಯೇ ತೀರುವೆನೆಂದೂ ಹಟತೊಟ್ಟಿರುವಳು. ಅದಕ್ಕೆಂದೇ ಅತ್ತಿಗೆಯಲ್ಲಿ ತಾನು ಆಪ್ತಸಖಿಯಂತೆ ನಟಿಸುತ್ತ ಕಾಲವನ್ನೇ ಇದಿರನೋಡುತ್ತಿರುವಳು. ತನ್ನಿಷ್ಟಸಿದ್ಧಿಗೆಂದು ಕಲಿಪುರುಷನನ್ನೇ ಬೇಡುತ್ತಿರುವಳು. ಅಂತಹ ಸಹಾಯವಾದರೂ ದೊರೆಯಬಹುದೇನು ? ಕಾಲಪುರುಷನಾದರೂ ಸಹಕಾರಿಯಾಗುವನೇನು ? ನಿರ್ಧರಿಸಲಳವಲ್ಲ ? ಕಾಲಚಕ್ರಗತಿಯೇ ವಿಚಿತ್ರಗತಿಯೆಂದರಿತೆಚ್ಚತ್ತಿರ

ಬೇಕಲ್ಲವೆ ? ಕಾಲಪುರುಷ ! ನಿನಗಿದೇ ಕೋಟಿಕೋಟಿವಂದನೆ ಗಳು. ನಮ್ಮಲ್ಲಿ ಮಾತ್ರ ನೀನೆಂದೆಂದೂ ಕಲಿಮಹಿಮಾ ಪ್ರದರ್ಶಕ ನಾಗದಿರಬೇಕೆಂಬುದೇ ನಮ್ಮ ಮುಖ್ಯಾಶಯವು. (ಅಂತಾಗಲಿ !)

---

॥ ಶ್ರೀಃ ॥

## ಷಷ್ಠ ಪರಿಚ್ಛೇದ.

---

(ಶಾಂತಿನಿರೂಪ)

ಸಹೃದಯರೇ ! ಪತಿರಾಜನ ಧರ್ಮಕರ್ಮಗಳಿಗೆ ಸಹಕಾರಿಣಿ ಯಾದ ಸತಿಯಿಂದ ಹೊಂದಬಹುದಾದ ಶಾಂತಿಸುಖವೇನು? ಪತಿಯು ಮನೋಗತವನ್ನು ತಿಳಿದು, ಅನುಕೂಲವಾಗಿ ನಡೆಯದಾಕೆಯಿಂದೆ, ಆವನಾವ ಸುಖವನ್ನು ಹೊಂದಬಲ್ಲನು ? ಧನವಿರಲಿ, ಗುಣವಿರಲಿ, ಜನರಿರಲಿ, ಆರಿದ್ದರೇನು ? ಪ್ರತಿಕೂಲೆಯಾದಂಗನೆಯಿಂದ ಪರಿ ತಾಪವಲ್ಲದೆ ಸುಖಸಮಾಧಾನದ ಮಾತೆಲ್ಲಿ ? ಓದುಬರೆಹವರಿತು ವಾದನೈಪುಣ್ಯವಿದ್ದರೇನು ? ಗೀತವಾದ್ಯಾದಿ ಪಾಂಡಿತ್ಯಪ್ರಭೆಯುಂ ಟಾಗಿ ಲಾಭವೇನು ? ಆದಿಮೂಲವಾವುದೆಂದರಿಯದೆ, ಅಂಗನೆಯರ ಆಧಾರಪಾತ್ರವಾವುದು ? ಎಂತಹುದು ? ಎಂಬಿವನ್ನೂ ತಿಳಿಯ ಲೊಲ್ಲದೆ ಅಭಿಮಾನಾಂಧತೆಯಿಂದ ಬೀಗಿ ಬಿರಿದ ನಾರಿಯರುಳ್ಳ ಮನೆಯಾವುದೋ ಅದೇ ಸ್ಮಶಾನವಲ್ಲವೇನು ? ಪತಿಯ ಮಾನ ಮನ್ನಣೆ ಎಂತೆಂಬುದನ್ನು ನೆನೆಯದೆ ಮನೆಗೆಲಸಗಳನ್ನು ಅನುವ

ರಿತು ನಡೆಯಿಸದೆ, ಮನಬಂದಂತೆ ಮುನಿದಳಲುತ್ತಿರುವ ವಿನಯ ವಿಹೀನೆಯರ ಸಂಗತಿಯೇ ಪರೇತ ಸಂಗತಿಯೆಂಬರಲ್ಲವೆ? ಸಂಶಯವೇಕೆ? ಇಂತಹ ಭಯಂಕರ ಸ್ಮಶಾನಸಂಗತಿಯಲ್ಲಿರಲಾರದೆಯೇ ಶಂಕರನಾಥನು ವಿರಕ್ತನಾಗಿ ಶ್ಯಾಮನಗರವನ್ನು ಸೇರಿದನು? ಇದರಿಂದಲೇ ಅಲ್ಲವೆ ರಘುನಾಥ ಪರಮಾನಂದನೂ ಉಲ್ಲಾಸವೆಂಬುದಿಲ್ಲದೆ ಬಲ್ಲಿದ ದುಗುಡಕ್ಕೆಡೆಯಾಗಿ ಅಳಲುತ್ತಿರುವುದು? ಅಧಿಕಪ್ರಸ್ತಾಪದಿಂದ ಮುಳಿವಿರಲ್ಲವೆ? ಅಂತಾದರಿನ್ನು ಸಾಕು. ಸಾಯಂಕಾಲ ಶಾಲೆಯಿಂದ ಬಂದ ರಘುನಾಥನು ಕಿರುಮನೆಯಲ್ಲಿ ಕುಳಿತು ಸ್ವಗೃಹರೂಪ ಪರಿವರ್ತನೆಗಳನ್ನು ಗುಣಿಸಿ ಗುಣಿಸಿ ಚಿಂತಿಸುತ್ತಿದ್ದನು. ನಿರಂಜನನೂ ಅದೇ ವೇಳೆಯಲ್ಲಿಯೇ ಭಗವಾನಂದನೊಡನೆ ಬಂದು ಸೇರಿದನು.

ರಘು:—(ತಲೆಯೆತ್ತಿ),—ಕುಳಿತುಕೊಳ್ಳಿರಯ್ಯಾ!

ನಿರಂ:—(ತಮ್ಮನೊಡನೆ ಕುಳಿತು)—ಇಂದೇನು ಹೀಗಿರುವೆ? ಮನೆಯಲ್ಲಿ ವಿದ್ಯಮಾನವಿಶೇಷವುಂಟೊ?

ರಘು.—ನಿನ್ನ ತಂದೆಯ ಸಂಸಾರವನ್ನು ಸ್ಮರಿಸುವಂತಿದೆ; ಅಷ್ಟೆ.

ನಿರಂ:—ಬಾವ! ಇದಕ್ಕಾಗಿ ಚಿಂತಿಸುತ್ತ ಕುಳಿತಿರೆ ಫಲವೇನು? ಇದಕ್ಕೆ ಭಗವತ್ಕೃಪೆಯೊಂದೇ ಶಾಂತಿಕ್ರಿಯೆಯಲ್ಲದೆ ಬೇರಿಲ್ಲ! ವಿರಾಗಿಣಿ ಮನೆಯಲ್ಲಿರುವಳೊ?

ರಘು:—ಇರಬಹುದು! ನಾನೂ ಶಾಲೆಯಿಂದ ಈಗಲೇ ಬಂದೆನು. ಬಂದವನು ಒಳಹೊಗದೆ ಇಲ್ಲಿಯೇ ಕುಳಿತೆನು.

ನಿರಂ:—ಆದರೆ, ನಾನು ಭಗವಾನಂದನಿಗೆ ಅವಳನ್ನು ತೋರಿ ಬರುವೆನು.

ರಘು:—ಸಂತೋಷ.

(ಭಗವಾನಂದನೊಡನೆ ನಿರಂಜನನು ಹೊರಟು ಬೃಂದಾವನದಮುಂದೆ ಅಳಕನಂದೆಗೆ ಪಾಠವನ್ನು ಹೇಳುತ್ತಿದ್ದ ವಿರಾಗಿಣಿಯ ಬಳಿಯಲ್ಲಿ ನಿಂದನು. ವಿರಾಗಿಣಿಯನ್ನು ನೋಡಿದೊಡನೆಯೇ ಭಗವಾನಂದನು ಆನಂದಪರವಶನಾಗಿ ಓಡಿಬಂದು,-ಅಕ್ಕಾ! ಇಲ್ಲಿರುವೆಯಾ ? ಎಂದು ಬಿಗಿದಪ್ಪಿಕೊಂಡು ಬಿಕ್ಕಿಬಿಕ್ಕಿ ಅಳತೊಡಗಿದನು. ವಿರಾಗಿಣಿಯ ಕಣ್ಣಿನಲ್ಲಿಯೂ ನೀರು ತುಂಬಿತು. ಆದರೆ ಮುಂದಕ್ಕೆ ಬಿಡದೆ ತಡೆದುಬಿಟ್ಟಳು. ಭಗವಾನಂದನ ಕೈಹಿಡಿದು ಬಳಿಯಲ್ಲಿ ಕುಳ್ಳಿರಿಸಿಕೊಂಡಳು.)

ನಿರಂ:—ತಾಯಿ! ನಾನಿನ್ನು ಹೊರಡಲೆ ? ಭಗವಾನಂದನು ನಿಧಾನವಾಗಿ ಬರಬಹುದು

ವಿರಾ:—ಅಣ್ಣ! ನಿನ್ನ ಕೆಲಸಕ್ಕೆ ತಡೆಮಾಡಲಾರೆನು ವಿಮಲಚಂದ್ರನ ವಿಚಾರವೇನಾದರೂ ತಿಳಿದುಬಂದಿತೊ ?

ನಿರಂ:—ಇನ್ನೂ ಇಲ್ಲ; ಮೊನ್ನಿನ ದಿನದ ವರ್ತಮಾನಪತ್ರಿಕೆಗಳಲ್ಲಿ ಪ್ರಕಟನೆಯನ್ನು ಕೊಟ್ಟಿರುವೆನು.

ವಿರಾ:—ಏನೆಂದು ?

ನಿರಂ:—"ವಿನಯಚಂದ್ರನೆಂಬ ಸತ್ಕುಲೀನನೊಬ್ಬನು ಸದ್ಯಃಸ್ಥಿತಿಯಲ್ಲಿ ನನ್ನ ವಿಚಾರಣೆಗೊಳಪಟ್ಟಿರುವನು. ಈತನು ಈಗ ಕೆಲ ದಿನಗಳಿಂದ ಆಲಸ್ಯದಲ್ಲಿರುವನು. ಈತನ ಅಣ್ಣನೂ, ಮುಖ್ಯ ವಾರಸುದಾರನೂ ಆದ ವಿಮಲಚಂದ್ರನೆಂಬಾತನು, ಇಲ್ಲಿಯ ಸದ್ಗೃಹಸ್ಥರ ಮಗಳಾದ ತನ್ನ ಧರ್ಮಪತ್ನಿಯನ್ನೂ ಬಿಟ್ಟು, ಸ್ವಗೃಹಚಿಂತೆಯನ್ನೂ ತೊರೆದು ಹೊರಟುಹೋಗಿರುವನು. ಈವರೆಗೂ ಆತನ ವಿಚಾರವಾವುದೂ ತಿಳಿಯದಿರುವುದರಿಂದ ವಿನಯಚಂದ್ರನ ರೋಗವು ಹೆಚ್ಚು

ವುದಕ್ಕೆ ಮಾರ್ಗವಾಗಿದೆ. ಮೇಲೆಕಂಡ ವಿಮಲಚಂದ್ರನ ನೆಲೆಯರಿತವರಾರಿದ್ದರೂ ದಯವಿಟ್ಟು ಇಲ್ಲಿಯ ಸಬ್‌ರಿಜಿಸ್ಟ್ರಾರಾಗಿರುವ ನನಗೆ ವಿಶದಪಡಿಸಬೇಕಾಗಿ ಕೋರುವೆನು." ಎಂದಿಂತು ಪ್ರಕಟೀಕೃತವಾಗಿದೆ. ಉತ್ತರವೂ ಶುಭವಾಗಿಯೇ ದೊರೆಯಬಹುದೆಂಬ ನಿರೀಕ್ಷೆಯುಂಟು. ಇನ್ನಿದರಮೇಲೆ ದೈವೇಚ್ಛೆ. (ಎಂದು ಹೇಳಿ ಹೊರಟು ಹೋದನು.)

ಭಗ:—ಅಕ್ಕ ! ನಿನಗಿಷ್ಟು ಕಲ್ಲೆದೆಯೆಂದಾರೂ ತಿಳಿದಿರಲಿಲ್ಲ. ಹಿಂದಿನ ನಲವೇನಾಯ್ತು ? ಏಕೆ ನಿನ್ನ ಸಂಗತಿಯನ್ನೇ ಕಳುಹದೆ ಬಯ್ತಿದ್ದುದು ? ಮನಸ್ಸು ಕದಲದೆ ಹೇಗಿದ್ದುದು ?

ವಿರಾ:—ಭಗವಾನ್ ! ಕಲ್ಲೆದೆಯಾಗದಿದ್ದರೆ ಕಾಲಧನವೂ ಬರಿದೆ ಕಳೆದು ಹೋಗುತ್ತಿದ್ದುದಲ್ಲವೆ ? ಹಿಂದಿನ ನಲವೇನಾಗುವುದು ? ಅದೆಂದೂ ಕುಂದತಕ್ಕುದಲ್ಲ ! ಆದರೆ ಆತಂಕದಾಯಕವಾದ ಮೊದಲ ವೇಷಭಾಷೆಗಳನ್ನೇ ತೊರೆದು, ದುಃಖಭಾಜನವಾದ ಆ ಶಬ್ದವನ್ನೂ ಕೊನೆಗಾಣಿಸಿ, ಈ ಬಗೆಯ ದೇಶಸೇವಾ ವ್ರತದಲ್ಲಿ ನಿಂತ ನನಗೆ ಭೇದಭಾವವುಂಟಾಗಬಹುದೆ ? ಇದಕ್ಕೆ ಪ್ರತಿಬಂಧಕವಾಗಿರುವ ಮಮತೆಯನ್ನು ತಕ್ಕಷ್ಟು ತಡೆದಿರಬೇಕೆಂಬುದೇ ನನ್ನ ಮನದೆಣಿಕೆ ! ಅದಕ್ಕೆಂದೇ ಈವರೆಗೂ ನನ್ನ ವಿಚಾರವನ್ನು ಹೊರಗೆಡಹದೆ ತಡೆದಿದ್ದುದು ?

ಭಗ:—ನೀನೇ ಹೇಳದಿದ್ದರೂ, ನಿರಂಜನನನ್ನೇಕೆ ತಡೆಮಾಡಬೇಕು ?

ವಿರಾ:—ರಾಜಶೇಖರನ ಸ್ಥಿತಿಗತಿಗಳನ್ನು ನೆನೆನೆನೆದು ಚಿಂತೆಯಿಂದಲೇ ತಡೆದೆ ! ಇರಲಿ ; ನೀನೇನು ಬಂದುದು ?

ಭಗ:—ನನಗಲ್ಲಿಯ ಪ್ರವೇಶಪರೀಕ್ಷೆಯು ತೀರಿತು. ಇಲ್ಲಿಯ ಘನ ವಿದ್ಯಾಶಾಲೆಯಲ್ಲಿ ವ್ಯಾಸಂಗಕ್ಕೆಂದು ಬಂದೆನು. ನಾನಿಲ್ಲಿಗೆ ಮಧ್ಯಾಹ್ನವೇ ಬರಬೇಕಾಗಿದ್ದಿತು. ಆದರೂ ಮನೆಯ ಕುರುಹು ಮರೆತುಹೋಗಿದ್ದುದರಿಂದ ಈವರೆಗೂ ತಡೆಯು ಬೇಕಾಯಿತು.

ವಿರಾ:—ಮತ್ತೆ ಊರಿಗೆ ಹೋಗುವೆಯಾ?

ಭಗ:—ಹುಂ! ಈ ರಾತ್ರಿಯೇ ಹೊರಡಬೇಕು. ಅಲ್ಲಿರುವ ನನ್ನ ಸಾಮಗ್ರಿಗಳನ್ನು ತರಬೇಕಾಗಿದೆ,

ವಿರಾ:—ಬರುವುದೆಂದು?

ಭಗ.—ನಾಳಿದ್ದರೊಳಗಾಗಿ ಶಾಲೆಗೆ ಸಿದ್ಧವಾಗಿರಬೇಕಾದುದರಿಂದ ನಾಳೆಯರಾತ್ರಿಯೇ ಇಲ್ಲಿರುವೆನು.

ವಿರಾ:—ಭಗವಾನ್! ಅಮ್ಮನ ವಿಚಾರವಾಗಿ ನಾನೇನನ್ನೂ ಕೇಳಿ ತಿಳಿಯಬೇಕಾದುದು ಉಳಿದಿಲ್ಲ. ಎಲ್ಲವನ್ನೂ ಊಹಿಸಿ ತಿಳಿದಿರುವೆನು ಆದರೆ, ರಾಜಶೇಖರನ ವಿಚಾರವಾಗಿ ಏನಾದರೂ ತಿಳಿದಿರುವೆಯಾ? ಆತನು ಇನ್ನೂ ಎಷ್ಟುವರ್ಷದ ವರೆಗೂ ಬಂದಿಯಾಗಿರಬೇಕು? ಬಿಡುಗಡೆಗೆ ಮಾರ್ಗವೇನಾದರಿರುವುದೆ?

ಭಗ:—ವಿಚಾರವೇನು? ನಿನ್ನಮೇಲೆ ಅಕ್ರಮವನ್ನು ಮಾಡುತ್ತಿದ್ದನೆಂಬುದೂ, ನಿನ್ನ ಅದೃಶ್ಯಕ್ಕೆ ಅವನೇ ಕಾರಣನೆಂಬುದೂ, ಈ ಎರಡರ ತಪ್ಪಿತವೂ ನಿಜವೆಂಬ ನಂಬುಗೆಯಾಗಿ ಎರಡು ವರ್ಷಗಳ ವರೆಗೆ ಬಂದಿಯಾಗಿರಬೇಕೆಂದು ತೀರ್ಮಾನವಾಯಿತು. ಆದರೆ ಅದಕ್ಕೆ ಮೊದಲೇ ನೀನೂ ಸಿಕ್ಕಿ, ಅವನೂ "ನಿರಪರಾಧಿ" ಎಂಬುದಕ್ಕೆ ಆಧಾರವೇನಾದರೂ

ದೊರೆತರೆ ಬಿಡುಗಡೆಯಾಗಬಹುದೆಂದೂ ಅವಕಾಶವಿದೆ ಯಂತೆ ?

ವಿರಾ:—ಭಗವಾನ್ ! ಹಾಗಿದ್ದರೆ ನನ್ನ ಸತ್ವವನ್ನೂ ಒಮ್ಮೆ ಅದೃಷ್ಟತಕ್ಕಡಿಯಲ್ಲಿಟ್ಟು ತೂಗಿನೋಡುವೆನು. ಅದರಿಂದೇನಾದರೂ ರಾಜಶೇಖರನಿಗೆ ಬಿಡುಗಡೆಯಾದರೆ, ಅದೇ ನನ್ನ ಸಂಕಲ್ಪಸಿದ್ಧಿಗೆ ಸೂಚನೆಯೆಂದೆಣಿಸುವೆನು. ಇರಲಿ; ಈಗಾತನ ಬಗೆ ಹೇಗಿದೆ ? ನನ್ನನ್ನು ಕುರಿತು ಏನೆನ್ನುವನು ?

ಭಗ:—ಅಕ್ಕ ! ಆತನ ಸ್ಥಿತಿಯನ್ನು ಹೇಳಲಾರೆನು. ಕಾರಾಗೃಹಕ್ಕೆ ನಾನು, ಅಲ್ಲದಿದ್ದರೆ ರಮಾನಂದ-ಇಬ್ಬರಲ್ಲಿ ಆರಾದರೊಬ್ಬರು ಹೋಗಿ ನೋಡಿಬರಬೇಕಲ್ಲದೆ, ಮತ್ತಾರಮುಖವನ್ನೂ ನೋಡುವಂತಿಲ್ಲ. ಹೋದಾಗಲೆಲ್ಲಾ ಅವನ ಬಾಯಿಂದೆ ನಿನ್ನ ಮೇಲಿನ ಕೆಟ್ಟಬಯ್ಗುಳೇ ಹೊರಹೊರಡುತ್ತಿವೆ ; ಇನ್ನೂ ಕೋಪವೆಂಬುದು ಸಮಾಧಾನವಾಗುವಂತಿಲ್ಲ !

ವಿರಾ:—ಭಗವಾನ್ ! ಅವನಂತು ಮುಳಿದು ಹಳಿದು ಏನನ್ನು ಸಾಧಿಸುವನು ? ನನ್ನ ಮನಸ್ಸು ಶಾಂತವಾಗಿದ್ದು, ಆತನ ಅಭ್ಯೋದಯವನ್ನೇ ಹಾರಯಿಸುತ್ತಿದ್ದರೆ, ಅವನ ದುರಾಗ್ರಹವು ಮುಂದಕ್ಕೆಂತು ಬರುವುದು ? ಇರಲಿ ! ನಿನ್ನ ಕೈಯಲ್ಲಿ ಎರಡು ಪತ್ರಗಳನ್ನು ಕೊಡುವೆನು. ಅವುಗಳಲ್ಲಿ ರಾಜಶೇಖರನಿಗೊಂದನ್ನೂ ಅಪ್ಪನಿಗೆ ಮತ್ತೊಂದನ್ನು ಮುಟ್ಟಿಸುವೆಯಾ ?

ಭಗ:—ಕೇಳುವುದೇಕೆ ! ಎಲ್ಲಿ, ಬೇಗ ಬರೆಯಬೇಕಲ್ಲ !

ವಿರಾ:—" ಈಗಲೇ ಬರೆದು ಕೊಡುವೆನು. ಅದೆಷ್ಟು ಹೊತ್ತು? "

(ಎಂದು ಎದ್ದುಹೋಗಿ ಲೇಖನಸಾಮಗ್ರಿಗಳನ್ನು ತಂದು

ಮುಂದಿಟ್ಟು ಆತುರದಿಂದ ಬರೆದು, ಬೇರೆ ಬೇರೆಯಾಗಿ ಮಡಿಸಿ, ಭಗವಾನಂದನ ಕೈಯಲ್ಲಿತ್ತು), ಓದಿನೋಡು ; ತಪ್ಪುಗಳಿದ್ದರೆ ಸರಿಪಡಿಸು.

ಭಗ:—(ಪತ್ರಗಳನ್ನು ಕೈಕೊಂಡನು. ಪ್ರಥಮಪತ್ರವು ತನ್ನ ತಂದೆ (ಚಿದಾನಂದ) ಯ ಹೆಸರಿಗಿದ್ದುದರಿಂದ ಅದನ್ನೇ ಮೊದಲು ಓದಿದನು, ಪತ್ರಾಭಿಪ್ರಾಯವಿಂತಿದ್ದಿತು.)

" ಪೂಜ್ಯ—ಹಿತಚಿಂತಕ ಪಿತೃಸಮ್ಮುಖದಲ್ಲಿ,—

ನಿಮ್ಮಾಣತಿಯಿಲ್ಲದೆ, ಹಾಗೂ ನಿಮ್ಮ ತಿಳಿವಿಗೆ ತಾರದೆ, ಹೊರಟುಬಂದ ನನ್ನ ತಪ್ಪನ್ನು ದೊಡ್ಡದೆಂದೆಣಿಸದೆ, ಬಾಲ್ಯಚಾಪಲ್ಯವೆಂದೇ ತಿಳಿದು, ಮನ್ನಿಸಬೇಕೆಂಬುದೇ ಪ್ರಾರ್ಥನೆ. ಮತ್ತೆ ಈ ಹತಭಾಗಿನಿಗಾಗಿ ರಾಜಶೇಖರನಿಗುಂಟಾದ ಕ್ಲೇಶಾನುಭವವನ್ನು ಕುರಿತು ಅಧಿಕವಾಗಿ ಪರಿತಪಿಸುತ್ತಿರುವೆನು. ಏಕೆಂದರೆ— ಈ ನಿರ್ಭಾಗ್ಯೆ ಅಲ್ಲಿಗೆ ಬಾರದೆಯೇ ಇದ್ದ ಪಕ್ಷದಲ್ಲಿ ಆತನೆಂದಿಗೂ ಈ ದುಸ್ಥಿತಿಗೆ ಬರುತ್ತಿರಲಿಲ್ಲ. ಈಗಲೂ ಆತನ ಬಿಡುಗಡೆಯೊಂದಲ್ಲದೆ, ಈ ನಿಷ್ಠುರಚಿತ್ತಕ್ಕೆ ಸಮಾಧಾನವಿಷಯವಿನ್ನೊಂದಿರಲಾರದು! ಆದುದರಿಂದ ಈ ಪತ್ರದೊಡನೆ ಕಳುಹಿಸಿರುವ ಪ್ರಮಾಣ ಪತ್ರಿಕೆಯೊಂದನ್ನು ನ್ಯಾಯಸ್ಥಾನದಲ್ಲಿ ಕೈಗೊಂಡು, ರಾಜಶೇಖರನಮೇಲೆ ಬಿದ್ದಿರುವ ಹೊರೆಯನ್ನು ಹೋಗಲಾಡಿಸಿ, ಬಿಡುಗಡೆ ಮಾಡಬೇಕೆಂದೂ, ಮತ್ತಿನ ವಿಚಾರಗಳು ಚಿರಂಜೀವಿಯಿಂದಲೇ ತಿಳಿಯಬರುವುದೆಂದೂ ಬಿನ್ನವಿಸುವ ತಮ್ಮ ನಿರಂತರ ವಿಧೇಯಳಾದ

ಪ್ರೇಮಪುತ್ರಿ ವಿರಾಗಿಣಿ"

## (ಪ್ರಮಾಣ ಪತ್ರಿಕಾವಿಚಾರ)

ಶ್ಯಾಮನಗರದ ನ್ಯಾಯಸ್ಥಾನದಲ್ಲಿ, ಅದೇ ನಗರದ ನಿವಾಸಿಯಾಗಿ ನಭಾನಾಮದಲ್ಲಿದ್ದು, ಈಗ ಕಾಂತರಾಜಪೇಟೆಯಲ್ಲಿರುವ ವಿರಾಗಿಣಿ ಬರೆದುಕೊಂಡಿರುವ ಪ್ರಮಾಣಪತ್ರಿಕೆ.

ಈಗ ವರ್ಷದಿಂದಲೂ ಕಾರಾಗೃಹದಲ್ಲಿರುವ ರಾಜಶೇಖರನ ಮೇಲೆ ಆರೋಪಿತವಾಗಿರುವ ಅಪರಾಧಗಳು ವಿಚಾರಮಾಡುವುದರಿಂದ ನಿಜವಲ್ಲವೆಂದೂ, ಆತನು ಕಾರಾಗೃಹವಾಸದಲ್ಲಿರುವುದು ಸಕಾರಣವಾದುದಲ್ಲವೆಂದೂ, ಹೇಳುವೆನು. ಅಷ್ಟೇ ಅಲ್ಲ ! ಆತನು ನನ್ನ ಮೇಲೆ ಅಕ್ರಮವನ್ನು ನಡೆಯಿಸುತ್ತಿದ್ದನೆಂಬುದೂ ನಿಜವಲ್ಲ : ಕೊಲೆಗೆ ಪ್ರಯತ್ನಿಸಿದನೆಂಬುದೂ ಒಪ್ಪತಕ್ಕುದಲ್ಲ. ನನ್ನ ಅದೃಶ್ಯಕ್ಕೆ ಆತನೇ ಕಾರಣನೆಂಬುದೂ ನ್ಯಾಯವಾದುದಲ್ಲ. ಇದೆಲ್ಲವೂ ಸಂಸಾರಕ್ಲೇಶದಲ್ಲಿ ಜಿಗುಪ್ಸೆಹೊಂದಿ ದೇಶಸೇವೆಗೆಂದೆಳೆಯಲ್ಪಟ್ಟ ನನ್ನ ಮನಃಪ್ರೇರಣೆಯಿಂದೇ ನಡೆದುವುಗಳಾಗಿವೆಯೆಂದೂ, ಮತ್ತಾರೂ ಕಾರಣರಲ್ಲವೆಂದೂ ಮುಕ್ತಕಂಠದಿಂದ ಹೇಳುವೆನು.

ನಾನು ಪೋಷಕರನ್ನು ಕೇಳದೆ ಹೊರಟುಬಂದುದಕ್ಕೆ ಕಾರಣವಾದರೂ ಬೇರಿಲ್ಲ. ನನಗೆ ಅಲ್ಲಿರಲು ಬೇಸರವುಂಟಾದುದೂ, ಕೇಳಿದರೆ ಅನುಮತಿ ದೊರೆಯದೆಂಬ ನಂಬುಗೆಯುಂಟಾಗಿದ್ದುದೂ ಅವರಲ್ಲಿ ಹೇಳದೆ ಕೇಳದೆ ಹೊರಟುಬರುವಂತೆ ಮಾಡಿದುವು. ಮತ್ತು, ರಾಜಶೇಖರನ ಹೆಸರಲ್ಲಿ ಬರೆದ ಪತ್ರವೂ, ನನ್ನ ಬಾಲ್ಯಬುದ್ಧಿಯ ದುಡುಕೆಂದೇ ಹೇಳುವೆನು. ಇದಕ್ಕೆ ಆತನೆಂತೂ ಉತ್ತರವಾದಿಯಲ್ಲ.

ಸದ್ಯದಲ್ಲಿ ನಾನು, ಇಲ್ಲಿಯ ಘನವಿದ್ಯಾಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಯುತ ರಘುನಾಥ ಪರಮಾನಂದರವರ ಭವನ

ದಲ್ಲಿ, ಪ್ರೌಢಶಿಕ್ಷಣೆಯಲ್ಲಿ, ಒಳಪಟ್ಟು ವ್ಯಾಸಂಗಿಸುತ್ತಿರುವೆನು.

ನ್ಯಾಯವಿಧಾಯಕರಾದ ಧರ್ಮಪ್ರಭುಗಳು, ಮೇಲೆ ಬಿನ್ನವಿಸಿರುವ ಪ್ರಮಾಣವಾಕ್ಯಗಳನ್ನು ದೃಢವೆಂದು ನಂಬಿ, ನಿರಪರಾಧಿಯಾದ ರಾಜಶೇಖರನನ್ನು ಬಿಡುಗಡೆಮಾಡಬೇಕೆಂದು ಸವಿನಯವಾಗಿ ಪ್ರಾರ್ಥಿಸುತ್ತಿರುವ,

ನಿರಂತರವಿಧೇಯಳಾದ ವಿರಾಗಿಣಿ."

ಕಾಂತರಾಜಪೇಟೆ.

(ಭಗವಾನಂದನು, ಎರಡು ಪತ್ರಗಳನ್ನೂ ಮಡಿಸಿ ಅಂಗಿಯ ಕಿಸೆಯಲ್ಲಿಟ್ಟು ಮೂರನೆಯ ಪತ್ರವನ್ನು ವಾಚಿಸತೊಡಗಿದನು. ಅದು, ರಾಜಶೇಖರನಿಗಾಗಿ ಈರೀತಿ ವಿಲಿಖಿತವಾಗಿದ್ದುದು.)

"ಪ್ರಿಯಸಹೋದರ!

ಇನ್ನೂ ಸಮಾಧಾನವನ್ನು ಹೊಂದಿಲ್ಲವೆ? ವಿಚಾರ ವಿಮರ್ಶೆಯುಂಟಾಗಿಲ್ಲವೆ? ವಸ್ತುಗುಣ ತತ್ವವನ್ನರಿತುದಿಲ್ಲವೆ? ನಿನ್ನ ಆಗ್ರಹವು ಶಾಂತಿಹೊಂದಿಲ್ಲವೆ? ದ್ವೇಷವು ಕಡಮೆಯಾಗುತ್ತಿಲ್ಲವೆ? ಏನುಹೇಳುವೆ? ಇವುಗಳಿಂದಾಗುವ ಫಲವೇನು? ಅಂತಸ್ತಾಪವೊಂದಲ್ಲದೆ ಬೇರಿಲ್ಲವಷ್ಟೆ? ರಾಜಶೇಖರ! ಸಾಕು! ಈವರೆಗಿನ ಮೂರ್ಖತೆ ಇನ್ನು ಸಾಕು! ಇನ್ನಾದರೂ ವಿವೇಚನೆಯನ್ನು ಹೊಂದು! ನೈಜಸುಖಾನುಭವ ವೆಲ್ಲಿರುವುದೆಂಬುದನ್ನು ತಿಳಿಯಲು ಪ್ರಯತ್ನಿಸು! ನಿನ್ನೀ ದುಸ್ಥಿತಿಗಾಗಿ ಕ್ಲೇಶಪಡುತ್ತಿರುವ ನನ್ನನ್ನು ನಿನ್ನ ಆಪ್ತ ಸೋದರಿಯೆಂದೆಣಿಸು! ಹೀಗಾಗುವದೆಂದರಿತೇ ನಾನಂದು, ಅಷ್ಟುಬಗೆಯಾಗಿ ಹೇಳಿದೆನು. ಆದರೂ ಕೇಳದೆ ಕಡೆಗಣಿಸಿ, ವಯಃಪ್ರಾಬಲ್ಯದಿಂದ ಇಂದ್ರಿಯ ವೇಗವನ್ನು ತಡೆಯ

ಲ್ಲೊಲ್ಲದೆ ದುಡುಕಿ ಬೇಗೆಗೊಳಗಾದೆ! ನಡೆದು ಹೋದುದಕ್ಕಾಗಿ ಇನ್ನು ಮಿಡಿಕಿ ಫಲವೇನು! ಮುಂದೆ ಎಚ್ಚತ್ತುಕೊಳ್ಳುವುದೇ ಬೇಕಾದುದು. ಮತ್ತೇನ ಬರೆಯಲಿ? ಅಣ್ಣಾ, ಲಜ್ಜಿತನಾಗಬಾರದು! ಕಷ್ಟವೆಂಬುದು ಆರನ್ನೂ ಬಿಡತಕ್ಕುದಲ್ಲ! ಕಷ್ಟದ ಅನುಭವವನ್ನು ತಿಳಿಯದೆಯೇ ಸುಖವಾವುದೆಂಬುದನ್ನು ಆರೂ ತಿಳಿಯಲಾರರು! ಕಷ್ಟದಲ್ಲಿ ಚೆನ್ನಾಗಿ ಪರಿಶ್ರಮವನ್ನು ಹೊಂದಿದವರೇ ಸುಖದ ಸಲ್ಲಕ್ಷಣವನ್ನು ಚೆನ್ನಾಗಿ ತಿಳಿಯಹೇಳತಕ್ಕವರು!! ಆದುದರಿಂದ ನಿನ್ನ ಹಿಂದಿನ ತಪ್ಪಿಗಾಗಿ, ನೀನು ಮುಂದೆ ಅಧೀರನಾಗಿರಬಾರದು, ಆಶೆಯನ್ನೂ ಉತ್ಸಾಹಶಕ್ತಿಯನ್ನೂ ಒಮ್ಮೆಗೇ ಕಡಿದು ಹಾಕಬಾರದು. ಭಗವತ್ಕೃಪೆಯಿಂದಲೇ ಸಕಲವೂ ಶುಭಾವಹವಾಗುವುದೆಂದೂ, ಮತ್ತೆ ಸುಖಸಂಗತಿಯಿಂದ ಬರುವ ನಿನ್ನನ್ನು ನೋಡಿ ಸಮಾಧಾನ ಹೊಂದುವೆನೆಂದೂ ನಿರೀಕ್ಷಿಸುತ್ತಿರುವ ನಿನ್ನ ಆಪ್ತಸೋದರಿ

ಕಾಂತರಾಜಪೇಟೆ ವಿರಾಗಿಣಿ"

ಭಗ:—(ಮೂರನೆಯ ಪತ್ರವನ್ನು ಮಡಿಸಿಟ್ಟು) ಅಕ್ಕ! ಪವಿತ್ರ ಸ್ನೇಹವು ಆರನ್ನುತಾನೇ ಪವಿತ್ರರನ್ನಾಗಿ ಮಾಡದಿರುವುದು? ನಿನ್ನೀಸ್ಥಿರಸಂಕಲ್ಪವು ಜಯವನ್ನೇ ಹೊಂದುವುದರಲ್ಲಿ ಸಂಶಯವಿಲ್ಲ. ನಾನಿನ್ನು ಹೊರಡಲೆ?

ವಿರಾ:—ಹೊರಡು; ಅಮ್ಮನಲ್ಲಿ ನನ್ನ ಅಪರಾಧಕ್ಕಾಗಿ ಕ್ಷಮೆಯನ್ನು ಕೇಳಿದೆನೆಂದು ಹೇಳು. ಅಲ್ಲದೆ, ಅಭ್ಯುದಿತರಾಗುವ ವೇಳೆಯಲ್ಲಿ ಅಳಲುವುದೊಳ್ಳಿತಲ್ಲವೆಂದು ತಿಳಿಸು. ತಂದೆಯವರನ್ನೂ ರಮಾನಂದನನ್ನೂ ಕೇಳಿದೆನೆಂದು ಹೇಳು! ಇನ್ನು ನಾನು ಹೊರಡುವೆನು. ಹೇಗೂ ಇಂದಿನ

ಪತ್ರವೇ ನನ್ನ ಸಂತಾಪಾಗ್ನಿಗೆ ಶಾಂತಿ ಕ್ರಿಯೆಯಾಗಲಿ,
ಇಂತಿಷ್ಟೇ ನನ್ನ ಮನದೆಣಿಕೆ !

(ಭಗವಾನಂದನು ಎದ್ದು ಹೊರಟನು. ವಿರಾಗಿಣಿಯೂ ಅವಕೆ ಯೊಡಗೊಂಡು ಹೊರಹೊರಟಳು.)

---

॥ ಶ್ರೀಃ ॥

## ಸಪ್ತಮ ಪರಿಚ್ಛೇದ.

---

(ಸಖೇದಾಶ್ಚರ್ಯ)

ಸಾಯಂಕಾಲ, ಆರು ಘಂಟೆಯಿರಬಹುದು ; ರಘುನಾಥನು ವಿರಾಗಿಣಿಯೊಡನೆ ಮಾತನಾಡುತ್ತ ಬೀದಿಯ ಪಡಸಾಲೆಯ ಮೇಲೆ ಕುಳಿತಿದ್ದನು. ವಿರಾಗಿಣಿ, ಅಂದು, ಹೋಗದೆ ಮನೆಯಲ್ಲಿಯೇ ಇದ್ದುದರಿಂದ, ಅವಳಲ್ಲಿ ತನ್ನ ಆಂತರಂಗಿಕ ಕ್ಲೇಶಗಳೆಲ್ಲವನ್ನೂ ಹೇಳುತ್ತಿದ್ದನು. ವಿರಾಗಿಣಿಯೂ ಹಂತದಬಳಿಯಲ್ಲಿ ನಿಂತಂತೆಯೇ ಸಮಾಹಿತ ಚಿತ್ತದಿಂದ ಕೇಳುತ್ತ, ಸಮಯೋಚಿತ ರೀತಿಯಲ್ಲಿ ಸಂತವಿಸುತ್ತಿದ್ದಳು.

ಇವರಿಬ್ಬರೂ ಮಾತನಾಡುತ್ತಿದ್ದಾಗಲೇ, ಬೀದಿಯಲ್ಲಿ ಗಾಡಿಯೊಂದು ಬಂದುನಿಂತಿತು. ಗಾಡಿಯಿಂದ ರಘುನಾಥನ ತಮ್ಮನಾದ ಸೌಬಲನೂ ಚಿಕ್ಕಮ್ಮನಾದ ಶರಾವತಿಯೂ ಕೆಳಗಿಳಿದರು. ಶರಾವತೀ ಸೌಬಲರನ್ನು ನೋಡಿದಾಗಲೇ ರಘುನಾಥನು ಕಂಪಿಸಿದನು.

ದುಗುಡದಿಂದ,—"ವಿರಾಗಿಣಿ! ಜ್ವಾಲೆಗೆ ಆಜ್ಯಾಹುತಿಯೂ ಸೇರುವಂತಿದೆ! ವಿಷವು ಸನ್ನಿಪಾತದೊಡನೆ ಸಾಂಕ್ರಾಮಿಕವೂ ಸೇರಲಿಕ್ಕೆಂದು ಬಂದಿದೆ! ಇವುಗಳ ಸಂಗತಿಯಿಂದ ನನಗೆಂತೂ ಕ್ಷೋಭೆ ತಪ್ಪುವಂತಿಲ್ಲ?"

ವಿರಾ:—ಅಣ್ಣಾ! ಈಗಲೇ ಏಕಿಷ್ಟು ಕಳವಳ? ಸೋದರ ಸೊಸೆಯನ್ನು ನೋಡಲಿಕ್ಕೆಂದು ಬಂದಿರಬೇಕು! ಬರಲಿ; ಕುಂದೇನು? ಆವ ಗಂಡಾಂತರಗಳುಂಟಾಗುವುದಿದ್ದರೂ ಶಾಂತಿ, ಬ್ರಹ್ಮದಂಡವಿರುವುದಲ್ಲವೆ? ಅದರ ಬಲದಿಂದ ನಮಗಾವ ಉಪಹತಿಯೂ ಉಂಟಾಗುವದಿಲ್ಲವೆಂದರಿತೆಚ್ಚತ್ತಿದ್ದರೆ ಸರಿ!

(ರಘುನಾಥನು ವ್ಯಸ್ತಚಿತ್ತನಾಗಿ ಎದ್ದು ಕಿರುಮನೆಗೆ ಹೊರಟುಹೋದನು. ವಿರಾಗಿಣಿ, ಕುತೂಹಲದಿಂದ ನಿಂದು ಮುಂದಾಗುತಿದ್ದ ಶರಾವತಿಯನ್ನು ಕುರಿತು, "ಸೌಖ್ಯವೇನಮ್ಮ? ಎಂದು ಕೇಳಿದಳು. (ಆದರೆ, ಶರಾವತಿಯಿಂದ ಉತ್ತರದ ಮಾತಂತಿರಲಿ, ಸವಿನೋಟವಾದರೂ ದೊರೆಯದೆ ತಿರಸ್ಕಾರ ಸೂಚಿತ ಭರ್ತ್ಸನೆಯೇ ಫಲವಾದುದು. ಅಷ್ಟಾದರೂ ವಿರಾಗಿಣಿ, ಕೋಪತಾಪಕ್ಕೆಡೆಗೊಡದೆ ಸ್ವಕಾರ್ಯೋದ್ಯುಕ್ತೆಯಾದಳು.)

ಶರಾವತಿ ಬಂದುದು, ಕೃಷ್ಣವೇಣಿಗೆ ಮಹದಾಶ್ರಯವೇ ದೊರೆದಂತಾಯಿತು. ತುಂಗಭದ್ರೆಯ ಮನಸ್ಸಿಗೂ ಉತ್ಸಾಹವೇ! ಲಕ್ಷ್ಮೀದೇವಮ್ಮನಿಗೆಂತೂ ಹೇಳುವಂತೆಯೇ ಇಲ್ಲ. ಪುತ್ರನ ಪುನರಾಗಮನ! ಸೋದರೀ ಸುಖಸಂದರ್ಶನ!! ಕೇಳಬೇಕೆ? ಉಬ್ಬಿಹೋದಳು. ಒಟ್ಟಿನಲ್ಲಿ ಮನೆಯುವರೆಲ್ಲರೂ ಉತ್ಸಾಹ ಪರವಶರಾದರೆಂವರೆ ಸಾಕಾಗಿದೆ. ಆದರೆ, ರಘುನಾಥನೊಬ್ಬನು ಮಾತ್ರ ಶಂಕಾತಂಕದಿಂದ ಜಡನಾಗುತ್ತಿದ್ದನು.

ಶರಾವತಿ ಬಂದಕೂಡಲೇ ಕ್ಷೇಮಸಮಾಚಾರಗಳು ನಡೆದವು. ಬಳಿಕ, ಕೃಷ್ಣವೇಣಿ ತುಂಗಭದ್ರೆಯರೊಡನೆ ಸಭಾ, ನಿರಂಜನ, ಶಂಕರನಾಥ, ಚಿದಾನಂದ, ರಮಾಮಣಿ ಇವರನ್ನು ಕುರಿತು, ಸಹಸ್ರನಾಮಾವಳಿಗಳೂ, ರಾಜಶೇಖರನ ಕಾರಾಗೃಹವಾಸಕ್ಕಾಗಿ ಪರಿತಾಪವೂ ಶತಮುಖದಿಂದ ಹೊರಬೀಳುತ್ತಿದ್ದುವು ಅದಾದ ಬಳಿಕ ಕೃಷ್ಣವೇಣಿ, ತುಂಗಭದ್ರೆಯರೂ, ತಮಗಾದ ತಿರಸ್ಕಾರಗಳನ್ನೂ ತಮ್ಮ ಮನಸ್ತಾಪಕ್ಕೆ ವಿರಾಗಿಣಿಯೇ ಕಾರಣಳೆಂಬುದನ್ನೂ ಬಗೆಬಗೆಯಾಗಿ ಬಣ್ಣಿಸಿ ಶರಾವತಿಯ ಕ್ರೋಧಮಾತ್ಸರ್ಯಗಳ ಸಮಾವೇಶಕ್ಕೆ ಮತ್ತಷ್ಟು ಉತ್ತೇಜನವನ್ನುಂಟುಮಾಡುತ್ತಿದ್ದರು. ಈ ಬಗೆಯ ನಿಂದಾಸ್ತುತ್ಯಾದಿ ಕಲಕಲ ನಿನಾದದಿಂದೆ ಅಂದಿನ ಇರುಳೆಲ್ಲವೂ ಲೀಲಾಮಾತ್ರದಲ್ಲಿ ಕಳೆದಂತಾಯಿತು.

ಹೇಗೂ ರಘುನಾಥನು, ಕುತ್ಸಿತರ ಕಾಕಾಲಾಪಕ್ಕೆ ಧೃತಿಗೆಟ್ಟು ಕರ್ತವ್ಯವನ್ನು ಬಿಟ್ಟು ಕುಳಿತುಕೊಳ್ಳುವ ಸ್ವಭಾವದವನಲ್ಲ. ಅವರ ಬಿರುನುಡಿಗಳನ್ನು ಲೆಕ್ಕಿಸದೆಯೇ ವಿರಾಗಿಣಿಯ ಬಳಿಯಲ್ಲಿ ಮುನ್ನಿನಂತೆಯೇ ಮಾತನಾಡುತ್ತಿದ್ದನು. ವಿರಾಗಿಣಿ ಏನುಮಾಡಬಲ್ಲಳು ? ಪಾಪ ! ಸತ್ಯಸಂಕಲ್ಪನಾದ ರಘುನಾಥನ ಮೇಲೆ ಬೀಳುತ್ತಿರುವ ಶಂಕಾಪವಾದಕ್ಕಾಗಿ ಮನದಲ್ಲೇ ಮಿಡುಕುವಳು, ಆದರೂ, ಅದನ್ನಾತನಿಗೆ ಹೇಳಲೊಲ್ಲಳು ; ಅಲ್ಲದೆ, ತನ್ನ ವಿಷಯವಾಗಿ ಅವಳೊಮ್ಮೆಯಾದರೂ ಚಿಂತಿಸುವುದನ್ನರಿಯಳು. ತನ್ನ ಸತ್ವಪರೀಕ್ಷೆಗೆ ಇದೇ ಕಾಲವೆಂದು ಬಗೆದು, ಪ್ರಸನ್ನಮುಖಿಯಾಗಿಯೇ ಕಾಲಚಕ್ರವನ್ನು ನೂಕುತ್ತಿರುವಳು. ಮನೆಯವರೆಷ್ಟೆಷ್ಟು ಬಗೆಯಿಂದೆ ನಿಷ್ಠುರವಾಡಿದರೂ, ತನಗಲ್ಲವೆಂದೆಣಿಸಿ, ಇದಿರಾಡದೆ ಸುಮ್ಮನಿರುವಳು. ಹೀಗಾದುದರಿಂದ ಪಾಪಿಗಳ ಮನೋಭಾವವು,

ತಮ್ಮ ವಿಕಲ್ಪಾರ್ಥಕ್ಕೆ ಬೇಕಾದಷ್ಟು ವಿಷಯಗಳನ್ನು ಕೂಡಿಸಿಟ್ಟು ಕೊಂಡವು.

ಬಂದೆರಡು ದಿನಗಳಲ್ಲಿಯೇ ಕೃಷ್ಣವೇಣಿಗೆ ಆಲಸ್ಯವು ಅಧಿಕವಾಯ್ತೆಂದೂ, ಹಾಸುಗೆಯನ್ನು ಬಿಟ್ಟೇಳಲಾರಳೆಂದೂ ಪ್ರವಾದವೆದ್ದಿತು. ವಿರಾಗಿಣಿ, ಪಾಪ ! ಹೋಗಿ ನೋಡಿಬರಬೇಕೆಂದರೆ, ಕೆಟ್ಟ ಕಣ್ಣಿಂದ ನೋಡಬೇಡವೆಂದು ಅಟ್ಟುವರು. ರಘುನಾಥನು ಹೋದರೂ ಪತ್ನಿಯ ಬಳಿಗೆಯ್ದದೆ, ನುಡಿಸದೆ, ನುಡಿಯದೆ, ದೂರದಲ್ಲೇ ನಿಂತು, ನೋಡಿಬರುವನು. ವಿಚಾರವೇನೆಂದರೆ, "ಕಪಟಾಚಾರವೇ ವಿಚಾರವೆಂದೂ, ಪರೀಕ್ಷಕರ ಮಾಯಾಜಾಲವೇ ರೋಗಚಿಕಿತ್ಸೆಗಳೆಂದೂ," ಹೇಳಹೋಗುವನು. ಮತ್ತೇನಂಮಾಡಬಹುದು ? ಎಂತೂ ಹೀಗೆಯೇ ಮೂರುನಾಲ್ಕು ದಿನಗಳು ಕಳೆದುಹೋದುವು. ಈ ಕಾರಣಗಳಿಂದ ವಿರಾಗಿಣಿಗೆ ಮನೋರೋಗವೂ ಅಧಿಕವಾಗುತ್ತಿದ್ದಿತು.

ನಾಲ್ಕನೆಯ ಮಧ್ಯಾಹ್ನದಲ್ಲಿ, ಬೃಂದಾವನದ ಮುಂದೆ, ವಿರಾಗಿಣಿ ಸ್ಮೃತಿತಪ್ಪಿ ಕುಳಿತಿದ್ದಳು. ಬೃಂದಾವನದ ಹಿಂಗಡೆಯಲ್ಲಿ, ಸೌಬಲನು, ಅತ್ತಿತ್ತ ತಿರುಗುತ್ತಿದ್ದನು. ಸೌಬಲನು, ತಿರುಗುತ್ತಿದ್ದಲ್ಲಿಗೆ ತರುಣನೊಬ್ಬನು ಬಂದು ನಸುನಗುತ್ತ ಏನು ? ಸೌಬಲರಾವ್ ! ಕುಶಲವೇ ?

ಸೌಬಲ:—ಅಪೂರ್ವಲಾಭ '! ವಿನಯಚಂದ್ರ ! ಇದೇನಿಷ್ಟು ತ್ವರಿತಗಮನ ?

ವಿನಯ:—ಇಲ್ಲಿ ಕೆಲಸಕ್ಕಾಗಿ ಬಂದೆನು. (ವಿರಾಗಿಣಿಯ ಮುಂದೆ ನಿಂತು) ತಾಯಿ ! ಶುಭಸಮಾಚಾರ !

ವಿರಾ:—(ತಲೆಯೆತ್ತಿ) ವಿನಯಚಂದ್ರ ! ಶುಭವಾವುದು ? ಭಗವಾನಂದನು ಬಂದನೆ ? ಪತ್ರವುಂಟೆ ?

ವಿನಯ:—ಬಂದೂಬಂದನು; ಪತ್ರವನ್ನೂ ತಂದನು. ಅಲ್ಲದೆ, ಇನ್ನು ತಿಂಗಳೊಳಗಾಗಿಯೇ ಸಪರಿವಾರರಾದ ತಹಸೀಲ್ದಾರರು, ಸೊಸೆಯನ್ನು ಇಲ್ಲಿಗೆ ಕರೆತರುವರೆಂಬ ಶುಭವರ್ತಮಾನವನ್ನೂ ತಂದನು.

ವಿರಾ:—ಸಂತೋಷ! ಎಲ್ಲಿ? ಪತ್ರವನ್ನು ನೋಡುವ?

ವಿನಯ·—(ಪತ್ರವನ್ನು ಮುಂದಿಟ್ಟು), "ನೋಡಬಹುದು."

ವಿರಾಗಿಣಿ·—(ಪತ್ರವನ್ನು ಕೈಕೊಂಡು), ಇದಿರಲಿ; ನಿಮ್ಮ ಭ್ರಾತೃವಿಚಾರವೇನಾಗಿದೆ?

ವಿನಯ.—ಇದೋ ಅವರ ಹಸ್ತಾಕ್ಷರಪತ್ರವೇ ಬಂದಿದೆ; ನೋಡಿ ತಿಳಿಯಬಹುದು. ಹೇಗೂ ಶುದ್ಧಭಾವನೆಗೊಳಪಟ್ಟ ವಿಚಾರವಾವುದೂ ನಷ್ಟವಾಗಲಾರದು. (ಅಣ್ಣನ ಪತ್ರವನ್ನೂ ವಿರಾಗಿಣಿಯ ಕೈಯಲ್ಲಿಟ್ಟನು.)

ವಿರಾ:—(ವಿಮಲಚಂದ್ರನ ಪತ್ರವನ್ನೇ ಮೊದಲು ವಾಚಿಸತೊಡಗಿದಳು. ಪತ್ರಸ್ಥವಿಚಾರವಿಂತಿದ್ದಿತು.)

"ಚಿರಸ್ಮರಣೀಯನಾದ ಧರ್ಮಭ್ರಾತಾ!

ಭವದೌದಾರ್ಯಗುಣಕ್ಕಾಗಿ ವಂದನೆ! ವಯೋಧರ್ಮದಿಂದೆಯೂ ಅವ್ಯವಸ್ಥಿತಚಿತ್ತಪ್ರೇರಣೆಯಿಂದೆಯೂ, ಸ್ವದೇಶ, ಸ್ವಗೃಹ ಸ್ವಪತ್ನೀತ್ಯಾದಿಸಮಸ್ತ ಬಾಂಧವ್ಯಕ್ಕೂ ಧಿಕ್ಕಾರವನ್ನಿತ್ತು ಇತ್ತಬಂದು ವ್ಯಾಸಂಗಿಸುತ್ತಿರುವ ನನಗೆ, ಏಕಮಾತ್ರಬಂಧುವೂ ಕುಲರಂಜಕನೂ ಆಗಿರುವ ನನ್ನ ಅನುಜಾತ ವಾರ್ತೆಯನ್ನು ತಿಳಿಸಿ ಅದರಿಂದಲೇ ನನ್ನ ಮನವನ್ನೂ ಅತ್ತಕಡೆಗೆ ಎಳೆದಿರುವ ನಿಮ್ಮ ಪ್ರಭಾವಕ್ಕಾಗಿ ನಾನು ಕೇವಲ ವಿಸ್ಮಿತನಾಗಿರುವೆನು!

ಆದರೆ, ನಾನು ಭಾರ್ಯ ಗೃಹ-ವಿತ್ತಗಳಿಗಾಗಿ ಅತ್ತ ಬರಬೇಕೆಂದೆಣಿಸಿಲ್ಲ. ಪ್ರಾಣಾಧಿಕಪ್ರಿಯಾನುಜನನ್ನು ಒಮ್ಮೆ ನೋಡಿ ಸಂತವಿಸಿಬರಬೇಕೆಂದೇ ಸಂಕಲ್ಪಿಸಿರುವೆನು! ಆ ನನ್ನ ಸೋದರನ ಸುಕ್ಷೇಮಲಾಭವು ನನಗೆ ಮುಟ್ಟುವವರೆಗೂ, ನನ್ನ ಮನಸ್ಸು ಭ್ರಾಂತಿಯನ್ನು ಬಿಡುವುದಿಲ್ಲವೆಂದೂ, ಆತನ ಕುಶಲವಾರ್ತೆಯೊಂದನ್ನು ತಿಳಿಯಹೇಳಿ, ಮುಂದೆ ಮಾಡಬೇಕಾದುದನ್ನು ಕಟ್ಟು ಮಾಡಬೇಕೆಂದೂ, ಪ್ರಾರ್ಥಿಸಿ ಉತ್ತರವನ್ನೇ ನಿರೀಕ್ಷಿಸುತ್ತಿರುವ

ಕಾಶಿ, ತಮ್ಮ ನಿರಂತರ ಸ್ನೇಹಾಭಿಲಾಷಿ,
ವಿಶ್ವವಿದ್ಯಾಲಯ. ವಿಮಲಚಂದ್ರ.

ವಿರಾ.—(ಗದ್ಗದಸ್ವರದಿಂದ)—"ಅಯ್ಯ! ನಿಮ್ಮ ಮಾತೃಸದೃಶೆಯಾದ ಅತ್ತಿಗೆಗೆ, ಈಗಲೀಗ ನೀವು ಹಿತವನ್ನುಂಟುಮಾಡಬೇಕಾದುದು! ಅವಳ ತಪೋನಿಷ್ಠೆಯನ್ನೂ, ತನ್ನ ಪತಿಯ ಅಭ್ಯುದಯಕ್ಕೆಂದು ಅವಳು ಸಹಿಸುತ್ತಿರುವ ಸಂತಾಪವನ್ನೂ ವಿವರವಾಗಿ ಬರೆದು, ಅಂತಹ ಸತೀಮಣಿಯನ್ನುಳಿದು, ದೇಶಭ್ರಷ್ಟನಾಗಿರುವನೆಂಬ ಅಪವಾದಕ್ಕೆಡೆಗುಡದೆ ಹೊರಟುಬರಬೇಕೆಂದೂ, ಈತೆರದ ಮಿಥ್ಯಾಪವಾದಶ್ರವಣದಿಂದಲೇ ನಾನು ಅಸ್ವಸ್ಥನಾಗಿರುವೆನೆಂದೂ ವಿವರಿಸಿ, ಈದಿನವೇ ನಿಮ್ಮಣ್ಣನಿಗೆ ನೀವೇ ಉತ್ತರಪತ್ರವನ್ನಟ್ಟಬೇಕು.

ವಿನಯ:—ಇದನ್ನು ಕೇಳಬೇಕೆಂದೇ ಇಲ್ಲಿಗೆ ಬಂದೆನು. ನಾನಿನ್ನು ಹೊರಡಲೇ?

ವಿರಾ:—ಹೊರಡಬಹುದು. ಇಂದೇ ಉತ್ತರವನ್ನಟ್ಟಬೇಕು. (ವಿನಯಚಂದ್ರನು ತಲೆದೂಗುತ್ತ ಹೊರಟುಹೋದನು. ವಿರಾಗಿಣಿ ಶ್ಯಾಮನಗರದಿಂದ ಬಂದ ಪತ್ರವನ್ನು ಓದ

ತೊಡಗಿದಳು. ಪತ್ರವು ರಾಜಶೇಖರನ ಬರೆಹವಾಗಿದ್ದಿತು. ನಮ್ಮ ವಾಚಕರ ಅವಗಾಹನೆಗಾಗಿ ಕೆಳಗೆ ನಿರೂಪಿಸಲ್ಪಟ್ಟಿರುವುದು.)

" ಪವಿತ್ರಹೃದಯೇ !

ಆವ ವಿಶೇಷಣದಿಂದ, ಆವಶಬ್ದ ಪ್ರಯೋಗದಿಂದ, ಆವ ಸಂಬೋಧನೆಯಿಂದ ನಿನ್ನನ್ನು ಕರೆಯಲಿ ? ಸದ್ಯಃಸ್ಥಿತಿಯಲ್ಲಿ ನಾನಾವುದನ್ನು ತಿಳಿಯಲಾರದ ಜಡನಾಗಿರುವೆನು ? ಏಕೆನ್ನುವಿಯೋ ? ನಾನು ನಿನ್ನಲ್ಲಿ ದ್ರೋಹಿ. ವಿದ್ಯಾವಿನಯಾದಿಗಳನ್ನು ಳವ ತಿಳಿಗೇಡಿ!! ನಿನ್ನ ಸತೀಧರ್ಮವನ್ನು ಅತಲ ಜಲದಲ್ಲಿ ಕೆಡಹಬೇಕೆಂದಾಶಿಸಿ, ನಿನ್ನ ಪವಿತ್ರಮೂರ್ತಿಯನ್ನು ಕಲಂಕಿತವನ್ನಾಗಿ ಮಾಡಲು ಬಹು ಪ್ರಯತ್ನಗೊಂಡ, ಅಧಮಾಧಮಪ್ರಾಣಿ !!! ಸ್ತ್ರೀಹತ್ಯೆಗೆ, ಹಾಗೂ ಪವಿತ್ರ ಪ್ರೇಮಮಯಸ್ವರೂಪಿಣಿಯಾಗಿರುವ ನಿನ್ನ ಹತ್ಯೆಗೆ ಬಗೆಗೊಟ್ಟ ಬಾಹಿರ ; ಘಾತಕ ; ಹೆಚ್ಚೇಕೆ ? ಎಷ್ಟೆಷ್ಟು ಬಗೆಯಿಂದ ಬಗೆದರೂ, ನಾನೂ ನಿನ್ನಲ್ಲಿ ಮಹಾಪರಾಧಿಯೆಂದೇ ವ್ಯಥಪಡುತ್ತಿರುವುದು. ಇಷ್ಟಾದರೂ, ತಾಯಿ ! ನಿನ್ನೀಪತ್ರವು, ಅಮೃತೋಪಮವಾದೀ ನಿನ್ನ ವಾತ್ಸಲ್ಯಪೂರಿತಪತ್ರವು, ನನ್ನ ಕೈಸೇರುವವರೆಗೂ, ಹಿಂದಣ ಕಾಮ, ಕ್ರೋಧ ಲೋಭಗಳು ನನ್ನನ್ನು ಬಿಟ್ಟುಹೋಗಿಲ್ಲ. ಆದರೆ, ಈಗ ಅವುಗಳೆಲ್ಲವೂ ಸೂರ್ಯರಶ್ಮಿಯಿಂದ ನಾಶವಾಗುವ ಮಂಜಿನಂತೆ ನಾಶವಾದುವು !! ಆ, ದುರ್ಭಾವನೆಗೆಡೆಯಾಗಿದ್ದ ಬಗೆಯೇ ಈಗ ಅನುತಾಪಾನಲದಿಂದ ದಗ್ಧವಾಗುತ್ತಿದೆ ! ಈ ಆತ್ಮನು, ಜಡಚೇತನವನ್ನು ಅಧಿಕವಾಗಿ ದೂಷಿಸುತ್ತಿರುವನು! ಸತ್ಯವಾಗಿಯೂ, ರಾಜಶೇಖರನೂ ಈಗ ಮೊದಲು ಕಾಮಾಂಧನಾದ ರಾಜಶೇಖರನಾಗಿಲ್ಲ ? ಕಾಮದಮನನೆಂದೇ ತಿಳಿ !

ಅಪರಾಧಾನುಗುಣಪ್ರಾಯಶ್ಚಿತ್ತವನ್ನು ಅನುಭವಿಸುವುದೇ ಸೃಷ್ಟಿನಿಯಮನವು; ಆದುದರಿಂದ ನನ್ನ ಬಲವತ್ತರದ ಕುಕರ್ಮಫಲವನ್ನು ನಾನು ಅನುಭವಿಸುವುದರಲ್ಲಿ ಇನ್ನು ಹಿಂದೆಗೆಯೆನು. ನೀತಿ ಬಾಹಿರನಾದ ನಾನು,ನಿನ್ನ ಮನ್ನಣೆಗೆ ಪಾತ್ರನೆ ? ವಿರಾಗಿಣಿ ! ಐಹಿಕಾಮುಷ್ಮಿಕ ಸುಖಗಳೆರಡಕ್ಕೂ ಬಾಹಿರನಾದ ಈ ಅಧಮನು, ತನಗೆ ಆಪ್ತೇಷ್ಟರಾದವರೇ ಈ ಜಗತ್ತಿನಲ್ಲಿಲ್ಲವೆಂದು ಬಗೆಯುತ್ತಿದ್ದನು; ಆದರೆ, ಈ ನನ್ನ ಮೂರ್ಖಭಾವನೆನಾಶವಾಗುವಂತೆ, ಅಂಧಕಾರಾವೃತವಾದೀಗಹನಪ್ರದೇಶದಲ್ಲಿಯೂ, ಪ್ರಯಾಸದಿಂಮುದಯಿಸಿ, ಹತಶನಾಗಿ ನರಲುತ್ತಿದ್ದವನನ್ನು ಅಭಯಹಸ್ತದಿಂದ, ಹಿಡಿದೆತ್ತಿ ಸಂತವಿಸಿ, ಸವಾಪರಾಧವನ್ನೂ ಕ್ಷಮಿಸಿರುವ ನಿನ್ನ ಕೃಪಾದೃಷ್ಟಿಗೂ, ಶಾಂತಿಗುಣಕ್ಕೂ, ನಾನೆಷ್ಟುಬಾರಿ ವಂದಿಸಬೇಕೋ ತಿಳಿಯೆನು ! ಇನ್ನೂ ಹೇಳಲೆ ?

ಧರ್ಮಭಗಿನಿ !

ಜನ್ಮದಾತೆಯಿಂದೆ ನೂಂಕಲ್ಪಟ್ಟೆನು ? ಪೋಷಕರಿಂದೆ ನಿಷ್ಠುರವನ್ನೂ ಕೇಳಿದೆನು ! ಹಿತಮಿತ್ರ ಬಾಂಧವರಂತಿರುವವರ ಮನೋಭಾವ ಗತಿ ಸ್ವಭಾವಗಳನ್ನೂ ಚೆನ್ನಾಗಿ ತಿಳಿದೆನು !! ಆರಿಂದೆಯೂ, ಈ ನನ್ನ ಘೋರವಿಪದ್ದಶೆಗೆ ಪ್ರತೀಕಾರಮಾರ್ಗವನ್ನು ಕೇಳಿರುವೆನೆಂದು ಹೇಳಲಾರೆನು ? ಈ ಕಾರಾಗೃಹದಲ್ಲಿ, ಈ ನಿಗಳಬಂಧನದಲ್ಲಿ, ಅಂತಸ್ತಾಪದಿಂದ ಕಂದಿಕುಂದತ್ತಿದ್ದ ಈ ದೀನನನ್ನು, ಶಾಂತಿಸುಖಕ್ಕೆ ತರಲೆಳಸಿದ ನೀನಲ್ಲವೇ ನನ್ನ ಮಾತೃದೈವವೂ, ಪರಮಾಪ್ತಬಂಧುವೂ, ಸ್ವಾಮಿನಿಯೂ ಸಮಸ್ತವೂ ಆಗಿರುವೆ ? ಇವೆಲ್ಲವೂ, ವಿಕಲ್ಪಾರ್ಥದ ಬಾಹ್ಯಾಡಂಬರವೆಂದೆಣಿಸಬಾರದು ! ಸತ್ಯವೂ, ಸಪ್ರಮಾಣವೂ, ಆದುದೆಂದೇ ತಿಳಿಯಬೇಕು ! ಇನ್ನೂ

ಎಷ್ಟೆಷ್ಟು ಬರೆದರೂ, ನನ್ನ ಆತ್ಮಕ್ಕೆ ತಣಿವಿಲ್ಲ ! ಆದರೆ ಈಗಲೇ ವಿಸ್ತಾರಪತ್ರದಿಂದ ನಿನ್ನನ್ನು ಬೇಸರಗೊಳಿಸಲಾರೆನು ? ಭಗವತ್ಕೃಪೆಯಿದ್ದಲ್ಲಿ ಬಿಡುಗಡೆಯಾದ ಬಳಿಕ, ನಿನ್ನ ಪವಿತ್ರಮೂರ್ತಿಯನ್ನೊಮ್ಮೆ ಕಣ್ಣಾರೆ ನೋಡಿ, ನಿನ್ನ ಸಮಕ್ಷಮದಲ್ಲಿ, ನನ್ನ ನೈಷ್ಠಿಕವೃತ್ತಿಗಾಗಿ ನಿನ್ನ ಆಣತಿಹೊಂದಿ ಕಂಕಣವನ್ನು ಕಟ್ಟಿಕೊಳ್ಳಲಿರುವೆನು. ಇನ್ನೇನನ್ನೂ ಹೇಳಲಾರೆನು. ಮುಖ್ಯವಾಗಿ, ಕ್ಷಮೆಯನ್ನು ಕೋರದೆಯೇ, ಕಟಾಕ್ಷಿಸಿರುವ ನಿನ್ನಲ್ಲಿ ಮತ್ತೆ ಕೋರುವುದೇನಿದೆ ? ಆದರೂ, ನಿನ್ನ ಇಂದಿನ ಸೋದರವಾತ್ಸಲ್ಯವೇ ಸ್ಥಿರವಾಗಿ ಪ್ರೋತ್ಸಾಹಿಸುತ್ತಿರಬೇಕೆಂದು ಬೇಡುವ

| | |
|---|---|
| ಶ್ಯಾಮನಗರದ<br>ಕಾರಾಗೃಹ | ಅನುತಾಪಾನಲಗ್ರಸ್ತನಾದ<br>ಭ್ರಾತೃ ರಾಜಶೇಖರ. |

ವಿರಾ:—(ಪತ್ರವನ್ನು ಮತ್ತೆಮತ್ತೆ ಗಟ್ಟಿಯಾಗಿ ಓದಿದಳು ; ಆನಂದಪರವಶೆಯಾಗಿ ಮೇಲೆನೋಡಿ) ಜಗನ್ನಾಥ ? ಇದಲ್ಲವೇ ನಿನ್ನಕೃಪೆ !!! (ಹಿಂದೆ ನಿಂತು ನೋಡಿ ಕೇಳುತ್ತಿದ್ದ ಸಾಬಲನು, ವಿರಾಗಿಣಿಯ ಮುಂದೆ ಬಂದು ನಿಂತು, ಕುತೂಹಲದಿಂದ) ವಿರಾಗಿಣಿ ! ಏನುಹೇಳಿದೆ ?

ವಿರಾ:—ಮತ್ತೇನು ? ಸಾಬಲ ? ಅವ್ಯವಸ್ಥಿತಚಿತ್ತಕ್ಕೆ ಜ್ಞಾನಾಮೃತವರ್ಷವಾಗಲೆಂದು ಕೋರಿದೆನು ?

ಸಾಬಲ:—ಅದಾರಪತ್ರವೊ ?

ವಿರಾ:—ಸೃಷ್ಟಿನಿಯಮವರಿಯದೆ, ನಿನ್ನಂತಾಗುವುದರಲ್ಲಿದ್ದು ಎಚ್ಚತ್ತವನ ಅನುತಾಪದ್ಯೋತಕಪತ್ರವೇ !

ಸಾಬಲ:—ಹಾಗೆಂದರೇನು ? ನಾನೇನುಮಾಡಿದೆ ? ನನ್ನಲ್ಲೇಕೆ ಇಷ್ಟು ನಿಷ್ಠುರೋಕ್ತಿ ?

ವಿರಾ.—ಸೌಬಲ ! ರಾಜಶೇಖರನು, ವಿದ್ಯಾವಂತನು ; ವಿನಯಾದಿ ಗುಣಸಂಪನ್ನನೂ ಅಹುದು ! ಆದರೂ, ಆತನು, ಅಭ್ಯಾಸ ಬಲವನ್ನು ಹೊಂದದೆ ಕಾಮಾಂಧನಾಗಿ ಕೆಡುತ್ತಿದ್ದನು ; ಎಂದರೆ, ನಿನ್ನಂತೆ ಸಿಕ್ಕಿದೆಡೆಯಲ್ಲಿ, ಮತ್ತವಾನರನಾಗಿ ಸುತ್ತುತಿರಲಿಲ್ಲ. ಆವುದೋ ಅಸಾಧ್ಯಪ್ರಯತ್ನದಲ್ಲಿ ನಿಂತು, ಆಪದಕ್ಕೊಳಗಾದನು ; ಭಗವತ್ಕೃಪೆಯಿಂದ ಆತನೇ ಈಗ ಜ್ಞಾನಮಾರ್ಗಕ್ಕೂ ಬಂದಿರುವುದರಿಂದ ನಾನು ಅಧಿಕ ಸಂತೋಷಪಡುವೆನು ! ಆದರೆ, ಸೌಬಲ ! ನಿನ್ನ ವಿಚಾರ ವಾಗಿ ಚಿಂತಿಸಬೇಕಾಗಿ ಬಂದಿದೆ. ನೀನು ವಿದ್ಯಾವ್ಯಾಸಂಗ ದಲ್ಲಾಗಲೀ, ವಿನಯಾದಿ ಸುಗುಣಾನುಭವದಲ್ಲಾಗಲೀ, ಪರಿ ಶ್ರಮವಿಲ್ಲದವನು ! ದುಸ್ಸಹವಾಸದಲ್ಲಿ ಸೇರಿ ಪವಿತ್ರವಾದ ಭಗವತ್ಕೃಪೆಗೆ ದೂರವಾಗಿ, ಮಾನಧರ್ಮವಿರುದ್ಧವಾದ ಪಪ್ಯಾಚರಣೆಯಲ್ಲಿ ಬಿದ್ದು ಪಾಮರನಾಗಿರುವ ನಿನಗೆ ಇನ್ನೂ ಅನುತಾಪ ಉಂಟಾಗಲಿಲ್ಲವೇಕೆ ? ನಿನ್ನ ವ್ಯಾಸಂಗಕ್ಕೆಂದು ತೆತ್ತ ಹಣವೆಲ್ಲವನ್ನೂ ಕುಡಿತ—ಜೂದು—ನಾಟಕ—ಕೂಟ ಮೊದಲಾದುವುಗಳಲ್ಲೇ ಕಳೆದು ಮೂರ್ಖನಾದೆಯಲ್ಲವೆ ? ನಿನ್ನ ಮೋಜುಗಾರಿಕೆಯೇ ಅಲ್ಲವೇ ನಿನ್ನ ತಂಗಿಯನ್ನು ಕುಮಾರ್ಗದಲ್ಲಿ ಕೆಡಹುವಂತೆ ಮಾಡಿದುದು ? ನೀನೂ ನಿಜ ವಾದ ವಿದ್ಯಾರ್ಥಿಯಾಗಿದ್ದಲ್ಲಿ ನಿನ್ನ ಬ್ರಹ್ಮನಿಷ್ಠೆಯೇ ಅವ ಳನ್ನೂ ಆತ್ಮಾವಲಂಬಿನಿಯನ್ನಾಗಿ ಮಾಡುತ್ತಿತ್ತಲ್ಲವೆ ? ಈಗಲೇ ನಿನಗೆ ಬುದ್ಧಿಬರುವುದೇನು ? ಕುಕರ್ಮಕ್ಕೆ ತಕ್ಕ ಫಲಾನುಭವವುಂಟಾಗಿ ನರಲುವಂದಲ್ಲವೇ ನಿನಗೆ ವಿವೇಕ ದೃಷ್ಟಿಯುಂಟಾಗುವುದು ? ನೀನು ನನ್ನನ್ನು ಏನಂದಾದ

ರೂ ಹಳಿದಾಡು ! ನನಗೆ ಕುಂದಿಲ್ಲ. ಹೇಗಾದರೂ ಸತ್ಯ ವ್ರತನಾದ ನಿಮ್ಮಣ್ಣನ ಶೀಲಸ್ವಭಾವದಲ್ಲಿ ಎಳ್ಳಷ್ಟಾದರೂ ಅನುಸರಿಸಿ ಎಚ್ಚೆತ್ತು ನಡೆವವನಾಗಿದ್ದರೆ ನಿನಗೆ ಮುಂದೆ ಯಾದರೂ ಸುಖವುಂಟು.

ಸೌಬಲ:—(ಭ್ರಾಂತನಾಗಿ ಕ್ಷಣಕಾಲ ನಿಂತಿದ್ದು, ಬಳಿಕ ತಲೆ ಯೆತ್ತಿ)—"ವಿರಾಗಿಣಿ ! ನಾನು ಜಿತನಾದೆನು. ಇಂದು, ನೀನು ಜ್ಞಾನಬಲದಿಂದ ನನ್ನನ್ನು ಸಂಪೂರ್ಣವಾಗಿ ಜಯಿ ಸಿರುವೆ ! ಆದರೆ, ಇಷ್ಟಕ್ಕೇ ನಾನೂ ಇಂದ್ರಿಯನಿಗ್ರಹಸಾ ಮರ್ಥ್ಯವನ್ನೂ ಮನೋಜಯಶಕ್ತಿಯನ್ನೂ ಹೊಂದುವಂತೆ ಸಂಸ್ಕೃತನಾಗಿಲ್ಲ. ಇಂದಿನಂತೆಯೇ ಅಡಿಗಡಿಗೆ, ನನಗಾವ ಶ್ಯಕವಾದುದನ್ನು ಉಚಿತನೀತಿವಚನದಿಂದೆಚ್ಚರಿಸುತ್ತಿಬೇ ಕೆಂದು ಪ್ರಾರ್ಥಿಸುವೆನು. ತಾಯಿ ! ಮರೆಯಲಾಗದು. ಅಣ್ಣನಲ್ಲಿ ಹೇಗೆ ಸ್ನೇಹಭಾವವಿಟ್ಟಿರುವೆಯೋ, ಹಾಗೆ ಯೇ ನನ್ನಲ್ಲಿಯೂ, ಸೋದರವಾತ್ಸಲ್ಯವನ್ನು ಪ್ರದರ್ಶಿಸ ಲಾರೆಯಾ ?

ವಿರಾ—(ಆನಂದೋತ್ಸಾಹಾಧಿಕ್ಯದಿಂದೆ ಕುಳಿತಿರಲಾರದೆ ಎದ್ದು ನಿಂತು, ಸೌಬಲನನ್ನು ನೋಡಿ ಮೃದುಮಧುರವಾಣಿಯಿಂದೆ) "ಸೌಬಲ ! ನಿನ್ನ ಇಂದಿನ ಪರಿವರ್ತನದಿಂದ ನಿನ್ನ ಮಾತಾ ಭ್ರಾತೃ-ಹಿತಚಿಂತಕರಲ್ಲದೆ, ನಾನೂ ಸುಖಿಯಾದೆನು. ನನಗೆ ನಿರಂಜನನು ಹೇಗೋ ಹಾಗೆಯೇ ನೀನೂ ವಿಶ್ವಸನೀಯ ನಾದ ಅಣ್ಣನು ! ನಿನಗೀವಿಚಾರವಾಗಿ ಇನ್ನು ಸಂದೇಹಕ್ಕೆ ಅವಕಾಶವಿಲ್ಲ. ನೀನು ಈಗಲೇ ಸನ್ಮಾರ್ಗಕ್ಕೆ ಬರುವೆ ಯೆಂದು ನಾನಾಗಲೀ ನಿನ್ನ ಅಣ್ಣನಾಗಲೀ ಕನಸಿನಲ್ಲಿಯೂ

ನೆನೆದಿರಲಿಲ್ಲ ! ಭಗವತ್ಕೃಪೆಯೂ, ಕಾಲಗತಿಯೂ, ಇಂದೇ, ಈಗಲೆ ಸಹಕರಿಸಿದುದಕ್ಕಾಗಿ ಭಗವಂತನನ್ನು ವಂದಿಸುವೆನು ! (ವಿರಾಗಿಣಿಯ ವಾಕ್ಯವಿನ್ನೂ ಪೂರ್ಣವಾಗುವ ಮೊದಲೇ—ಕೆದರಿದ ತಲೆಗೂದಲನ್ನು ಸವರಿಸುವುದನ್ನೂ ತಿಳಿಯದೆ, ಕಂಗಣ್ಣಿಳಿಂದ ಕಿಡಿಗಳೇ ಸುರಿವುವೆಂಬಂತೆ ಕಿಡಿಕಿಡಿಯಾಗಿ ರಭಸದಿಂದ ಬಂದ ತುಂಗಭದ್ರೆ, ವಿರಾಗಿಣಿಯ ಕೈಯನ್ನು ಹಿಡಿದು, ಮಾತಿಲ್ಲದೆ ಉಪ್ಪರಿಗೆಯಕಡೆಗೆ ದರದರನೆಳೆದೊಯ್ಯುತೊಡಗಿದಳು ಸೌಬಲನು ಭಯಭ್ರಾಂತನಾಗಿ, ತಡೆದು) "ಎಲ್ಲಿಗೊಯ್ಯುವೆ ? ತುಂಗೆ ! ಹೇಳಹೋಗುಸಿಲ್ಲ. "

ತುಂಗೆ—(ಕರ್ಕಶಸ್ವರದಿಂದ)—" ನಿನ್ನನ್ನು ಕೂಗಿದವರಾರು ? ತಡೆಯಾಗದೆ ಹೊರಟುಹೋಗು "—

ಸೌಬಲನು, ಕಳಗುಂದಿದವನಾಗಿ, ಉಸಿರೆತ್ತದೆ, ಹೊರಟು ಹೋದನು.

ವಿರಾ—(ಸಖೇದಾಶ್ಚರ್ಯದಿಂದ),—" ಏಕೆ ? ಎಲ್ಲಿಗೆಬರಬೇಕು ? ನಾನೇಬರಲಾರೆನೇ ? ಎಳೆದೊಯ್ಯಬೇಕೆ ?

ತುಂಗ:—" ಏಕೆ ? ಎಲ್ಲಿಗೆ ? ಉರಿಮಾರಿ !! ನಿನ್ನ ಬೇಗೆ ಹೇಗೆ ಹತ್ತಿ ಬೇಯುತ್ತಿದೆ ನೋಡು ! ನಡೆ !! ಸದ್ದಿಲ್ಲದೆ,—

ವಿರಾ:—" ಹೇಳುವದೇನಿದ್ದರೂ, ಕೇಳಲು ಸಿದ್ಧಳಾಗಿರುವೆನು. ಇಷ್ಟೇಕೆ ಬಳಲಿಕೆ ? ನಾನೇ ಬರುವೆನು ನಡೆ." (ತುಂಗಭದ್ರೆಯ ಹಿಂದೆ ನಡೆದಳು.)

ಸುಹೃದರೇ !

“ಶ್ರೇಯಾಂಸಿ ಬಹು ವಿಘ್ನಾನಿ” ಎಂಬಂತೆ ಸತ್ಸಂಕಲ್ಪಕ್ಕೆ ಅಡಿಗಡಿಗೂ, ಎಡೆಬಿಡದೆಡರುಗಳು, ಹಿಂದೆಮುಂದೆ ನಿಂದಡ್ಡೈಸುವುದೇಕೆ? ಇದೇ ಭಗವದಿಚ್ಛೆಯೋ? ಈ ಬಗೆಯೆಡರುಗಳನ್ನು ದಾಟಲಾರದೆ, ಎಡಹಿ ಮುಗ್ಗಿ-ಕುಗ್ಗಬೇಕೆಂಬುದೇ ಆತನ ಲೀಲೆಯೋ? ಎಂದಿಗೂ ಅದಾಗಲಾರದು! ಮತ್ತೇನು? ಬಂದೆಡರನ್ನು ದಾಟಿ, ಮುಂದಾಗುವವನೇ ನಿತ್ಯಾನಂದಕ್ಕೆಪಾತ್ರನೆಂದೂ, ಆತನ ಸಂಕಲ್ಪವೇ ಸಂಕಲ್ಪವೆಂದೂ, ಅಂತಿರುವ ಸಂಕಲ್ಪಸಿದ್ಧಿಗೆ ಪಾತ್ರವಾಗಬಲ್ಲ ಸತ್ವವನ್ನು ಸಡನೋಡಬೇಕೆಂದೂ, ಅಡಿಗಡಿಗೂ ಈ ಬಗೆಯ ಎಡರುಗಳನ್ನಿರಿಸಿರುವನೆಂದರಿತೆಚ್ಚತ್ತು, ಉದ್ದೇಶವನ್ನು ಸಾಹಸದಿಂದ ಸಾಧಿಸಬೇಕಾದುದೇ ಸತ್ಪುರುಷರಲಕ್ಷಣವೆಂದೂ ಹೇಳಬೇಕು! ಇದೇ ಭಗವದಾಜ್ಞೆ!' ಆದರೆ, ಇನ್ನೂ ಮುಂದೆ ಮತ್ತಾವಾವ ಅನುಭವವಿರಬಹುದೋ ನಿರೀಕ್ಷಿಸುತ್ತ ಜಾಗರೂಕರಾಗಿರಬೇಕಲ್ಲವೆ? ಆಗಲಿ.

--

|| ಶ್ರೀಃ ||

## ಅಷ್ಟಮ ಪರಿಚ್ಛೇದ.

(ಆವೇಶ)

ಕೃಷ್ಣವೇಣಿಗೆ ಇಂದು ಬಲವದಾವೇಶ ' ಮಿತಿಮೀರಿದ ಕ್ರೋಧಾವೇಶ !! ಸಹನಾತೀತವಾದ ಮಾತ್ಸರ್ಯ ಮಹಾಶಯಸರೌದ್ರಾವೇಶ !!! ಹೇಳುವುದಿನ್ನೇನು ? ಮೊದಲೇ ಸ್ವಭಾವದಲ್ಲಿ ಕೃಷ್ಣೆ ! ಸಾಲದುದಕ್ಕೆ ಆವೇಶವೂ ಸೇರಿದರೆ ಹೇಗಾಗಿರಬೇಕೋ ರಮಣೀ ಪಾಠಕರೇ ತಿಳಿಯಹೇಳಲಿ? ಅವರಲ್ಲದೆ ಈ ಅವೇಶದ ಅನುಭವವನ್ನು ಮತ್ತಾರೂ ಅಷ್ಟಾಗಿ ಅರಿಯರು.

ಉಪ್ಪರಿಗೆಯಮೇಲಿನ ಮಲಗುವ ಮನೆಯಲ್ಲಿ ನೆಲದಮೇಲೆ ಕೃಷ್ಣವೇಣಿ ಆವೇಶದಿಂದ ಬೇಗಿ ಮಲಗಿರುವಳು. ಶರಾವತಿ, ಕೃಷ್ಣವೇಣಿಯ ಕಯ್ಗಳನ್ನು ಬಲವಾಗಿ ಹಿಡಿದು ಹಿಸುಕುತ್ತಿರುವಳು. ಲಕ್ಷ್ಮೀದೇವಮ್ಮನು ಕಿರುಮನೆಯೊಳಗೆ ಕದದ ಬಳಿಯಲ್ಲಿಯೇ ಕುಳಿತು ಒಮ್ಮೆ ಸೊಸೆಯನ್ನೂ ಮತ್ತೊಮ್ಮೆ ಹೊರಗಡೆಯನ್ನೂ ನೋಡುತ್ತ, ಆರನ್ನೋ ಇದಿರುನೋಡುತ್ತಿರುವಳು. ನಿರೀಕ್ಷಣೆಗೆ ತಕ್ಕಂತೆಯೇ ತುಂಗಭದ್ರೆ ಮುಂದಾಗಿ ಬಂದು, ವಿರಾಗಿಣಿ ಬಂದಳೆಂದುಸಿರಿ ಅತ್ತಿಗೆಯ ತಲೆಯ ಕಡೆಯಲ್ಲಿ ಕುಳಿತಳು.

ವಿರಾಗಿಣಿ ಬಂದು ಕಿರುಮನೆಯ ಕದದ ಬಳಿಯಲ್ಲಿ ಹೊರಗಡೆಯೇ ನಿಂದಳು. ಇವಳು ಬಂದ ಉತ್ತರಕ್ಷಣವೇ ಕೃಷ್ಣವೇ

ಣಿಯ ಆವೇಶವು ಮತ್ತೂ ಬಲವಾಯಿತು. ಅವಳಾ ನಿಡುದೋಳ್ಗಳು ನೆಲದ ಮೇಲೆ ಬಡಿಬಡಿದೊಗೆದಿಡಲ್ಪಡುತ್ತಿದ್ದುವು. ಕಾಲ್ಕಂಬಗಳೂ ಎತ್ತೆತ್ತಿ ಜಡಿಯಲ್ಪಡುತ್ತಿದ್ದುವು. ಕಣ್ಣುಗಳು ಕಿಡಿಗಳನ್ನೇ ಕಾರುವಂತಿದ್ದುವು ಭೀಕರಭ್ರುಕುಟೀಮುಖವನ್ನು ವಿವರಿಸುವಂತೆಯೇ ಇಲ್ಲ! ಹೀಗೆ ಪ್ರಬಲ ಪಿಶಾಚಾವೇಶದಿಂದ ಬೀಗಿದ್ದ ಅತ್ತಿಗೆಯನ್ನು ನೋಡಿ ನಾದಿನಿ (ತುಂಗಭದ್ರೆ) ಅಳುತ್ತಳುತ್ತ, ಅತ್ತಿಗೆಯ ಕೈಕಾಲುಗಳನ್ನು ಹಿಡಿಯುತ್ತಿದ್ದಳು. ಆದರೂ ಅವಳಿಂದ ಹಿಡಿದು, ತಡೆದುನಿಲ್ಲಿಸಲಾಗದು ವಿರಾಗಿಣಿಗೆ ಈ ವಿಚಾರವಾವುದೂ ಬಗೆಹತ್ತಲಿಲ್ಲ.

ಶರಾ:—(ವಿರಾಗಿಣಿಯನ್ನು ನೋಡಿ ಲಟಲಟನೆ ನೆಟ್ಟಿಕೆಗಳನ್ನು ಮುರಿದು) ಮಹಾಪಾಪಿನಿ! ನೋಡಿ ನಲಿದಾಡು! ಬಂದುಕೇಳಿ ತಣಿವನ್ನು ಹೊಂದು! ಅಲ್ಲಿಂದಲ್ಲಿಯೇ ಅಡಗಿಹೋಗದೆ ಕೇಳು ಬಾ! ನಮ್ಮ ಮನೆಯನ್ನು ಹೊಕ್ಕಿರುವ ಮಾರಿಯೇ ನೀನಲ್ಲವೇ?" ಕುಲಗೇಡಿ!

(ಆಗಳಿನ ಸ್ಥಿತಿಯಲ್ಲಿ ವಿರಾಗಿಣಿ ಹೇಗಾಗಿದ್ದಳೋ ಅನುಭವಜ್ಞರೇ ಊಹಿಸಬೇಕು. ಹೇಗೂ ಕೆಲವುಹೊತ್ತು ಸುಮ್ಮನಿದ್ದು ಬಳಿಕ ಮೆಲ್ಲನೆ ಕೇಳಿದಳು.) "ಅಮ್ಮ! ಸುಮ್ಮನೇಕೆ ಕರೆಯುವಿರಿ? ತಪ್ಪೇನೆಂಬುದನ್ನು ತಗೆದು ಮುಂದಿಟ್ಟು ತಲೆಯನ್ನು ತಗೆಯಿರಿ; [illegible] ಕಾರಣವಿಲ್ಲದೆಯೇ ಮುಳಿದು, ಹಳಿದಾಡುತ್ತಿರುವುದೊಳ್ಳಿತಲ್ಲ! ನಾನಾರಮನೆಯನ್ನೂ ಹಾಳುಮಾಡಬೇಕೆಂದಿಲ್ಲ; ಕುಲವನ್ನು ಕೆಡಿಸಬೇಕೆಂಬ ಇಷ್ಟವಾದರೂ ನನಗಿಲ್ಲ. ಇದಕ್ಕೆನ್ನ ಆತ್ಮನೇ ಸಾಕ್ಷಿ! ನನ್ನ ಕರ್ಮವೇ ಸಾಕ್ಷಿ!!! ಚೆನ್ನಾಗಿ ತಿಳಿದು ಹೇಳಿರಿ,

ಶರಾ —ನಾಟ್ಯಗಾತ್ರಿ! ನಿನ್ನ ಮಾಟವೆಲ್ಲವೂ ತಿಳಿದಿದೆ, ಆರಿಗೆ ಬುದ್ಧಿಗಲಿಸುವೆ? ನಿನ್ನ ಹೆಮ್ಮೆಯನ್ನೆಲ್ಲಿ ತೋರುವೆ? ನನ್ನಲ್ಲಿಯೇ? ಬಲ್ಲೆನು! ಬಲ್ಲೆನು!! ನೀನು ನಮ್ಮ ಮನೆಯನ್ನು ಬಿಟ್ಟು ಬಂದುದೇಕೆಂಬುದನ್ನು ಹೀಗೆ ಕಪಟವೇಷವನ್ನೇಕೆ ಹಾಕಿಕೊಂಡಿರುವೆಯೆಂಬುವನ್ನು ಬಲ್ಲೆನು.

ವಿರಾ —(ಹುಗುಕ್ಸ್ನೆಯಿಂದ) ಮಹಾತಾಯಿ! ಕ್ಷಮಿಸಿರಿ! ತಮ್ಮ ವೃತ್ತಿಯೇ ಇದಾದ್ದರ ತಪ್ಪಿಸಲಾದೀತ? ನೀವು ಮಾತ್ರ ವಗ್ಗೀಯರಾಗಿದ್ದು ಅರೋಪಿಸುವುದಕ್ಕೂ ಶಿಕ್ಷಿಸುವುದಕ್ಕೂ ಬಾಧ್ಯರಾಗಿರುರಿ? ತಮ್ಮಗೆ ಅಗ್ರಹ ಶಿಕ್ಷಾರೋಪಾದಿಗಳನ್ನು ಕೈಕೊಳ್ಳಲಿಕ್ಕೆ ನಾನೂ ಬದ್ಧಳಾಗಿಯೇ ಇರುವೆನು.

ಲಕ್ಷ್ಮಿ —ಸಾಕು! ನಾಸ್ತೀತಿ! ನಿನ್ನ ಪ್ರಾಮಾಣಿಕತ ಸಾಕು!! ಹತ್ತಿರಕ್ಕೆ ಬಂದುಕೇಳಿ ತೊಲಗು

ತುಂಗೆ —ವಿರಾಗಿಣಿ! ಇತ್ತಬಾ, ಹೇಳತಕ್ಕುದಿದೆಯಂತ!

(ವಿರಾಗಿಣಿ ಕೃಷ್ಣವೇಣಿಯು ಬಳಿಯಲ್ಲಿ ಬಂದು ಕುಳಿತು ಮೃದುಸ್ವರದಿಂದ "ಏನು ಹೇಳುವ ಅಕ್ಕ"? ಎಂದು ಕೇಳಿದಳು. ಅದರೆ ಕೃಷ್ಣವೇಣಿಯಿಂದ ಉತ್ತರವೇನೂ ಹೊರಡದೆ ಅವಳ ಆವೇಶವು ಮತ್ತಷ್ಟು ಬೀಗುವಂತಾಯಿತು ಹಾಗೂ ಬಿಡದೆ ವಿರಾಗಿಣಿ ಮತ್ತೆ ಕೇಳಿದಳು— "ಇದೇಕೆ ಅಕ್ಕಾ?")

ಕೃಷ್ಣ —(ಕರ್ಕಶಸ್ವರದಿಂದ) ನಾನು ಅಕ್ಕನಲ್ಲ!

ವಿರಾ:—ಅಕ್ಕನಲ್ಲದೆ ಮತ್ತಾರು? ಅತ್ತಿಗೆಯೇ?

ಕೃಷ್ಣ—ನಿನ್ನ ಕರ್ಮಫಲ! ನಿಷ್ಠುರೆ! ನಿನ್ನ ದೆಸೆಯಿಂದೀ ಪಿಶಾಚರೂಪಕ್ಕೆ ಬಂದಿರುವ ನಾನು. ನಿನ್ನ ಕೈಹಿಡಿದ!

ವಿರಾ:—(ಗಂಭೀರಸ್ವರದಿಂದ) ನೀನು ಕೈ ಹಿಡಿದುದೂ ನಿಜವೇ, ನೀನು ನನ್ನ ಸ್ವಾಮಿನಿಯೂ ಸತ್ಯವೇ, ಅಲ್ಲವೆನ್ನು ವರಾರು ? ಆದರೆ ನಾನು ನಿನ್ನ ಪೋಷ್ಯವರ್ಗಕ್ಕೆ ಸೇರಿದವಳಲ್ಲದೆ ನಿನ್ನಲ್ಲಿ ದ್ರೋಹವನ್ನು ಚಿಂತಿಸಿದ ಅವಿಶ್ವಾಸಿನಿಯಾಗಿಲ್ಲ ! ಚೆನ್ನಾಗಿ ತಿಳಿದಿರು ಅಕ್ಕಾ.

ಕೃಷ್ಣ:—ದುಷ್ಟೆ ! ಮತ್ತೆ ಮತ್ತೆ ಹೇಳುವೆ ! ನಾನು ನಿನ್ನ ಅಕ್ಕನ ಮೇಲಿರುವ ನಿನ್ನ ಗಂಡ ! ನಿನ್ನ ತಿಳಿಗೇಡಿತನದಿಂದ ನಿರ್ಗತಿಕನಾಗಿ ಪಿಶಾಚವಾಗಿರುವ ನಾನು,—

ವಿರಾ:—(ಕಿವಿಗಳನ್ನು ಮುಚ್ಚಿ ಗದ್ಗದಸ್ವರದಿಂದ ಉನ್ಮಾದಿನಿಯಂತೆ) ಹರಿಹರಿ ! ನೀನೇ ಸಾಕ್ಷಿಯಾಗಿರುವೆ ! ನಿರ್ಭಾಗ್ಯೆಯಾದರೂ ನಾನು ನನ್ನ ಸ್ವಾಮಿಯಲ್ಲಿ ? ದ್ರೋಹಿಯಲ್ಲವೆಂಬುದನ್ನು ನೀನಲ್ಲದೆ ಮತ್ತಾರು ಹೇಳುವರಿಲ್ಲಿ ? ಅಂತರ್ಹಿತನಾದ ನನ್ನ ಸ್ವಾಮಿ, ನನ್ನ ಹೃತ್ಪೀಠವನ್ನು ಬಿಟ್ಟು ಮತ್ತೆಲ್ಲಿಯೂ ಹೋಗುವಂತಿಲ್ಲ!' ಆ ನನ್ನ ಆರಾಧ್ಯದೇವನಿಗೆ, ಅಹಿತವನ್ನು ನಾನೆಂದೂ ಚಿಸ್ತಿಸಿದುದೂ, ಚಿಸ್ತಿಸಬೇಕಾದುದೂ ಇಲ್ಲ ! ಆತನ ದಿವ್ಯಸ್ವರೂಪಕ್ಕೆ, ಈ ಬಗೆಯ ವಿಕಾರಗಳಷ್ಟು ಮಾತ್ರಕ್ಕೂ ಹತ್ತಲಾರದೆಂದು ಪ್ರಮಾಣಮಾಡಬಲ್ಲೆನು ! ಇಂದಿವಳಿಗೆ ಬಂದಿರುವ ಆವೇಶವು, ಅವುದೇ ಆಗಿರಲಿ, ಅದಕ್ಕೂ ನಾನು ಅಹಿತವನ್ನು ಕೋರುತ್ತಿಲ್ಲ. ಒಮ್ಮಿಂದೊಮ್ಮೆಯೇ ಹೀಗಾದುದೇಕೆ ? ಹೇಳಲಾಗದೆ ?

ಕೃಷ್ಣ.—ಏಕೆ ? ನಿನ್ನ ಮನಸ್ವೀವರ್ತನಕ್ಕೆ,—

ವಿರಾ.—ಮನವು ಸ್ವತಂತ್ರವಾಗಿದ್ದಮಾತ್ರಕ್ಕೆ ಕುಂದೇನು ?

ಕೃಷ್ಣ:—ಕುಂದೇನು ? ಕಾಣುವುದಿಲ್ಲವೇ ಕಣ್ಣು ! ಉನ್ಮಾದಿನೀ ! ವಿದ್ಯಾವ್ಯಾಸಂಗವೆಂಬ ನೆವದಿಂದ ಕಂಡಕಂಡವರಲ್ಲಿ

ಪ್ರಸಂಗವೋ ? ಜ್ಞಾನಭೋಧನೆಗೆಂದು ಹೊರಟು, ಮಾನ ವಿಲ್ಲದೆ ಮನೆಮಗೆ ಸುತ್ತುವುದೋ ? ಸ್ತುತಿಯಿಸಲೆಂದೀ ಸನ್ಯಾಸಿನೀವೇಷವೋ ? ಇನ್ನೂ ಏನೇನು ಬೇಕಾಗಿರು ವುದು ನಿನಗೆ ? ಪೂರ್ವಾಚಾರಗಳಿಗೆ ಜಲಾಂಜಲಿ ! ಪುರಾಣ ದೇವತಾರ್ಚನೆಗಳಿಗೆ ತಿಲತರ್ಪಣ !! ಗುರುಜನರಲ್ಲಿ ತೇ ಜೋವಧೆ !!! ಇನ್ನೂ ಏನನ್ನು ಮಾಡಬೇಕು ?

ವಿರಾ:—(ಕೃಷ್ಣವೇಣಿಯ ಮುಖವನ್ನೇ ಸಾವಧಾನದಿಂದ ಚೆನ್ನಾಗಿ ನೋಡಿದಳು, ವಿಷಯಸ್ಫುರಣೆಯಿಂದ ಭಾವೋದಯವಾದಂ ತಾಗಲು ಸ್ಥಿರತೆಯಿಂದ)—ಸಹಜ ! ಎಲ್ಲವೂ ಹೇಳತ ಕ್ಕುವೇ ! ಆದರೂ, ತಾಳ್ಮೆಯಿರಲಿ ! ಈ ಪತಭಾಗಿಸಿ ಕಪ ಟಾಚಾರಿಣಿಯಾಗಲೀ, ಅವಿಶ್ವಾಸಿಸಿಯಾಗಲೀ, ಮಿತ್ರದ್ರೋ ಹಿಯಾಗಲೀ, ಸತ್ಯಚ್ಯುತೆಯಾಗಲೀ, ಆಗಿಲ್ಲವೆಂದೂ, ಆಗು ವಂತಿಲ್ಲವೆಂದೂ ತಿಳಿದಿರಿ !

ಕೃಷ್ಣ:—ಇಲ್ಲವೆ ? ನಿಜವಾಗಿ ಹೇಳುವೆಯೊ ? ನಿರ್ಭಾಗ್ಯೆ ! ಕೃಷ್ಣವೇಣಿ ಸಾಯುತ್ತಿರುವಳೇಕೆ ? ನಿನ್ನ ಅಕರ್ಮದಿಂದ ಲ್ಲವೆ ? ನೀನವಳ ಕಂಠಾಭರಣವನ್ನು ಮರುಳುಮಾಡಿ ಲ್ಲವೆ ? ಇದಕ್ಕೂ ಹೆಚ್ಚಿನ ದ್ರೋಹವುಂಟೆ ?

ವಿರಾ:—(ವಿದ್ಯುತ್ಪ್ರಭಾಭಾಸಿತ ಮುಖದಿಂದ,—ದರ್ಪಿತಸ್ವರ ದಿಂದ)—ಭಲೆ ! ಮಾತ್ಸರ್ಯಮಹಾರಾಜ ! ಕ್ರೋಧಾ ಹಂಕಾರದಿಂದ ಕೂಡಿನೀನಿಂತು ಕೃಷ್ಣವೇಣಿಯಲ್ಲಿ ಆವೇ ಶಿಸುರುವೆಯಲ್ಲವೆ ? ಆಗಲಿ ; ಹೇಳು : ಕೂಗಿಹೇಳು !!! ನೀನೆಷ್ಟು ಸಾರಿ ಸಾರಿ ಹೇಳಿದರೂ, ಎಷ್ಟೆಷ್ಟು ನಿಷ್ಠುರ ವಾಡಿದರೂ, ನನ್ನ ಸ್ವಾಮಿಯಾಗಲಾರೆ ? ನನ್ನ ಸ್ವಾಮಿ,

ನಿನ್ನಂತೆ ಹೇಯಸ್ವರೂಪನಾಗತಕ್ಕವನಲ್ಲ !! ಶಾಂತಿಗೇಹನಾದಾತನ ದಿವ್ಯಸ್ವರೂಪವು ಆವಾಗ ನನ್ನ ಅಂತರಾತ್ಮನಲ್ಲೇ ಸೇರಿರುವುದು. ಬರಿದೇಕೆ ಸಲ್ಲದ ಸುದ್ದಿಗಳಿಂದ ನಾಲಗೆಯನ್ನು ಕುಲಗೆಡಿಸಬೇಕು,? ಸತ್ತವರನ್ನೇಕೆ ದೂರಿಗೆಳೆಯಬೇಕು ? ಇಲ್ಲದ ಅವಮಾನದಿಂದೇಕೆ ನರಲಬೇಕು ? ನನ್ನನ್ನೂ ಕಾಮವಾಸನೆಯಿಂದ ಕಂದಿಕುಂದುತ್ತಿರುವಳೆಂದು ಭಾವಿಸುವೆಯೊ ? ನನ್ನ ಸ್ವಾಮಿಯ ಅಂತ್ಯಕಾಲದ ಆಶೀರ್ವಾಚನವನ್ನು ಕಯ್ಕೊಂಡಂದೇ, ಮಾತ್ರಸನ್ನಿಧಿಯಲ್ಲಿ, ಪ್ರಮಾಣಮಾಡಿದಂದೇ,—ನಾನು ನನ್ನ ಇಹಸೌಖ್ಯಕ್ಕೆಲ್ಲಾ ತಿಲತರ್ಪಣವನ್ನು ಮಾಡಿರುವೆನು. ಇನ್ನವುಗಳ ಹಂಗೇನೂ ನನಗುಳಿದಿಲ್ಲ. ಆತ್ಮಾನಂದಕ್ಕೆ ಪ್ರತಿಬಂಧಕವಾದ ಭೋಗಾಭಿರತಿಗೆ, ಬುದ್ಧಿಯೆಂದೂ ಹೋಗುವಂತಿಲ್ಲ. ಬುದ್ಧಿಯನ್ನು ಮೀರಿ ಮನವಾಗಲೀ, ಇಂದ್ರಿಯಗಳಾಗಲೀ ಜಾರುವಂತಿಲ್ಲ ! ವಿಶೇಷವಿವರಣೆಯಿಂದೇನು ? ಅಕ್ಕಾ ! ನಾನು ನಿಷ್ಠುರೆ, ಧೂರ್ತೆ, ಅಹುದು, ಸ್ವರೂಪಹಾನಿಕರವಾದ ನಡೆಯೆಂದೂ ನನ್ನಿಂದ ನಡೆಯಿಸಲ್ಪಟ್ಟುದಿಲ್ಲ. ನಾನೂ ಕಂಡಕಂಡವರೊಡನೆಲ್ಲಾ ನಿರ್ಭಯವಾಗಿ ಪ್ರಸಂಗಿಸುವುದೂ, ಲೇಖನ ! ವಾಚನಗಳನ್ನು ನಡೆಯಿಸುವುದೂ ಉಂಟು. ಆದರೂ ಆತ್ಮನಾಶಕರವಾದ ಕಪಟಾಚಾರವನ್ನೆಂದೂ ಮಾಡಿದುದಿಲ್ಲ; ಮಾಡತಕ್ಕವಳೂ ಆಗಿಲ್ಲ. ಕುಟಿಲನೀತಿಯಿಂದ ಆವ ಸ್ತುತಿಪಾಠಕ್ಕೂ ಸೋಲುವಂತಿಲ್ಲ. ಮತ್ತೂ ನಾನು ಬಬ್ಬಿಬ್ಬರನ್ನು ವಿಶ್ವಾಸಿಸುವುದಿಲ್ಲ ! ಜಗತ್ತೇ ನನಗೆ ವಿಶ್ವಸನೀಯವು. ಅಲ್ಲದೆ ನನಗೆ ಮರುಳಾಗಿರುವವರು ಎಷ್ಟುಮಂದಿ ? ಹೇಗೆ ?

ಏತರಿಂದಾಗಿರುವವರೆಂಬುದನ್ನು ನಾನು ಹೇಗೆ ತಿಳಿಯಹೇಳಲಿ ? ಒಬ್ಬಿಬ್ಬರಿರುವರೇ ? ಅಂತಹ ವಿಶ್ವಸ್ಥರಾದವರಲ್ಲಿಯೂ, ನನ್ನ ಪೂಜ್ಯ (ಸನ್ಮಾನಿತ) ಭ್ರಾತೃವೇ ನಿನ್ನ ಸ್ವಾಮಿ ! ಇನ್ನೂ ಹೇಳಬೇಕೆ ! ಕೃಷ್ಣವೇಣಿ. ನಿನಗೇಕೆ ಈ ದುರವಸ್ಥೆ ? ಏರಲ್ಲಿ ಶಂಕೆ ? ಆ ನಿನ್ನ ಸ್ವಾಮಿಯಲ್ಲಿ-ಪವಿತ್ರಾಂತಃಕರಣನಲ್ಲಿ-ಪಾವನಚರಿತನಲ್ಲಿ ಕಲಂಕದೃಷ್ಟಿಯೇ ? ಆತನ ಇಚ್ಛಾನುವರ್ತಿನಿಯಾಗಿರುವುದಲ್ಲವೇ ನಿನ್ನ ಧರ್ಮವು ? ಈ ಬಗೆಯ ಕುಟಿಲನಟನೆಯನ್ನು ಬಿಟ್ಟುಬಿಡು ಚಾಡಿಕಾರರ ಹೇಳ್ಕಕೇಳ್ಕಗಳಿಗೆ ಕಿವಿಗೊಟ್ಟು ಕೆಡಬೇಡ.

**ಶರಾ.**—"ಗಯ್ಯಾಳಿ ! ಎಷ್ಟುದ್ದ ನಾಲಗೆ ?" (ಎಂದು ಮೇಲೆತ್ತಿ ಬಂದು ವಿರಾಗಿಣಿಯು ಬೆನ್ನಿನಮೇಲೆ ಗುದ್ದಿ ಕೆಳಕ್ಕೆ ನೂಕಿದನು)

**ವಿರಾ.**—(ಧರೆಯಲ್ಲಿ ಕುಳಿತು) ಅಮ್ಮಾ ! ಹೋದೆ ; ನೂಕು, ಬಯ್ದು ನಲಿದಾಡು. ಅಂದಿನ ಉಬ್ಬಸರೋಗಕ್ಕೆ ಇಂದು ಪ್ರತೀಕಾರವಾಡುವಯಲ್ಲವೆ ! ಮಾಡುಮಾಡು !! ಈಗಲೆ ನನ್ನ ಸತ್ಯಪರೀಕ್ಷೆ ! ಆಗಲಿ

**ಶರಾ:**—ಸತ್ಯಪರೀಕ್ಷೆಯೋ ಮೃತ್ಯುಪರೀಕ್ಷೆಯೋ ! ಮುಯ್ಯಗೆಯು ತೊತ್ತೆ !! ತೊಲಗಿಹೋಗು : ನನ್ನನ್ನು ಒಂಟಿಯಾಗಿ ಮಾಡಿದೆ ! ರಾಜಶೇಖರನ ನಾಶಕ್ಕೆ ಮೃತ್ಯುವಾಗಿ ತಿರುಗಿದೆ !! ಇಷ್ಟು ಸಾಲದೆ ಇವನನ್ನು ತಿನ್ನಲಿಕ್ಕೆಂದು ಬಂದೆ !!! ನಿನಗೇಕೆ ಮೇಳಬಂದಿಲ್ಲವೊ ? ಮೃತ್ಯುವೂ ನಿನ್ನನ್ನು ಮುಟ್ಟಲೊಲ್ಲದೋ ?

**ವಿರಾ.**—(ಹೇಳಿರಿ ! ಮರುಳಾಟದ ಮಾತುಗಳಾವುದಿದ್ದರೂ ಈಗಲೆ

ಹೇಳಿರಿ ! ನಾಳೆಗೇಕೆ ? ರಾಜಶೇಖರನಿಗೆ ನೀವೇ ಹಿತಚಿಂತಕರೆಂಬುದನ್ನು ಕೇಳಬೇಕೆ ? ಹೇಗಾದರೂ ತೆಗಳಿರಿ.

ಲಕ್ಷ್ಮೀ.—ವಿರಾಗಿಣಿ ! ಇನ್ನು ನಮ್ಮ ಮನೆಯಲ್ಲಿರಲಾಗದು, ಹೊರಟು ಹೋಗಮ್ಮ !

ವಿರಾ:—ಸಂತೋಷವಾಗಿಯೇ ಹೋಗುವೆನು, ಆದರೆ ಮನೆಗೆ ಕರೆತಂದ ಅಣ್ಣನೇ ಬಂದು ಹೋಗೆನುವವರೆಗೂ ನಿಧಾನಿಸಿರಿ.

ಲಕ್ಷ್ಮೀ—ಇನ್ನು ಮುಂದೆ ನೀನಾತನೊಡನೆ ಮಾತನಾಡಲಾಗದು, ಹೊರಟುಹೋಗು.

ವಿರಾ:—ಹೊರಟುಹೋದಮಾತ್ರಕ್ಕೆ ಮಾತೂಬಿಟ್ಟುಹೋಗುವುದೆ?

ಲಕ್ಷ್ಮೀ—ಹೇಗಾದರೂ ಹಾಳಾಗಲಿ ! ಇಲ್ಲಿ ನಿಲ್ಲದೆ ಇಲ್ಲಿಂದಿಲ್ಲಿಯೇ ಹೊರಟುಹೋಗಬೇಕು

ವಿರಾ.—ಈಗಲೇ ನನ್ನ ತಲೆಯನ್ನು ಕಡಿದರೂ, ನಾನು ಹೋಗುವಂತಿಲ್ಲ. ಹೆಚ್ಚು ದಿನಗಳೂ ಇರುವಂತಿಲ್ಲ. ಹೇಗೂ ನಿಮಗೆಲ್ಲರಿಗೂ ಶುಭವಾಗಲಿ.

ತುಂಗಭದ್ರೆ.—ಭಲೆ ! ಸನ್ಯಾಸಿನಿ ! ಆಶೀರ್ವದಿಸಿ ಎಲ್ಲರನ್ನೂ ಕಾಪಾಡುವವಳಲ್ಲವೆ ? ಅಹುದು, ಬಹು ಪತಿವ್ರತೆ ! ಮಕರಂದನನ್ನು ಮರಳುಮಾಡಿದಾಗಲೇ ನಿನ್ನ ಪಾತಿವ್ರತ್ಯವು ತಿಳಿದಿದೆ !

ವಿರಾ:—(ವ್ಯಂಗ್ಯವಾಗಿ) ತುಂಗೆ! ಬಹು ಪತಿವ್ರತೆಯಾರು? ನಾನೆಂತಾಗುವೆನು ? ಹಿತ್ತಿಲಗೋಡೆಯನ್ನು ನೆಮ್ಮಿ ಮಕರಂದನನ್ನು ಮರುಳುಮಾಡಿದ ಮಾಟವು ನನಗೆಲ್ಲಿ ಬರುತ್ತದೆ ? ಅದು ತಿಳಿದುಬಂದಾಗಲೇ ನನ್ನ ಸತ್ವವೇನೆಂಬುದೂ ಸ್ವಲ್ಪ ಮಟ್ಟಿಗಾದರೂ ತಿಳಿಯಲಾದೀತು ! ಇಂದೇಕೆ ಇಷ್ಟುರನಿಷ್ಠುರ ? (ಎಂದುಹೇಳಿ ಅಲ್ಲಿ ನಿಲ್ಲದೆ ಹೊರಟುಹೋದಳು.)

" ರಮಣೀ ಪಾಠಕರೇ '

ನಮ್ಮ ಕೃಷ್ಣವೇಣಿಯ ಆವೇಶವೆಂತಹುದೆಂಬುದನ್ನು ತಿಳಿದಿರಲ್ಲವೆ ? ಇಂತಹ ಪಿಶಾಚಗಳೂ, ಈಗಲೂ ನಮ್ಮವರಲ್ಲಿ ಅನೇಕರನ್ನು ಹಿಂಸಿಸುತ್ತಿವೆ. ಆದರೆ ಈ ಬಗೆಯ ಪಿಶಾಚಗಳು, ಪುರುಷವರ್ಗವನ್ನು ಬಿಟ್ಟು, ಸ್ತ್ರೀಸಾಮಾನ್ಯವನ್ನೇ ಆಕ್ರಮಿಸುತ್ತಿರುವುದೇಕೆ ? "ಮಾನಿನೀಚಿತ್ತವೇ ಮಾತ್ಸರ್ಯಕ್ಕೆ ನೆಲೆ" ಯೆಂದೋ " ಹಾಗಿದ್ದರೆ ಕ್ರೂರಪಿಶಾಚಾವೇಶವು ನಮ್ಮ ರಮಣೀಕೋಮಲತೆಯನ್ನು ಸೂರೆಗೊಳ್ಳುವುದಕ್ಕೆ ಮೊದಲೇ ಅದನ್ನು ಹೊರಡಿಸಿ ದೂರಸಾಗಿಸಬೇಕಾದುದು ನಮ್ಮ ಕರ್ತವ್ಯವಲ್ಲವೆ ? ಪ್ರಯತ್ನಿಸಿರಿ ! ಅಂತಾಗಲಿ "

---

॥ ಶ್ರೀಃ ॥

## ನವಮ ಪರಿಚ್ಛೇದ.

(ಭೀಮಸಂದರ್ಶನ)

ಕುತ್ಸಿತತರ ಕಲುಷಿತ ಚಿತ್ತದಂತೆ, ಕತ್ತಲೆಯಿಂದ ದಿಕ್ಕೇಕಾಣದಿದ್ದಿತು. ಬಿಡದಿಯಲ್ಲಿ ದೀಪವಿಲ್ಲ ; ಬೃಂದಾವನದ ಮುಂದೆ ದೀಪವಿಲ್ಲ. ಎತ್ತೆತ್ತಲೂ ಕತ್ತಲೆಯಾವರಿಸಿರುವುದು ! ಬಿಡದಿಯಬಾಗಿಲು ತೆರೆದಿರುವುದು. ವಿರಾಗಿಣಿಯ ಶಬ್ದವಿಲ್ಲ ; ಇಂದು ಅವಳು ಹೊರಗೆ ಹೋದುದನ್ನೇ ಆರೂ ಕಾಣರು. ರಘುನಾಥನು ಮನೆಗೆ ಬಂದು

ಎಷ್ಟುಹೊತ್ತು ನೋಡಿದರೂ ವಿರಾಗಿಣಿ ಹೊರಗೆ ಹೋಗಿದ್ದಳೆಂಬುದಾಗಲೀ ಮತ್ತೆ ಬಂದವಳೆಂಬುದಾಗಲೀ ತಿಳಿಯಬರಲಿಲ್ಲ. ಭಯ ಕುತೂಹಲಗಳುಂಟಾದುವು. ಎದ್ದುಬಂದು ಬಿಡದಿಯ ಬಾಗಿಲ ಬಳಿಯಲ್ಲಿ ಕತ್ತಲೆಯಾಗಿದ್ದುದರಿಂದ ಬೆಳಕನ್ನು ತಂದು ನೋಡಿದನು ನರಸಮ್ಮನು ಬಾಗಿಲಬಳಿಯಲ್ಲಿ [illegible] ಕುಳಿತಿರುವುದನ್ನು ಕಂಡು ವಿಸ್ಮಿತನಾಗಿ ಕೇಳಿದನು —ಏನಕ್ಕ ನರಸಮ್ಮ! ಒಬ್ಬರೇ ಕುಳಿತು ಮಾಡುತ್ತಿರುವುದೇನು? ವಿರಾಗಿಣಿಯೆಲ್ಲಿ?

ನರ —ಅಪ್ಪ ನಾನು ಸಾಯಂಕಾಲವೇ ಬಂದವಳು, ಇನ್ನೂ ಮನೆಗೆ ಹೋಗಿಲ್ಲ. ಇಂದು ವಿರಾಗಿಣಿ ಮನೆಗೆ ಬಾರದಿದ್ದುದರಿಂದ ಎಲ್ಲರಿಗೂ ಶಂಕೆಯುಂಟಾಗಿರುವುದು. ಮಗನೂ ಸೊಸೆಯೂ ನೋಡಿ ಬರಹೇಳಿ ಅಟ್ಟಿದುದರಿಂದ ವಿಚಾರವರಿತು ಹೋಗಲು ಬಂದು ನೋಡಿದೆನು. ಅವಳು ಇಲ್ಲಿಯೇ ಪುಸ್ತಕಗಳ ಮೇಲೆ ತಲೆಯಿಟ್ಟು ನೆಲದಮೇಲೆ ಕವಿಚಿ ಮಲಗಿರುವಳು ಎಷ್ಟು ಕೂಗಿದರೂ ತಿರುಗಿನೋಡಳು. ಮಾತನಾಡಳು ಸಂಗತಿಯೇನೆಂಬುದನ್ನು ತಿಳಿದೇಹೋಗಬೇಕೆಂದು ನಾನು ಕುಳಿತಿರುವೆನು

ರಘು—(ದೀಪದೊಡನೆ ಬಿಡದಿಯ ಒಳಹೊಕ್ಕು ನೋಡಿ, ಗಾಬರಿಯಾಗಿ ವಿರಾಗಿಣಿ! ಏನುಮಾಡುವೆ?

ವಿರಾಗಿಣಿಯಿಂದ ಉತ್ತರವಿಲ್ಲ; ಮತ್ತು ಅವಳು ಕದಲಿದುದು ಇಲ್ಲ. ರಘುನಾಥನು ಭೀತನಾದನು ಅವಳ ಮುಂಗಡೆಯಲ್ಲಿಯೇ ಕುಳಿತು ತನ್ನ ಬಲಗೈಯಿಂದ ಅವಳ ತಲೆಯನ್ನು ಹಿಡಿದೆತ್ತಿ ನೋಡಿದನು. ಮುಖವು ರಕ್ತಮಿಶ್ರಿತ ಕೃಷ್ಣವರ್ಣಕ್ಕೆ ತಿರುಗಿದ್ದಿತು. ಕಣ್ಣುಗುಡ್ಡೆಗಳು ಕೆಂಗಾವಿಯ ಕಲ್ಲುಗಳು, ತಲೆ

ಮುಟ್ಟಲಾಗದಂತೆ ಕುದಿಯುತ್ತಿದ್ದಿತು. ಮತ್ತೆ ಮತ್ತೆ ನೋಡಿದನು. ಪುಸ್ತಕಗಳೂ ಕಣ್ಣೀರಿಂದ ತೋಯ್ದುಹೋಗಿದ್ದುವು. ಮುಂದೆ ತಡೆಯಲಾಗದೆ ಗದ್ಗದಸ್ವರದಿಂದ ಕೇಳಿದನು—ತಾಯಿ! ಇದೇ ಸಿಂದಿನ ಮರವಸ್ಥೆ! ಹೀಗಾದುದೇಕೆ! ಮಾತನಾಡು! ನಿನ್ನೀನೀರವರೋದನವು ನನ್ನ ಮನಸ್ಸನ್ನು ಕ್ಷತವಿಕ್ಷತವಾಗಿ ಮಾಡುತ್ತಿರುವುದು! ವಿರಾಗಿಣಿ! ಬೇಗಹೇಳು? ನನ್ನಲ್ಲಿ ತಪ್ಪಿದ್ದರೂ ಕ್ಷಮಿಸಿ ತಿಳಿಯಹೇಳು. ಈ ನೀರವರೋದನವು ವಿರಾಗಿಣಿಯಾದ ನಿನಗೆ ತಕ್ಕುದಲ್ಲ!

ವಿರಾ—(ನಿಟ್ಟುಸಿರಿಟ್ಟು) ಅಣ್ಣ! ನಾನೇಕೆ ರೋದಿಸಲಿ? ವಿರಾಗಿಣಿಯಾದವಳು, ಗೃಹಸ್ಥರ ಮನೆಯಲ್ಲಿರುವುದು ಸರಿಯಲ್ಲ; ನನ್ನನ್ನು ಬೀಳ್ಕೊಡು?

ರಘು:—ಏನೆಂದೆ? ವಿರಾಗಿಣಿ! ಗೃಹಸ್ಥರ ಮನೆಯಲ್ಲಿರಬಾರದೆಂದೆಯಾ? ಇದಾರಮನೆ? ಇದು ನಿನ್ನದಲ್ಲವೆ? ಹೀಗೇಕೆ ಮಾತನಾಡುವೆ? ನಾನೇನಾದರೂ,—

ರಘುನಾಥನ ಮಾತು ಅಷ್ಟಕ್ಕೆ ನಿಂತಿತು. ಹಿಂದೆ ನಿಂತು ಸಂಜೆಯಿಂದ ಹೊಂಚುಹಾಕುತ್ತಿದ್ದ ಲಕ್ಷ್ಮೀದೇವಮ್ಮನು ತಂಗಿಯಾದ ಶರಾವತಿಯೊಡನೆ ಬಿಡದಿಯ ಬಾಗಿಲಬಳಿಯಲ್ಲಿ ನಿಂದು ಕೂಗಿದಳು—"ಏನಿದು? ದುರ್ಮಾರ್ಗ! ನಿನ್ನ ವಿವೇಕವೆಲ್ಲಡಗಿತು?"

(ರಘುನಾಥನು ತಲೆಯೆತ್ತಿ ನೋಡಿದನು. ಆತನ ನೋಟದಲ್ಲಿ ಭಯವಾಗಲೀ, ಕಳವಳವಾಗಲೀ ತೋರುತ್ತಿರಲಿಲ್ಲ. ಉದಾಸೀನವೂ, ಅಸಹ್ಯವೂ ಹೊರಪಡುತ್ತಿದ್ದಿತು.)

ಶರಾ:—ಅಕ್ಕಾ! ನೋಡು ನೋಡು!! ಪ್ರತ್ಯಕ್ಷನೃಸಿಂಹನೇ!?

**ಲಕ್ಷ್ಮಿ**:—ಆವನಾದರೂ ಆಗಲಿ, ಹೇಗಾದರೂ ನೋಡಲಿ ! ಆರನ್ನು ಕೆಟ್ಟವರೆಂಬಾಡುತ್ತಿದ್ದೆನೋ ಅವರೇ ಒಳ್ಳೆಯುವರಾದರು. ಒಳ್ಳೆಯುವನೆಂದು ಹೆಸರು ಹೊತ್ತ ಈತನೇ ಹೀಗೆ ಕೆಟ್ಟು ಅಳುತಿರುವನು !' ಕೈಹಿಡಿದ ಹೆಂಡತಿ ಸಾಯುತಿದ್ದರೂ ನೋಡಬಾರದು. ಅವಳಾವಳೋ ಹಾಗದ ಕಾಸಿಗೂ ಬಾಳ ದವಳಿಗಾಗಿ ಅಳಬೇಕು '

**ರಘು**:—(ತೀವ್ರದೃಷ್ಟಿಯಿಂದ ನೋಡುತ್ತ) ಸಾಕು ' ನಿಲ್ಲಿಸಿರಿ ! ಮುಂದೆ ಗಳಹಬೇಡಿರಿ !!! ವಿವೇಕಹೀನರಾಗಿ, ವ್ಯಕ್ತಿಸ್ವಭಾವಜ್ಞಾನಶೂನ್ಯತೆಯಿಂದ ಕೂಗಿದರೇನಾದೀತು? ಯುಕ್ತಾಯುಕ್ತ ವಿಚಾರವು, ನಿಮ್ಮ ಮಿದುಳನ್ನು ಮುಟ್ಟಿದ್ದರೆ ನೀವಿಂತು ತೆಗಳುತಿರಲಿಲ್ಲ. ಮಾಡತಕ್ಕುದೇನು ? ನಾನು ಇಂದಿನವರೆಗೂ ನಿಮಗೆ ಅವಿಧೇಯನಾಗಿರಲಿಲ್ಲ ಆದರೆ ಆ ನನ್ನ ಮಾತೃಭಕ್ತಿಯನ್ನು ನೀವೇ ಕಡಿದುಹಾಕಿರುವಿರಿ ' ಈಗಲೂ ಅದರ ಬಲದಿಂದಲೇ ನಾನು ಅತಿಕ್ರಮಿಸದಿರುವೆನು. ನಿಮ್ಮ ಮಕ್ಕಳಿಬ್ಬರೂ ಸನ್ಮಾರ್ಗಕ್ಕೆ ಬಂದುದು ನಮಗೂ ಸಂತೋಷವೇ ' ನೀವು ವಿವೇಕಿಗಳಾಗಿರುವುದು ಮತ್ತೂ ತೃಪ್ತಿಕರವೇ '' ಆದರೂ ಈವಿರಾಗಿಣಿಯ ಚಿತ್ತಸ್ಥೈರ್ಯವಲ್ಲಿ ತಿಲಾಂಶವನ್ನಾದರೂ ನೀವುಹೊಂದಲಾರಿರಿ ! ಇಂತಹ ಪವಿತ್ರಹೃದಯದಲ್ಲಿಯೂ ನಿಮ್ಮ ದೌರ್ಜನ್ಯವಿಷದಿಂದ ಸಂತಾಪವನ್ನುಂಟುಮಾಡಿರುವಿರಿ '

**ಶರಾ**:—ರಘು ! ಸುಮ್ಮನೇಕೆ ಕೂಗುವೆ ? ನಡೆದ ವಿಚಾರವನ್ನು ಚೆನ್ನಾಗಿ ತಿಳಿದು ಹೇಳಬೇಕು !

**ರಘು**:—ನಡೆದ ವಿಚಾರವೇ ! ಅದೇನದು ?

ಶರಾ.—ನಿನ್ನ ವಿರಾಗಿಣಿಯ ನಡತೆ ಸರಿಯಾಗಿಲ್ಲವೆಂದೂ, ಇವಳು ಸ್ವೇಚ್ಛಾಚಾರಿಣಿಯೆಂದೂ, ಇವಳ ಅಕಾರ್ಯದಿಂದಲೇ ತಾನು ಪಿಶಾಚವಾಗಿರುವೆನೆಂದೂ, ಇವಳ ಗಂಡನು ಹೇಳಿರುವನು. ನೀನು ಮಾತ್ರ ಇವಳನ್ನು ಅಚ್ಚುಮೆಚ್ಚಿನವಳೆಂದು ಹಿಗ್ಗುತ್ತಿರುವೆ !

ರಘು —(ವ್ಯಂಗ್ಯವಾಗಿ ನಕ್ಕು) ಚೆನ್ನಾಗಿದೆ ' ನಿಮ್ಮಾ ನಾಲಗೆಗೆ ಎಷ್ಟು ಸಕ್ಕರೆಯನ್ನು ಕೊಟ್ಟರೂ ಸ್ವಲ್ಪವೇ ' ಇರಲಿ ; ಪಿಶಾಚವು ಎಲ್ಲಿದ್ದಿತು ? ಹೇಗಿದ್ದಿತು ? ಕಂಡವರಾರು ? ಕೇಳಿದವರಾರು ? ಏನೆಂದಿತು ?

ಲಕ್ಷ್ಮಿ —ಆರಾದರೂ, ಏಕೆ ? ನಿನಗೇನು ಕಣ್ಣೇ ಇಲ್ಲವೆ ? ಹೋಗಿ ನೋಡು ನಿಮ್ಮಿಬ್ಬರ ಅಕೃತ್ಯದಿಂದ ಅವನೂ ಪಿಶಾಚವಾಗಿ ನಿನ್ನ ಹೆಂಡತಿಯನ್ನು ಕಿತ್ತುತಿನ್ನುತ್ತಿರುವನು. ಪಾಪ ! ಬಸುರುಹೆಂಗಸು, ಜ್ಞಾನವಿಲ್ಲದೆ ನರಲುತ್ತಿರುವಳು ; ನೀನಿಲ್ಲಿ ಅಳುತಿರುವೆ ' ಸ್ವಲ್ಪವಾದರೂ ಪ್ರೀತಿ-ವಿಶ್ವಾಸವೇ ಬೇಡವೇ ?

(ರಘುನಾಥನು, ಒಣಗುತ್ತಿದ್ದ ತುಟಿಗಳನ್ನು ತುದಿನಾಲಗೆಯಿಂದ ಸವರುತ್ತಾ, ಬಿರುಗಣ್ಣಿಂದ ತಾಯನ್ನೇ ನೋಡುತ್ತಿದ್ದನು.)

ನರಸಮ್ಮ —ಇದೇನು ? ಲಕ್ಷ್ಮೀದೇವಮ್ಮ ! ಈ ಯೋಗಿನಿಯನ್ನು ಹೀಗೆ ಹಳಿದು, ನರಕಕ್ಕೆ ಹೋಗುವಿರೇಕೆ ? ಇವಳ ಸಹೃದಯದಿಂದಲ್ಲವೇ ನಮ್ಮ ಚಂದ್ರಭಾಗೆ ಉಳಿದುದು ? ಇವಳ ಹಿತಬೋಧನೆಯಿಂದಲ್ಲವೇ ನನ್ನ ಮಗನೂ ದುರ್ಮಾರ್ಗವನ್ನು ಬಿಟ್ಟು ನೆಟ್ಟಗಾದುದು ? ಇಲ್ಲದಿದ್ದರೆ ನಮ್ಮ ಪಾಡೇನಾಗುತಿದ್ದಿತೋ ? ನಿಮ್ಮ ಮಗಳ ನಟನೆಯಂತೆಯೇ ಇವಳಲ್ಲಿಯೂ, ದುರ್ಗುಣವನ್ನು ಹೊರೆಯಿಸುವಿರೇನು ?

ಲಕ್ಷ್ಮೀ:—ಎದ್ದು ಹೋಗಿರೆ! ನಿಮ್ಮನ್ನು ಮಧ್ಯಸ್ಥಕ್ಕೆ ಕರೆದವರಾರು?

ನರಸಮ್ಮ:—ಅಮ್ಮ! ನೀವೆಷ್ಟು ಕೂಗಿದರೂ ಫಲವಿಲ್ಲ. ಬೆಂಕಿಯನ್ನು ಮುತ್ತುವ ಮಿಡತೆಗಳಂತೆಯೇ ಇವಳನ್ನು ಬಯ್ಯುವವರೂ, ನರಲಬೇಕಾದೀತು? ತಿಳಿದಿರಲಿ!! (ಎಂದು ಹೇಳಿ ಹೊರಟುಹೋದಳು. ವಿರಾಗಿಣಿ ನಿಟ್ಟುಸಿರುಬಿಟ್ಟು ಎದ್ದು ನಿಂತಳು. ಆದರೆ, ಮುಂದೆ ಹೊರಡಲು ಕಾಲೇ ಬಾರದು ಸುಮ್ಮನೆ ನಿಂತಿದ್ದಳು.)

ರಘು—ವಿರಾಗಿಣಿ! ಏಕೆ ಎದ್ದು ನಿಂತೆ?

ವಿರಾ:—ಇನ್ನು ಹೋಗುವೆನು. ಭಗವಂತನು ಇನ್ನುಮುಂದೆ ಎಲ್ಲಿ ನೆಲೆಯನ್ನು ತೋರುವನೋ ತಿಳಿಯೆನು.

ಲಕ್ಷ್ಮೀ:—ಹೋಗುಹೋಗು! ಮಾತಿನಮಲ್ಲ!! ನಿನ್ನ ಕುಟಿಲನೀತಿಯನ್ನೂ, ಜಾರತನದ ಲೀಲೆಯನ್ನೂ ಚೆನ್ನಾಗಿ ಬಲ್ಲೆವು. ಬೇಗ ಹೊರಡು!

ವಿರಾ.—(ಖತಿಗೊಂಡು ಕರ್ಕಶಸ್ವರದಿಂದ) ಅಮ್ಮ! ತೆಗಳಿ ತೆಗಳಿ ನಾಲಗೆಯನ್ನೇಕೆ ಕೆಡಿಸಿಕೊಳ್ಳಬೇಕು? ನನ್ನ ಮನಸ್ಸು ಅಂತರ್ಯಾಮಿಯಾದ ಪರಮಾತ್ಮನೊಬ್ಬನಲ್ಲಲ್ಲದೆ ಮತ್ತಾರಲ್ಲಿಯೂ ಜಾರತಕ್ಕದಲ್ಲ, ಆತನೊಬ್ಬನ ಅನಂತಕಲ್ಯಾಣಗುಣಗಳಲ್ಲಲ್ಲದೆ ನಾನು ಮತ್ತಾರಲ್ಲಿಯೂ ಜಾರೆಯಾಗಿಲ್ಲ!! ನಿಮ್ಮ ಅಪಲಾಪದಿಂದ ನಾನು ಜಾರೆಯಾಗುವಂತೆಯೂ ಇಲ್ಲ ಪರಮಾತ್ಮನೊಬ್ಬನು ನನಗೆ ಪ್ರಸನ್ನನಾಗಿರುವಲ್ಲಿ, ಮಿಕ್ಕ ನಿಂದಾಸ್ತುತಿಗಳು ನನ್ನನ್ನು ಏನುಮಾಡಬಲ್ಲುವು?

ರಘು—(ಮುಂದಕ್ಕೆ ಬಿಡದೆ ವಿರಾಗಿಣಿಯ ಕೈಹಿಡಿದು ಕುಳ್ಳಿರಿಸಿ, ಕರುಣಾ ವ್ಯಂಜಕಸ್ವರದಿಂದ) ವಿರಾಗಿಣಿ! ನೀನು ನನ್ನ

ಸೋದರಿಯಲ್ಲ. ನನ್ನ ಆತ್ಮಸಂಜಾತೆಯೇ ಕಾಣುವೆ! ತಾಯಿ! ನೀನು ನಿನ್ನ ತಂದೆಯ ಮನೆಯನ್ನು ಬಿಟ್ಟುಬಂದುದು ಮೊದಲು, ಆತನಸ್ಥಾನದಲ್ಲಿ ನಾನೇ ನಿಂತಿರುವೆನು. ಈವರೆಗೂ ನೀನು ನನ್ನ ಪುತ್ರವಾತ್ಸಲ್ಯದಿಂದ ಪೋಷಿತೆಯಾಗಿರುವೆ; ಮುಂದೆಯೂ ಆಗುವೆ! ನಿನ್ನ ಕಿರುದಂದೆ ಸಪರಿವಾರನಾಗಿ ಇಲ್ಲಿಗೆ ಬಂದು ನಿನ್ನನ್ನು ನೋಡುವವರೆಗೂ ನೀನು ಈ ಮನೆಯಿಂದ ಹೋಗಲಾಗುವುದಿಲ್ಲ. ಸುಮ್ಮನೇಕೆ ಬಳಲುವೆ? ನಿನ್ನ ಸಂಕಲ್ಪವನ್ನೂ ವಾಗ್ದಾನವನ್ನೂ ಸ್ಮರಿಸು! ಕ್ಷುಲ್ಲಕರ ಸಲ್ಲದಅಪವಾದಕ್ಕೆ ಕಿವಿಗೊಟ್ಟು ದೂರಾಗಿ ಹೋಗುವೆನೆಂದು ನನ್ನನ್ನು ನೋಯಿಸಬೇಡ. ಈವರೆಗೂ ಆದ ನಿನ್ನ ವ್ಯಾಸಂಗಕ್ಕೆ ಫಲವಿಲ್ಲ!

ವಿರಾಗಿಣಿ ಮಾತಿಲ್ಲದೆ ತಲೆಬಾಗಿ ಕುಳಿತುಬಿಟ್ಟಳು.

ಶರಾ——ಅಬ್ಬಬ್ಬಾ! ಎಂತಹ ಕೆಚ್ಚಿದೆ! ಏನುಸಾಹಸ!!

ರಘು——(ವ್ಯಗ್ರನಾಗಿ, ತಾಯಕಡೆ ತಿರುಗಿ) "ಅಮ್ಮಾ! ನಿಮ್ಮನ್ನು ಈವರೆಗೂ ಮಾತೃಭಾವನೆಯಿಂದ ಮನ್ನಿಸಿದ್ದೆನು. ಆದರೆ ನಿಮ್ಮ ದುರ್ಭಾಷೆಗಳು ನನ್ನ ಸಹನೆಯನ್ನು ತಪ್ಪಿಸಿದೆ! ನಿಮ್ಮ ಸೊಸೆಗೆ ಆವರಿಸಿರುವುದು ಪಿಶಾಚವೆ? ಎಂತಹದು? ಮಾತ್ಸರ್ಯಮಹಾಪುರುಷನಲ್ಲವೆ? ಮಾತ್ಸರ್ಯವೆಂಬ ಕಿಚ್ಚಿಗೆ ಇವಳೇ ಇಲ್ಲಿ ಹೊಂಚುಕೇಳುತ್ತಿರುವ ನಿಮ್ಮ ಮಗಳೇ ಮೆಳೆಯಾಗಿರುವಳು. ಕಿಚ್ಚಿಗೆ ಮೆಳೆಯೂ ಪ್ರೋತ್ಸಾಹ ಮಾಡುತ್ತಿದ್ದುದು ಸಾಲದೆಂದು ಬಿರುಗಾಳಿಯಾಗಿ ಶರಾವತಿಯೂ ಸೇರಿರುವಳು. ಈ ಮೂವರ ದಾಂಧಳೆಯೇ ಈ ಮನೆಯು ಸ್ಮಶಾನರೂಪಕ್ಕೆ ಕಾರಣವಾಗಿರುವುದು. ಅಮ್ಮಾ!

ಈ ನಿಮ್ಮ ತಂಗಿ, ತನ್ನ ದಾರಿಗೇ ಸೊಸೆಯನ್ನೂ ಸೇರಿಸಲು ಬಂದಿರುವಳು! ಸಂತೋಷ; ಆದರೆ ನಾನು ಎರಡನೆಯ ಶಂಕರನಾಥ ನಾಗಿದ್ದರಲ್ಲವೇ ಕೃಷ್ಣೆಯನ್ನೂ ಎರಡನೆಯ ಶರಾವತಿಯಂತೆ ಬಿಡಬಹುದಾಗಿದ್ದಿತು. ನಾನು ಶಂಕರನಾಥನಲ್ಲ; ರಘುನಾಥ! ಈ ಬಗೆಯ ದುಶ್ಚೇಷ್ಟೆಗಳಿಗೆ ಇನ್ನು ಮುಂದೆ ಅವಕಾಶವಿರಲಾರದು. ತುಂಗೆ, ತನ್ನ ವಿಷದ ಹಲ್ಲಿಂದ ಕಡಿಯಬಂದರೇನಾದೀತು? ಹೇಗೂ ಅವಳ ಮಾರ್ಗಕ್ಕೆ ಕಂಟಕವೊಡ್ಡಿದುದಾಯಿತು. ಇನ್ನೇನೂ ಮಾಡುವಂತಿಲ್ಲ! ವಿರಾಗಿಣಿಯನ್ನು ಹೊರಡಿಸಬೇಕೆಂದಿರುವಿರಲ್ಲವೆ? ಈ ನಿಮ್ಮ ದುರದ್ಯಮವು ಖಂಡಿತವಾಗಿಯೂ ಸಾಗುವುದಿಲ್ಲವೆಂದು ತಿಳಿಯಿರಿ; ಇವಳನ್ನು ಆನಂದಮಂದಿರದ ಪೂಜ್ಯಸ್ಥಾನದಲ್ಲಿ ನೆಲೆಗೊಳಿಸುವಂದಿನವರೆಗೂ ಈ ಮನೆಯಿಂದ ಆರೂ ಇವಳನ್ನು ಹೇಗೂ ಹೊರಡಿಸಲು ಶಕ್ತರಾಗರು! ಅಂತಹ ಉತ್ಸವಕಾಲವು ಇನ್ನು ಮಾಸಾವಧಿಯಲ್ಲಿಯೇ ನಿಮ್ಮ ಕಣ್ಣೆದಿರಿಗೆ ನಿಲ್ಲುವುದನ್ನು ನೋಡುವಿರಿ! ಚೆನ್ನಾಗಿ ತಿಳಿದಿರಿ!! ಎಚ್ಚತ್ತಿರಿ!!! ಅಷ್ಟೇ ಅಲ್ಲ; ಇನ್ನು ಮುಂದೆ ನಿಮ್ಮ ಅಬಲಾದೌರ್ಜನ್ಯವನ್ನು ಪ್ರಕಾಶಿಸಲು, ಇಲ್ಲದ ಸಲ್ಲದ ಆವೇಶವೆಂದೂ, ರೋಗವೆಂದೂ, ನಟಿಸುವುದಾದರೆ ಆ ಸುದ್ದಿ ನನ್ನ ಕಿವಿಯನ್ನು ಮುಟ್ಟಿದಾಗಲೇ ನಟರು ಆರೇ ಆಗಿರಲಿ, ಬಹಿಷ್ಕೃತರಾಗುವರು. ಅಂತಹರಲ್ಲಿ ಮಾತೃಭಕ್ತಿ ಗೌರವವಾಗಲೀ, ಸೋದರವಾತ್ಸಲ್ಯವಾಗಲೀ, ಪತ್ನೀಪ್ರೇಮವಾಗಲೀ ತಡೆಯಾಗುವುದೆಂದು ತಿಳಿಯದಿರಿ! ಮಲೆತು, ಕುಣಿದಾಡಿ, ಮನೆಬಿಟ್ಟು ಹೊರಸಾಗುವಂತೆ ಮಾಡಿಕೊ

ಳ್ಳದೆ ಮಾನವನ್ನು ಕಾಪಾಡಿಕೊಳ್ಳಿರಿ! ಇಂದು ಬಂದಿದ್ದ ಪಿಶಾಚವನ್ನು ದೂರಸಾಗಿಸಲು ನನಗೂ ರೌದ್ರಾವೇಶವೇ ಬಂದಿರುವುದು! ಇಂದು ನಾನು ಮಾನವಪ್ರಕೃತಿಯಲ್ಲಿಲ್ಲ. ಹೊರಟುಹೋಗಿರಿ! ನನ್ನ ಕಣ್ಣಿಗೆ ಯಾತನೆಯನ್ನು ಹೆಚ್ಚಿಸಬೇಡಿರಿ ಎಚ್ಚರಿಕೆ!"

ವಿರಾ:—ಏನಿದು? ಅಣ್ಣಾ! ಇದೇಸಿಂದಿನ ಸ್ಥಿತಿ? ಕ್ಷಮೆಯೇನಾಯಿತು?

ರಘು:—ವಿರಾಗಿಣಿ! ತಾಳ್ಮೆಯಿಂದ ಕುಳಿತಿದ್ದರೆ ಇವರು ದಾರಿಗೆಂತು ಬರುವರು? ಇವರ ಘೂಕಭೇಕ ಪ್ರಕೃತಿಗಳೆಂತು ಪರಿವರ್ತಿತವಾಗುವುವು? ಸಮಸ್ತವಾದ ಇಹಸೌಖ್ಯಕ್ಕೂ ಜಲಾಂಜಲಿಯಿತ್ತು, ದೇಶಾಭ್ಯುದಯವೇ ತನ್ನ ವಿಜಯವೆಂದು ಭಾವಿಸಿ ನಡೆಯುತ್ತಿರುವ ಈ ಪವಿತ್ರಮೂರ್ತಿಗೆ ಈ ಬಗೆಯ ಸಂಕಟಗಳನ್ನು ತಂದೊಡ್ಡುವವರನ್ನು ನೋಡಿಯೂ ಸುಮ್ಮನಿರಬೇಕೋ? ಅದೆಂದೂ ನನ್ನಿಂದಾಗದು!

ವಿರಾ.—ಮನವನ್ನು ತಡೆದು ನೋಡು, ಹಿಡಿದುಮಾಡು, ದುಡುಕಬೇಡ, ಅಣ್ಣಾ! ನೀನಿನ್ನು ನಡೆ!

(ರಘುನಾಥನು ತಲೆದೂಗುತ್ತ ಹೊರಟುಹೋದನು. ತುಂಗಭದ್ರೆ, ಪಾಪ! ಮರೆಯಾಗಿದ್ದು ತಲೆತಪ್ಪಿಸಿಕೊಂಡಳು. ಶರಾವತೀ ಲಕ್ಷ್ಮೀದೇವಮ್ಮನವರು ಭಯಾಕ್ರಾಂತರಾಗಿ, ಉಸಿರೆತ್ತದೆ ಬೇರೆಬೇರೆಕಡೆಗೆ ನಡೆದರು.)

ಸುಹೃದರೇ!

ಎಂತಹ ಭೀಮದರ್ಶನ? ಪಿಶಾಚೋಚ್ಚಾಟನಕ್ಕಾಗಿ ಪ್ರಕಟವಾದ ಭಯಂಕರ ಪ್ರದರ್ಶನ!" ಪರಿಣಾಮವೇನೆಂಬುದನ್ನು ಪರ್ಯಾಲೋಚಿಸಬೇಕಲ್ಲವೆ?

॥ ಶ್ರೀಃ ॥

## ದಶಮ ಪರಿಚ್ಛೇದ.

(ಪ್ರತ್ಯಕ್ಷಪ್ರಮಾಣ)

ರಘುನಾಥನ ಭೀಮದರ್ಶನವಾರ್ತೆ ಕಿವಿಗೆ ಬಿದ್ದಾಗಲೇ ಕೃಷ್ಣವೇಣಿಯನ್ನು ಹಿಡಿದಿದ್ದ ಪಿಶಾಚವು ಭಯಪಟ್ಟು ಹೊರಟುಹೋಯಿತು. ತುಂಗೆ ಅತ್ತಿಗೆಯಲ್ಲಿ ಮಾತನಾಡುವುದಕ್ಕೆ ಭೀತಳಾಗಿ ಹಿಂದೆಗೆಯುತ್ತಿದ್ದಳು. ಮನೆಯಲ್ಲಿ ಆರೂ ಘಟ್ಟಿಯಾಗಿ ಮಾತನಾಡುತ್ತಿರಲಿಲ್ಲ. ವಿರಾಗಿಣಿ ಮಾತ್ರ ಎಂದಿನಂತೆಯೇ ಎಲ್ಲರೊಡನೆಯೂ ಪ್ರಸನ್ನೆಯಾಗಿಯೇ ನುಡಿಯುತ್ತಿದ್ದಳು.

ಭೀಮದರ್ಶನವಾದ ಮರುದಿನವೇ ಕೃಷ್ಣವೇಣಿಗೆ ಸುಖಪ್ರಸವವಾಯಿತು. ಹೆಂಗೂಸು ಹುಟ್ಟಿತು. ಆವುದೇ ಆಗಲಿ ಸುಖವಾಗುವುದೊಂದೇ ಸಾಕೆಂದು ಹರ್ಷಿಸಿದರು. ಶಿಶುಜನನವಾದುದು ಮೊದಲು, ಸ್ನಾನಮಾಡುವವರೆಗೂ ವಿರಾಗಿಣಿ ಅಡಿಗಡಿಗೆ ಬಂದು ಕೃಷ್ಣವೇಣಿಯನ್ನು ನೋಡಿ ಹೋಗುತ್ತಿದ್ದಳು. ಆ ವೇಳೆಯಲ್ಲಿ, ಆರ ಅಡ್ಡಿಗೂ ನಿಲ್ಲುತ್ತಿರಲಿಲ್ಲ. ವಿರಾಗಿಣಿಯಿಂದ ಸಂಗತಿಯನ್ನು ಕೇಳಿ ತಿಳಿದು ರಘುನಾಥನು ದೂರದಿಂದಲೇ ಹಿಂದಿರುಗುತ್ತಿದ್ದನು. ಹತ್ತು ರಾತ್ರಿಗಳೂ ಸುಖವಾಗಿ ಕಳೆದುವು. ತಾಯಿ ಮಕ್ಕಳಿಬ್ಬರಿಗೂ ಮಂಗಳಸ್ನಾನವಾಯಿತು. ಸಂತಾನಪ್ರಾಪ್ತಿಯಾದ ಸಂತೋಷಕ್ಕಾಗಿ ಅನ್ನಸಂತರ್ಪಣೆಯೂ ನಡೆದಿತು. ಆದರೆ ಶಿಶುವಿಗೆ ನಾಮಕರಣ ಮಹೋತ್ಸವವನ್ನು ನಡೆಯಿಸಬೇಕೆಂದು ಶರಾವತಿ, ಲಕ್ಷ್ಮಿ

ದೇವಪ್ಪನವರಿಬ್ಬರೂ ಖಂಡಿಸಿದರು. ಎಷ್ಟೆಷ್ಟು ಬಗೆಯಾಗಿ ಹೇಳಿದರೂ ರಘುನಾಥನು ಸಮ್ಮತಿಸದೆ ಅನಕ್ಕಾಗಿ ವ್ಯಯವಾಗಬೇಕಾಗಿದ್ದ ಹಣದಿಂದ ಬಡಬಗ್ಗರನ್ನು ತಿಂಡಿಬಟ್ಟೆಗಳಿಂದ ತೃಪ್ತಿಪಡಿಸಿದನು.

ರಘುನಾಥನ ಈ ಬಗೆಯಾದ ವರ್ತನವು ಮನೆಯವರಾರಿಗೂ ಸರಿಬೀಳಲಿಲ್ಲ. ಕೃಶ ಪ್ರಾಣಿಯಂತೂ ತನ್ನ ಪತಿ, ತನ್ನಲ್ಲಿಯೂ ತನ್ನ ಕಂದನಲ್ಲಿಯೂ ಕುಪಿತನಾಗಿಯೇ ಇರುವನೆಂದೂ, ಇಷ್ಟರ ಉಪೇಕ್ಷೆಗೆ ತಾನು ಪಕ್ಕಾದೆನೆಂದೂ ಮನದಲ್ಲಿಯೇ ಹಲುಬುತ್ತಿದ್ದಳು. ಬಸುರನ್ನು ತಡೆಯಲಾಗದೆ ಅಳುವಿನಿಂದಲೇ ಕಾಲವನ್ನೆಲ್ಲಾ ಕಳೆಯುತ್ತಿದ್ದಳು. ಬಹುಕಾಲದಿಂದ ಆವರಿಸಿಕೊಂಡಿದ್ದ ಮನೋರೋಗವು ಹಸಿಯಮೈಯ್ಯಲ್ಲಿ ಅಲಸಿಕೆಹೊಂದಿ ಮಿತಮೀರಿ ಅತ್ತುದರಿಂದ ನಂಜಿನಂತಾಗಿ ಜ್ವರಕ್ಕೆ ತಿರುಗಿತು ಬಾಣಂತಿ. ಜ್ವರಪೀಡಿತೆಯಾಗಿ ಮಲಗಿದುದರಿಂದ ಕೂಸಿಗೆ ತಾಯಹಾಲೇ ಇಲ್ಲದಂತಾಯಿತು. ಜ್ವರವು ಬಂದೊಡನೆಯೇ ಔಷಧವನ್ನು ಕೊಡಲು ಬಂದುದಕ್ಕೆ ಒಲ್ಲೆನೆಂದು ಸುರಿದುಬಿಟ್ಟಳು. ಮರುದಿನವೇ ಜ್ವರವು ವಿಷಮಿಸಿ ಪ್ರಾಣವನ್ನೇ ತಪ್ಪಿಸಿತು. ರೋಗಿಯ ಉಪಚಾರಕ್ಕಾಗಿ ನಿಲ್ಲುವ ಸಹೃದಯರಾರು? ಶಿಶುಪಾಲನೆಗೆ ಕಯ್ನೀಡುವ ಕೃಪಾಳುಗಳಾರು? ಲಕ್ಷ್ಮೀದೇವಮ್ಮನು ಮುಪ್ಪಿನವಳು, ಆಕೆಯ ಕೈಯಿಂದದಾವುದೂ ಆಗದು. ಹಾಗೂ ಮನೆಗೆಲಸವೇ ಸಾಕೆನ್ನಿಸುವುದು. ಅದಂದು ಸೊಸೆಗೆ ಬೇಕಾಗುವ ಗಂಜಿ, ನೀರನ್ನಾದರೆ ಕಾಯಿಸಿ ಕೊಡಬಲ್ಲೆನು; ಹಸುಗೂಸನ್ನು ತಡೆಯಲು ನನ್ನಿಂದಾಗದು! ಎಂದಳು. ಶರಾವತಿಯೆಂದರೆ ಮನೆಬಾಗಿಲುಗಳನ್ನು ಬಿಟ್ಟು ಬೇಸರಗೊಂಡಿತ್ತು ಬಂದಿರುವವಳು, ಅವಳಿಂದೆಂತಾದೀತು? "ತನಗೇ

ನಿರ್ಬಂಧವೇಕೆ? ಬೇಕಾದರೆ ಸೊಸೆಯ ಜತೆಯಲ್ಲಿದ್ದು ಹೇಳಿದ ಕೇಳಿದ ಮಾತನ್ನು ನಡೆಯಿಸುವಂತೆ ಮಾಡುವೆನು, ಅಷ್ಟಲ್ಲದೆ ಶಿಶುರಕ್ಷಣೆ ತನ್ನಿಂದಾಗದು ; ಕೂಲಿಯವರನ್ನು ಗೊತ್ತುಮಾಡಲಿ" ಎಂದಾಡಿ ನುಸುಳಿದಳು. ಇನ್ನಾರಿರುವರು? ತುಂಗಭದ್ರೆಯ ಸ್ಥಿತಿಯನ್ನೆಂತೂ ಹೇಳುವಂತಿಲ್ಲ. ಅಂತರ್ಜ್ವರದ ಮಹತ್ತರ ಸಂತಾಪವನ್ನು ತಡೆದುಕೊಳ್ಳುವುದೇ ಅವಳಿಗೆ ಕಷ್ಟವಾಗಿದ್ದಿತು. ಇದು ಸಾಲದೆ, ಬೇರೆ ಹಂಬಲಕ್ಕೆ ತಲೆಯೊಡ್ಡುವುದೆಂತು? ಹೇಗೂ ಅತ್ತಿಗೆಯ ಮಗ್ಗುಲಲ್ಲಿಯೇ ಬೇರೊಂದು ಹಾಸುಗೆಯಲ್ಲಿಯೇ ಮಲಗಿ ಹೊರಳುತ್ತಿದ್ದ ತುಂಗಭದ್ರೆ, ತನ್ನಿಂದ ಆಗದೆಂದು ಬಾಯ್ತೆರೆದು ಹೇಳಬೇಕೆ? ಎಷ್ಟು ಪರೀಕ್ಷಿಸಿದರೂ, ಅತ್ತೆ, ಸೋದರತ್ತೆ, ನಾದಿನಿ, ಈ ಮೂವರಲ್ಲಿ ಆರೂ ಕಾರ್ಯನಿರ್ವಾಹಕರಾಗಿ ನಿಲ್ಲಲಿಲ್ಲ. ಸಾಬಲನೇನು ಮಾಡಬಲ್ಲನು? ಪಾಪ! ಗಂಡಸು! ಅಣ್ಣನಿಗೆ ಒಂದೊಂದುವೇಳೆ ನೆರವಾಗಿರಬಲ್ಲನು. ಅಷ್ಟೆ!

ರಘುನಾಥನಿಗೆ ಕಣ್ಣುಬಾಯ್ಗಳು ಕಟ್ಟಿದಂತಾಗಲು ವಿರಾಗಿಣಿಯಲ್ಲಿ ಹೇಳಿದನು ವಿರಾಗಿಣಿ, ಸಮಾಧಾನದಿಂದಲೇ ತಾನು ಈ ಕಾರ್ಯವನ್ನು ನಿರ್ವಹಿಸುವೆನೆಂದೂ, "ಸಾಧ್ಯವಾದರೆ-ಸಮ್ಮತಿಸಿದರೆ ಕೃಷ್ಣವೇಣಿಯ ಉಪಚಾರಕ್ಕೂ ನಿಲ್ಲುವೆ" ನೆಂದೂ ಹೇಳಿ ಧೈರ್ಯವನ್ನುಂಟುಮಾಡಿದಳು. ಆಗಲೇ ಶಿಶುಸಂರಕ್ಷಣಾಭಾರವೂ ವಹಿಸಲ್ಪಟ್ಟಿತು. ಅವಳ ಸಂಕಲ್ಪಶಕ್ತಿಯಿಂದ ಅದು, ಕಷ್ಟವಾಗಿಯೂ ಕಾಣಲಿಲ್ಲ. ಏಕೆಂದರೆ,—ಶಿಶುವನ್ನು ತೊಟ್ಟಿಲಿನೊಡನೆ ತನ್ನ ಬಿಡದಿಗೇ ತಂದಿಟ್ಟಳು. ಕಾವಲಿಗೂ, ಜೋಗುಳವನ್ನು ಹಾಡಿ, ತೂಗಿನೋಡಿಕೊಳ್ಳಲೂ, ಅಳಕನಂದೆಯನ್ನೇ ನಿಲ್ಲಿಸಿದಳು. ಸಾಲದುದಕ್ಕೆ ವಿರಾಗಿಣಿಯ ಸಹಾಯಕ್ಕೆಂದು ನರಸಮ್ಮನೂ ಚಂದ್ರ

ಭಾಗೆಯೂ ಅಡಿಗಡಿಗೆ ಬಂದು ಕೇಳಿ ಹೇಳುವುದನ್ನು ಮಾಡುತ್ತಿದ್ದರು. ಸೌಬಲನೂ, ದಿನದಿನಕ್ಕೆ ಸಂಸ್ಕೃತನಾಗಿ ವಿರಾಗಿಣಿಯ ಪೂರ್ಣವಿಶ್ವಾಸಕ್ಕೆ ಪಾತ್ರನಾಗುತ್ತಿದ್ದನು

ಕೃಷ್ಣವೇಣಿಗೆ ಈಗ ನಿಜವಾಗಿಯೂ ರೋಗವು ಭಯಂಕರವಾಗಿ ತಿರುಗಿದೆ. ಮನೋರೋಗ-ಶಾರೀರರೋಗಗಳೆರಡರಿಂದಲೂ, ಈಗವಳು ಅತ್ಯುತ್ಕ್ರಮಣಾವಸ್ಥೆಯಲ್ಲಿ, ಸನ್ನಿಪಾತಜ್ವರದಲ್ಲಿ ನರಲುತ್ತಿರುವಳು, ರಘುನಾಥನೇನುಮಾಡಬೇಕು ? ಪತ್ನಿಯ ಶುಶ್ರೂಷೆಗಾಗಿ ಶಾಲಾಕಾರ್ಯವನ್ನೂ ಬಿಟ್ಟನು ಘನವೈದ್ಯನನ್ನೇ ಕರೆತಂದು ತೋರಿದನು. ವೈದ್ಯನು, ಘನವಂತನಾಗಿದ್ದನಲ್ಲದೆ, ಸತ್ಯಸಂಧನಾದ ರಘುನಾಥನಿಗೆ ಪ್ರಾಣಾಪ್ತಮಿತ್ರನಾಗಿದ್ದುದರಿಂದ ಕೃಷ್ಣವೇಣಿಯ ರಕ್ಷಣೆಯಲ್ಲಿ ನಿರತನಾಗಿ ಮೂರುದಿನಗಳ ವರೆಗೂ ಅತ್ತಿತ್ತ ಹೋಗದೆ ಔಷಧಾದಿಗಳನ್ನು ಕಾಲಕ್ಕೆ ಸರಿಯಾಗಿ ಕೊಡುತ್ತ ಬಂದನು. ಬಹು ಪ್ರಯಾಸದಿಂದ ಮೂರುದಿನಗಳ ಮೇಲೆ ರೋಗಿಯ ವಿಷಮಸ್ಥಿತಿ ಪರಿಹರವಾಗಿ, ದೇಹಸ್ಮೃತಿಯನ್ನುಂಟುಮಾಡಿತು. ರೋಗಿಗೆ ಜ್ಞಾನೋದಯವಾದಮೇಲೆ ವೈದ್ಯನೂ ತಕ್ಕಮಟ್ಟಿಗೆ ಎಚ್ಚರಿಕೆಯನ್ನು ಕೊಟ್ಟು, ಅಡಿಗಡಿಗೆ ಬಂದು ನೋಡಿಹೋಗುವೆನೆಂದೂ ಮಾತಿತ್ತು ನಡೆದನು

ಇಷ್ಟಾದರೂ ಕೃಷ್ಣವೇಣಿಯ ಮನೋರೋಗಕ್ಕೆ ಮಾತ್ರ ಮದ್ದಿಲ್ಲದಿದ್ದುದರಿಂದ ಮತ್ತೆ ಔಷಧೋಪಚಾರಗಳಲ್ಲಿ ಹಟವುಂಟಾಯ್ತು. ತನ್ನ ಕಂದನನ್ನು ವಿರಾಗಿಣಿ ಮುಟ್ಟಲಾಗದೆಂದು ತಡೆದಳು. ರಘುನಾಥನು, ನಯಭಯದಿಂದ ಪತ್ನಿಗೆ ಮನೆಯವರ ಅಲಸಭಾವವನ್ನೂ, ತನ್ನ ಅನಿವಾರ್ಯಗಳನ್ನೂ ಹೇಳಿ ಸಮ್ಮತಿಸುವಂತೆ ಮಾಡಿದನು. ಔಷಧವನ್ನು ಕುಡಿಯಿಸುವಾಗ ಭಯಪ್ರದ

ರ್ಶನವನ್ನೇ ಮಾಡುತ್ತಿದ್ದನು. ವಿರಾಗಿಣಿಯೂ ಶಿಶುವನ್ನು ದಿನಕ್ಕೆ ರಡುಬಾರಿ ಕರೆತಂದು ತಾಯಿಗೆ ತೋರಿಸಿಕೊಂಡು ಹೋಗುತ್ತಿದ್ದಳು.

ರಘುನಾಥನು ಮನೆಯಲ್ಲಿಲ್ಲದ ವೇಳೆಯಲ್ಲೆಲ್ಲಾ ಲಕ್ಷ್ಮೀದೇವಮ್ಮ ಶರಾವತಿಯರಿಬ್ಬರೂ ರೋಗಿಯ ಬಳಿಯಲ್ಲಿಯೇ ಕುಳಿತು ವಿರಾಗಿಣಿಯ ವಿಚಾರವಾಗಿ ದೂಷಿಸಿ ದೂಷಿಸಿ, ರೋಗಿಯ ಅಂತಸ್ತಾಪವನ್ನು ಹೆಚ್ಚಿಸುತ್ತಿದ್ದರು. ಇದೇ ರೋಗದಿಂದಲೇ ಕೃಷ್ಣವೇಣಿಯೊಮ್ಮೊಮ್ಮೆ ಜ್ಞಾನತಪ್ಪಿ ಜಡಳಾಗಿ ಮಲಗಿರುತ್ತಿದ್ದಳು.

ಈಬಗೆಯಾಗಿಯೇ ಹದಿನಯ್ದು ದಿನಗಳು ಕಳದುಪೋದವು. ಹದಿನಾರನೆಯದಿನ ರಾತ್ರಿ, ಕೃಷ್ಣವೇಣಿ ಹಾಸಿಗೆಯಲ್ಲಿ ನಿಶ್ಚೇಷ್ಟಿತೆಯಾಗಿ ಮಲಗಿದ್ದಳು. ತುಂಗಭದ್ರೆ, ಮಂಚದಕೆಳಗೆ ಹಾಸಿಗೆ ಹತ್ತಿ ಮಲಗಿ ನರಳುತ್ತಿದ್ದಳು. ಇವರಿಬ್ಬರಲ್ಲದೆ ಮತ್ತಾರೂ ಅಲ್ಲಿರಲಿಲ್ಲ. ಹೊತ್ತು ಇನ್ನೂ ಎಂಟು ಘಂಟೆಗೆ ವಿಾರಿರಲಿಲ್ಲ. ರಘುನಾಥನು ವೈದ್ಯನನ್ನು ನೋಡಲಿಕ್ಕೆಂದು ಹೋಗಿದ್ದನು: ರಘುನಾಥನನ್ನು ನೋಡುವುದಕ್ಕಾಗಿ ಮಕರಂದನು ಅತ್ಯಾವಸರದಿಂದ ಉಪ್ಪರಿಗೆಯನ್ನು ಹತ್ತಿ ಬಂದನು. ಮಕರಂದನ ಶಬ್ದವಾದುದನ್ನು ಕೇಳಿ ಮಲಗಿದ್ದ ತುಂಗಭದ್ರೆ, ಎದ್ದು ಕುಳಿತಳು. ಸೋರುತ್ತಿದ್ದ ಕಣ್ಣುಗಳಿಂದ ಆತನನ್ನೇ ಬಿರಬಿರನೆ ನೋಡಿದಳು. ಮಕರಂದನು ಮುಂದೆ ಬಂದು ರೋಗಿಯನ್ನು ನೋಡಿದನು; ಮತ್ತೆ ಸುತ್ತಲೂ ನೋಡಿದನು. ತುಂಗೆಯಲ್ಲದೆ ಮತ್ತಾರು ಇರಲಿಲ್ಲ. ಉಮ್ಮಳಿಸಿದನು. ಮತ್ತೆ ಏನನ್ನೋ ನೆನೆದು ಅಲ್ಲಿಯೇ ನಿಂತನು.

ತುಂಗ:—(ಕಂಪಿತಸ್ವರದಿಂದ) "ಅಪೂರ್ವಲಾಭ! ಬರಬಾರದೇಕೆ ?"

ಮಕರಂದ:—ರಘುನಾಥನೆಲ್ಲಿ ?

ತುಂಗ:—ವೈದ್ಯರ ಮನೆಗೆ ಹೋಗಿರುವನು. ನಿಂತಿರಲೇಕೆ ?

ಮಕ:—ಯಾರೂ ಇಲ್ಲದವೇಳೆಯಲ್ಲಿ ನಾನು ನಿಲ್ಲಲಾಗದು. ಹೋಗುವೆನು !

ತುಂಗ:—ಇಷ್ಟೇಕೆ ಬೇಸರ ?

ಮಕ:—ಬೇಸರವಲ್ಲ ; ಏಕಾಕಿಯಾಗಿ ರಾತ್ರಿಯವೇಳೆ ಇಲ್ಲಿ ನಿಲ್ಲುವುದೂ, ನುಡಿವುದೂ, ತಕ್ಕುದಲ್ಲ. (ತುಂಗಭದ್ರೆಗೆ ಮುಖವು ಕೆಟ್ಟಿತು, ನಾಲಗೆಯಲ್ಲಿ ದ್ರವವಾರಿತು, ತೊದಲು ನಾಲಿಗೆಯಿಂದ ಕೇಳಿದಳು.)—"ಇಷ್ಟುದಿನಗಳಮೇಲೆ ಈ ಬಿಡುನುಡಿ ! ಹಿಂದಿನ ವಾಗ್ದಾನವೇನಾಯ್ತು ? ಎಂದು ಹೇಳುತ್ತೆ ನಡುನಡುಗಿ ಕುಳಿತುಬಿಟ್ಟಳು.

ವಾಗ್ದಾನವೆಂಬ ಶಬ್ದವು ಕಿವಿಗೆ ಬಿದ್ದೊಡನೆಯೇ ಅಲಸತೆಯಿಂದೊರಗಿದ್ದ ಕೃಷ್ಣವೇಣಿಗೆ ಎಚ್ಚರವಾಯ್ತು ; ಕುತೂಹಲದಿಂದ ಅರೆಗಣ್ಣುತೆರದು ಮೆಲ್ಲನೊಮ್ಮೆ ನೋಡಿದಳು. ನೆಲವನ್ನೇ ನೋಡುತ್ತ ನಿಂತಿದ್ದ ಮಕರಂದನನ್ನೂ, ತನ್ನೆರಡುಕಯ್ಗಳಿಂದಲೂ ತಲೆಯನ್ನು ಬಿಗಿಯಾಗಿ ಹಿಡಿದು ಬುಸುಗುಟ್ಟುತ್ತ ಕುಳಿತಿದ್ದ ತುಂಗಭದ್ರೆಯಬಗೆಯನ್ನೂ ಕಂಡಳು. ವಿಸ್ಮಯಕೌತುಕಗಳಮ್ಮಡಿಯಾಗಲು ಮಲಗಿದವಳಂತೆಯೇ ಕದಲದೆ, ಕೆಮ್ಮದೆ, ಉಸಿರ್ಗರೆಯದೆ ನೋಡುತ್ತ ಮಲಗಿದಳು.

ತುಂಗಭದ್ರೆ, ತನ್ನತ್ತಿಗೆ ಇಹಲೋಕಸ್ಮರಣೆಯನ್ನೇ ಬಿಟ್ಟು, ಪರಲೋಕಯಾತ್ರೆಗಾಗಿ ಮುಂದಿನಮಾರ್ಗವನ್ನೇ ನೋಡುತ್ತಿರುವಳೆಂದೇ ನಂಬಿದ್ದುದರಿಂದ, ಪಾಪ ! ಏನುಬಲ್ಲಳು ? ಅತ್ತಿಗೆ ಕಣ್ದೆರೆದು ನೋಡುತ್ತಿರುವುದನ್ನಾಗಲೀ ಪ್ರಮಾಣಿಸುವುದಾಗಲೀ ತಿಳಿ

ಯದೆ, ಮತ್ತೊಮ್ಮೆ ಮಕರಂದವನ್ನೇ ಕೇಳಿದಳು,—" ಏಕೆ ಮಾತಿಲ್ಲ ?

ಮಕ:—(ಕೃಷ್ಣವೇಣಿ, ತನ್ನನ್ನು ನೋಡಿದುದನ್ನು ತಿಳಿದುದರಿಂದ ಉತ್ಸಾಹಿತನಾಗಿಯೇ ಸ್ಪಷ್ಟವಾಗಿ ಕೇಳುವಂತೆ) ಇನ್ನದರ ಮಾತನ್ನೆತ್ತಲಾಗದು ' ಒಮ್ಮೆ ಹಳ್ಳವಲ್ಲಿ ಬಿದ್ದು ನರಲುತ್ತಿದ್ದು ಹೇಗೋ ಮೇಲಕ್ಕೆ ಬಂದಿರುವ ನಾನು, ಮತ್ತೊಂದೂ ಹಳ್ಳಕ್ಕೆ ಬೀಳುವವನಾಗಿಲ್ಲ. ಕಾಲವು ಒಂದೇ ರೀತಿಯುಳ್ಳದ್ದಲ್ಲವೆಂದು ತಿಳಿ ' ಅಂಧಕಾರಾವೃತವಾಗಿ ಮೇಘಗರ್ಜನೆಯಿಂದ ಭಯಂಕರವಾಗಿದ್ದ ವರ್ಷಕಾಲವು ಕಳೆದುಹೋಗಿರುವುದು. ಈಗಲೀಗ ಗಗನಮಂಡಲದಲ್ಲಿ ಸೂರ್ಯಚಂದ್ರರು ಪ್ರಕಾಶಿಸುತ್ತಿರುವರು

ತುಂಗ —ಅಂತವರಿಂದ ನನಗೂ ಶಾಂತಿಯುಂಟಾಗದೇನು ?

ಮಕ —ಶಾಂತಿಯಾಗಬೇಕೆಂಬುದೇ ಸೂರ್ಯಚಂದ್ರರ ಸಂಕಲ್ಪವು. ಅವಕ್ಕೆಂದೇ ನಿನ್ನ ಮಾರ್ಗಾನುರೋಧಕರಾಗಿದ್ದ ಇತರ ಕ್ಷುದ್ರಗ್ರಹಗಳನ್ನೂ ತಮ್ಮ ಸ್ವಾಧೀನದಲ್ಲಿ ನಿಲ್ಲಿಸಿಕೊಂಡಿರುವುದು ! ಅದೇ ಉದ್ದೇಶದಿಂದೆಯೇ ನಿನ್ನ ಆತ್ಮಸಮಾಧಾನಕಾರಕವಾದ ಪ್ರತ್ಯೇಕ ಮಾರ್ಗವನ್ನು ಹೂಡುತ್ತಿರುವುದು !!

ತುಂಗ:—ನನ್ನ ಅಂತಸ್ತಾಪ—

ಮಕ:—ಇನ್ನಾ ಪ್ರಸ್ತಾವದಿಂದು ಫಲವಿಲ್ಲ. ಬಿಟ್ಟುಬಿಡು ! ಅಂತಸ್ತಾಪಶಮನಕ್ಕೆ ಪವಿತ್ರತಮೆಯಾದ ವಿರಾಗಿಣಿಯನ್ನು ಮರೆಹೊಕ್ಕು ಸೇವಿಸಬೇಕು.

ತುಂಗ:—(ಸಿಟ್ಟಿನಿಂದ) ಏನು ? ಅದೆಂದೂ ಸಾಗದು ! ಈ ಕಲ್ಪದಲ್ಲಿ ನನ್ನಿಂದಾಗದು !! ಆರಿಗಾಗಿ ನನ್ನ ಹಣದರಾಶಿಯೆಲ್ಲವೂ

ಸೂರೆಯಾಯ್ತೋ—ಆರನ್ನು ನನ್ನ ಪ್ರಾಣಕ್ಕೂ ಹೆಚ್ಚೆಂದು ಬಗೆದು ಪ್ರೀತಿಸುತ್ತಿದ್ದೆನೋ— ಆರಿಗಾಗಿಯೇ ನಾನು ಈವರೆಗೂ ಇಲ್ಲಿ ನಿಂತಿದ್ದೆನೋ ಅಂತಹರೇ ನನ್ನಲ್ಲಿ ಕೃತಘ್ನರಾಗುವಂತೆ ಮಾಡಿರುವವಳನ್ನು ಸೇವಿಸಬೇಕೇ? ಈವರೆಗೂ ಈ ವಿಚಾರವನ್ನು ಅಡಗಿಸಿದ್ದೆನು ; ಇಂದು ಕಾಲವೊದಗಿದೆ. ಮನೆಯಲ್ಲಿ ಮತ್ತಾರೂ ಇಲ್ಲ; ಸಾಯಲಿಕ್ಕೆ ಸಿದ್ಧವಾಗಿ ದೇವರಲ್ಲಿ ಹೊಣೆಯನ್ನು ಹೇಳುತ್ತ ಮಲಗಿರುವ ಇವಳಿಗೂ ದೇಹಸ್ಮೃತಿಯಿಲ್ಲ ನನಗಿಂದು ಭಯವಿಲ್ಲ. ಇವಳ ಈ ಅಕಾಲಮೃತ್ಯುವಿಗೂ ಆ ನಿರ್ಭಾಗ್ಯೆ—

ಮಕ:—(ಕ್ರೋಧದಿಂದ ಗಟ್ಟಿಯಾಗಿ ಕೂಗಿದನು) ಮುಂದೆ ಹೇಳುವೆ, ಜೋಕೆ! ಜ್ಯೋತಿಸ್ವರೂಪನಾದ ಭಗವಾನ್ ಭಾಸ್ಕರನ ಮಹೋಪಕಾರದಿಂದೆಯೇ ಜೀವಿಸುತ್ತಿದ್ದರೂ, ಆತನನ್ನೇ—"ಕ್ರೂರನೆಂದೂ, ಸಂತಾಪಕನೆಂದೂ, ಬಗೆಬಗೆಯಾಗಿ ದೂರುವ ಮೂರ್ಖರನ್ನು ಏನುಮಾಡಬೇಕು? ಭಗವತೀಸ್ವರೂಪ ಸಾಕ್ಷಾತ್ಕಾರವಾದಂತೆ"—ನಿಮ್ಮಗಳ ಕ್ಷೇಮಾಭ್ಯುದಯವನ್ನೇ ಕೋರುವ ವಿರಾಗಿಣಿಯಲ್ಲಿ, ಪಾತಕವನ್ನು ಆರೋಪಿಸುತ್ತಿರುವ ನಿನ್ನ ಅಕರ್ಮವಲ್ಲವೇ ನಿನ್ನನ್ನು ಈ ದಶೆಗೆ ತಂದಿರುವುದು? ಆಕೆ, ತ್ರಿಕರಣಶುದ್ಧಿಯಿಂದ ನಿಮ್ಮಗಳಿಗೆ ಹಿತಕಾರ್ಯವನ್ನೇ ಮಾಡುತ್ತಿದ್ದರೂ, ನಿಮ್ಮ ನಿಷ್ಠುರಚಿತ್ತಕ್ಕೇಕೆ ಬಾರದಿರುವುದು? ತುಂಗೆ! ಅಂದು ನಿನ್ನ ದುರ್ಬೋಧೆಯಿಂದಲ್ಲವೇ ನಾನು ನನ್ನ ಧರ್ಮಪತ್ನಿಯನ್ನೇ ಕಳೆದುಕೊಳ್ಳುತಿದ್ದುದು? ನಿನ್ನ ಚಾಡಿಯಿಂದಲ್ಲವೇ ನಾನು ಆ ಪವಿತ್ರಮೂರ್ತಿಯಲ್ಲಿಯೂ ಶಂಕಿತನಾಗಿ

ದ್ದುದು !! ನಿನ್ನಿಂದಲ್ಲವೇ ನಾನು ನನ್ನ ಸುಖದ ದಾರಿಯನ್ನೇ ಕಡಿಮಹಾಕುತ್ತಿದ್ದುದು ? ಆ ನನ್ನ ಹಿಂದಿನ ಅವಿಚಾರ ಕ್ಕಾಗಿ ಈಗ ನಾನು ಹೊಂದುತಿರುವ ಅನುತಾಪವನ್ನೂ ಸಹ ನೆಯಿಂದ ತಡೆಗಟ್ಟಿ, ನನ್ನ ಅಕಾರ್ಯಕ್ಕಾಗಿ ಈಗ ನಾನು ನನ್ನ ಪತ್ನಿಯಲ್ಲಿ ಪ್ರತಿ ಕ್ಷಣವೂ ಕ್ಷಮೆಯನ್ನು ಬೇಡುತ್ತಿ ರುವೆನು. ಈ ನನ್ನ ಅನುಭವದ ಘೋರಯಾತನೆಯನ್ನು ತಿಳಿದೇ ನನ್ನಂತೆಯೇ ಕೆಡುತ್ತಿದ್ದವರನ್ನೂ ದಾರಿಗೆ ತಂದು ತರುತ್ತಿರುವೆನು. ನನ್ನ ಸುಖದ ದಾರಿಯನ್ನು ಮತ್ತೆ ಪ್ರ ಕಾಶಪಡಿಸಿಕೊಟ್ಟ ವಿರಾಗಿಣಿಯನ್ನು ನಾನು ನನ್ನ ಇಷ್ಟ ದೈವವೆಂದೇ ಭಾವಿಸುತ್ತಿರುವೆನು ಇನ್ನೂ ಹೇಳಬೇಕೆ ?

ತುಂಗೆ ! ನಾನು ನಿನ್ನಲ್ಲಿ ದ್ರೋಹಿಯಾಗಿರುವೆನು : ನಿಜ ! ಆದರೆ, ಆ ನನ್ನ ದ್ರೋಹಚಿಂತನೆಗೆ ನೀನಲ್ಲವೇ ಕಾರಣಳು? ನೀನಂತು. ವಿಲಾಸ ವಿಭ್ರಮಾದಿಗಳಿಂದ ಮರುಳುಮಾಡಿದುದ ರಿಂದಲ್ಲವೇ ನಾನಂತು ವಿಧರ್ಮಿಯಾಗಿದ್ದುದು ? ಇದಕ್ಕಾಗಿ ನಾನು ನಿನ್ನನ್ನು ನಿಂದಿಸಿ ಫಲವಿಲ್ಲ. ನಾನೇನೋ ಅಪರಾ ಧಿಯೇ ಸರಿ. ಹಾಗೂ–ಮಹಾಪರಾಧಿಯಾಗಿರುವ ನಿನ್ನನ್ನೂ ಈಗ ತಿರಸ್ಕರಿಸದೆ ನಯಭಯದಿಂದ ಎಚ್ಚರಿಸುತ್ತಿರುವೆನು ! ಈ ನಿನ್ನ ಕಾಮಕ್ರೋಧಗಳನ್ನು ತಡೆದು ನಿಲ್ಲಿಸಲು ಪ್ರಯ ತ್ನಮಾಡು ! ಮೊತ್ತ ಮೊದಲು ಕಷ್ಟವಾಗಿದ್ದರೂ ಅಭ್ಯಾಸ ಬಲದಿಂದ ಸುಲಭವಾಗುವುದೆಂದು ತಿಳಿದು, ಪ್ರಯತ್ನಿಸು !! ವಿವೇಕವನ್ನು ಹಿಡಿ ! ಪರಸ್ವಾಪಹಾರವನ್ನು ಮಾಡಲೊಲ್ಲೆ ನೆಂದು ಕಂಕಣವನ್ನು ಕಟ್ಟಿ ನಿಲ್ಲು !! ಇನ್ನು ಸಾಕು ನಿಷ್ಠುರೆ ! ಈ ನಿನ್ನ ಅತ್ತಿಗೆ ಪಾತಕದಹೊರೆಯನ್ನು ಹೊತ್ತು

ಸಾಯುತ್ತಿರುವಳು. ನಿನ್ನಿಂದಲ್ಲವೇ ಇವಳ ಆತ್ಮನೂ ಮಾತ್ಸರ್ಯ ಕ್ರೋಧಗಳಿಂದ ಕಲುಷಿತನಾಗಿರುವುದು ? ಇನ್ನೂ ಹೇಳಬೇಕೋ ?

ತುಂಗಭದ್ರೆಯು ಮಾತನಾಡಲಾರದೆ ನಿಟ್ಟುಸಿರಿಡುತ್ತ ಕುಳಿತಳು. ಮಲಗಿದ್ದ ಕೃಷ್ಣವೇಣಿಗೆ "ಪಾತಕದಪೂರ"—"ಕಲುಷಿತೆ" ಎಂಬೀ ಶಬ್ದಗಳು ಕಿವಿಗ ಬಿದ್ದೊಡನೆಯೇ ಪುಟಹಾರುವಂತೆ ಮಾಡಿದುವು. ಬಿರುಗಣ್ಣಿಂದ ನೋಡುತ್ತ ಮಕರಂದನನ್ನು ಕುರಿತು, ಕ್ಷೀಣಸ್ವರದಿಂದ ಕೇಳಿದಳು. "ಪಾತಕದ ಹೊರ ! ಹೇಗೆ ? ಕಲುಷಿತವೇನು ? ಅಪ್ಪ !" (ತುಂಗಭದ್ರೆ, ಚಕಿತೆಯಾಗಿ ತಿರುಗಿನೋಡಿ ವಿವರ್ಣಮುಖದಿಂದ ವಿಕೃತಸ್ವರದಲ್ಲಿ),—"ಇದೇಕೆ ? ಅತ್ತಿಗೆ ಹೀಗೆ ಕೂಗುವ ? ಮಾತಾಡದೆ ಮಲಗು,"

ಕೃಷ್ಣ—ನಿನ್ನನ್ನು ಕೇಳಲಿಲ್ಲ" (ಮಕರಂದನನ್ನು ನೋಡಿ) ಅಪ್ಪ ! ಅದಾವುದು ? ಪಾತಕದ ಹೊರೆ ?

ಮಕ:—(ಮುಂದಕ್ಕೆರಡಡಿ ಸಮೀಪಿಸಿನಿಂದು) "ಅಮ್ಮ ! ಹೇಳಿದರೆ ನಂಬುವಿರಾ ?"

ಕೃಷ್ಣ:—ನಂಬುವೆನು.

ಮಕ:—ಹಾಗಿದ್ದರೆ ಕೇಳಿರಿ, ನಿಮ್ಮ ಸ್ವಾಮಿ, ನನ್ನ ಸನ್ಮಾನಿತ ಭ್ರಾತ ! ವಿರಾಗಿಣಿಯೇ ನನ್ನ ಪೂಜ್ಯಭಗಿನಿ !! ಅವರಿಬ್ಬರೂ ಸೂರ್ಯಾಗ್ನಿಗಳಂತೆ ಪವಿತ್ರಚರಿತರು ! ಅಂತಹ ಪರಿಶುದ್ಧರಲ್ಲಿಯೂ ಕಲಂಕವನ್ನು ಚಿಂತಿಸುತ್ತಿರುವುದು ಪಾತಕವಲ್ಲವೆ ? ಮಾತ್ಸರ್ಯ ಕ್ರೋಧಲೋಭದ ದಶೆಯಿಂದೆ ಈ ದುಃಸ್ಥಿತಿಯಲ್ಲಿ ನರಲುತ್ತಿರುವುದೇಕೆ ? ತಾಯಿ ! ಮತ್ತೂ ಹೇಳುವೆನು ಕೇಳಿರಿ. ಆ ವಿರಾಗಿಣಿಯಿಂದಲೇ ನಾನು ನನ್ನ ಪತ್ನಿಯನ್ನು ಮತ್ತೆ ಪಡೆದೆನು ! ನನ್ನ ಪತ್ನಿಯಾದರೂ ಇವಳನ್ನು ಮಾ

ನವೀ ವ್ಯಕ್ತಿಯೆಂದು ಭಾವಿಸುತ್ತಿಲ್ಲ. ದೇಶೋದ್ಧಾರಕ್ಕೆಂದು ಜನ್ಮವೆತ್ತಿರುವ ದೈವಿಕಶಕ್ತಿಯೆಂದೇ ಭಾವಿಸಿ ನಾವು ಆಕೆಯನ್ನು ನಿರಂತರವೂ ಸಂಭಾವಿಸುತ್ತಿರುವೆವು !

ಧರ್ಮಭಗಿನಿ ? ಇನ್ನಾದರೂ ನಿಮ್ಮ ಶಂಕಾತಂಕಗಳನ್ನು ದೂರ ಮಾಡಿರಿ: ನಾನು ನಿಮ್ಮ ರೋಗಕ್ಕೆ ಮೂಲವೇನೆಂಬುದನ್ನು ಈ ದಿನವೇ ನನ್ನ ಪತ್ನಿಯಿಂದರಿತೆನಾದುದರಿಂದ, ನಿಜಾಂಶವನ್ನು ನಿವರ್ಶನಕ್ಕೆ ತರಲು, ಈಗಲೇ ಸುಸಮಯವೆಂದೆಣಿಸಿ ಬಂದೆನು. ಪ್ರತ್ಯಕ್ಷಪ್ರಮಾಣದಿಂದೆ ನೀವೇ ನಿಜವನ್ನು ತಿಳಿದಿರುವಿರಿ ? ಆದರೂ, ನನ್ನ ಆತ್ಮಸಂತೋಷಕ್ಕಾಗಿ ಹೇಳುವೆನು. ನಮ್ಮ ವಿರಾಗಿಣಿ, ಸನ್ಯಾಸಿನಿ !' ಸತ್ಯವಾಗಿಯೂ ಬಾಲಬ್ರಹ್ಮಚಾರಿಣೀಸನ್ಯಾಸಿನಿ '!!

(ಮುಹಡಿಯ ಪಂತದಕಡೆ ಮಕರಂದನ ಕಂಠಕ್ಕೆ ಪ್ರತಿಯಾಗಿ ಮತ್ತೊಂದು ಕಂಠವೂ ಸೇರಿ—" ಸತ್ಯ ಸತ್ಯ !' ವಿರಾಗಿಣಿ, ಸನ್ಯಾಸಿನಿ ' ಪ್ರಮಾಣಮಾಡುವೆ '' ಆವಳೇ ಸನ್ಯಾಸಧರ್ಮದ ಸಾರಮಣಿ !'' " ಎಂಬ ವಾಙ್ಮಾಲೆ ಪದಬಂಧುಪವಾಗಿ, ಉದ್ಘೋಷಿತವಾಯ್ತು. ಮಕರಂದನು, ತಿರುಗಿನೋಡಿದನು. ನಗುನಗುತ್ತೆ ಬಂದ ಸಾಬಲನೂ ಮತ್ತೆ ಮತ್ತೆ ಪ್ರಮಾಣಪುರಸ್ಸರವಾಗಿ ಹೇಳುತ್ತಿರುವುದನ್ನು ಕೇಳಿ ತಿಳಿದು ತಲೆದೂಗಿದನು. ಮತ್ತೂ, ಮಕರಂದನು ಕೈಹಿಡಿದು,—"ಭಲೆ ' ಸಾಬಲ ! ಸಕಾಲದಲ್ಲಿಯೇ ಬಂದಿರುವೆಯಲ್ಲವೆ ? ನಡೆನುಡಿಗಳಲ್ಲಿ ನಾವಿಬ್ಬರೂ ಸಮಾನರಲ್ಲವೇ ಸಾಬಲ ? ವಿದ್ಯಾವಿಚಾರಗಳಲ್ಲಿ ಕೆಲವುವೇಳೆ ನಾನು ಮುಂದಾಗುತಿದ್ದರೂ ಅದೂ ಅವಿಚಾರಾಂಧತೆಯಿಂದ ಮಲಿನವನ್ನೇ ಹೊಂದಿದ್ದುದು, ಈಗಲೀಗ ಅದು ಬೆಳಗುತ್ತಿರುವುದು. ಆದರೆ, ನೀನು ಇನ್ನೂ ತಿಳಿ

ವನ್ನು ಹೊಂದಿರುವಿಯೋ ಇಲ್ಲವೋ ಹೇಳಲಾರೆನು ! ಇನ್ನಾದರೂ ಅನುತಾಪಹೊಂದಿ ಅಣ್ಣನಲ್ಲಿ ಕ್ಷಮೆಯನ್ನು ಕೇಳು. ಅವಿವಾಹಿತನಾಗಿಯೇ ಹೀಗೇಕೆ ಪಾಮರಬ್ರಹ್ಮಚಾರಿಯೆನಿಸಬೇಕು ? ಇದೆಲ್ಲವೂ ನಿನ್ನಲ್ಲಿ ಸಾದರದಿಂದ ಹೇಳಿದ ನನ್ನ ಅನುಭವದ ಮಾತೆಂದೆಣಿಸು, ಕೋಪಿಸಬಾರದು "

ಸೌಬಲ.—(ಕಿರುನಗೆಯಿಂದ ಮಕರಂದನ ಬೆನ್ನತಟ್ಟುತ್ತ) " ಮಕರಂದ ಮಿತ್ರ ! ನಿನ್ನ ಮಾತುಗಳೆಲ್ಲವನ್ನೂ ನಾನು ಸನ್ಮಾನಿಸುತ್ತಿರುವೆನು. ನನ್ನನ್ನು ಮೊದಲಿನ ಸೌಬಲನೆಂದು ತಿಳಿಯದಿರು. ರಾಜಶೇಖರನ ಕ್ಷಮಾಪಣಾ ಪತ್ರವು ವಿರಾಗಿಣಿಗೆ ಬಂದು ಮುಟ್ಟಿದಂದಿನಿಂದಲೇ ನನ್ನ ಮನವು ಪರಿವರ್ತಿತವಾಗುತ್ತ ಬಂದಿದೆ ಅಣ್ಣನಲ್ಲಿ ಕ್ಷಮೆಯನ್ನೂ ಕೇಳಿರುವೆನು, ಜ್ಞಾನಶಾಸ್ತ್ರ ವಿಚಾರದಲ್ಲಿ ವಿರಾಗಿಣಿಯನ್ನು ಉಪಾಧ್ಯಾಯಿನಿಯೆಂದೇ ಸಂಭಾವಿಸುತ್ತ ಪ್ರತಿಯೊಂದು ಕಾರ್ಯವನ್ನೂ ಅವಳ ಹಿತಸೂಚನಾನಂತರವೇ ಮಾಡುತ್ತಿರುವೆನು. ಇಲ್ಲಿ ನಡೆದುದೆಲ್ಲವನ್ನೂ ನೋಡಿ, ನೀನು ಹೇಳಿದ ಪ್ರಮಾಣವಾಕ್ಯಗಳನ್ನೂ ಕೇಳಿದೆನದರಿಂದ ನಾನೂ ಈ ಪ್ರಮಾಣದಲ್ಲಿ ಸೇರಬೇಕೆಂದು ಬಂದೆನು,

ತುಂಗಭದ್ರೆ, ಗಡಗಡನೆನಡುಗುತ್ತ ಮೆಲ್ಲನೆದ್ದು ಹೊರಡಲನುವಾದಳು . ಆದರೆ, ಸೌಬಲನು ಅಡ್ಡವಾಗಿ ನಿಂದು ತಲೆದೂಗುತ್ತ ವ್ಯಂಗ್ಯಸ್ವರದಿಂದ,—" ತುಂಗೆ, ಎಲ್ಲಿಗೆ ಹೊರಟಿರುವೆ ? ಇನ್ನೆಲ್ಲಿಗೆ ಹೋಗಿ ಈ ಅಪವಾದದಿಂದ ಜಾರಬೇಕೆಂದಿರುವೆ ? ಯಾರನ್ನು ಸೇರಲು ಹೋಗುವೆ ? ನಿನಗೆಲ್ಲಿಯೂ ಆಶ್ರಯವಿಲ್ಲ ; ಮತ್ತೊಂದು ಕಡೆಯ ಗುರಿಯನ್ನುಳಿದು ಇಲ್ಲಿಯೇ ಇದ್ದರೆ ಗತಿಗಾಣುವೆ ? ಇಲ್ಲದಿದ್ದರೆ ಗತಿಗಾಣದೆ ಮತಿಗೆಟ್ಟು ಕಾಡುಪಾಲಾಗುವೆ.

ತುಂಗೆ! ಇನ್ನಾದರೂ ಎಚ್ಚತ್ತಿರು! ನಾನೂ ಮಕರಂದ ನೂ-ನಮ್ಮ ನಮ್ಮ ಅನುಭವವನ್ನೇ ಮುಂದಿಟ್ಟು ಗೃಹಿಗಳನ್ನೂ, ಬ್ರಹ್ಮಚಾರಿಗಳನ್ನೂ ಕಾಲೋಚಿತನೀತಿಯಿಂದ ನಿನ್ನಂತಹ ನಟ ನಗೆ ಮರುಳಾಗದಂತೆ ಎಚ್ಚರಿಸುವೆವು. ನೀನಾದರೂ ಇನ್ನು ಮುಂದೆ ನಿನ್ನ ಹಿಂದಿನ ತಪ್ಪಿಗಾಗಿ ಮರುಕಗೊಂಡು, ನಿನ್ನಂತೆ ಉನ್ಮಾದಿನಿಯರಾಗಿರುವ ವಿರಹಿಣಿಯರನ್ನೂ ನಿನ್ನ ಅನುಭವಸಾರ ದಿಂದೆಚ್ಚರಿಸಿ ದಾರಿಗೆ ತರಲು ಪ್ರಯತ್ನಪಡು. ನಿನ್ನನ್ನು ನೋಡಿದ ಬಳಿಕಾದರೂ ಮತ್ತಿನ ನಮ್ಮ ಯುವಸ್ತ್ರೀಜನಾಂಗದ ಮರುಳಾಟಕ್ಕೆ ತಕ್ಕ ಮದ್ದು ದೊರೆದಂತಾಗಲಿ! ಮತ್ತೆ ಮತ್ತೆ ಹೇಳುವೆನು? ಈಗ ನಿನಗೆ ಆಶ್ರಯವಿನ್ನೆಲ್ಲಿಯೂ ದೊರೆಯದು. ವಿರಾಗಿಣಿಯನ್ನೇ ಸೇರು! ಅವಳಲ್ಲಿಯೇ ಮರೆಹೊಕ್ಕು, ನಿನ್ನ ದೌರ್ಜನ್ಯರೋಗಕ್ಕೆ ಶಾಂತಿ ಯನ್ನು ಹೊಂದು. ಇನ್ನೇನು ಹೇಳಲಿ?

(ತುಂಗಭದ್ರೆ ನಿಲ್ಲಲಾರದೆ ಕಷ್ಟದಿಂದ ಹಂತವನ್ನಿಳಿದು ಹೋಗಿ, ಕೆಳಗೆ ಬಿದ್ದುಬಿಟ್ಟಳು; ಕೃಷ್ಣವೇಣಿ ಸಂಭ್ರಾಂತೆಯಾಗಿ ನೋಡುತ್ತಿದ್ದಳು)

ಮಕ:—ಸೌಬಲ! ನಿಮ್ಮ ಅತ್ತಿಗೆಗೆ ಇನ್ನೂ ವಿರಾಗಿಣಿಯ ವಿಚಾ ರವಾಗಿ ಸಂಶಯವಿರಬಹುದು! ನೀನೂ ಹೇಳು.

ಸೌಬಲ:—ಮಿತ್ರ! ಹೇಳುವುದಿನ್ನೇನು? ಸತ್ವಕ್ಕೆ ಸರ್ವತ್ರ ವಿಜ ಯವಲ್ಲವೆ? ಸತ್ವವನ್ನು ಮತ್ತಾವ ರೋಗಗಳು ಮುಟ್ಟು ವುವು? ಉರಿಯಲ್ಲಿ ಹೆಣಗಾಡಲು ಬರುವ ಮಿಡಿತೆಗಳೇನಾ ಗುವುವು? ಅಷ್ಟನ್ನು ಆಲೋಚಿಸಿ! ವಿರಾಗಿಣಿ, ಸನ್ಯಾಸಿನಿ ಯರ ಸಾರಮಣಿ! ನನ್ನ ಉಪಾಧ್ಯಾಯಿನಿ!! ವಿಶ್ವಭಗಿನಿ!!! ಮತ್ತೂ ಹೇಳಬೇಕೆ?

ಕೃಷ್ಣ—ಹೇಗೆ ಹೇಳುವುದು ?

ಸೌಬಲ:—ಹೇಗೆ ಹೇಳುವೆನೆ? ಅತ್ತಿಗೆ! ನೀವು ಅವಳನ್ನು ಬಾಲ್ಯದಿಂದ ಬಲ್ಲವಳಾಗಿದ್ದೂ, ಹೀಗೆ ತಿರಿಗಿಬಿದ್ದಿರುವುದು ನಿಮ್ಮ ದೌರ್ಜನ್ಯದಿಂದಲ್ಲದೆ ಬೇರಿಲ್ಲ. ಅವಳ ನಡೆ, ನುಡಿ, ವಿಚಾರಗಳೆಲ್ಲವನ್ನೂ ನಾನು ಪ್ರತ್ಯಕ್ಷ ಪರೋಕ್ಷಗಳಿಂದೆಯೂ ತಿಳಿದಿರುವೆನು. ಇನ್ನಾದರೂ ಶಂಕಾತಂಕಗಳನ್ನು ದೂರಮಾಡಿ ಅಣ್ಣನು ನಿರ್ದೋಷಿಯೆಂದೂ, ವಿರಾಗಿಣಿ ನಿರ್ಮಲೆಯೆಂದೂ ನಂಬಬಹುದಲ್ಲವೆ ?

ಕೃಷ್ಣ—(ಆನಂದೋದ್ರೇಕದಿಂದ ಗದಗದಿಸುತ್ತ ಸೋರುತ್ತಿದ್ದ ಕಣ್ಣುಗಳಿಂದ ಮಕರಂದನನ್ನೂ ಸೌಬಲನನ್ನೂ ನೋಡುತ್ತ ಕ್ಷೀಣಸ್ವರದಿಂದ ನಿಧಾನವಾಗಿ ;—ಅಪ್ಪಾ ! ಸಾಯುತ್ತಿದ್ದವಳನ್ನು ಅಮೃತಪ್ರಾಶನದಿಂದ ಉಳಿಸಿರುವಿರಿ ' ನಿಮ್ಮಿಬ್ಬರನ್ನೂ ನಾನು ಹೇಗೆ ಸನ್ಮಾನಿಸಬೇಕೋ ತಿಳಿಯದು.

ಸೌಬಲ:—ಅತ್ತಿಗೆ! ನಮಗೆ ನಿಮ್ಮ ಸನ್ಮಾನವೇನೂ ಬೇಕಾಗಿಲ್ಲ. ನಿಜಕ್ಕೆ ಬೆಲೆಯನ್ನು ಕಟ್ಟುವುದೇ ಬೇಕಾದುದು ! ನಾವಿನ್ನು ಹೊರಡುವೆವು.

ಮಕ:—ಅಮ್ಮ ! ನಾವು ಬಂದಿದ್ದುದನ್ನೂ–ನಡೆದುದು–ನುಡಿದುದೆಲ್ಲವನ್ನೂ ನಿಮ್ಮ ಸ್ವಾಮಿಗೆ ಹೇಳಿರಿ ! ನಾವಿನ್ನು ಹೊರಡುವೆವು.

ಕೃಷ್ಣ:—ಅಪ್ಪ ! ಪ್ರತ್ಯಕ್ಷಪ್ರಮಾಣದಿಂದ ನನ್ನ ರೋಗವನ್ನೇ ಹೋಗಲಾಡಿಸಿದ ನಿಮಗೆ ನನ್ನಿಂದೇನೂ ಪ್ರತ್ಯುಪಕಾರವಿಲ್ಲ. ಇದೂ ಆಗದೆನ್ನಲೆ ? ಬಂದೊಡನೆ ಹೇಳುವೆನು.
(ಮಕರಂದನು ಸೌಬಲನ ಕೈಹಿಡಿದು ಕರೆದೊಯ್ದನು.)

ಸುಹೃತ್ಸಹೋದರರೇ! ಪ್ರಿಯಸೋದರಿಯರೇ!!

ಶ್ಲೇಷ್ಮವ್ಯಾಧಿಗ್ರಸ್ತವಾದ ದೃಷ್ಟಿಗಳಿಂದ, ಎಂತೆಂತಹ ಪ್ರಮಾದಗಳುಂಟಾಗುವುವೆಂಬುದೂ, ಶಾಂತಿಕ್ಷಮಾಶಸ್ತ್ರಗಳಿಂದ ಅಂತಹ ಶ್ಲೇಷ್ಮರೋಗವನ್ನು ಹೇಗೆ ಆವಮಾರ್ಗದಲ್ಲಿ ನಿವಾರಿಸಬಹುದೆಂಬುದೂ, ವ್ಯಾಧಿಮೂಲಕ ಶಕ್ತಿಹೀನಗಳಾಗಿದ್ದ ದೃಷ್ಟಿಗಳಿಗೆ ಶಕ್ತಿಪ್ರದಗಳಾದ ಸುಲೋಚನಗಳಾವುವೆಂಬುದೂ, ಇಂದಿನ ಪ್ರತ್ಯಕ್ಷ ಪ್ರಮಾಣದಿಂದ ತಿಳಿಯಲಾದೀತಲ್ಲವೇ ? ಈ ರೋಗದ ಮಹತ್ತಲ್ಲವೇ ನಮ್ಮ ಆರ್ಯಜನಾಂಗದಲ್ಲಿ, ಒಂದು ಪುಂವ್ಯಕ್ತಿಯಿದಿರೆ, ಮತ್ತೊಂದು ಸ್ತ್ರೀವ್ಯಕ್ತಿ ನಿಂದು ನುಡಿವರೆ—ಸಾಕು ; "ಆ ವ್ಯಕ್ತಿದ್ವಯದ ಮನೋಧರ್ಮವೆಂತಿರುವುದು ? ಪ್ರಕೃತಿ, ಸ್ಥಿತಿ ಭಾವಗಳೇನಾಗಿರುವುವು ?" ಎಂಬೀ ವಿಚಾರಗಳಾವುದಕ್ಕೂ ಅವಕಾಶವನ್ನೇ ಕೊಡದೆ ಆ ಎರಡು ವ್ಯಕ್ತಿಗಳಲ್ಲಿಯೂ, ಅಬದ್ಧಸಂಬಂಧ ಕಲ್ಪನೆಯನ್ನು ಮಾಡಿಟ್ಟು, ಅದರಿಂದ ಅವುಗಳನ್ನು ಘಾತಿಸಲು ಪ್ರಯತ್ನಿಸುವುದೂ ; ಅದಕ್ಕಾಗಿ ಆಪ್ತೇಷ್ಟರನ್ನೂ ಸಂತಾಪಾಗ್ನಿಗೆ ತುತ್ತಾಗಿಸಿ, ತಾವು ನಲಿದಾಡುವೆವೆಂದೆಣಿಸಿರುವುದೂ, ವಿಶೇಷ ಪರಿತಾಪಜನಕವಾಗಿರುವುದು. ಇಂತಹ ಅಸಂಬದ್ಧಪ್ರಲಾಪಿಗಳನ್ನು, ವಿಷಮಸನ್ನಿಪಾತರೋಗಗ್ರಸ್ತ ಮಾನವರನ್ನು ಆವರಿಸಿರುವ ದುರಭಿಮಾನವನ್ನೇನೆಂದು ಹೊಗಳುವ ? ಈ ದುರಭಿಮಾನವಿನ್ನೆಂದು, ಏತರಿಂದ, ಹೇಗೆ ನಾಶವಾಗಬಹುದೋ ಅವರಿನ್ನೇತರಿಂದ ಶಾಂತಚಿತ್ತರಾಗಿ ಸೃಷ್ಟಿನಿಯಮವನ್ನು ಪುಷ್ಟೀಕರಿಸುವುದರಿಂದ ಸುಖಿಸಬಹುದೋ ನಮಗೆಂತೂ ತಿಳಿಯಲಳವಲ್ಲವಾಗಿದೆ ; ಮಾಡತಕ್ಕುದೇನು ? ಮಾತೃಕಟಾಕ್ಷವೇ ಸುಬೋಧಾಮೃತವನ್ನು ವರ್ಷಿಸಬೇಕಲ್ಲವೆ ? (ಅಂತಾಗಲಿ)

|| ಶ್ರೀಃ ||

## ಏಕಾದಶ ಪರಿಚ್ಛೇದ.

(ಸಂಭ್ರಮ)

ಮಹೋದಯರೇ !

ಜನ್ಮಾಂಧನಿಗೆ ಹಠಾತ್, ದೃಷ್ಟಿಶಕ್ತಿಯುಂಟಾದಂದು ಏನಾಗುವುದು ? ಅಂದು ಆತನ ಸಂತೋಷ, ವಿಸ್ಮಯ ಕೌತುಕಗಳಿಗೆ ತುದಿಯುಂಟೆ ? ಮೊದಲುಂಟೆ ? ಆದರೆ, ಜನ್ಮಾಂಧನಲ್ಲದೆ ಮಧ್ಯಕಾಲದಲ್ಲಿ ಅಂಧನಾದವನು, ತನ್ನ ಅಕರ್ಮದಿಂದ, ಕಣ್ಣುಹೋಗಲಾಡಿಸಿಕೊಂಡಾತನು, ಮುಂದೆ ಅದೇ ಕಣ್ಣನ್ನೇ ಪಡೆದವನಾದರೆ, ಆತನ ಮನೋಭಾವವೇನಾಗಬಹುದು , ತನ್ನ ಮೊದಲ ಅನುಭವವೂ, ಬಳಿಕ, ತಾನಾಗಿ ಕುರುಡನಾಗಿ ನರಲುತ್ತಿದ್ದ ಕಷ್ಟದೆಸೆಯನ್ನು ಕುರಿತು ಸಂಕಟವೂ, ಮತ್ತೆ ಪಡೆದಂದು ವಿಸ್ಮಯಾನಂದವೂ ಉಂಟಾಗುವುದರಲ್ಲಿ ಅತಿಶಯವಿಲ್ಲವಷ್ಟೆ ; ನಮ್ಮ ಕೃಷ್ಣವೇಣಿಯು ಕಣ್ದೆರೆದುದೂ ಹಾಗೆಯೇ !!

ಕೃಷ್ಣವೇಣಿ, ಈಗ ಮೊದಲಂತಿಲ್ಲ. ಪ್ರೀತಿ, ಗೌರವ, ವಿಸ್ಮಯ, ಕೌತುಕ, ಪರಿತಾಪಗಳಿಂದ ಕ್ಷಣೇಕ್ಷಣೇ ವರ್ಣಭೇದದಿಂದ ಕಂಗೊಳಿಸುತ್ತಿರುವಳು. ಆವ ಸ್ವಾಮಿಯ ದರ್ಶನ ಸ್ಪರ್ಶನ ಸ್ಮರಣಾದಿಗಳು ಅಂತಸ್ತಾಪಕ್ಕೆ ಕಾರಣಗಳಾಗಿದ್ದುವೋ, ಅದೇ ಸ್ವಾಮಿಯ ಆಗಮನವೇ ಈಗ ಪ್ರತೀಕ್ಷಿತವಾಗಿರುವುದು. ಆತನ ಪದತಲದಲ್ಲಿ ಆನತೆಯಾಗಿ ಅಪರಾಧಕ್ಷಮಾ ಪ್ರಾರ್ಥನೆಯಿಂದ

ಮುಕ್ತಳಾಗಬೇಕೆಂಬ ಆತುರವು ಹೆಚ್ಚುತ್ತೆ, ಕ್ಷಣವನ್ನೇಯುಗ ದಂತೆ ಮಾಡಿರುವುದು. ಅವಳ ಕಣ್ಣುಗಳಿಂದ ತಡೆಯಿಲ್ಲದೆ ಸುರಿದು ಹೋಗುತ್ತಿದ್ದ ಶೋಕಾಶ್ರುವೇ ಇಂದು ಆನಂದಾಶ್ರುವಾಗಿ ಪರಿಣ ಮಿಸಿರುವುದು. ಮತ್ತೇನು? ಕೃಷ್ಣವೇಣಿ, ವಿರಾಗಿಣೀ ರಘು ನಾಥರ ಆಗಮನಾಕಾಂಕ್ಷಿಣಿಯಾಗಿದ್ದಳೆಂದರೆ ಸಾಕಾಗಿದೆ.

ಕೃಷ್ಣವೇಣಿ ನಿರೀಕ್ಷಿಸುತ್ತಿದ್ದಂತೆಯೇ ಕ್ಲಿಪ್ತಪ್ರಕಾರ ಶಿಶುಸಹಿತೆಯಾದ ವಿರಾಗಿಣಿ, ಅಳಕನಂದೆಯೊಡನೆ ಬಂದಳು. ವಿರಾ ಗಿಣಿಯನ್ನು ನೋಡಿ ಕೃಷ್ಣವೇಣಿಯೂ ಸಂತೋಷಿಸಿದಳು. ಮಾತನಾಡೆಹೋದಳು, ಆದರೆ ಮಾತು ಹೊರಡದು, ನಾಲಗೆ ತೊದಲುವುದು. ತಡೆಯಲಾರದೆ ಕಯ್ಸಾಡಿದಳು.

ವಿರಾಗಿಣಿ:—(ಮಂಚದಬಳಿಗೆ ಬಂದು ನಿಂದು, ಮಗುವನ್ನು ತಾಯ ಮಗ್ಗುಲಲ್ಲಿ ಮಲಗಿಸಿ ಕೃಷ್ಣವೇಣಿಯ ಕೈಹಿಡಿದು.—"ಅಕ್ಕಾ! ಕೂಸನ್ನು ಕರೆತಂದಿರುವೆನು. ನೋಡುವು ದಿಲ್ಲವೆ?

ಕೃಷ್ಣ:—ವಿರಾಗಿಣಿಯ ಕೈಹಿಡಿದೆಳೆದು ಮಂಚದಮೇಲೆ ಕುಳ್ಳಿರಿ ಸಿಕೊಂಡಳು; ಆಗಳೂ ಮಾತಾಡಲಾರದೆ ಸೋರುತ್ತಿದ್ದ ಕಣ್ಗಳಿಂದೆ ಪ್ರೇಮಪೂರಿತೆಯಾಗಿ ನೋಡುತ್ತಿದ್ದಳು.

ವಿರಾಗಿಣಿ:—(ಚಕಿತೆಯಾದಳು. ಕೃಷ್ಣವೇಣಿಯ ಸದಯವೀಕ್ಷ ಣವನ್ನು ಇವಳೆಂದೂ ನೋಡಿರಲಿಲ್ಲ. ಇಂದಿನ ಪರಿವರ್ತ ನದಿಂದೆ ಚಕಿತೆಯಾಗುವುದು ಅತಿಶಯವೆ! ಮಲಗಿದ್ದವಳ ಹಣೆಯಮೇಲೆ ಕಯ್ಯಿಟ್ಟುನೋಡಿದಳು. ದೇಹಸ್ಥಿತಿಯಲ್ಲಿ ವ್ಯತ್ಯಾಸವೇನೂ ಇರಲಿಲ್ಲವಾದರೂ, ದೇಹವಾದ್ಯಂತವೂ ಗದಗದಿಸುತ್ತಿದ್ದುದನ್ನು ನೋಡಿ ಶಂಕಿಸಿ;)—"ಅದೇಕೆ

ಕಣ್ಣೀರು ಅಕ್ಕಾ! ಮೈಯ್ಯ ನಡಗುತ್ತಿರವುದೇಕೆ ? ಇಂದೇಕೆ ಮುಖವು ಇಷ್ಟು ಬಿಳುಪೇರಿರುವುದು ? ಬಾಯಾರುತ್ತಿರುವುದೇಕೆ ? ಏನಾಗಿವೆ ? ಹೇಳುವುದಿಲ್ಲವೆ ? ನನ್ನನ್ನೇಕೆ ಕುಳ್ಳಿರಿಸಿಕೊಂಡಿರುವೆ ?

ಕೃಷ್ಣ—(ಕಂಪಿತಸ್ವರದಿಂದ) "ನಾನು ಇಂದು—

ವಿರಾ—ಎಚ್ಚರಿಕೆ! ಅಕ್ಕಾ! ಅಭದ್ರವಾಕ್ಯವೇನಾದರೂ ಬಂದರೆ ನಾನು ಇಲ್ಲಿ ನಿಲ್ಲಲಾರೆನು.

ಕೃಷ್ಣ.—ಅಭದ್ರವಲ್ಲ; ವಿರಾಗಿಣಿ! ಅನುತಾಪವೇ!! ನಾನು ನಿನ್ನ ಮೊದಲಿನ ಅಕ್ಕನಲ್ಲದೆ ಬೇರಿಲ್ಲ. ನಡುಗಾಲದ ಕರುಬುವಿಕೆಗಾಗಿ ನಾನು ನಿನ್ನಲ್ಲಿ ಕ್ಷಮೆ ಬೇಡುತ್ತಿರುವೆನು.

ವಿರಾ:—(ಸಾಶ್ರುನಯನೆಯಾಗಿ, ಅನುಕಂಪಿತಸ್ವರದಿಂದೆ) ಅಕ್ಕ! ಕ್ಷಮೆಯನ್ನು ಬೇಡಲು ನೀನಾರು ? ಕ್ಷಮಿಸಲರ್ಹತೆಯುಳ್ಳ ನಾನಾರು ? ನೀನು ಬೇಡುವುದೂ, ನಾನು ನೀಡುವೆನೆಂದಾಡುವುದೂ ತಕ್ಕದೇ ? ಎಂತಾದರೂ ನೀನು ನನಗೆ ಹಿರಿಯಕ್ಕನಾಗಿರುವೆ? ಹೇಳಿಕೆ ಕೇಳಿಕೆಯಲ್ಲಿ ತಿಳಿದ ಕೆಲವು ವಿಚಾರಗಳಿಂದ ಒಂದೆರಡು ಬಿರುನುಡಿಯಾದರೇನಾಯಿತೆನ್ನುವೆ ? ಹಾಗೂ ಇಂದಿನವರೆಗೂ ನಡೆದ ವಿಚಾರಗಳಿಂದೆ ಲೋಕಾನುಭವವನ್ನು ತಿಳಿಯಲು ಎಷ್ಟು ಅನುಕೂಲವಾಗಿದ್ದುದು ? ಬೇರೆಬೇರೆಯಾಗಿ ಬಗೆದೇಕೆ ಹೀಗಾಗುತ್ತಿರುವೆ ? ನಾನೆಂದಾದರೂ ನಿನಗೆ ಇದಿರಾಡಿದ್ದರೂ ನೀನದನ್ನು ಕ್ಷಮಿಸಬೇಕು ? ಅಷ್ಟಲ್ಲದೆ ಕ್ಷಮಿಸಬೇಕಾದವಳು ನಾನಲ್ಲ!

ಕೃಷ್ಣ:—ತಂಗಿ! ನಿನ್ನ ಈ ಅಂತಃಕರಣದ ಮಾತುಗಳು, ನನ್ನ ಪ್ರತಿಯೊಂದು ರಕ್ತನಾಳದಲ್ಲಿಯೂ ಸುತ್ತುತ್ತಿರುವುದು.

ಈಗ ನಾನು ಹೇಗಾಗಿರುವೆನೆಂಬುದನ್ನು ನಿನಗೆ ಹೇಗೆತಾನೇ ತಿಳಿಯೆಹೇಳಲಿ? ನಿನ್ನನ್ನು ಎಷ್ಟೆಷ್ಟು ಕಠಿಣವಾಗಿ ನಿಷ್ಠುರ ಪಡಿಸಿರುವೆನೋ ನೀನು ಅವುಗಳೊಂದನ್ನೂ ನೆನೆಯದೆ ನನ್ನನ್ನೂ, ನನ್ನ ಕೂಸನ್ನೂ ಉಳಿಸಿದೆ! ಆದರೂ ಈಗ ಲೂ ಒಮ್ಮೆ "ಕ್ಷಮಿಸಿರುವೆ" ನೆಂದು ಹೇಳು!

ನಿರಾ:—ಅಕ್ಕಾ! ಮತ್ತೆ ಇದೇಕಿಂತು ಬೇಡುವೆ? ನಾನೇನಾದರೂ ಹೊರಗಣವಳೆಂದೇ? ಒಡಹುಟ್ಟಿದವರಲ್ಲಿ ನಡೆವ ಗಡಬಿಡಿ ಯೊಂದು ಗಣನಾರ್ಹವೇ? ಅವರ ವಾಕ್ಕಲಹವೊಂದು ದ್ವೇಷಭಾವಪರಿಮಿತಿಯೇ? ಹೀಗೆ ನನಗೆ ತಕ್ಕುದಲ್ಲದು ದನ್ನು ಹೇಳಿಹೇಳಿ ನನ್ನನ್ನು ನೋಯಿಸುವೆಯೇಕೆ? ಕ್ಷಮೆಯೆಂತಿಹುದೋ ಅದನ್ನು ಕ್ಷಮಿಸಬೇಕೋ ಕ್ಷಮಿ ಸುವ ಶಕ್ತಿ ಯಾರಲ್ಲಿರುವುದೋ ಅದೊಂದೂ ನನಗೆ ತಿಳಿ ಯದು? ನಿನ್ನ ಇಂದಿನ ಪರಿವರ್ತನಕ್ಕೆ ಕಾರಣವೇನೋ ತಿಳಿಯೆ ಹೇಳುವೆಯಾ?

ಕೃಷ್ಣಾ:—ತಂಗಿ! ಮಕರಂದನು ಬಂದು ಪ್ರತ್ಯಕ್ಷಪ್ರಮಾಣದಿಂದ ನನ್ನ ಮನೋರೋಗವನ್ನು ಹೋಗಲಾಡಿಸಿದನು ಅಲ್ಲದೆ ಮೈದುನನೂ ಬಂದು ನಿನ್ನ ವಿಚಾರದಲ್ಲಿ ನನಗುಂಟಾಗಿದ್ದ ಶಂಕಾತಂಕಭಾವವನ್ನೂ ನಿದರ್ಶನಪೂರ್ವಕವಾಗಿ ಖಂಡಿ ಸಿದನು. ಮತ್ತೂ ತುಂಗೆಯ ನಡೆ, ನುಡಿ, ಸ್ವಭಾವಗ ಳನ್ನು ಕಣ್ಣಿಂದಲೇ ಕಂಡೆನು. ಈಗ ನನಗೆ ಹಿಂದಿನ ಅಪ ರಾಧಕ್ಕೆ ಪ್ರಾಯಶ್ಚಿತ್ತವುಂಟಾಗಿದೆ; ಕ್ಷಮಿಸು;

ನಿರಾ:—ಅಕ್ಕಾ; ಕ್ಷಮಿಸಬೇಕಾದುದೇನೂ ಇಲ್ಲ. ಅದಾವುದೂ ನನ್ನ ಮನವನ್ನು ಮುಟ್ಟಿಲ್ಲ. ಅದಿರಲಿ, ತುಂಗೆಯನ್ನು

ಸನ್ಮಾನಕ್ಕೆ ತರಬೇಕೆಂದೂ, ನಿನ್ನ ಹಟವನ್ನು ಖಂಡಿಸಬೇಕೆಂದೂ, ನಾನೂ ಬಂದದಿನವೇ ಅಣ್ಣನಿಂದ ಕಟ್ಟುಮಾಡಲ್ಪಟ್ಟೆನು. ಹಾಗೆಯೇ ಮಾಡುವೆನೆಂದೂ, ಮಾಡದೆ ಮನೆಯುಳಿದು ಹೋಗಲೊಲ್ಲೆನೆಂದೂ ಸಂಕಲ್ಪಿಸಿ ಕಂಕಣವನ್ನು ಕಟ್ಟಿದೆನು. ಈ ಬಲವದುದ್ದೇಶಕ್ಕಾಗಿಯೇ ನಾನು ಈವರೆಗೂ ಬಹುವಿಧವಾಗಿ ಪ್ರಯತ್ನಪಟ್ಟುದೂ ಆ ಉದ್ದೇಶಭರದಲ್ಲಿದ್ದೇ ನಿಮ್ಮ ನಿಷ್ಠುರವನ್ನೂ ಸಹಿಸಲಾದುದೂ ಅಲ್ಲದೆ ಬೇರೆ ಕೆಲಸವೇನೂ ಇರಲಿಲ್ಲ. ಪ್ರಯತ್ನಫಲದಲ್ಲಿ—ಚಂದ್ರಭಾಗೆ. ಪತಿಯು ಪ್ರಾಣಪದಕವಾಗಿ ಸಂಭಾವ್ಯಳಾದಳು. ಮಕರಂದನೂ ಮಾತೃಭಕ್ತನಾಗಿ ಕುಮಾರ್ಗಕುಠಾರವ್ರತದಲ್ಲಿ ದೀಕ್ಷೆಗೊಂಡನು. ತುಂಗೆಯ ಮಾರ್ಗಾನುರೋಧಕರೂ, ಆತನಿಂದ ಬಂಧಿತರಾದರು. ಎಂತೂ ಇವಳ ಬಹಿಸ್ಸಂಚಾರಶಕ್ತಿ ಮುರಿಯಲ್ಪಟ್ಟುದು. ಇನ್ನು ಹಲ್ಲುಕಳಚಿದ ನಾಗರಹಾವಿನಂತೆ ಬುಸುಗುಟ್ಟುತ್ತ ಮನೆಯಲ್ಲಿರಬೇಕಾದುದೊಂದೇ ಅವಳಿಗುಳಿದಿರುವುದು. ಈಗಲೇ ಸಾಯುವಂತಿರುವಳು. ಮೇಲೆಮೇಲೆ ತಿರಸ್ಕಾರ ನಿಷ್ಠುರಗಳೂ ಬೀಳುವುದಾದರೆ, ಅವಳು ಆತ್ಮಹತ್ಯೆಯನ್ನೇ ಮಾಡಿಕೊಳ್ಳುವಳು. ಈಗಾಗಲೇ ಒಮ್ಮೆ ಬಾವಿಯವರೆಗೂ ಬಂದಿದ್ದಳು. ನಾನೇ ಕಂಡು ತಡೆದು ಸೌಬಲನನ್ನು ಬಿಡದಿಯ ಬಳಿಯಲ್ಲಿಯೇ ಎಚ್ಚತ್ತಿರೆಂದು ಹೇಳಿ ಬಂದಿರುವೆನು. ಅವಳನ್ನು ಇನ್ನು ಸಾಮಮಾರ್ಗದಲ್ಲಿಯೇ ದಾರಿಗೆತಂದು ನಿಲ್ಲಿಸಿದರೆ, ಅವಳೇ ಮುಂದೆ ತನ್ನ ಮಿಕ್ಕ ಜತೆಗಾರ್ತಿಯರಿಗೂ ಎಚ್ಚರವನ್ನು ಕೊಡುವಳಾಗುವಳು.

ಕೃಷ್ಣ:—ತಾಯಿಾ ! ನನಗಷ್ಟರ ತಾಳ್ಮೆಯಿಲ್ಲ. ನಿನ್ನ ಪ್ರಿಯಾ ಸಕ್ಕೂ ನಿನ್ನ ತಾಳ್ಮೆಗೂ ನಾನು ನಿನ್ನನ್ನು ಏನೆಂದು ಕರೆಯ ಬೇಕೋ ತಿಳಿಯೆನು. ಎಂತೂ, ನನಗಾಕೆಯ ಹೆಸರನ್ನು ಕೇಳುವುದಕ್ಕೂ ಅಸಹ್ಯವಾಗಿದೆ! ಅವಳ ದ್ರೋಹವಿಷ್ಟೆಂ ಬುದನ್ನು ತಿಳಿದಾಗಳಿಂದ ನಿನ್ನನ್ನು ನನ್ನ ಪ್ರಾಣಕ್ಕೂ ಮಿಗಿಲಾದ ರತ್ನವೆಂದೇ ಭಾವಿಸಿರುವೆನು. ಸುಳ್ಳಲ್ಲ. ಅಷ್ಟೇ ಅಲ್ಲ! ಈಗ ನಾನು ನನ್ನ ಸ್ವಾಮಿಯಲ್ಲಿ ಮಹಾಪ ರಾಧಿನಿಯೆಂದೇ ತಪಿಸುತ್ತಿರುವೆನು. ಈ ನನ್ನ ಮುಖ ವನ್ನು ಅವರಿಗೆ ತೋರುವುದಕ್ಕೂ ಲಜ್ಜಿತೆಯಾಗಿರುವೆನು. ಈ ನನ್ನ ಪಾತಕದ ಹೊರೆ—

ವಿರಾ:—ಅಕ್ಕಾ! ಅನುತಾಪವೇ ನಿನ್ನ ಪಾತಕದ ಹೊರೆಯನ್ನು ಕೆಡಹತಕ್ಕುದು. ಈ ನಿನ್ನ ಲೇಪನವನ್ನು ತೊಳೆದು ಶುದ್ಧವಾಗಿ ಮಾಡಬೇಕಾದರೆ, ನಿನ್ನ ಸ್ವಾಮಿಯ ಅನುಗ್ರಹ ವೊಂದಲ್ಲದೆ ಮತ್ತಾವುದೂ ಇಲ್ಲ. ದಯಾಳುವಾದ ನಿನ್ನ ಸ್ವಾಮಿಯನ್ನೇ ನೀನು ಪ್ರಾರ್ಥಿಸಿ, ಕೃತಾರ್ಥಳೆನ್ನಿಸುವುದು ನಿನಗೆ ಸಹಜಧರ್ಮವಾಗಿದೆ. ಪ್ರಭುಸಮ್ಮುಖದಲ್ಲಿ ಪ್ರಾರ್ಥಿ ಸಲಿಕ್ಕೆ ಲಜ್ಜಾಭಯಗಳೇಕೆ ?

ಕೃಷ್ಣ:—(ಸತೃಷ್ಣನಯನೆಯಾಗಿ ಗದ್ಗದಸ್ವರದಿಂದ) ತಂಗಿ! ಈ ವರೆಗೂ ನಾನು ಆ ನನ್ನ ಸ್ವಾಮಿಯನ್ನು ನೆನೆನೆನೆದು ಕಿಡಿ ಕಿಡಿಯಾಗುತ್ತಿದ್ದೆನು ಆದರೆ ಈಗ ಅವರನ್ನು ನೆನೆನೆನೆದು ಹೊಂದುತ್ತಿರುವ ಆತ್ಮಾನಂದವೆಂತಹದೆಂದು—ಕೃಷ್ಣವೇ ಣಿಯ ಮಾತು ಅಷ್ಟಕ್ಕೇ ತಡೆಯಾಯ್ತು. ರಘುನಾಥನು ಔಷಧವನ್ನು ತೆಗೆದುಕೊಂಡು ಮಹಡಿಯನ್ನು ಹತ್ತಿ ಬರು

ವಂತೆ ತಿಳಿದುದು. ಕೃಷ್ಣವೇಣಿ ಸರಸರನೆ ಮುಖಕ್ಕೆ ಹಚ್ಚಡವನ್ನು ಮುಸುಕಿಟ್ಟು ಮಲಗಿದಳು. ಅಳಕೆಯೊಡನೆ ವಿರಾಗಿಣಿಯೂ ನಸುನಗುತ್ತೆ, ಕೃಷ್ಣವೇಣಿಯ ಕಾಲ ಕಡೆಯಲ್ಲಿ ಮಂಚದಮೇಲೆ ಕುಳಿತಳು. ರಘುನಾಥನು ಮುಂದೆ ಬಂದು ನೋಡಿದನು. ವಿರಾಗಿಣಿ ಕುಳಿತಿರುವ ಸ್ಥಳವನ್ನೂ ಅವಳ ಮುಖಮುದ್ರೆಯನ್ನೂ ನೋಡಿ ವಿಸ್ಮಯಕೌತುಕದಿಂದ ಕೇಳಿದನು ಏನಿದು? ವಿರಾಗಿಣಿ! ಇದೇನಿದು!! ಅಘಟಿತಘಟನೆ? ಇದಾವದೋಹಳವಿದ್ಯೆ? ಐಂದ್ರಜಾಲಿಕನೇನಾದರೂ ಬಂದಿದ್ದನೋ? ವಿಶೇಷವೇನಾದರೂ ಉಂಟೋ?

ವಿರಾ:—(ಕಿರುನಗೆಯಿಂದ) ಘಟಕನ ಸಾಹಸಬಲದಿಂದ ಅಘಟನವಾವುದು? ದೋಹಳವಿದ್ಯೆಯೋ—ಮೋಹಿನೀವಿದ್ಯೆಯೋ—ನೀನೇ ಹೇಳಬೇಕು? ಹೇಗೂ ಐಂದ್ರಜಾಲಿಕನು ಬಂದಿರಬೇಕೆಂದೂ, ನಿನ್ನ ರೊಟ್ಟಿಯನ್ನು ತುಪ್ಪದಲ್ಲಿ ಕೆಡಹಿ ಹೋಗಿರುವನೆಂದೂ ಹೇಳಬಹುದು.

ರಘು—(ಪರಿಹಾಸದಿಂದ ತಲೆತೂಗುತ್ತೆ) ಅಣ್ಣನರೊಟ್ಟಿ ತುಪ್ಪದಲ್ಲಿ ಬಿದ್ದರೆ, ತಂಗಿಗೂ ಸವಿಯಿಲ್ಲವೋ? ಅದಿರಲಿ; ಯುವಮಾನಿಯುವರೇನು, ಕೋಪದಲ್ಲಿರುವರೋ? ಸ್ವಾಪದಲ್ಲಿರುವರೋ?

ಕೃಷ್ಣ:—(ಮುಸುಕಿನಲ್ಲಿಯೇ) ಅದಾವುದೂ ಇಲ್ಲ.

ರಘು—ಹಾಗಿದ್ದರೆ ತಡವೇಕೆ? ಎದ್ದು ಔಷದವನ್ನು ಕುಡಿಯಬಹುದು?

ಕೃಷ್ಣ:—ನನ್ನೀರೋಗವು ಈ ಔಷದಕ್ಕೆ ಬಗ್ಗದು,

ರಘು:—ಇನ್ನಾವ ಔಷಧವು ಬೇಕು ?

ಕೃಷ್ಣ:—ನಾನರಿಯೆನು, ತಾವೇ ಹೇಳಬೇಕು ?

ರಘು:—(ವಿಸ್ಮಿತನಾಗಿ) ನನಗೀ ಸಂಶ್ಲೇಷೆಯರಿಯದು. ಊಹಿಸಿ ತಿಳಿವಷ್ಟರ ಶಕ್ತಿಯೂ ಸಾಲದು. ಹೇಳಿ ಕೇಳುವುದಿದ್ದರೆ ಮುಸುಕನ್ನು ತೆಗೆ !

ಕೃಷ್ಣ:—ಶಕ್ತಿಯುಂಟೆಂದೇ ಕೇಳಿದೆನು. ವಾಗ್ದಾನವಾದಲ್ಲದೆ ಮುಸುಕನ್ನು ತೆಗೆಯೆನು !

ರಘು:—ಇದೇಸಿಂದಿನ ಪರಿವರ್ತನೆ ? ಕಂಠವೇಕೆ ನಡುಗುತ್ತಿರುವುದು ?

ವಿರಾ:—(ಕಿರುನಗೆಯಿಂದ) ತಿಳಿದಿಲ್ಲವೇನಣ್ಣ ? ಯಾಚನವೃತ್ತಿ ಲಕ್ಷಣವೇನೆಂಬುದನ್ನು !

ರಘು:—(ಕೃತಕಕೋಪದಿಂದ) ಯಾಚಕರಾರು ? ಪ್ರೇಷಕರಾರು? ನನಗಾವುದೂ ತಿಳಿಯದು. ನಾನಿನ್ನು ಹೊರಡುವೆನು.

ಕೃಷ್ಣ:—ಕೂಡದು ; ಕೋಪಕ್ಕೆಡೆ ಕೊಡಲಾಗದು ! ಔಷಧವನ್ನು ಕೊಟ್ಟರೆ ಮಲಗಿದಂತೆಯೇ ಕುಡಿಯುವೆನು.

ರಘು:—"ಇಷ್ಟವಿದ್ದಂತೆ ಮಾಡು ; ಬಲವಾಗಿ ಹಿಡಿ" ಎಂದು ಪತ್ನಿಯ ಕಯ್ಯಲ್ಲಿ ಔಷಧದ ಸೀಸೆಯನ್ನು ಮೆಲ್ಲನಿರಿಸಿದನು.

ಕೃಷ್ಣ:—ಸೀಸೆಯನ್ನು ಹಿಡಿವಂತೆ ಕಯ್ಯೊರಡಿಂದೆಯೂ, ಪತಿಯ ಕಯ್ಯನ್ನು ಬಲವಾಗಿ ಹಿಡಿದು, ಔಷಧಿಯ ಸೀಸೆಯನ್ನು ಕೆಳಗೆ ಬಿಸುಟು ಪತಿಯನ್ನು ಮಂಚದಮೇಲೆ ಕುಳ್ಳಿರಿಸುವಂತೆಳೆದಳು. ರಘುನಾಥನು ಸರಿಯಾಗಿ ನಿಂತಿರಲಿಲ್ಲವಾದುದರಿಂದ ಪತ್ನಿಯಿಂದೆಳೆಯಲ್ಪಟ್ಟೊಡನೆ ಮಂಚದಮೇಲೆ ಕುಕ್ಕರಿಸಿದನು. ಆ ವೇಳೆಯಲ್ಲಿ ಆತನ ಬಾಯಿಂದ ಆವ ಮಾತೂ ಹೊರಡುವಂತಿರಲಿಲ್ಲ.

ವಿರಾ:—(ಪರಿಹಾಸದಿಂದ) ಅಕ್ಕಾ! ಸಾಧು! ಪತಿವಾಕ್ಯವನ್ನೇ ನೆರವೇರಿಸಿದೆ? ಬಿಡಬೇಡ! ಹಿಡಿ! ಬಲವಾಗಿ ಹಿಡಿ!! ಔಷಧವನ್ನು ಕುಡಿ; ಕಿವಿ ಕಣ್ಮನಂಗಳು ತಣಿವಂತೆ ಕುಡಿ!!! ಇನ್ನು ತಡವೇಕೆ?

ಕೃಷ್ಣ:—ಮರುಮಾತಿಲ್ಲದೆ ಮುಸುಕಿನೊಡನೆಯೇ ಪತಿಯ ತೊಡೆಯಮೇಲೆ ಮುಖವನ್ನಿಟ್ಟಳು.

ರಘು:—ಭ್ರಾಂತನಾಗಿ ಪತ್ನಿಯ ತಲೆಯನ್ನು ಹಿಡಿದೆತ್ತಿ,—ಇದೇನು? ನಾಟಕವೊ?

ಕೃಷ್ಣ:—(ಕಂಪಿತಸ್ವರದಿಂದ) ನಾಟಕದಂತೆ ಬೂತಾಟವಲ್ಲ. ಸತ್ಯವಾದುದೇ! ಹಿಂದಿನ ಅಪರಾಧಕ್ಕಾಗಿ ಅನುತಪಿಸುತ್ತಿರುವೆನು. ಕ್ಷಮಿಸುವೆನೆಂದನುಗ್ರಹಿಸುವವರೆಗೂ ನನ್ನ ರೋಗಕ್ಕೆ ಶಾಂತಿಯಿಲ್ಲ. ಕ್ಷಮೆಯೊಂದೇ ಪ್ರಾರ್ಥನೀಯವಾಗಿದೆ?

ರಘು.—(ಕಿರುನಗೆಯಿಂದ ತಲೆದೂಗುತ್ತ)—ಬಿಡು! ಕೃಷ್ಣೆ! ಈ ಪ್ರಾರ್ಥನೆಯನ್ನು ಬಿಟ್ಟುಬಿಡು! ನಾನು ಅಕ್ರಮಿ, ಕಾಮಾತುರ, ಕೃತಘ್ನ, ಕುಲಗೇಡಿ! ಕೀರ್ತಿನಾಶಕ. ....! ಹೀಗಿರುವ ನನ್ನಲ್ಲೇಕೆ ವೃಥಾ ಪ್ರಾರ್ಥನೆ? ತುಂಗೆಯನ್ನೇ ಕೇಳು? ಸರಿಯಾದ ಉಪಾಯವನ್ನು ಹೇಳುವಳು!

ಕೃಷ್ಣ:—(ವಿಕೃತಸ್ವರದಿಂದ) "ಇಷ್ಟಾದರೂ ದೊರೆಯದೆ? ಇನ್ನಾದರೂ ನನ್ನಲ್ಲಿ ಕೃಪೆ ಬಾರದೇ? ಮೂರ್ಖಚಿತ್ತಕ್ಕೆ ಬುದ್ಧಿಯುಂಟಾಯ್ತೆಂಬವಳಿಕಾದರೂ ಮನ್ನಿಸಬಾರದೆ? ನನಗಾರಹೇಳಿಕೆಯೂ ಬೇಡ. ಈವರೆಗೂ ಕೇಳದುದಕ್ಕೆ ಅನುಭವಿಸುತ್ತಿರುವುದೊಂದೇ ಭೋಗವು ಸಾಕಾ

ಗಿದೆ! ಮುಂದೆ ಎಂದೆಂದೂ ಅಂಧಕಾರವನ್ನು ಮುಟ್ಟಲೊಲ್ಲೆನು! ಪ್ರಮಾಣವಾಗಿ ಹೇಳುವೆನು. ದಯವಿಟ್ಟು ಕ್ಷಮಿಸಿರಿ. ಇದೊಂದೇ ನನಗೆ ಪರಮೌಷಧವು!" ಎಂದು ಪತಿಯ ಮುಖವನ್ನೇ ಸತೃಷ್ಣನಯನೆಯಾಗಿ ನೋಡುತ್ತಿ ಕುಳಿತಳು.

ರಘು:—(ಪ್ರೀತಿವ್ಯಂಜಕಸ್ವರದಿಂದ) "ನೀನೇನನ್ನೂ ಪ್ರಾರ್ಥಿಸ ಬೇಕಾದುದಿಲ್ಲ. ಅಂದೇ ನಾನು ನಿನ್ನ ಅಪರಾಧವನ್ನು ಕ್ಷಮಿಸಿರುವೆನೆಂದು ಹೇಳಿರುವೆನು! ಆದರೆ, ನಿನ್ನೀ ಮೂರ್ಖರೋಗಕ್ಕೆ ಮದ್ದಾಗಿ ಕೆಲವು ದಿನಗಳವರೆಗೆ ಉಪೇಕ್ಷೆಯನ್ನೇ ವಹಿಸಿದ್ದೆನು. ಅಷ್ಟೆ! ನನಗೆ ಆಗ್ರಹವಿಲ್ಲ. ಈಗಲಾದರೂ ನಿನಗೆ ನಿಜಾಂಶವು ಸ್ಫುರವಾಯ್ತೆಂದೇ ಸಂತೋಷಪಡುವೆನು! ಸತ್ವಗುಣದ ಬಲವು ಅಧಿಕವಾಗಿದ್ದರೂ, ಅದು ನಿನ್ನನ್ನು ಇಷ್ಟುಬೇಗ ಜಯಿಸುವುದೆಂದು ನಾನು ತಿಳಿದಿರಲಿಲ್ಲ. ಈಗ ನನ್ನ ಸಂತೋಷಕ್ಕೆ ಮೇರೆಯೇ ಕಾಣುವಂತಿಲ್ಲ! ಆದರೆ, ಈಗ ಹೇಳು, ಕೃಷ್ಣ! ವಿರಾಗಿಣಿ ನನಗೆಮಾತ್ರವೇ ನಚ್ಚಿನತಂಗಿಯಾಗಿದ್ದಳಲ್ಲವೆ! ಈಗಳೋ? ನಿನಗೆ ಹೇಗೆ?

ಕೃಷ್ಣ:—(ತಲೆಬಾಗಿ) "ಎಷ್ಟುಪಾಟದರೂ ಹಂಗಿಸಬಹುದು. ನಾನೇನನ್ನೂ ಹೇಳಲಾರೆನು. ವಿರಾಗಿಣಿ ನನಗ ಹೇಗೆಂಬುದನ್ನು ಮುಂದೆ ನನ್ನ ನಡೆಯಿಂದೇ ತಿಳಿಯಬೇಕು.

ರಘು:—ವಿರಾಗಿಣಿ! ಸತ್ಸಂಕಲ್ಪವು ಸಂಪೂರ್ಣ ಸಿದ್ಧಿಹೊಂದಿರುವುದು! ಸಿದ್ಧಿರಸಸೇಚನೆಯಿಂದೇ ಈ ಭವನವೂ ಭದ್ರಾಂಕರವಾಗಿ ಬಗೆಗೊಳ್ಳುತ್ತಿರುವುದು. ಇನ್ನು ಸಿದ್ಧಕನ್ಯೆಯಾದ

ಸನ್ಯಾಸಿನಿಗೆ ಇಂದಿಗೆ ನಾಲ್ಕನೆಯ ದಿನವೇ ಆನಂದಮಂದಿರದ ಅಧಿಕಾರವೂ ವಹಿಸಲ್ಪಡುವುದು !

ವಿರಾ:—ನಾನೇನನ್ನು ಹೇಳಬೇಕು ?

ಕೃಷ್ಣ:—ಏನದು ? ವಿರಾಗಿಣಿಗೆ, ಮಂದಿರದಲ್ಲಿ,.. ....

ರಘು:—ಅಹುದಹುದು ! ಅವಳಿನ್ನು ನಮ್ಮ ಮನೆಯವಳಲ್ಲ ; ಬ್ರಹ್ಮಚಾರಿಣಿ !! ಸನ್ಮಾನಿತೆಯಾದ ಸನ್ಯಾಸಿನಿ !!! ಇನ್ನಾಕೆಯಲ್ಲಿ ನಮ್ಮ ಸದರಕ್ಕೆ ದಾರಿಯಿಲ್ಲ.

ಕೃಷ್ಣ:—ಅದೇಕೆ ? ಅಷ್ಟೊಂದು ಆಗ್ರಹ ! ಈವರೆಗೂ ತಿಳಿಗೇಡಿಯಾಗಿ ಕರುಬಿ, ಸತ್ತು ಸುಣ್ಣವಾಗಿದ್ದೆನು. ಇನ್ನು ಮುಂದೆ ಬಂದೆರಡು ತಿಂಗಳಾದರೂ ವಿನೋದದಲ್ಲಿರೆಗೊಡಬಾರದೇಕೆ ? ಇಷ್ಟನ್ನು ಮಾಡಲಾಗದೆ ?

ರಘು:—ಈವರೆಗೂ ಇದ್ದುದೇ ದುಸ್ತರವು. ಇನ್ನುಮುಂದೆ ಹೇಗೂ ಶುಭಕಾರ್ಯವನ್ನು ತಡೆವಂತಿಲ್ಲ. ಆದರೆ, ಸಮಯವನ್ನನುಸರಿಸಿ ನೋಡಿ ಮಾತನಾಡುತ್ತಿರಬಹುದು. ಅಷ್ಟಕ್ಕೆ ಅವಕಾಶವುಂಟು ! ವಿರಾಗಿಣಿಯ ತಾಯ್ತಂದೆಗಳೂ ನಿರಂಜನನಪತ್ನಿಯೊಡನೆ ಸಪರಿವಾರರಾಗಿ ನಾಳಯೇ ಬರುವರು.

ಕೃಷ್ಣ:—ರಾಜಶೇಖರನ ವಿಚಾರವೇನಾಗಿದೆ !

ರಘು:—ಅವನು ಇಂದು ಮಧ್ಯಾಹ್ನವೇ ಬಂದು ಆಯಾಸದಿಂದ ಮನೆಯಲ್ಲಿ ಮಲಗಿರುವನಂತೆ ! ಇಲ್ಲಿಗೂ ಈಗಲೋ ನಾಳೆಯೋ ಬರುವನೆಂದು ಭಗವಾನಂದನಿಂದೆ ತಿಳಿದೆನು.

ಕೃಷ್ಣ:—(ಆತುರದಿಂದ) ಏನು ? ರಾಜಶೇಖರನು ಬಂದಿರುವನೆ ? ಹೇಗೆ ಬಂದನು ?

**ರಘು**:—ಬಂದಿರುವನು. ಬಂಧನೆಯನ್ನು ತಪ್ಪಿಸಿಕೊಂಡನು.

**ಕೃಷ್ಣ**:—(ವಿರಾಗಿಣಿಯ ಕೈಹಿಡಿದು) "ವಿರಾಗಿಣಿ! ಉತ್ಸವದ ಮೇಲೆ ಉತ್ಸವವಲ್ಲವೆ? ಮೇಲೆ ಮೇಲೆ ಶುಭವರ್ತಮಾನಗಳು?

ಕೃಷ್ಣವೇಣಿಯ ವಾಕ್ಯವು ತಡೆಯಲ್ಪಟ್ಟಿದು. ರಘುನಾಥನು, ಪತ್ನಿಯ ಮತ್ತು ವಿರಾಗಿಣಿಯರ ಪರಸ್ಪರ ಸ್ನೇಹಬಾಂಧವ್ಯದಲ್ಲಿ ಚಕಿತನಾಗಿ ಮಂಚದಮೇಲೆಯೇ ಕುಳಿತಿದ್ದನು. ಅದೇ ವೇಳೆಯಲ್ಲಿಯೇ ಫಲಪುಷ್ಪಹಸ್ತರಾದ ಶರಾವತೀ ಲಕ್ಷ್ಮೀದೇವಮ್ಮನವರಿಬ್ಬರೂ ಆಗ್ರಹವ್ಯಗ್ರರಾಗಿ ಮಹಡಿಯನ್ನು ಹತ್ತಿಬಂದು ಮುಂದೆನಿಂದರು. ಮಗನು, ಹೆಂಡತಿ, ನಾದಿನಿ, ನೆರೆಮನೆಯ ಹುಡಿಗಿ ಇವರೆಲ್ಲರೊಡನೆ ಮಂಚದಮೇಲೆ ಕುಳಿತಿರುವುದನ್ನೂ, ಎಲ್ಲರ ಮುಖದಲ್ಲಿಯೂ ಆನಂದೋತ್ಸಾಹಗಳ ನೂತನಕಾಂತಿ ಹೊರೆಹೊಮ್ಮುತ್ತಿರುವುದನ್ನೂ ನೋಡಿ ಈರ್ಷ್ಯಾಕ್ರೋಧಗಳಿಂದ ಮೆಯ್ಮರೆದು ಬಿರುಗಣ್ಣಿಂದೆ ನೋಡುತ್ತ ನಿಂತರು.

**ರಘು**:—ತಿರುಗಿನೋಡಿ, ನಮ್ರಭಾವದಿಂದ ಕೆಳಗಿಳದುನಿಂತು ಕೇಳಿದನು;—"ಅಮ್ಮ ಏನನ್ನು ನೋಡಿ ಬೆರಗಾಗಿರುವಿ? ಇದೇನಿಷ್ಟರ ಆಗ್ರಹವೆ?

ಲಕ್ಷ್ಮೀ:—(ಮೋರೆಯನ್ನು ಕೊಂಕಿಸಿ)—ಬೆರಗಾಗುವುದೇನು? ಕೇಳಬೇಕೆ? ನಾಟಕದ ನೋಟವಿಲ್ಲಿಯೇ ಇದಿರಾಗಿದೆ! ಮಾನವಿಲ್ಲದೆ ಬಂದೇ ಮಂಚದಮೇಲೆ ಎಲ್ಲರೂ ಕುಳಿತಿರುವ ಸೊಗಸನ್ನು ನೋಡಿಯೂ ಬೆರಗಾಗದಿರುವುದೇ? ನಮ್ಮ ಆಗ್ರಹವನ್ನು ಕೇಳುವವರಾರು? ಮುಖ್ಯವಾಗಿ, ನಾವಿಲ್ಲಿರುವುದೇ ಹೆಡ್ಡತನವು!

ರಘು:—ಅಮ್ಮ ! ಇದೇಕೆ ? ಇಷ್ಟು ಉದಾಸೀನ ? ನಾನೇನು ಮಾಡಿದೆನು ? ಅಕಾರ್ಯವನ್ನೇನನ್ನೂ ಮಾಡಿಲ್ಲವಲ್ಲಾ ?

ಲಕ್ಷ್ಮೀ:—ಹೇಗಾದರೂ ಮಾಡು, ಎಷ್ಟಾದರೂ ನೀನು ಬುದ್ಧಿವಂತನಪ್ಪ ! ನಿನಗಾರು ಹೇಳುವವರು ? "ಮನೆಗೆ ಆರಾರು ಬರುವವರು ? ಏನನ್ನು ಮಾಡುವರು" ಎಂಬುದನ್ನೇನೂ ಕೇಳತಕ್ಕುದಿಲ್ಲ ; ರಾಣಿಯಮುಂದೇ ನಿಮ್ಮ ನವನಾಗರಿಕತೆ !

ರಘು:—(ಖತಿಯಿಂದ—"ಅಮ್ಮಾ ; ಏನನ್ನಾದರೂ ಹೇಳಿರಿ. ಈ ವರೆಗೂ ಇದ್ದಂತೆ ಇನ್ನುಮುಂದೆಯೂ ಅಕಾರ್ಯಕ್ಕಿಲ್ಲಿ ಅವಕಾಶವೇನೂ ದೊರೆಯದು. ಮನೆಗೆ ಬರುವವರಾಗಲೀ ಮಾಡುವುದೇನೆಂಬುದಾಗಲೀ ನನ್ನ ತಿಳಿವಿಗೆ ಬಾರದೆಯೇ ಹೋಗಲಾರದು ! ಕಾರಣವನ್ನು ಹೇಳದೆಯೇ ದೂಷಿಸುವುದೊಂದೇ ನಿಮ್ಮ ವೃತ್ತಿಯಾದರೆ ಅದೂ ಆಗಲಿ ; ಹಾಗೆ ತಪ್ಪೇನಾದರೂ ನನ್ನಲ್ಲಿದ್ದು ತಿಳಿಯಹೇಳದರೆ, ಕ್ರಮಪಡಿಸಿ ಕೊಳ್ಳುವೆನಲ್ಲದೆ ಕ್ಷಮೆಯನ್ನೂ ಕೇಳುವೆನು ?

ಶರಾ:—ರಘು ! ಇದೇನಪ್ಪ, ಕೇಡುಗಾಲದ ಸುದ್ದಿ ? ಆರೂ ಮನೆಯಲ್ಲಿಲ್ಲದವೇಳೆಯಲ್ಲಿ, ಹೆರವರು ಬರುವುದೆಂದರೇನು ? ಬಂದರೂ ಮಾನಗೆಟ್ಟು ಹರಟುವುದೆಂದರೇನು ? ಹೊರಗಣ ಗಂಡಸು, ಮನೆಗೆ ನುಗ್ಗಿ, ತನ್ನಿದಿರೆ ಮನೆಯ ಹೆಣ್ಣನ್ನು, ಮನಬಂದತೆ ಬಯ್ಯುತ್ತಿದ್ದರೂ ಮೂಗಿಯಂತೆ ಬಿದ್ದು ನೋಡುವುದೆಂದರೇನು ? ಮನೆಯ ಹೆಣ್ಣಿಗೆ ಬತ್ತಾಯವಾಗುವುದಕ್ಕಾಗದಿದ್ದರೆ, ತಲೆಹರಟೆಯವನನ್ನಾದರೂ ಹೊರಗೆ ದೂಡಬಾರದಾಗಿತ್ತೇನು ? ತಾನೂ ಅವನಿಗೇ ಸಹಾಯವಾಗುವುದೇನು ?

ರಘು:—(ಚಕಿತನಾಗಿ) ಚಿಕ್ಕಮ್ಮ ! ನಿಧಾನಿಸು, ಮನೆಗೆ ಬಂದಿದ್ದವರಾರೆಂದು ತಿಳಿದರೆ,—

ಲಕ್ಷ್ಮೀ:—ಸಾಕುಸಾಕು !! ನಿನ್ನ ತಾಳ್ಮೆ ! ನಾವೆಲ್ಲಗಾದರೂ ಹೊರಟು ಹೋಗುವೆವು. ನಮಗಿಲ್ಲಿರಬೇಕಾದುದೇನೂ ಇಲ್ಲ. ಇಷ್ಟೆಲ್ಲಾ ಕಷ್ಟಪಡಲೇಕೆ ? ಹೋಗೆಂದು ಬಾಯ್ದೆರೆದು ಹೇಳಿದ್ದರೆ ಅವಳಂದೇ ಹೋಗುತಿರಲಿಲ್ಲವೇ ? ತಡೆದು ನಿಲ್ಲಿಸಿಕೊಂಡುದೇಕೆ ?

ಕೃಷ್ಣ:—ಅತ್ತೆ ! ವಿಚಾರವೇನೆಂಬುದನ್ನೇ ತಿಳಿಯದೆ ಸುಮ್ಮನೆ ಕಸಲುವುದೇಕೆ ? ಆತನು ಬಂದಾಗ ನಾನು ಮಲಗಿದ್ದೆನು ; ತುಂಗೆಯೊಬ್ಬಳೇ ಇದ್ದುದರಿಂದ ಹಿಂದಿರುಗುತ್ತಿದ್ದವನನ್ನು ತಡೆದು ಅವಳಾಡಿದ ಮತ್ತು ಮಾಡಿದ ನುಡಿ, ನಟನೆಗಳೆಲ್ಲವನ್ನೂ ನೋಡಿ ಕೇಳಿದೆನು. ಆತನದಕ್ಕೆ ಅವಳಿಗೆ ಸಮಾಧಾನವಾಗಿ ಹೇಳಿದ ವಿವೇಕವನ್ನೂ ಕಡೆಗೆ ನನಗೆ ಆತನು ಪ್ರತ್ಯಕ್ಷಪ್ರಮಾಣದಿಂದ ಕೊಟ್ಟ ನಿದರ್ಶನಗಳನ್ನೂ ಮನನಮಾಡಿಕೊಂಡೆನು. ಆತನ ಪ್ರಮಾಣವೇ ಈ ನನ್ನ ರೋಗಶಾಂತಿಗೆ ಕಾರಣವಾಯ್ತು ; ಇಲ್ಲದಿದ್ದರೆ ನಾನು ಹೀಗೆಯೇ, ನಿಜವರಿಯದೆ ಸಾಯುತ್ತಿದ್ದೆನು.

ಲಕ್ಷ್ಮೀ:—ಶರಾವತೀ ! ಕೇಳಿದೆಯೊ ; ಮಾತು ಹೇಗೆ ಹೊರಡುತ್ತಿದೆ ?

ಶರಾವತಿ:—(ಮೂಗಿನಮೇಲೆ ಬೆರಲಿಟ್ಟು)—“ ಇದೇನೆ ? ಕೃಷ್ಣವೇಣಿ ! ನಿನ್ನ ರೋಗವು ಗುಣವಾಗಲೆಂದು ಹರಕೆಯೊಪ್ಪಿಸಿ ಬರಲಿಲ್ಲವೇ ? ಭವಾನೀ ಸೇವೆಗೆ ಹೋಗಿದ್ದು, ಹರಸಿಕೊಂಡು, ಸುತ್ತಿ ಸುತ್ತಿ ಸುಣ್ಣವಾಗಿ ಈಗತಾನೆ ಬಂದೆವ

ಲ್ಲವೇ ? ಅವಳ ದಯೆಯಿಂದಲೇ ಗುಣವಾಯ್ತೆನ್ನದೆ ಅವ ನಾವನೋ ಕುಲಗೇಡಿಯ ಮಾತಿಂದ ಗುಣವಾಯ್ತೆನ್ನುವೆ ? ಇದೆಂತಹ ಕೇಡುಗಾಲವೆ ? ಇದಕ್ಕೇನು ಪ್ರಾಯಶ್ಚಿತ್ತವೆ ?

ರಘು:—(ಗರ್ವದಿಂದ ನಕ್ಕು) ಇದೇ ನಿಮ್ಮ ಮರುಳ್ತನವು ? ಕೇಣ-ಕವಡುಗಳೆಂಬ ನೂರೆಂಟುರೋಗಗಳು ಹೊಟ್ಟೆಯ ಲ್ಲಿದ್ದು, ಮೇಲೆ ನೀವು ಅದಾವುದೊ ಕಾಡುಕಲ್ಲುಗಳ ಮುಂದೆ ಕುಟ್ಟಿಕೊಂಡು ಅತ್ತರೆ ನೆಟ್ಟಗಾದೀತೊ ? ಹಾಗಾಗುವುದಾ ದರೆ ಸತ್ತುಕೆಟ್ಟು ಕೈಬಿಟ್ಟುಹೋಗಿರುವ ನಿಮ್ಮವರೆಲ್ಲರನ್ನೂ ಮತ್ತೆ ಪಡೆಯಬಾರದೇಕೆ ? ಈವರೆಗೂ ಮನದಲ್ಲಿ ಅಡ ಗಿದ್ದ ಮಾತ್ಸರ್ಯರೋಗವು ನಾಶವಾಯ್ತೆಂದರೆ ಮತ್ತಿನ ರೋಗವೂ ತಾನಾಗಿಯೇ ಗುಣವಾಗುವುದಿಲ್ಲವೊ ? ನಿದ ರ್ಶನವೂ ಬೇಕೋ ·

ಶರಾ —(ವಿರಾಗಿಣಿಯ ಕಡೆಗೆ ಕೈನೀಡಿ) ಇವೆಲ್ಲವೂ ಈ ನಾಟ್ಯ ಗಾರ್ತಿಯ ಕುಟಿಲನೀತಿಯಲ್ಲವೆ !

ಕೃಷ್ಣ:—ಅತ್ತೆ ! ವಿರಾಗಿಣಿಯನ್ನು ನೀವು ಇನ್ನುಮೇಲೆ ನಿಷ್ಠು ರಪಡಿಸಲಾಗದು ! ಅವಳ ನಿಜವನ್ನು ನಾನೇ ಕಣ್ಣಾರೆ- ಮನವಾರೆ ಕಂಡೆನು ಇಂದಿನಿಂದ ಇವಳು ನನ್ನ ಜೀವ ರತ್ನ ! ಮುಂದೆ ಇನ್ನೇನನ್ನಾದರೂ ಹೇಳುವಿರಿ, ಜೋಕೆ ?

ವಿರಾ:—ಅಕ್ಕಾ ! ಇನ್ನು ಸಾಕು ; ನಾನು ಹೋಗುವೆನು. (ಎಂದು ಏಳಲು ಪ್ರಯತ್ನಿಸಿದಳು.)

ಕೃಷ್ಣ:—(ಕೈಹಿಡಿದು ಕುಳ್ಳಿರಿಸಿಕೊಂಡು) ವಿರಾಗಿಣಿ ! ಆರೇನ ನ್ನಾದರೂ ಹೇಳಿಕೊಳ್ಳಲಿ : ಈವರೆಗೂ ಹೇಳಿಕೇಳಿದುದೇ ಸಾಕು ! ಕುಳ್ಳಿರು. (ಶರಾವತೀ ಲಕ್ಷ್ಮೀದೇವಮ್ಮನವರ

ಬ್ಬರೂ ನಿಂತಲ್ಲಿಯೇ ಕುಳಿತುಬಿಟ್ಟರು. ರಘುನಾಥನು ನೆಲದಮೇಲೆ ಕುಳಿತುಕೊಂಡನು. ಈತನು ಕುಳಿತುಕೊಳ್ಳುವುದರೊಳಗೆ ಸೌಬಲನೂ ಓಡಿಬಂದನು.)

ಲಕ್ಷ್ಮಿ:—ಏನೋ? ಎಲ್ಲಿಗೆ ಓಡಿಹೋಗುವೆ? ತುಂಗೆ ಏನಾದಳು?

ಸೌಬಲ:—(ನಗುತ್ತ) ಅವಳೇನಾಗುವಳು? ಬಾವಿಗೆಬೀಳಲು ಹೋಗುತ್ತಿದ್ದಳು. ಎಳೆತಂದು ಕಿರುಮನೆಯಲ್ಲಿ ಕೂಡಿ, ಬೀಗಹಾಕಿ ಬಂದಿರುವೆನು. (ಎಂದು ರಘುನಾಥನ ಮುಂದೆ ಬಂದು ನಿಂತು) ಅಣ್ಣ! ರಾಜಶೇಖರನು ವಿನಯಚಂದ್ರ-ವಿಮಲಚಂದ್ರರೊಡನೆ ಬಂದನು—

ರಘು:—"ಎಲ್ಲಿ ಎಲ್ಲಿ!!" (ಎಂದು ಅತ್ಯಾತುರದಿಂದ ತಲೆಯೆತ್ತಿ ನೋಡಿದನು. ಲಕ್ಷ್ಮೀದೇವಮ್ಮನೂ ಶರಾವತಿಯೂ ಬೆದರಿ ನೋಡುತ್ತಿದ್ದರು. ರಾಜಶೇಖರನು ಭಗವಾನಂದನ ಕೈಹಿಡಿದು ವಿನಯಚಂದ್ರ-ವಿಮಲಚಂದ್ರರೊಡನೆ ಬಂದನು.)

ಶರಾ:—(ಆನಂದೋತ್ಸಾಹದಿಂದ) ರಾಜಶೇಖರ! ಬದುಕಿ ಬಂದೆಯಾ! (ರಾಜಶೇಖರನು ಕಿವಿಗೆ ಹಾಕಿಕೊಳ್ಳದೆ ಮುಂದಾಗುತ್ತಿದ್ದನು; ಆದರೆ ಭಗವಾನಂದನು ತಡೆದು) ರಾಜ! ಚಿಕ್ಕಮ್ಮನು ನಿನ್ನನ್ನು ಕರೆವಳಲ್ಲ,—ಕೇಳುವುದಿಲ್ಲವೆ?

ರಾಜ:—(ತಿರುಗಿನೋಡಿ) ಇದೇನು? ಅತ್ತೆ! ನೀನೆಂದು ಬಂದೆ?

ಶರಾ:—ನಾನು ಬಂದುದು ಹಾಗಿರಲಿ; ನೀನೇ ಬಂದೆಯಲ್ಲವೆ? ಅದೇನು, ಬಂದವನು ಇಲ್ಲಿಗೇಬಾರದೆ ಎಲ್ಲಿಯೋ ತಂಗಿದ್ದು ಹೆರವರಂತೆ ಬರುವುದೇಕೆ?

ರಾಜ:—ಅತ್ತೆ! ನನಗೆ ನಿರಂಜನನೇ ಸಹಾಧ್ಯಾಯಿ; ಅಲ್ಲದೆ ಆರಿಂದ ಪಾರಾದೆನೋ ಅವರಲ್ಲಿ ವಿಶ್ವಾಸ ಗೌರವವನ್ನು ಇರಿ

ಸಬೇಕಾದುದು ಸಹಜವಲ್ಲವೆ! ಇದರಲ್ಲಿ ಆಕ್ಷೇಪವೇನು? (ಎಂದು ನಾಲ್ವರೂ ರಘುನಾಥನಮುಂದೆ ಬಂದು ನಿಂತು ಕೈಮುಗಿದರು. ರಘುನಾಥನು ಪ್ರತಿವಂದನೆಮಾಡಿ ಎಲ್ಲರನ್ನೂ ಕೈಹಿಡಿದು ಬಳಿಯಲ್ಲಿ ಕುಳ್ಳಿರಿಸಿಕೊಂಡನು.)

ವಿರಾಗಿಣಿಯು ಆನಂದೋತ್ಸಾಹಗಳಿಂದ ಅಧೀರಳಂತಾಗಿ ಹಾಗೆಯೇ ಕೃಷ್ಣವೇಣಿಯೂ ತೊಡೆಯಲ್ಲಿ ಶಿಶುವನ್ನು ಮಲಗಿಸಿಕೊಂಡು ಅವಕುಂಠನವನ್ನು ಹೊದ್ದು ಕುಳಿತಳು. ಶರಾವತೀ ಲಕ್ಷ್ಮೀದೇವಮ್ಮನವರು ಕುತೂಹಲದಿಂದ ವಿಚಾರಸಂಗ್ರಹಕ್ಕಾಗಿ ಕುಳಿತಿದ್ದರು, ಭಗವಾನಂದನೂ ರಘುನಾಥನ ಹಿಂದೆ ಕುಳಿತನು. ಅಂದಿನ ಸಂಭ್ರಮವೇ ಸಂಭ್ರಮವಾಗಿದ್ದಿತು.

ರಾಜ:—ಬಾವ! ಮನೆಯಲ್ಲಿ ಎಲ್ಲರೂ ಕ್ಷೇಮವಷ್ಟೆ?

ರಘು:—ನೀನು ಬಂದಮೇಲೆ ಕ್ಷೇಮವನ್ನು ಕೇಳಬೇಕೇ!

ರಾಜ:—ವಿರಾಗಿಣಿ ಎಲ್ಲಿರುವಳು?

ರಘು:—ವಿರಾಗಿಣಿಯಲ್ಲಿ ಅಷ್ಟೇನು ಕಾರ್ಯಗೌರವ?

ರಾಜ:—ಇತರರಿಗೆ ಹೇಳತಕ್ಕುದಲ್ಲ ನಾನೇ ಸಮಕ್ಷದಲ್ಲಿ ಹೇಳತಕ್ಕುದು?

ಕೃಷ್ಣ:—ವಿರಾಗಿಣಿಯನ್ನು ಕಂಡವರಾರು? ಅವಳೆಲ್ಲಿರುವಳೊ?

ರಾಜ:—(ತಲೆಯೆತ್ತಿ, ಮಂಚದಕಡೆಗೆ ನೋಡಿ ಎದ್ದುನಿಂತು) ಕೃಷ್ಣವೇಣಿ! ಕುಶಲಿಯಷ್ಟೆ?

ಕೃಷ್ಣ:—ಕುಶಲನಾದ ಅಣ್ಣನೇ ಮುಂದಿರುವಲ್ಲಿ ಕುಶಲವಲ್ಲವೆ?

ರಾಜ:—ತಾಯಿ! ಮೊದಲು ಮಾತನಾಡಿಸಲಿಲ್ಲವೆಂದು ಕೋಪಿಸಬೇಡ.

ಕೃಷ್ಣ:—ಅಷ್ಟಕ್ಕೆ ಕೋಪಿಸುವೆನೆ! ದೈವಕೃಪೆಯಿಂದ ಬಂದೆಯಲ್ಲ; ಅಷ್ಟೇ ಸಾಕು!

ರಾಜ:—(ವಿರಾಗಿಣಿಯನ್ನು ಕಂಡು, ಕೌತುಕದಿಂದ ಮೆಲ್ಲನೆ)— ಕೃಷ್ಣಾ! ಯಾರು ನಿನ್ನ ಹಿಂದೆ ?

ಅಳಕ:—(ಸಂಭ್ರಮದಿಂದ) ಇವರೇ ನಮ್ಮ ವಿರಾಗಿಣಿ.

ರಾಜ:—(ಆನಂದಪಾರವಶ್ಯತೆಯಿಂದ ಮಯ್ಮರೆದು ಅಳಕೆಯ ಬೆನ್ನುಮೇಲೆ ತಟ್ಟುತ್ತ) ಬಳ್ಳೆಯ ಹುಡುಗಿ!

ವಿರಾ:—(ಕೃಷ್ಣವೇಣಿಯ ಮುಖವನ್ನು ನೋಡುತ್ತ) ಅಕ್ಕಾ! ನಮ್ಮ ರಾಜಶೇಖರನಿಗೂ ಅಳಕನಂದೆಗೂ ವರಸಾಮ್ಯವು ಸರಿಯಾಗಿಲ್ಲವೆ ?

—(ವಿರಾಗಿಣಿಯ ಮಾತಿಗೆ ಕುಳಿತಿದ್ದವರೆಲ್ಲರೂ ಕರತಾಡನ ಪೂರ್ವಕವಾಗಿ ಗಟ್ಟಿಯಾಗಿ ನಗತೊಡಗಿದರು. ಅಳಕನಂದೆಗೆ ತಡೆಯಲಾಗಲಿಲ್ಲ. ಅವಳಾ ಕನ್ನೆಯ್ದಿಲೆಗಣ್ಗಳಿಂದ ನೀರು ತೊಟ್ಟಿಡುತ್ತಿದ್ದಿತು. ಲಜ್ಜೆಯಿಂದ ಕೆಂಪಾದ ಮುಖವನ್ನು ಮೆಲ್ಲನೆ ತಗ್ಗಿಸಿಕೊಂಡಳು.)

ರಾಜ:—(ಅಳಕನಂದೆಯ ಕಣ್ಣುಗಳಲ್ಲಿ ನೀರು ತೊಟ್ಟಿಡುವುದನ್ನು ನೋಡಿ) ಇದೇಕೆ? ಹುಚ್ಚುಹುಡುಗಿ! ಅಳುವುದೇಕೆ? ಹೊಗಳಿದೆನೆಂದೊ ?

ವಿರಾ:—ಏನಣ್ಣಾ! ರಾಜಶೇಖರ! ಈಗಲೇ ಶಿಕ್ಷಣಾಭಾರವನ್ನೂ ವಹಿಸಿದೆಯೇನು ?

ರಾಜ:—(ವಿಕೃತಸ್ವರದಿಂದ) ತಾಯಿ! ಕ್ಷಮಿಸು! ಇನ್ನು ನನಗಂತಹ ದುರಾಶೆಗೆ ಅವಕಾಶವಿಲ್ಲ. ನಿನ್ನನ್ನು ನೋಡಿದ ಸಂತೋಷಭರದಲ್ಲಿ ನನಗೆ ನನ್ನ ಸಂಕಲ್ಪವೇ ಮರೆತು ಹೋಗಿದ್ದಿತು. ನಿನ್ನ ಪವಿತ್ರಮೂರ್ತಿಯನ್ನು ಪರಿಚಯ ಮಾಡಿಕೊಟ್ಟಳೆಂಬ ಸಂತೋಷದಿಂದ ಇವಳನ್ನು ಬಹುಮಾನಿಸಿದೆನಲ್ಲದೆ ಮತ್ತಾವ ಆಶೋತ್ತರದಿಂದಲೂ ಮಾಡಲಿಲ್ಲ.

ಕೃಷ್ಣ:—ಅದೇನಣ್ಣಾ ? ನಿನ್ನ ಸಂಕಲ್ಪವು ?

ರಾಜ:—ಕೃಷ್ಣ ! ಈಗ ನಾನು ಹೇಳುವುದನ್ನು ಬೂಟಾಟವೆಂದಾದರೂ ಹೇಳುವರೋ-ಹೇಗೋ ? ಹೇಗಾದರೂ ಹೇಳಿಕೊಳ್ಳಲಿ ; ನಾನೆಂತೂ ಹಿಂದಿನ ರಾಜಶೇಖರನಲ್ಲ ! ಪುನರುಜ್ಜೀವಿಸುವಂತೆ ಮಾಡಿದ ವಿರಾಗಿಣಿಯೊಬ್ಬಳಲ್ಲದೆ ನನಗೀ ಜಗತ್ತಿನಲ್ಲಿ ಪೂಜ್ಯವಸ್ತುವೂ, ಸಂಭಾವ್ಯಪಾತ್ರವೂ ಹಿತಬಂಧುವೂ ಆದವರು ಮತ್ತೊಬ್ಬರಿಲ್ಲವೆಂದೇ ನನ್ನ ಭಾವನೆ! ಏಕೆನ್ನುವೆಯೋ? ನನ್ನನ್ನು ತಾಯಿ ತೊರೆದಳು ; ಅಕ್ಕನೂ ಅಟ್ಟಿದಳು , ಹಿತರಂತೆ ನಟಿಸುತ್ತಿದ್ದವರಾರೂ ಬಳಿಗೆ ಸೇರಗೊಡಿಸದೆ ಕಡೆಗಣಿಸಿದರು !! ಕಡೆಗೆ ಸುತ್ತಿ ಸುತ್ತಿ ಕಾರಾಗೃಹವನ್ನೂ ಸೇರಿ ನರಳುವಂತಾದೆನು ! ಅಂಧಕಾರದಲ್ಲಿ, ಸಿಗಳಬಂಧನದಲ್ಲಿ, ನಾನಾವಿಧ ಯಾತನೆಯನ್ನು ಅನುಭವಿಸುತ್ತಿದ್ದ ನಾನು, ಮತ್ತೆ ಇಹದಲ್ಲಿನ್ನಾರನ್ನೂ ನೋಡಲಾರೆನೆಂದೆಣಿಸಿ ಹಲಬುತ್ತಿದ್ದೆನು. ಆ ವೇಳೆಯಲ್ಲಿಯೂ ನನ್ನನ್ನು ಕ್ಷಮಿಸಿ, ಹಿತಸೂಚನೆಯಿಂದೆಚ್ಚರಿಸಿದುದಲ್ಲದೆ, ನನ್ನನ್ನು ಸುತ್ತಿಮುತ್ತಿ ಕಾಡುತ್ತಿದ್ದ ಪಾತಕದ ಹೊರೆಯನ್ನು ತೊಲಗಿಸಿ, ಅಪರಾಧಿಯೆಂಬ ಆರೋಪವನ್ನೂ ತಪ್ಪಿಸಿ, ಬಿಡುಗಡೆಯನ್ನು ಮಾಡಿದ ಈ ದೈವೀಕೃತಮೂರ್ತಿಯನ್ನು ನಾನೇನೆಂದು ಹೇಳಬೇಕೋ ತಿಳಿಯೆನು ! ನಾನು ಬಿಡುಗಡೆಯಾದಂದೇ ಅಲ್ಲಿ ನಿಲ್ಲದೆ ಹೊರಟೆನು,—“ ಎಂದು ಇವಳಮುಂದೆ ನಿಂದು ಅಪರಾಧಕ್ಷಮೆಯನ್ನು ಬೇಡುವೆನು ? ” ಎಂಬುದೇ ನನ್ನ ಭಾವನೆಯಾಗಿದ್ದುದರಿಂದ ಈಗಲೇ ಇಲ್ಲಿಗೆ ಬಂದಿರುವೆನು. ಕೃಷ್ಣ ! ಮತ್ತೂ ಹೇಳುವೆನು, ಕೇಳು ? ನಾನಿನ್ನು ವಿರಾಗಿಣಿಯ ಅನುಮತಿಯನ್ನು ಹೊಂದಿ ವಿರಕ್ತ—

ವಿರಾ:—ಓಹೋ! ತಾಳುತಾಳು!! ರಾಜಶೇಖರ! ಮುಂದೆ ಹೇಳ ದಿರು! ನಿನಗಾಗತಕ್ಕ ವಿಧಿಯೇ ಬೇರೆ—

ರಾಜ:—ಅದಾವುದು? ವಿರಾಗಿಣಿ! ಕಟ್ಟುಮಾಡು! ನಿನ್ನಾಣತಿ ಯನ್ನು ಮೀರಲಾರೆನು!

ವಿರಾ:—ಮೀರಿದರೂ ಬಿಡುವವರಾರು? ನಿನ್ನ ಪ್ರಮಾಣಕ್ಕೆ ಇಲ್ಲಿ ರುವವರೆಲ್ಲರೂ ಸಾಕ್ಷಿಗಳಾಗಿರಲಿ! ಶ್ಯಾಮನಗರದಿಂದೆಲ್ಲರೂ ಬಂದರೇ?

ರಾಜ:—ನಾಳೆಯೇ ಬರುವರು.

ವಿರಾ:—(ಕೆಳಗಿಳಿದು) ಬರಲಿ! ನೀನು ಬಿಡುಗಡೆ ಹೊಂದಿದಬಳಿಕ ಮತ್ತಾರಿಗೂ ತೊಂದರೆಯಾಗಲಿಲ್ಲವಷ್ಟೆ?

ರಾಜ:—ಮತ್ತಾರಿಗೂ ಏಕಾಗುವುದು? ಸೋಮನಾಥನನ್ನೂ ಮಕ್ಕಳನ್ನೂ ವಿಚಾರಿಸಬೇಕೆಂದು ಪ್ರಯತ್ನಿಸಿದರು. ಆದರೆ, ನಾನೇ ನನ್ನ ತಪ್ಪಿತವೆಲ್ಲವನ್ನೂ ವಿವರವಾಗಿ ಹೇಳಿ, ಮುಂದೆ ಎಚ್ಚತ್ತಿರುವೆನೆಂದುದರಿಂದ ಆರಿಗೂ ಏನೊಂದೂ ಹಿಂಸೆಯುಂಟಾಗಲಿಲ್ಲ.

ಭಗವಾನಂದ:—(ಮುಂದೆಬಂದು) "ಅಕ್ಕಾ! ನಿನ್ನ ಮೈದುನನೊ ಡನೆ ಅಣ್ಣನು ಇಷ್ಟರಲ್ಲಿಯೇ ಬರುವೆನೆಂದು ಹೇಳಿಹೋ ಗಿರುವನು.

ವಿರಾ:—(ತಲೆದೂಗುತ್ತ) "ಬರಲಿ!"

ರಘು:—(ವಿಮಲಚಂದ್ರನ ಬೆನ್ನುತಟ್ಟುತ್ತ ವಿರಾಗಿಣಿಯನ್ನು ನೋ ಡಿ)—"ತಾಯಿ! ಈತನೇ ನಮ್ಮ ವಿಮಲಚಂದ್ರನಾಥನು! ನಿನ್ನ ನಾದಿನಿಯ ಸ್ವಾಮಿ!"

ವಿರಾ:—"ಪರಮಹಂಸರು!"

ರಘು:—(ಕುತೂಹಲದಿಂದ) ಅದೇನು ?

ವಿರಾ:—ಮತ್ತೇನು ? ಧರ್ಮಪತ್ನಿಯನ್ನು ಉಳಿದು, ಸ್ವದೇಶ, ಸಹಜಾತವರ್ಗ ಸ್ವಕರ್ತವ್ಯಗಳ ಹಂಗುದೊರೆದು, ವಿದೇಶಿಗಳಾಗಿ ಹೋಗುವುದೇ ಪರಮಹಂಸರ ಲಕ್ಷಣವು !

ವಿಸಯ:—"ಭಗಿನಿ ! ಅವೆಲ್ಲವೂ ಸಹವಾಸದೋಷವು !

ವಿರಾ:—"ಅಹುದು ; ಎಲ್ಲವೂ ಸಹವಾಸದೋಷವೇ ! ಆದರೆ, ಪುರುಷವರ್ಗವು, ಸಹವಾಸದೋಷಕಲುಷಿತವಾಗಿ ಕೆಟ್ಟು-ಬಿಟ್ಟುಹೋದಂದು, ಸ್ತ್ರೀಯರು ಮಾಡತಕ್ಕುದೇನು? ಸಾಯಬೇಕೋ ? ಸಂಕಟದಿಂದ ಬೆಯ್ಯಬೇಕೋ ? ಏನು ಮಾಡಬೇಕು ?

ವಿಮಲ:—ಹೆಂಗಸರೇನು ? ಹೇಗಾದರೂ ಜೀವಿಸಬಲ್ಲರು.

ವಿರಾ:—ಮಹಾಶಯ ! ಕೈಹಿಡಿದ ಹೆಂಡಿರನ್ನು ಕಾಪಾಡಲಾರದ ಹೇಡಿ ಗಂಡಂದಿರನ್ನು ಹೊಂದಿದ ಹೆಂಗಸರು. ಭಂಡಜೀವಿಗಳೋ—ತೊಂಡೆವೆಣ್ಣುಗಳೋ ಹೇಗೂ ಕಾಲಹರಣ ಮಾಡಬೇಕಾಗುವುದು ! ಆದರೆ ನಿಮ್ಮನ್ನು ಕೈಯಲ್ಲಾಗದ ಹೇಡಿಗಳೆಂದು ಹೇಳಲಿಲ್ಲ ? ವಿರಕ್ತರೆಂಬ ಭಾವನೆಯಿಂದ ನೀವು ಸ್ತ್ರೀಜಾತಿಯನ್ನೇ ಮೂರ್ಖಭಾವದಲ್ಲಿ ಅಲ್ಲಗಳೆವುದು ಸರಿಯಾದುದಲ್ಲ. ಹಾಗೂ ನೋಡಿ ಹೇಳಿರಿ ? ನಿಮ್ಮ ಪತ್ನಿ, ಪರಿತ್ಯಕ್ತೆಯಾಗುವಂತಹ ಅಪರಾಧವೇನನ್ನು ಮಾಡಿರುವಳು ?

ವಿಮಲ:—ಅವಳು ನಿರಪರಾಧಿನಿ : ಆದರೆ, ಇತರರ ತಪ್ಪಿಗಾಗಿ—

ವಿರಾ:—(ಉತ್ತೇಜಿತಸ್ವರದಿಂದ) "ಮತ್ತೂ ತತ್ವವಿದರಲ್ಲವೆ ? ಕ್ಷಮಾಗುಣವೂ ನಿಮ್ಮಲ್ಲಿಯೇ ಮೂರ್ತೀಭವಿಸಿರುವುದು ?

ಇಂದು, ಹೆರವರಿಗಾಗಿ ಅರ್ಧಾಂಗಿಯನ್ನೇ ತೊರೆದವರು, ಮುಂದೆ ಹೆರವರ ಆರ್ತ್ತತೆಗಾಗಿ ಮತ್ತೇನನ್ನಾದರೂ ಮಾಡಲು ಹಿಂದೆಗೆಯಲಾರರು !

ವಿಮಲ:—(ಅಪ್ರತಿಭನಾಗಿ) “ಭಗಿನಿ! ಕ್ಷಮಿಸಿರಿ! ಇಂದಿನವರೆಗೂ, ನನಗಾರೂ ಈಬಗೆಯಾಗಿ ಹಿತಸೂಚನೆಯನ್ನು ಕೊಟ್ಟಿರುವುದಿಲ್ಲ. ನಾನು ಈವರೆಗೂ ತಮ್ಮ ಮಂತ್ರಾಲೋಚನೆಯನ್ನು ತಿಳಿದಿರಲಿಲ್ಲ. ಇಂದು ನಿಮ್ಮ ಅಣ್ಣಂದಿರ ಮುಖದಿಂದಲೇ ತಿಳಿದೆನು.

(ವಿಮಲಚಂದ್ರನ ಮಾತು ಮುಗಿಯುವುದಕ್ಕೆ ಮೊದಲೇ ಮುರುಳೀನಾಥನನೊಡಗೂಡಿ ನಿರಂಜನನೂ ಬಂದನು. ಬಂದಾತನು, ಮೊದಲು ಶರಾವತಿಯನ್ನೇ ನೋಡಿದನು ತನ್ನನ್ನು ನೋಡಿ ಕಿಡಿಕಿಡಿಯಾಗಿ ಏಳುತ್ತಿದ್ದವಳ ಮುಂದೆಬಂದು ನಮಸ್ಕರಿಸಿ, ಎದ್ದುನಿಂದು ಕಿರುನಗೆಯಿಂದ ಕೇಳಿದನು)—“ಚಿಕ್ಕಮ್ಮಾ ' ಈವರೆಗೂ ನಾನು ನಿನ್ನ ಮಗನಾಗಿರಲಿಲ್ಲವಾದುದರಿಂದ ಅವಿಧೇಯನಂತೆಯೇ ಇದ್ದೆನು. ಇಂದು ಮಗನಾಗಿ ನಮಸ್ಕರಿಸಿರುವೆನು ಆಶೀರ್ವದಿಸುವುದೂ ಇಲ್ಲವೇ ಶಪಿಸುವುದೂ ನಿನ್ನ ಇಷ್ಟಕ್ಕೆ ಸೇರಿದುದು ' ಇನ್ನುಮುಂದೆಯಾದರೂ ನೀನು ಈ ಪುತ್ರನ ವಾಂಛೆಯನ್ನು ನಡೆಯಿಸಲಾಗುವುದೊ ? ಇಲ್ಲವೋ ? ಇನ್ನೂ ಕೋಪವೋ ? ಸಮಾಧಾನವಾಗಲೊಲ್ಲದೇ? ಹಾಗಾಗಿದ್ದರೆ ಇನ್ನೊಮ್ಮೆ ನಮಸ್ಕರಿಸಲೆ?”

(ಶರಾವತಿಯ ಸ್ಥಿತಿ ಆಗಧೆನವೇಳೆಯಲ್ಲಿ ಹೇಗಾಗಿರಬೇಕೆಂಬುದನ್ನು ಸೂಕ್ಷ್ಮಗ್ರಾಹಕರೇ ತಿಳಿಯಬಲ್ಲರು ' ಹೇಗೂ ಆನಂದಬಾಷ್ಪಾಕುಲಿತಲೋಚನೆಯಾಗಿ ಅನುಕಂಪಿತಸ್ವರದಿಂದ) ಅಪ್ಪಾ ! ಚಿರಸುಖಿಯಾಗು ನಾನೆಂದೂ ಕೆಟ್ಟವಳೇ ' ಆವರೂ ನೀವು ಸುಖಿಗಳಾಗಿದ್ದರೆ ನನಗೂ ಸಮಾಧಾನವುಂಟು

ನಿರಂ:—ಅಮ್ಮಾ! ಇಂದಿನ ನಿನ್ನ ಮೃದುನುಡಿಯನ್ನು ನಾನು ಹಿಂದೆ ಎಂದೂ ಕೇಳಿದುದಿಲ್ಲ. ನನಗಿದೇ ಬೇಕಾಗಿದ್ದುದು. ಇಂದಿನ ನಿನ್ನೀ ಮೃದುನುಡಿಯೇ ನನಗೆ ನೂತನಶಕ್ತಿಯನ್ನುಂಟುಮಾಡುತಿರುವುದು. ನನಗಿದೇಸಾಕು!! ಹೆಚ್ಚಿನ ಮಾತುಗಳು ಈಗಲೇ ಏಕೆ? (ಎಂದು ಮುಂದಕ್ಕಡಿಯಿಟ್ಟನು.)

ರಾಜ:—(ಓಡಿಬಂದು ನಿರಂಜನನ ಕೈಹಿಡಿದು)—ನಿರಂಜನ್! ವಿರಾಗಿಣಿಯಲ್ಲಿ ಕ್ಷಮೆಯನ್ನು ಬೇಡಿದೆನು.

ಮುರಳೀ:—ಅದಾರು! ವಿರಾಗಿಣಿ;

ನಿರಂ:—ಆರೆಂಬುದನ್ನು ತಿಳಿಯಬೇಕೆಂದೇ ಕರೆತಂದಿರುವೆನು. ನೀನೂ ನೋಡು ನಡೆ! (ಎಂದು ಮುರಳೀನಾಥ—ರಾಜಶೇಖರರೊಡನೆ ಮುಂದೆ ಬಂದು ನಿಂತನು.

ರಘು:—(ಆನಂದಾತಿಶಯದಿಂದ ಕರತಾಡನ ಮಾಡುತ್ತಾ) ಭಲೆ! ಭಲೆ!! ಉತ್ಸವದ ಮೇಲೆ ಉತ್ಸವ!!! ಇನ್ನು ನಾಲ್ಕುದಿನದಲ್ಲಿ ನಡೆಯಬೇಕಾಗಿರುವ ಸಂತೋಷಕೂಟಕ್ಕೆ ಇಂದೇ ಸುಸಂಧಿಯಾದಂತಿದೆ. ಆಗಲಿ! ಆಗಲಿ!! ಬನ್ನಿರಿ ಕುಳಿತುಕೊಳ್ಳಿರಿ.

ನಿರಂ:—ಓಹೋ ಸಂದೇಹವೇನು? ಸುಹೃತ್ಸಮಾಗಮವೇ ಸುಸಂಧಿಯಲ್ಲವೇ? (ವಿರಾಗಿಣಿಯ ಕಡೆಗೆ ಕೈನೀಡಿ ಕಿರುನಗೆಯಿಂದ ಮುರಳೀನಾಥನನ್ನು ಕುರಿತು) ಮುರಳೀನಾಥ! ನೀನು ಅಡಿಗಡಿಗೂ ಆರನ್ನು ಕೇಳುತ್ತಿದ್ದೆಯೋ ಆ ನಿನ್ನ ಅತ್ತಿಗೆಯೇ ಈ ವ್ಯಕ್ತಿಯೆಂದು ತಿಳಿ? ನಿನ್ನ ತಂಗಿಯ ಕ್ಷೇಮಾಭ್ಯುದಯಕ್ಕೆಂದು ಹೋರಾಡುತ್ತಿರುವ ವಿರಾಗಿ

ಣಿಯೇ, ಈ ಮೂರ್ತಿಯೆಂದೆಣಿಸು ! (ವಿರಾಗಿಣಿಯನ್ನು ನೋಡಿ) ತಾಯಿ ! ಈತನೇ ನಿನಗೆ ಹಿತೈಷಿಯಾದ ವೈದ್ಯನು ! ಇಂದಿಗೆ ನನ್ನ ಹಿಂದಿನಮಾತು ನೆರವೇರಿದಂತಾಯ್ತಲ್ಲವೆ ?

ಮುರಳಿ:—(ಮುಂದೆಬಂದು) ಬಾಷ್ಪಾಕುಲಿತಲೋಚನನಾಗಿ ಗದ್ಗದಸ್ವರದಿಂದ) ಅತ್ತಿಗೆ ! ಈವರೆಗೂ ಉಪೇಕ್ಷಿಸಿದುದೇಕೆ ? ನನ್ನನ್ನು ಕೃತಘ್ನನೆಂದೊ ? ಧರ್ಮಕರ್ಮಸೂಕ್ಷ್ಮದೃಷ್ಟಿಯನ್ನು ಕಳೆದುಕೊಂಡವನೆಂದೊ ? ಅಥವಾ, ಇವನಿಂದೇನಾಗತಕ್ಕುದೆಂದೊ ? ಏತಕ್ಕಾಗಿ ತಡೆದಿದ್ದುದು ? ಅಂದೇ ನಾನು, ಲಿಖಿತಮೂಲಕವಾಗಿ ನೀನು ಎರಡನೆಯ ತಾಯಾಗಿರುವೆಯೆಂದು ಸಪ್ರಮಾಣವಾಗಿ ಹೇಳಿರಲಿಲ್ಲವೇ ? ಏಕೆ ಮರೆತಿದ್ದುದು ? ತಾಯಿ ! ಕುಲ, ಧರ್ಮ, ಕೀರ್ತಿಗಳನ್ನು ಕಾಪಾಡಿದ ನಿನ್ನನ್ನು ಮತ್ತೆ ತೋರಿಸಿದ ಭಗವಂತನಿಗೂ, ಪೂಜ್ಯಳಾಗಿರುವ ನಿನಗೂ ಇದೋ ವಂದಿಸುವೆನು. (ಎಂದು ಅರೆಬಾಗಿ ನಮಸ್ಕರಿಸಲು, ಹೋದನು.)

ವಿರಾ:—(ಹಿಂದಕ್ಕೆ ಸರಿದು) ಆಗದು ; ಈ ಯುಪಚಾರವು ನನಗೆ ಇಷ್ಟವಾಗದು !! ನಾನೇನು ಮಹತ್ಕಾರ್ಯಮಾಡಿದೆನೆಂದು ಹೊಗಳಿಕೆ ? ನನಗಿದಾವುದೂ ಸಲ್ಲದು !!! ನಾನು ನಿಮ್ಮನ್ನೆಂದಿಗಾದರೂ ಮರೆವುದನ್ನಾಗಲೀ, ತೊರೆವುದನ್ನಾಗಲೀ, ಜರಿವುದನ್ನಾಗಲೀ ಅರಿತಿಲ್ಲ. ಈ ವರೆಗೂ ತಡೆದಿದ್ದುದಕ್ಕೆ ಕಾರಣಗಳು ಅನೇಕವಾಗಿವೆ. ಅದರೆ ಸಹನೆಯೊಂದಿರಬೇಕಲ್ಲವೆ ?

ಮುರಳೀ:—(ಕಂಪಿತಸ್ವರದಿಂದ) ಅತ್ತಿಗೆ ನಿನಗೆ ಪ್ರತಿಯಾಗಿ

ಹೇಳಲಾರೆನು. ಇನ್ನಾದರೂ ನೀನು ಮನೆಗೆ ಬರಲು ತಡೆಯೇಕೆ ? ಅತ್ತೆಮಾವಂದಿರನ್ನು ನೋಡಬೇಡವೆ ?

ವಿರಾ:—ತಡೆಯಿಲ್ಲವಾದರೂ ಇನ್ನು ಸಕಾಲವೊದಗಿಲ್ಲ. ಕಾಲವೊದಗದೆ ಕರ್ಮಸಿದ್ಧಿಯಾಗಲಾರದಷ್ಟೆ? ಆದರೂ ನನ್ನ ವಂದನೆಗಳನ್ನು ಗುರುಜನರಿಗೆ ನಿವೇದಿಸಬೇಕೆಂದು ಕೋರುವೆನು. ಪತ್ನಿಯನ್ನು ಕರೆತಂದಿಲ್ಲವೆ ?

ಮುರಳಿ:—ಕರೆತಂದು ಹದಿನಯ್ದು ದಿನಗಳಾಗಿರಬಹುದು.

ವಿರಾ:—ತಾರಾಮಣಿ ಹೇಗಿರುವಳು ?

ಮುರಳೀ:—ತಿಂಗಳಿಂದ ಕ್ಷಯರೋಗದಲ್ಲಿ ನರಲುತ್ತ ಹಾಸಿಗೆ ಹತ್ತಿ ಮಲಗಿರುವಳು.

ವಿಮಲ:—(ಆತುರದಿಂದ) ಏನು ಏನು ? ಕ್ಷಯರೋಗವೇ ?

ವಿರಾ:—ಹೆಂಗಸರಿಗೇನು ? ಸಂತೋಷಭರದಿಂದ ಸೋಮಾರಿತನವೇ ! ಕ್ಷಯವೇಕೆ ? ಏನಾಗಿದ್ದುದಕ್ಕೆ ಕ್ಷಯ ?

ವಿಮಲ:—ತಾಯಿ ! ಕ್ಷಮಿಸಿ, ಮುರಳೀನಾಥ ! ನಿನ್ನ ತಂಗಿಗೆ ಕ್ಷಯವೇ ? ನಿಜವಾಗಿ ?

ಮುರಳೀ:—(ತಿರುಗಿನೋಡಿ ಸಂಭ್ರಮದಿಂದ) ಓಹೋ ? ಅಲಭ್ಯಲಾಭ ! ಯದೃಚ್ಛಾಗಮನ !! ಉತ್ಸವದ ಮೇಲೆ ಉತ್ಸವ !!! ಇದಾವಾಗ ಬಂದುದು ? ಮನೆಗೆ ಬಾರದೇಕೆ ಉಳಿದುದು ?

ವಿರಾ:—ಮನೆಯಲ್ಲಿಲ್ಲದೆ ಈಗ ಮತ್ತೆಲ್ಲಿರುವರು ? ಈಗ ಮಿಕ್ಕ ಮಾತೆಲ್ಲವೂ ಹಾಗಿರಲಿ ; ತಂಗಿಯನ್ನು ಮೊದಲು ಸ್ವಾಮಿಸಂದರ್ಶನಲಾಭದಿಂದ ಕೃತಕೃತ್ಯಳನ್ನಾಗಿ ಮಾಡುವುದು ಮುಖ್ಯವಲ್ಲವೆ ?

ವಿಮಲ:—ಇಲ್ಲ, ಈಗಲೇ ನಾನಲ್ಲಿಗೆ ಹೋಗಲಾರೆನು.

ರಘು:—ಸಹಜ ! ದುಡುಕಿಹೋಗುವುದೂ ಅಪಾಯಕರವೇ ! ಮೊದಲು ಸೂಚನೆಯನ್ನು ಕೊಟ್ಟು ಎಚ್ಚರಿಸುವುದೊಳ್ಳಿತು. ಆ ಬಳಿಕ ಮುಂದೆ ನಿಲ್ಲುವುದರಿಂದ ಕ್ಷೇಮವೂ ಉಂಟು.

ವಿನಯ:—(ಎದ್ದುನಿಂತು) ಇನ್ನು ಅಪ್ಪಣೆಯೋ ?

ರಘು —ಅದೇನಯ್ಯಾ ! ಇಷ್ಟು ಆತುರಪಡುವೆ ?

ವಿನಯ.—ನನಗೇನೂ ಆತುರವಿಲ್ಲ. ನಮ್ಮ ಸಬ್‌ರೆಜಿಸ್ಟ್ರಾರವರಿಗೆ ಹೊತ್ತಾದೀತೆಂಬ ಚಿಂತೆಯಿಂದ,—

ನಿರಂ:—ಓಹೋ ! ಅದೆಂತಹ ಅರಸಿಕ ಸಬ್‌ರೆಜಿಸ್ಟ್ರಾರೊ ? ಇಂತಹ ಸಂಭ್ರಮಕೂಟದಿಂದ ನುಸುಳಿಹೋಗಬೇಕೆನ್ನುವನು ಮಾನವನೇನು ?

ಭಗ:—ಇಲ್ಲ ! ಅಣ್ಣಾ ! ಸುಮ್ಮನೆ ಹೊತ್ತುಕಳೆವುದರಿಂದ ನಮ್ಮ ಮಾಸ್ಟರವರಿಗೆ ತೊಂದರೆಯಾಗಬಹುದು ?

ರಘು:-ಭಲೆ ! ಭಲೆ !! ನಿಜವಾದ ವಿದ್ಯಾರ್ಥಿ !!! ಅಹುದು, ಒಪ್ಪಿವೆ ! ಗುರುಭಕ್ತಿಯೂ ಇರಬೇಕು. ನಿಜಕಾರ್ಯಾಸಕ್ತಿಯೂ ಇರಬೇಕು ! ನನಗೂ ಸಂತೋಷವೇ !

ನಿರಂ:—ಹಾಗಿದ್ದರೆ, ಉಳಿದ ವಿಚಾರವೆಲ್ಲವೂ ನಾಳೆಗಿರಲಿ. ಇನ್ನು ಹೊರಡಲೆ ?

ಮುರಳೀ:—(ವಿರಾಗಿಣಿಯನ್ನು ನೋಡಿ) ಅತ್ತಿಗೆ ! ಮನೆಗೆ ಬರುವುದಕ್ಕೇನು ಹೇಳುವೆ ?

ರಘು:—ಮುರಳೀನಾಥ ! ನಿಮ್ಮ ಅತ್ತಿಗೆ ಈಗಲೇ ಎಲ್ಲಿಗೂ ಬರಲಾರಳು. ಆನಂದಭವನಪ್ರವೇಶ ಮಹೋತ್ಸವದ ದಿನವೇ ನಿಮ್ಮ ತಾಯ್ತಂದೆಗಳನ್ನು ಸಂದರ್ಶಿಸುವಳು !

ಮುರಳೀ:—ಹೇಗೆ ಸಮ್ಮತವೋ ಹಾಗೆ ನಡೆಯಲು ಸಿದ್ಧನಾಗಿರುವೆನು. ನಾನಿನ್ನು ಹೊರಡುವೆನು.

ರಘು + ವಿರಾ:—ಆಗಬಹುದು.

(ಮುರಳೀನಾಥನು ಮುಂದಾದನು. ವಿನಯಚಂದ್ರ-ವಿಮಲಚಂದ್ರರೂ ಹೊರಟರು. ರಾಜಶೇಖರ–ನಿರಂಜನ–ಭಗವಾನಂದರೂ ಜತೆಯಾಗಿನಡೆದರು)

ಭಗ:—(ಶರಾವತಿಯನ್ನು ನೋಡಿ) ಚಿಕ್ಕಮ್ಮ ! ಶ್ಯಾಮನಗರದಿಂದ ಎಲ್ಲರೂ ನಾಳೆ ಬರುವೆವೆಂದು ನಿನಗೆ ತಿಳಿಯಹೇಳುವಂತೆ ಅಮ್ಮನು ನನಗೆ ಕಟ್ಟುಮಾಡಿರುವಳು.

ಶರಾ:—(ಗದ್ಗದಸ್ವರದಿಂದ) ಎಲ್ಲವೂ ಭಗವದಿಚ್ಛೆ ! ಇಂದಿಗಾದರೂ ಕೃಪೆಯಿತ್ತು ಬಂದಿತೆಂದು ಸಂತೋಷಿಸುವೆನು.

ನಿರಂ:—ಆಗಲಿ, ಅಮ್ಮ ! ಹೇಗಾದರೂ ಹೇಳುತ್ತಿರು ? ನಾನಿನ್ನು ಹೊರಡುವೆನು. ನಾಳೆಯೇ ನೀನು ಮನೆಗೆ ಬರಬೇಕಾಗಿದೆ. ಎಂತೂ ತಪ್ಪಿಸಿಕೊಳ್ಳಲಾಗದು.

ಶರಾ:—ಬದುಕಿದ್ದರಾಗಲಿ. ನೀನೇ ಕರೆಯುತ್ತಿರುವಾಗ ನಾನೇಕೆ ಒಲ್ಲೆ ನೆನಬೇಕು ?

ನಿರಂ:—" ಒಲ್ಲೆನೆಂದರೂ—ವಲಿವಂತೆ ಮಾಡಬಲ್ಲೆನು. ಇರಲಿ, ಇದೇ ವಾತ್ಸಲ್ಯವೇ ಸ್ಥಿರವಾಗಿರಲಿ " (ಎಂದು ಹೇಳಿ ಹೊರಟುಹೋದನು. ಶರಾವತಿಯೂ ಮಗನ ಆಗ್ರಹ-ಪ್ರಾರ್ಥನೆ-ಅಭಿಮಾನಗೌರವಗಳಿಂದ ಕ್ಷಣಮಾತ್ರದಲ್ಲಿಯೇ ಪರಿವರ್ತಿತೆಯಾದಳು. ಮನಸ್ಸು ಪ್ರಸನ್ನವಾಯಿತು. ಮಗನ ಮೇಲಿದ್ದ ದ್ವೇಷಭಾವವೂ ದೂರವಾಯಿತು. ತನ್ನ ಈವರೆಗಿನ ಶಠತೆಗೆ ಪರಿತಪಿಸುವಂತಾಗಿ ಎದ್ದು ಕಾರ್ಯದಲ್ಲಿ ತೊಡ-

ಗಿದಳು. ಅಂದಿನ ಸಂಭ್ರಮದಲ್ಲಿ ತುಂಗಭದ್ರೆಯೊಬ್ಬಳಲ್ಲದೆ, ಉಳಿದವರೆಲ್ಲರೂ ಸಹಭಾಗಿಗಳಾಗಿದ್ದರು.)

ಪ್ರಿಯ ಸೋದರಿಯರೇ !

ಈಗಳಲ್ಲವೇ ಮುಂದಾಲೋಚನೆಯಿಲ್ಲದ ಮೂಢರ ಪರಿಣಾಮವೇನೆಂಬುದು ಪ್ರತ್ಯಕ್ಷಪ್ರಮಾಣವಾಗಿರುವುದು. ಆವವ್ಯಕ್ತಿ ಕೇವಲ ನಿಕೃಷ್ಟ ಭಾವದಿಂದ ನಿಷ್ಠುರಕ್ಕೆ ಗುರಿಯಾಗಿದ್ದುದೋ, ಅದೇ ವ್ಯಕ್ತಿ ಇಂದು ಎಷ್ಟು ಉತ್ಕೃಷ್ಟಭಾವದಿಂದ ಸ್ತುತಿಯಿಸಲ್ಪಡುತ್ತಿದೆಯೆಂಬುದನ್ನೂ, ವ್ಯಕ್ತಿತಾರತಮ್ಯಜ್ಞಾನವಿಲ್ಲದೆ ದುಡುಕುವ ಜಡರಿಗೆ ಎಡರೇನೆಂಬುದನ್ನೂ ಪವಿತ್ರಪಾತ್ರಗಳಲ್ಲಿ, ಸ್ವಕಾರ್ಯಸಾಧನೆಗೆಂದು ಅಪಲಪಿಸುವ ಮೂರ್ಖರಿಗಾಗಿರುವ ಫಲವೇನೆಂಬುದನ್ನೂ ಚೆನ್ನಾಗಿ ತಿಳಿದಿರಬಹುದು. ಆಗಲಿ, ತಿಳಿಯಿರಿ ! ವಿಚಾರಮಾಡಿರಿ !! ಎಚ್ಚರಗೊಳ್ಳಿರಿ ; ಮಾತೃಜೀರ್ಣೋದ್ಧಾರ ಮಹತ್ಕಾರ್ಯದಲ್ಲಿ ಮುಂದಾಗಿ ಕೃತಕೃತ್ಯರಾಗಿರಿ !!!

॥ ಶ್ರೀಃ ॥

# ದ್ವಾದಶ ಪರಿಚ್ಛೇದ.

(ಅನುತಾಪ)

ಕರ್ಮಫಲವು ಆರನ್ನೂ ಬಿಟ್ಟುದಲ್ಲ! ಬಿಡತಕ್ಕುದೂ ಅಲ್ಲ.
ಅದು ಪ್ರತಿಪ್ರಾಣಿಯನ್ನೂ ಅವರವರ ತುಚ್ಛೋಚ್ಚ ಫಲಾನುಭವ
ದಲ್ಲಿ ಬಿಗಿದುಹಾಕದೆ ಬಿಡಲೊಲ್ಲದು. ಅದು ಅಧಿಕಾರಿಯೆಂದಾಗಲೀ,
ಆಶ್ರಿತನೆಂದಾಗಲೀ, ಶ್ರೀಮಂತನೆಂದಾಗಲೀ, ಮನ್ನಣೆ-ಉಪೇಕ್ಷೆಗ
ಳಿಂದ ಬಿಡತಕ್ಕುದಾಗಿಲ್ಲ. ಇದಕ್ಕೆ ಉದಾಹರಣೆಗೆಂದರೆ—ಪೂರ್ವ
ಜರಾದ ನಮ್ಮ ಆರ್ಯಮಹನೀಯರ ಅದ್ಭುತಚರಿತೆಗಳನ್ನು ನೋಡಿ
ದರೆ ಸಾಕಾಗಿದೆ. ಆದರಿಂದಲೇ ಕವಿವರನಾದ ಭರ್ತೃಹರಿಯೂ
ಕರ್ಮಕ್ಕಾಗಿ—"ಗುಣವದಗುಣವದ್ವಾ ಕುರ್ವತಾಕಾರ್ಯಜಾತಂ
ಪರಿಣತಿರವಧಾರ್ಯಾಯತ್ನತಃ ಪಂಡಿತೇನ । ಅತಿರಭಸಕೃತಾನಾಂ
ಕರ್ಮಣಾಮಾವಿಪತ್ತೇ ರ್ಭವತಿ ಹೃದಯದಾಹೀ ಶಲ್ಯತುಲ್ಯೋ
ವಿಪಾಕಃ ॥೧॥ ಮತ್ತೂ—"ನೈವಾಕೃತಿಃ ಫಲತಿ ನೈವಕುಲಂ
ನಶೀಲಂ ವಿದ್ಯಾಪಿನೈವ ನಚಯತ್ನಕೃತಾಪಿಸೇವಾ । ಭಾಗ್ಯಾನಿ
ಪೂರ್ವತಪಸಾ ಖಲುಸಂಚಿತಾನಿ ಕಾಲೇ ಫಲಂತಿ ಪುರುಷಸ್ಯಯ
ಥೈವವೃಕ್ಷಾಃ ॥೨॥ ಎಂದು ವಿಮರ್ಶಿಸಿರುವನಲ್ಲವೆ? ಇರಲಿ. ಹೇ
ಗೂ ಕರ್ಮಫಲಾನುಭವದಲ್ಲಿ ನಾವೆಲ್ಲರೂ ಬದ್ಧರೇ ಸರಿ. ಪ್ರಕೃ
ತದಲ್ಲಿ, ತುಂಗಭದ್ರೆಗೆ ಅವಳ ಕರ್ಮವಾಸನಾರೋಗವು ಬಲವತ್ತ

ರವಾಗಿ ಕಾಡುತ್ತಿರುವುದು, ರೋಗಚಿಂತೆಯೊಂದೆಡೆ, ಹೃತ್ತಾಪವು ಮತ್ತೊಂದೆಡೆ ; ಪ್ರತ್ಯಹದ–ಪ್ರತ್ಯಕ್ಷ ಪ್ರಮಾಣದ–ಪ್ರತಿಕ್ಷಣದ ನಿಷ್ಠುರವೊಂದೆಡೆ ; ಎಂತೂ " ಮೂರುಕೂಡೆ ಪೂರ್ವಸುಕೃತ " ವೆಂಬಂತೆಯೇ ಈಗಲೀಗ ತುಂಗೆ, ಪಾಪ, ಶೋಕಾನಲಸಂತಪ್ತೆಯಾಗಿ ಹೊರಹೊರಳುತ್ತಿರಬೇಕಾಗಿದೆ. ಸಮಾಧಾನವೆಂಬ ಶಬ್ದವೇ ಕೇಳದು. ತಾಯಿ ಹೊರದೂಡಿದಳು ; ಕಿರುದಾಯಿ ಬಡಿದು ಬಯ್ದುಬಿಟ್ಟಿದಳು. ಕಿರಿಯಣ್ಣನಂತೂ ಅಡಿಗಡಿಗೂ ತನ್ನ ನಡೆಯನ್ನೂ ಸೇರಿಸಿ, ಹಂಗಿಸಿ, ಭಂಗಿಸುತ್ತಿರುವನು. ರಘುನಾಥನೆಂದರೆ ಕಡೆಗಣ್ಣಿಂದಾದರೂ ನೋಡಲೊಲ್ಲನು. ಅತ್ತಿಗೆಯ ವಿಚಾರವೆಂತೂ ಹೇಳಬೇಕಾದುದಿಲ್ಲ. ತನ್ನಿದಿರೆ ಬರಲಾಗದೆಂಬುದೊಂದು ನುಡಿಯಿಂದಲೇ ದೂರಕ್ಕಟ್ಟಿದಳು. ಇನ್ನೇನುಮಾಡಬೇಕು ?

ಸಹೃದಯಸೋದರಿಯರೇ !

ಈಗ ಹೇಳಿರಿ ? ವಿಲಾಸ- ವಿಭ್ರಮಾದಿಗಳ ಪರಿಣಾಮವೆಂತಹುದೆಂಬುದನ್ನೂ, ವಿಷಯಪರ್ಯವಸಾನವೇನೆಂಬುದನ್ನೂ. ಇಂದ್ರಿಯವೇಗವನ್ನು ತಡೆಯಲಾರದೆ ದುರ್ಮುಖರ ಬೆಳ್ನುಡಿಗೆ ಮರುಳಾಗಿ ನಿಜಧರ್ಮವನ್ನು ಅತಲಜಲದಲ್ಲಿ ಕೆಡಹಿ ತಿರುಗುವ ದುರ್ನಾರಿಯರ ಸುಖಭೋಗ ಸಂಪತ್ತಿಯ ರೀತಿ–ಗತಿ–ಪರಿಮಿತಿಗಳೆಷ್ಟೆಂಬುದನ್ನೂ ಈಗಲಲ್ಲವೇ ತಿಳಿದು ಹೇಳಬೇಕು ? ಸ್ವೇಚ್ಛೆಯಾಗಿ ವಿಹರಿಸುತ್ತಿರುವ ಮೃಗವನ್ನು ಬಂಧನದಲ್ಲಿಟ್ಟರೆ ಆಗಳದರ ರೀತಿಯೇನಾಗಿರುವುದು ? ತೊಡರಿಲ್ಲದೆ ತಿರುಗುತ್ತಿದ್ದುದರ ಕಾಲ್ಗಳನ್ನೇ ಕಡಿದುಹಾಕಿದಲ್ಲಿ ಅದರ ಗತಿಯೇನಾಗಬಹುದು ? ಕಾಮವಾಸನೆಗೊಳಪಟ್ಟು ವಿಷಯಗಳನ್ನು ವಿವಿಧಗತಿಯಿಂದ ಸವಿನೋಡುತ್ತಿದ್ದು

ದರ ಜಿಹ್ವಾ-ಘ್ರಾಣ-ಚಕ್ಷುರಿಂದ್ರಿಯಗಳನ್ನೇ ಕಿತ್ತು ಬಿಸುಟಂದು, ಆಗಳವರ ಸುಖಾನುಭವ ಪರಿಮಿತಿಯೇನಾಗುವುದೆಂಬುದನ್ನು ನಮ್ಮ ಸೋದರಿಯರೇ ವಿಚಾರಮಾಡಿದರೆ ಸಾಕು? ಮಿಕ್ಕವರ ಮಾತಂತಿರಲಿ. ಪ್ರಕೃತದಲ್ಲಿ ಎಚ್ಚರಿಕೆಗೆ ಉದಾಹರಣಪಾತ್ರವಾದ ತುಂಗೆಗೆ ಮತ್ತೆಲ್ಲಿಯೂ ನಿಲ್ಲಲು ಅವಕಾಶವು ತಪ್ಪಿತು. ಸಾವಿಗೂ ದಾರಿಯಿಲ್ಲವಾಯ್ತು. ಆಹಾರ ನಿದ್ರೆಗಳೂ ದೂರವಾದುವು' ನಿಟ್ಟುಸಿರು, ಕಣ್ಣೀರು, ಇವೆರಡು ಮಾತ್ರವೇ ಇವಳನ್ನು ಬಿಟ್ಟುಹೋಗಲೊಲ್ಲದೆ, ಅಡಿಗಡಿಗೆ ಸೇವಿಸುತ್ತಿರುವುವು. ಗತ್ಯಂತರವಿಲ್ಲದೆ ಹಂಬಲಿಸುತಿದ್ದವಳಿಗೆ ವಿರಾಗಿಣಿಯೇ ಕೈಯಿತ್ತು ಕರೆತಂದು ಬಿಡದಿಯಲ್ಲಿ ನೆಲೆಗೊಳಿಸಬೇಕಾಯಿತು. ಈಗಲೂ ತುಂಗಾಭದ್ರೆ ಬಿಡದಿಯಲ್ಲಿಯೇ ಬಿದ್ದು ಹೊರಹೊರಳಿ ನರಳುತ್ತಿರುವಳು.

ವಿರಾಗಿಣಿಯೆಂದರೆ, ಈಗ ಕೃಷ್ಣವೇಣಿಯನ್ನು ಬಿಟ್ಟು ಅತ್ತಿತ್ತ ನಿಲ್ಲುವಂತಿಲ್ಲ. ಆವಾಗಲೂ ಅವಳೊಡನೆಯೇ ಸುಖಸಲ್ಲಾಪದಿಂದಿರಬೇಕು. ಅಲ್ಲದೆ ಕೆಳಗಿಳಿದು ಬಂದಾಗಲೂ ಲಕ್ಷ್ಮೀದೇವಮ್ಮ ಶರಾವತಿಯರ ಆದರ-ಸನ್ಮಾನಗಳೂ, ರಘುನಾಥ ಸಾಬಲರ ವಿವಿಧವಿಚಾರವಿಮರ್ಶೆಯೂ ತಡ ತಡದು ನಿಲ್ಲಿಸಿಕೊಳ್ಳುತಲಿರುವುವು. ಮಾಡತಕ್ಕುದೇನು? "ಸಂಘಯುಕ್ತ್ಲಾಮ ಸಣ್ಣ ಸಂತರ್ಪಣ್" ಎಂಬಂತೆ ಹೇಗೂ ದಿನ ಬಂದಕ್ಕೆ ನಾಲ್ಕಾರುಬಾರಿಯಾದರೂ ಬಂದು ತುಂಗೆಗೆ ಸಮಾಧಾನವನ್ನು ಹೇಳದೆ ಬಿಡುತ್ತಿರಲಿಲ್ಲ. ಆದರೆ ಇಂದು ಮಧ್ಯಾಹ್ನದಿಂದೀವರೆಗೂ ಬಂದಿಲ್ಲ. ತುಂಗೆಯು ಬಡಲಬೇನೆಗೆ ಪಡಿನುಡಿವವರಿನ್ನಾರೂ ಇಲ್ಲದೆ, ಮಗುಡದಿಂದ ತಡೆಯಲಾರದೆ ಹಲಬುತ್ತಿರುವಳು. ಏಳುವಳು, ಬೀಳುವಳು;

ಬೆದರಿ ನೋಡುವಳು; "ಹೋ" ಎಂದು ಬೊಬ್ಬಿರಿದು ಬೀಗುವಳು. ಆದರೂ ಅವಳೆದಿರಾಗಿ ಆರೂ ನಿಲ್ಲರು. ಕಡೆಗೆ, ತುಂಗಭದ್ರೆ ಮಂಡಿಯೂರಿ ಕುಳಿತು, ಕೈನೀಡಿ ದೈನ್ಯದಿಂದ ಮೇಲೆ ನೋಡಿ ಕಣ್ಣೀರು ಸುರಿಸುತ್ತ,—ಅಯ್ಯೋ! ದುರ್ದೈವವೇ! ನಿನಗೆ ಕಣ್ಣಿಲ್ಲವೆ? ಇನ್ನೂ ಕೃಪೆಬಾರದೇ? ಸಾಲದೇ? ತಣಿಯದೇ? ಇನ್ನೆಷ್ಟು ನೋಡುವೆ? ನಲಿದಾಡುವೆ? ಸಾಕುಮಾಡು! ನಿಷ್ಠುರ! ವಿಧಾತ!! ನೀನೇಕೆ ಹುಟ್ಟಿಸಿದೆ? ಏತಕೀ ಭವಣೆಗೆ ಗುರಿಮಾಡಿದೆ? ದುರ್ಗುಣವನ್ನೇ ತುಂಬಿಟ್ಟು ನನ್ನನ್ನೇಕೆ ಹಾಳುಮಾಡಿದೆ? ಆವ ಉದ್ದೇಶದಿಂದ ನನ್ನನ್ನು ಇನ್ನೂ ನರಲಿಸುತ್ತಿರುವೆ? ನಿರ್ದಯ! ಈ ನನ್ನ ಅನುಭವವೇ ಸಾಕು! ಇದೇ ನನ್ನಂತಹ ನಿರ್ಭಾಗ್ಯನಾರಿಯರಿಗೆ ಎಚ್ಚರಿಕೆಯಾಗಿರಲಿ!! ಇನ್ನಾದರೂ ನಿನ್ನ ಸೃಷ್ಟಿಯಲ್ಲಿ ಧರ್ಮದೃಷ್ಟಿಯನ್ನಿರಿಸು! ನನ್ನಂತಹ ಪಾತಕಿಯರ ಸೃಷ್ಟಿಯನ್ನು ತ್ಯಜಿಸು. ಅಷ್ಟುಮಾತ್ರ ಮಾಡು. ನಿನ್ನ ಕಾರಿಣ್ಯಾಚಿತ್ತವು ಹಾಳಾಗದೇ? ನಿನ್ನ ಪಕ್ಷಪಾತದೃಷ್ಟಿ ಅಳಿಸಿಹೋಗದೆ?—(ತುಂಗೆಯ ಉನ್ಮಾದಪ್ರಲಾಪದ ಮಧ್ಯದಲ್ಲಿಯೇ ಬಂದ ಚಂದ್ರಭಾಗೆ, ಬಿಡದಿಯ ಬಾಗಿಲಲ್ಲಿಯೇ ನಿಂತು ಬಲುಹೊತ್ತು ನೋಡಿ, ಕೇಳುತ್ತಿದ್ದವಳು; ಇನ್ನುಮುಂದೆ ಸಹಿಸಲಾರದೆ ಇದಿರಾಗಿ ಕುಳಿತು, ತುಂಗಭದ್ರೆಯ ಕೈಹಿಡಿದು ಕನಿಕರದಿಂದ) ತುಂಗೆ! ಹೀಗೇಕೆ ಹಂಬಲಿಸುವೆ? ಬರಿದೇಕೆ ಕನಲುವೆ? ವಿಧಿಯನ್ನೇಕೆ ಬಯ್ಯುವೆ? ಸಾಕುಮಾಡು. ನಿನ್ನ ಕರ್ಮಫಲವನ್ನು ನೀನುಣ್ಣಬೇಕಲ್ಲದೆ ಸೃಷ್ಟಿಕರ್ತನನ್ನೇಕೆ ಹಳಿಯಬೇಕು? ಹುಟ್ಟುವಾಗ ನಿನ್ನಲ್ಲಿ ಅವನೇನೂ ದುರ್ಗುಣಗಳನ್ನು ತುಂಬಿರಲಿಲ್ಲ. ನಿನಗೆ ನೀನೇ ಕೆಟ್ಟೆ!!

ತುಂಗ:—(ವಿಕೃತಸ್ವರದಿಂದ) ಚಂದ್ರಭಾಗೆ! ಕ್ಷಮಿಸು! ನಾನು ಉನ್ಮತ್ತೆಯಾಗಿರುವೆನು. ಇನ್ನು ನಾನೀ ಭೂಮಿಯಲ್ಲಿರಲಾರೆನು. ಈ ಮಹತ್ತರ ಪಾಪಕರ್ಮದ ಹೊರೆಯನ್ನು ಹೊತ್ತು ಜೀವಿಸಲಾರೆನು. ನನಗೆ ಪ್ರತಿಕ್ಷಣವೂ ಯುಗದಂತಾಗಿದೆ. ಏನುಮಾಡಲಿ? ನನ್ನಿಂದಾಗದು!! ಈಗ ನನ್ನನ್ನು ಯಾರೂ ಗಣಿಸುವವರೇ ಇಲ್ಲ! ನಾನಿಂದು ಹುಲ್ಲಿಗೂಕಡೆ!! ಅಯ್ಯೋ! ಆ ನನ್ನ ಹಿಂದಿನ ಹೆಮ್ಮೆಯೇನಾಯ್ತು? ಆ ನನ್ನ ಬೆಡಗೆಲ್ಲಿ ಹಾಳಾಯ್ತು? ಅ ನನ್ನ ನಟನೆಯೇನಾಗಿ ತಿರುಗಿತು? ಹೇಳಬಲ್ಲೆನೆ? ತಡೆಯಬಲ್ಲೆನೆ? ನನ್ನನ್ನು ಈ ದೆಸೆಗೆ ತಂದವರಾರು? ನಿನ್ನ ಗಂಡನ ದುರ್ಬೋಧನೆಯಲ್ಲವೇ? ಚಂದ್ರಭಾಗೆ! ಆ ನನ್ನ ಅಪಾರವಾದ ಹಣಕ್ಕಾಗಿ ನಿನ್ನ ಗಂಡನಲ್ಲವೇ ನನ್ನನ್ನು ಈ ವಿಷಯವಾಸನೆಗೆ ಎಳೆದುದು? ಆತನಿಗಾಗಿ ನಾನು ಎಷ್ಟು ನಷ್ಟಪಟ್ಟೆನು? ಆತನ ದುರ್ಬೋಧನೆಗೆ ಮರುಳಾದಮೇಲಲ್ಲವೇ ನಾನು ಬಗೆಬಗೆಯಾಗಿ ಬೆರೆದು—ಮೆರೆದು—ತಿರುತಿರುಗಿ ಹಾಳಾದುದು? ಆದರೆ, ನಿನ್ನ ಗಂಡನನ್ನೂ ಏಕೆ ನಿಂದಿಸಲಿ? ನನ್ನ ಮನಸ್ಸನ್ನೇ ನಾನು ಬಿಗಿಯಾಗಿಡಲಾರದಿದ್ದುದರಿಂದಲ್ಲವೇ? ನನಗೀ ದೆಸೆಯುಂಟಾಗಿರುವುದು? ನನಗೇಕೆ ಮರುಳ್ತನವುಂಟಾಯ್ತು! ನನ್ನ ಮರುಳ್ತನಕ್ಕೆ ತಾಯ ಲಾಲನೆಯೇ ಕಾರಣವಲ್ಲವೇ? ಅವಳಲ್ಲವೇ ನನ್ನನ್ನು ಮನಸ್ವಿಯಾಗಿ ಬೆಳಸಿದವಳು? ಅವಳಲ್ಲವೇ ನನ್ನ ಹಣಕ್ಕಾಗಿ ನನ್ನನ್ನು ಮದಿಸುವಂತೆ ಮಾಡಿದವಳು? ಹಣದಾಸೆಯಿಂದಲ್ಲವೇ ಅವಳು ನನ್ನನ್ನು ವಿಲಾಸದಲ್ಲಿ ನಿಲ್ಲಿಸಿ, ಅಣ್ಣನ

ಶಿಕ್ಷಣೆಗೂ ಒಳಗಾಗದಂತೆ ಮಾಡಿದವಳು ? ಈಗ ಈ ನನ್ನ ಸಂತಾಪಕ್ಕೆ ಹೊಣೆಯಾರು ? 'ಅವಳೇಕೆ ಹೊಣೆ ಯಾಗದಿರುವಳು ? ಚಂದ್ರಭಾಗೆ, ಹೇಳು ! ಈ ನನ್ನ ಪಾತಕಕ್ಕೆ ಭಾಗಿಗಳಾರು ?

ಚಂದ್ರ:—ತುಂಗೆ ! ಇನ್ನು ಸುಮ್ಮನೇಕೆ ಪ್ರಲಾಪಿಸುವೆ ? ತಡೆದು ನಿಲ್ಲಿಸು ; ನನ್ನ ಸ್ವಾಮಿಯೇ ನಿನ್ನ ಧರ್ಮಸೂತ್ರವನ್ನು ಕಡಿದರೆಂಬುದೇನೋ ನಿಜವಾಗಿದ್ದರೂ, ಆ ನನ್ನ ಸ್ವಾಮಿ ಯ ಪರಿಶುದ್ಧಾಂತಃಕರಣವನ್ನು ಹೊಲಗೆಡಿಸಿ, ಮರುಳು ಮಾಡಿದವರಾರು ? ಹೇಳು ತುಂಗೆ ! ನೀನಲ್ಲವೇ. ಅವ ರನ್ನು ಕುಟಿಲಪ್ರೀತಿ ನಟನೆಯಿಂದ ದುರ್ಮಾರ್ಗಕ್ಕೆಳೆ ದುದು ? ನೀನಾಗಿಯೇ ಅವರನ್ನು ಮನೆ ಮಕ್ಕಳುಗಳ ಮೇಲಿನಾಶೆಯನ್ನೂ ತೊರೆದು ಕೆಟ್ಟುಹೋಗುವಂತೆ ಮಾಡಿ ಹೀಗೇಕೆ ದೂಷಿಸುತ್ತಿರುವೆ ? ಪುರುಷರ ಉನ್ನತಿಗೂ ಅವ ನತಿಗೂ ಸ್ತ್ರೀಯರೇ ಕಾರಣರಲ್ಲವೇ ? ಅಸ್ಥಿರಚಿತ್ತದ ಪುರುಷವರ್ಗವನ್ನು ಕೀರ್ತಿಗೆ ಕಾರಣವನ್ನಾಗಿ ಮಾಡುವು ದಕ್ಕೂ ಅಪಕೀರ್ತಿಮೃತ್ಯುವಿಗೆ ಬಲಿಕೊಡುವುದಕ್ಕೂ ಅವ ರಲ್ಲವೇ ಕಾರಣರು ? ಹೇಗೆನ್ನುವಿಯೋ ? ವಿಚಾರಮಾಡು ! ನನ್ನ ಸ್ವಾಮಿ, ನಿನ್ನ ದುರ್ಬೋಧೆಯಿಂದಯೇ ಅಂಧರಾಗಿ ಪಾಪಪಂಕದಲ್ಲಿ ಬಿದ್ದು ತೊಳಲುತ್ತಿದ್ದರು ' ಅಂತಹವರನ್ನು ದಾರಿಗೆ ತರಲು, ಅವರ ಮಿತ್ರವರ್ಗದವರಿಂದಾಗಲೀ ಗುರು ಜನರಿಂದಾಗಲೀ ಸಾಧ್ಯವಾಗಲಿಲ್ಲ. ಕಡೆಗೆ, ಅದಕ್ಕೆ ನಮ್ಮ ಭಗವತೀ ವಿರಾಗಿಣಿಯೇ ನಿಲ್ಲಬೇಕಾಯ್ತಲ್ಲವೇ ? ಅವಳ ಹಿತಸೂಚನೆ ಪ್ರಯತ್ನಗಳಿಂದಲ್ಲವೇ ಅಂಧಕಾರವಳಿದುದು?

ತುಂಗೆ! ಹೆಚ್ಚಾಗಿ ಹೇಳುವುದೇನು? ನಿನ್ನ ಹಣದ ಮದದಿಂದ ಮುಂದಾಲೋಚನೆಯಿಲ್ಲದೆ ಈಬಗೆಯ ಬೇಗೆ ಗೊಳಗಾದೆ. ವಿರಾಗಿಣಿಯು ಹಣದ ಮದಕ್ಕವಕಾಶಕೊಡದೆ ವಿರಕ್ತಮಾರ್ಗವೊಂದನ್ನೇ ಹಿಡಿದು, ಪಾತಿವ್ರತ್ಯವೆಂಬ ಅನರ್ಘಾಭರಣದಿಂದಲೇ, ಬಗೆಗೊಳ್ಳುತ್ತ ತನ್ನ ದಾರಿಯನ್ನು ತಾನು ಭದ್ರಪಡಿಸಿಕೊಂಡುದಲ್ಲದೆ, ತನ್ನ ದೇಶಬಾಂಧವರನ್ನೂ ಉದ್ಧರಿಸಿದಳು! ಅನಂತವಾದ ಅಕಲಂಕವಾದ ಯಶಶ್ಚಂದ್ರಿಕೆಯಿಂದ ಚಿರಕಾಲ ಪ್ರಕಾಶಿಸುವಂತಾದಳು. ಅಂತಹ ಪವಿತ್ರಮೂರ್ತಿಯಾದ ವಿರಾಗಿಣಿಯಲ್ಲಿ ನೀನೆಷ್ಟು ದ್ರೋಹಿಯಾಗಿರುವೆ? ಈಗಲಾದರೂ ನಿನಗೆ ಮತ್ತಾರೂ ಆಶ್ರಯವನ್ನು ಕೊಡದೆ ನೂಕಿದರೂ, ಅವಳೇ ನಿನಗೆ ಆಶ್ರಯವನ್ನಿತ್ತು ಸಮಾಧಾನಪಡಿಸುತ್ತಿರುವಳು.

ತುಂಗೆ:—(ಬಿಕ್ಕಿಬಿಕ್ಕಿ ಅಳುತ್ತ)—"ಚಂದ್ರಭಾಗೆ! ನನ್ನ ದುರವಸ್ಥೆಯನ್ನು ಹೇಗೆ ಹೇಳಿಕೊಳ್ಳಲಿ? ಈಗ ನನಗೆ ಆವುದೂ ಬೇಕಾಗಿಲ್ಲ; ಆಹಾರವನ್ನು ಬಿಟ್ಟೆನು; ನಿದ್ರೆಯನ್ನೂ ತೊರೆದೆನು; ಸಂಚಾರಶಕ್ತಿಯನ್ನೂ ಕಳೆದುಕೊಂಡೆನು. ಈಗ ನನಗುಳಿದಿರುವುದು ಅಳುವುದೊಂದೇ! ಸಾಯಬೇಕೆಂದು ಪ್ರಯತ್ನಪಟ್ಟುದಕ್ಕೆ ವಿರಾಗಿಣಿ ತಡೆಯಾಗಿರುವಳು! ನಿನ್ನಿನಿಂದ ಅವಳ ಬೋಧನೆಯಬಲದಿಂದಲೇ ನಾನು ಉಳಿದಿರುವೆನು. ಆದರೆ, ಇಂದು ಅವಳೂ ಇಷ್ಟು ಹೊತ್ತಾದರೂ ಬಾರದಿರುವಳು. ಏಕೆ ಬರಲಿಲ್ಲವೆಂದು ನಾನು ಹೇಗೆ ಹೇಳಲಿ? ಹೇಗೆ ಅವಳಲ್ಲಿ ದುಃಖವನ್ನು ಹೇಳಿಕೊಳ್ಳಲಿ? ಅವಳೇಕೆ ನನ್ನನ್ನು ಮನ್ನಿಸುವಳು?

ಚಂದ್ರ:—ತುಂಗೆ! ವಿರಾಗಿಣಿಯ ವಿಚಾರವಾಗಿ ಅನುಮಾನವೇಕೆ? ಅವಳು ರಾಜಶೇಖರನಿಗೆ ಮಾಡಿದ ಸಹಾಯವನ್ನೂ, ನಾದಿನಿಗಾಗಿ ಪಟ್ಟ ಪ್ರಯಾಸವನ್ನೂ ನೆನೆ? ರಾಜಶೇಖರನಿಗೆ ಅಳಕೆಯನ್ನು ಕೊಟ್ಟು ವಿವಾಹವನ್ನು ನಡೆಯಿಸುವಂತೆ ನನ್ನ ಸ್ವಾಮಿಯಿಂದ ಸಂಕಲ್ಪವನ್ನು ಮಾಡಿಸಿರುವಳು. ಇನ್ನೂ ಇದಕ್ಕೂ ಹೆಚ್ಚಿನ ದಯಾರಸವಾವುದಿರುವುದು? ನಿನಗಾಗಿಯೇ ಅಲ್ಲವೇ ಅವಳು ಈವರೆಗೂ ಇಷ್ಟು ನಿಷ್ಠುರವನ್ನೂ ಸಹಿಸಿದುದು? ನಿನ್ನನ್ನು ಉಪೇಕ್ಷಿಸುವಳಾಗಿದ್ದರೆ, ಮನೆಯವರೆಲ್ಲರೂ ಹೊರದೂಡುತ್ತಿದ್ದ ವೇಳೆಯಲ್ಲಿ ನಿನ್ನನ್ನು ಕೈಹಿಡಿದು ಕರೆತಂದಿಲ್ಲಿ ನಿಲ್ಲಿಸಿಕೊಳ್ಳುತ್ತಿದ್ದಳೇ? ನಿನಗಾಗಿ ಈ ಬಗೆಯಿಂದ ಪಶ್ಚಾತ್ತಾಪಪಡುತ್ತಿದ್ದಳೆ? ನಿನಗೇಕೆ ಇಷ್ಟು ಕಾತರ? ನಾನೇ ಹೋಗಿ ಕಳುಹುವೆನು. ನಿದಾನಿಸು. (ಎಂದು ಹೊರಟುಹೋದಳು.)

ತುಂಗಭದ್ರೆಯು ಮೊದಲಿನಂತೆಯೇ ಹಲುಬುತ್ತ ಕುಳಿತಿದ್ದಳು. ಚಂದ್ರಭಾಗೆ ಹೊರಟುಹೋದ ಅರ್ಧಗಂಟೆಯೊಳಗಾಗಿಯೇ ವಿರಾಗಿಣಿ ಬಂದು, ತುಂಗೆಯಮುಂದೆ ಕುಳಿತು, ಮುಡಿದಡಹಿ ಕೇಳಿದಳು;—"ತುಂಗ! ಏಕಿಂತು ಹಂಬಲಿಸುವೆ? ಗತಿಸಿದುದನ್ನೇ ಕುರಿತು ಅತಿಯಾಗಿ ಹಂಬಲಿಸುವುದರಿಂದೇನು? ಈವರೆಗೂ ಅತ್ತು ಅತ್ತು ನೀನೇ ನನ್ನು ಗಳಿಸಿರುವೆ?

ತುಂಗೆ:—ಅಳದೆ ಹೇಗಿರಲಿ? ವಿರಾಗಿಣಿ! ಹಾಗೂಕೆಟ್ಟು-ಹೀಗೂ ಕೆಟ್ಟು ಬೇಗೆಪಡುತ್ತಿರುವ ನಾನು ಇನ್ನಾವ ಬಗೆಯಿಂದ ಕಾಲಕಳೆಯಬೇಕು? ಭೂಭಾರಭೂತಳಾದ ನಾನು,

ಇನ್ನೂ ಎಷ್ಟುದಿನಗಳವರೆಗೆ ಈ ದುರ್ಜೀವನವನ್ನು ಳಿಸಿರ ಬೇಕೆನ್ನುವೆ ? ನನ್ನನ್ನು ದಯೆಯಿಟ್ಟು ಕ್ಷಮಿಸು !! ಸಾಯ ಬೇಕೆಂದಿರುವ ನನಗೆ ಆವುದಾದರೊಂದು ದಾರಿಯನ್ನು ತೋರಿಸು ! ನನ್ನೀತಾಪಕ್ಕೆ ಶಾಂತಿಯನ್ನುಂಟುಮಾಡು !!

ವಿರಾ:—ತುಂಗೆ ! ಸತ್ತಮಾತ್ರಕ್ಕೆ ನಿನಗೆ ಸುಖವುಂಟಾದೀತೆ ? ನಿನ್ನ ಘೋರಕರ್ಮದಫಲವು ಆರಿಗೆ ಸೇರಬೇಕು ? ಈ ದುರ್ಜೀವದ ಪರಮಾಣುಗಳು ಮತ್ತೆಲ್ಲಿಗೆ ಹೋಗುವುವು ? ಇತರ ಪ್ರಾಣಿಗಳಲ್ಲಿಯೂ ಸೇರಿ ಅವುಗಳನ್ನೂ ಕೆಡಿಸ ಬೇಕೆ ? ಸತ್ತರೂ ಇತರರನ್ನು ಕಾಡಬೇಕೇನು ? ತುಂಗೆ ! ಹೇಳು ; ಭಗವಂತನು ನಮ್ಮನ್ನು ಹುಟ್ಟಿಸಿದುದು ಬರಿದೆ ಪಶುಜೀವಿಯಾಗಿದ್ದು ಸುತ್ತಿ ಕೆಟ್ಟು ಸಾಯಬೇಕೆಂದಲ್ಲ ! ಧರ್ಮಪ್ರತಿಪಾದನೆಗೆಂದೇ, ನಮ್ಮನ್ನೀಬಗೆಯಾದ ಮಾನವ ವರ್ಗದಲ್ಲಿ, ಉತ್ತಮವರ್ಣದಲ್ಲಿ, ಹಾಗೂ ಉಚ್ಚಕುಲದಲ್ಲಿ ಸೃಜಿಸಿ, ಉದ್ದೇಶಸಿದ್ಧಿಗಾಗಿಯೇ ಇಂದ್ರಿಯಗಳನ್ನೂ, ಮನಸ್ಸನ್ನೂ, ತದುಪಾಶ್ರಯವಾದ ಪ್ರಜ್ಞೆಯನ್ನೂ ತುಂಬಿ, ಜೀವಾತ್ಮ ಪರಮಾತ್ಮಸಂಬಂಧ ಕಲ್ಪನೆಯಿಂದ ತಾನೂ ಅಂತಸ್ಥನಾಗಿರುವನು. ಇಂತಿರುವಾಪರಮಾತ್ಮನ ಉದ್ದೇಶ ಕೃಪೆಗಳೆರಡನ್ನೂ ಕೆಡಿಸಿಕೊಂಡು ,ಆತ್ಮನನ್ನು ಘಾತಿಸಿ ಇಂದ್ರಿಯಗಳನ್ನು ಕ್ಷುದ್ರವಿಷಯಗಳಿಗೊಪ್ಪಿಸಿ, ಮನಸ್ಸನ್ನು ದುರಾಚಾರದಿಂದ ಹೊಲಗೆಡಿಸಿಕೊಳ್ಳುವ ಮೂರ್ಖರಿಗೆ ಎಂದೆಂದೂ ನರಕಯಾತನೆ ತಪ್ಪಿದುದಲ್ಲ ! ವಿಚಾರಶೀಲರಾದ ವರು, ತಮ್ಮ ಕರಣ, ಕಳೇಬರಗಳನ್ನು ಬಹು ಜಾಗರೂಕರಾಗಿ ರಕ್ಷಿಸುತ್ತಿರುವರು. ಅವರು ತಮ್ಮ ದೇಹದ

ಪ್ರತ್ಯವಯವದಲ್ಲಿರುವ, ಅಣುಮಾತ್ರವೂ ಕೂಡ ಸಾರ್ಥಕವಾಗಬೇಕೆಂಬ ಸಂಕಲ್ಪದ ಪಾರಮಾರ್ಥಿಕಜ್ಞಾನವುಳ್ಳವರಾಗಿರುವರು, ಇನ್ನೂ ಹೇಳಬೇಕೆ? ತುಂಗೆ' ಹಾಗೂ ಹೇಳುವೆನು ? ನಾವು ಪತಿವಿಯೋಗವನ್ನು ಹೊಂದಿ ಎಂದು ನೆಲದಲ್ಲಿ ನಿಂದೆವೋ, ಅಂದು ನಾವು ಆ ಭಾಗ್ಯವನ್ನು ದೂರ ಮಾಡಬೇಕಾದುದು ಮುಖ್ಯವು ಇದೇ ನಿಷ್ಠೆಯಿಂದಲೇ ನಾವು ಚಿರವ್ರತಿಗಳಾಗಿದ್ದು ಸೃಷ್ಟ್ಯುದ್ದೇಶವನ್ನೂ, ವೈಧವ್ಯಾನುಭವದ ತತ್ವಾರ್ಥವನ್ನೂ ಕಂಡುಹಿಡಿಯಬೇಕು. ಇನ್ನು ಸಾಕು. ಉಳಿದ ವಿಚಾರವೆಲ್ಲವನ್ನೂ ನಿನಗೆ ಹಿಂದೆಯೇ ಹೇಳಿರುವೆನು. ಉಳಿದುದೇನಿದ್ದರೂ ಮುಂದೆ ಹೇಳಲಾದೀತು! ಮುಖ್ಯವಾಗಿ ನೀನಿನ್ನು ಪಶ್ಚಾತ್ತಾಪ ಹೊಂದಿ ನಿನ್ನ ಹೃದ್ವೇಗವನ್ನು ಸಹಿಸಬೇಕು. ಇನ್ನು ಮುಂದೆ ನಿನ್ನಿಂದಾಗಬೇಕಾದ ಕಾರ್ಯಗಳು ಬಹುವಾಗಿರುವುವು. ಅವುಗಳಮೇಲೆ ಗಮನವಿರಿಸಿ, ಶಾಂತಿಯನ್ನು ವಹಿಸು. ಶೋಕವನ್ನು ದೂರಮಾಡು. ನಿನ್ನನ್ನು ನನ್ನ ಶಕ್ತ್ಯುಚಿತವಾಗಿ ಸರ್ವಪ್ರಕಾರದಿಂದಲೂ ಶಾಂತಿಪೀಠವಲ್ಲಿ ನೆಲೆಗೊಳ್ಳುವಂತೆ ಮಾಡುವೆನೆಂದು ದೃಢವಾಗಿ ನಂಬು! ತುಂಗೆ' ಶೋಕವನ್ನು ದೂರಮಾಡು.

**ತುಂಗೆ.**—(ಉನ್ಮಾದಿನಿಯಂತೆ ವಿರಾಗಿಣಿಯನ್ನು ಬಿಗಿದಪ್ಪಿ)—"ವಿರಾಗಿಣಿ! ನನ್ನ ಪ್ರಾಣ, ದೇಹ, ಸಮಸ್ತವೂ ನಿನ್ನದು. ನೀನು ಮಾಡಿದಂತೆ ಮಾಡು. ನನ್ನನ್ನೇನಾದರೂ ಮಾಡು. ಈ ಸ್ಥಿತಿಯಲ್ಲಿ ಮಾತ್ರ ಬಿಡಬೇಡ! ಉಪೇಕ್ಷಿಸಬೇಡ!! ಮತ್ತೆಮತ್ತೆ ಬೇಡುವೆನು? ಕ್ಷಮಿಸು, ಅಪರಾಧವನ್ನು ಮರೆತು ಶಾಂತಿಗೊಳಿಸು!

ವಿರಾ —(ಕರುಣಾವ್ಯಂಜಕಸ್ವರದಿಂದ)—"ತುಂಗಭದ್ರೆ! ಇಂದಿನ ನನ್ನ ಸಂತೋಷಕ್ಕೆ ಮೇರೆಯೇ ಇರಲಾರದು! ಈಗಲೀಗ ನೀನು ನಿಜವಾದ ತುಂಗಭದ್ರೆಯಾಗಿರುವೆ! ತಾಯೀ! ಪ್ರಾಣಿಗೆ ನೆಳಲು ಹೇಗೋ, ಹಾಗೆಯೇ ನಾನು, ನಿನ್ನನ್ನು ನನ್ನ ನೆಳಲಿನಂತೆ ಎಡೆಬಿಡದೆ ನೋಡಿಕೊಳ್ಳುವೆನು ನನ್ನನ್ನು ಕುಟಿಲೆಯೆಂದೆಣಿಸದೆ ಸಂಶಯಪಡದೆ ನಿಜವೆಂದು ನಂಬಿ ವಿಶ್ವಾಸಪಡು ನಿನ್ನನ್ನು ಈಗ ನಾನು ಕೇವಲ ಅಜ್ಞಾ, ಬಾಲಿಶೆಯೆಂದೇ ಭಾವಿಸಿ ಪ್ರೀತಿಸುವೆನು ಇನ್ನು ನಿನ್ನ ಮುಂದಿನ ವಿಚಾರವು ನನಗೆ ಸೇರಿದುದಾಗಿರಲಿ!

ವಿರಾಗಿಣಿ ತುಂಗಭದ್ರೆಯನ್ನು ಸಂತವಿಸುತ್ತಿರುವಾಗಲೇ ಲಕ್ಷ್ಮೀದೇವಮ್ಮನು ಬಂದು. "ವಿರಾಗಿಣಿ! ನಿನ್ನ ಕಿರುದಂದೆ, ತಾಯಿ ಅತ್ತಿಗೆ ಎಲ್ಲರೂ ಬಂದು, ಹಜಾರದಲ್ಲಿ ಕುಳಿತಿರುವರು. ನಿನ್ನನ್ನು ನೋಡಲು ನಿನ್ನ ಕಿರುದಂದೆ ಬೇಗ ಬರಹೇಳಿರುವನು."

ವಿರಾ —(ಸಂಭ್ರಮದಿಂದೆದ್ದು)—"ಇದೊ ಬರುವೆನು." (ತುಂಗೆಯನ್ನು ನೋಡಿ)—"ತುಂಗ! ನಾನು ಮತ್ತೆ ಬರುವೆನು. ಹೇಗೂ ನೀನಿನ್ನು ಅಳಲಾಗದು" (ಎಂದು ಹೇಳಿ ಪ್ರೇಮ ಪಿತೃಸಂದರ್ಶನೋತ್ಸುಕೆಯಾಗಿ ಹೊರಟಳು.)

॥ ಶ್ರೀಃ ॥

## ತ್ರಯೋದಶ ಪರಿಚ್ಛೇದ.

(ಸಮ್ಮೇಲನ)

ರಘುಸಂದರ್ಶನೋತ್ಸುಕೆಯಾಗಿ ಬಂದ ವಿರಾಗಿಣಿ, ಹಜಾರವನ್ನು ಹೊಕ್ಕು ನೋಡಿದಳು. ಶಂಕರನಾಥನು ನಡುಹಜಾರದಲ್ಲಿ ಗೋಡೆಗೆ ಸೇರಿದಂತೆ ಕುಳಿತಿದ್ದನು. ಆತನ ಮುಂದೆ ಚಿದಾನಂದನೂ ರಮಾನಂದನೊಡನೆ ಕುಳಿತಿದ್ದನು. ಚಿದಾನಂದನ ಇದಿರೆ ಕಂಬದ ಮರೆಯಲ್ಲಿ ರಮಾಮಣಿ-ಶರಾವತಿಯರೂ, ಇವರಿಬ್ಬರ ನಡುವೆ ಲಾವಣ್ಯಮಯಿಯಾದ ಷೋಡಶಿಯೊಬ್ಬಳೂ ಕುಳಿತಿದ್ದರು. ಲಕ್ಷ್ಮೀದೇವಮ್ಮನು ಅಂಗಳದಲ್ಲಿ ಕುಳಿತು ಕೌತುಕದಿಂದ ನೋಡುತ್ತಿದ್ದಳು. ವಿರಾಗಿಣಿಯ ಉತ್ಸಾಹವನ್ನು ವಿವರಿಸಲಳವಲ್ಲ. ಆನಂದೋತ್ಸಾಹಪರಿಪೂರ್ಣಭಾವದಿಂದ ಕಂಪಿಸುತ್ತ ಮೆಲ್ಲಮೆಲ್ಲನೆ ಬಂದು, ಶಂಕರನಾಥ-ಚಿದಾನಂದರಿಗೆ ನಮಸ್ಕರಿಸಿದಳು.

ಶಂಕರ;—(ಸಾದರದಿಂದೆ)—"ಮಗು! ನಿನ್ನನ್ನು ಮತ್ತೆ ನೋಡಿದೆನೆ?" ಎಂದು ಕೈಹಿಡಿದು ಬಳಿಯಲ್ಲಿ ಕುಳ್ಳಿರಿಸಿಕೊಂಡನು.

ರಮಾನಂದ:—ಅಕ್ಕಾ; ಅಂದೇಕೆ ಹಾಗೆ ಮಾಡಿದೆ? (ಎಂದು ವಿರಾಗಿಣಿಯ ಕೈಗಳನ್ನು ಹಿಡಿದೆಳೆದನು.)

ಚಿದಾ:—(ಮಗಳ ಬೆನ್ನತಟ್ಟುತ್ತ ಗದ್ಗದಸ್ವರದಿಂದ)—"ತಾಯಿ! ನಿನ್ನನ್ನು ಮತ್ತೆ ತೋರಿಸಿಕೊಟ್ಟ ಭಗವಂತನನ್ನು ವಂದಿಸುವೆನು. ಉಭಯಕುಶಲೋದ್ಧಾರಿಣಿಯಾದ ನಿನ್ನಿಂದ

ಲ್ಲವೇ, "ಪುತ್ರಾಚ್ಛನ್ನತ ಗುಣಾಪುತ್ರೀ"-ಎಂಬ ಶ್ರುತಿ ಸತ್ಯವೆನ್ನಿಸಿತು? ಆಗಲಿ, ನನ್ನ ಹಿಂದಿನನುಡಿ ನೆನಪಿನಲ್ಲಿದೆಯೆ?

ವಿರಾ:—(ಆನಂದಬಾಷ್ಪವನ್ನು ಸುರಿಸುತ್ತ—"ಅಪ್ಪ! ಎಲ್ಲವೂ ನಿಮ್ಮ ಆಶೀರ್ವಾದ ಅಭಿಮಾನ, ಸುಶಿಕ್ಷಣೆಗಳ-ಪ್ರಭಾವವೇ! ನನಗೆ ನಿಮ್ಮ ಸುಶಿಕ್ಷಣೆ ದೊರೆಯದಿದ್ದಲ್ಲಿ, ನಾನೀವರೆಗೂ ನಿಲ್ಲುತಿದ್ದೆನೆ? ಮತ್ತೆ ಮುಂದೆಮುಂದೆ ಬರುವಂತಾಗುತಿದ್ದೆನೆ?

ಚಿದಾ:—ವಿರಾಗಿಣಿ! ನಿನ್ನ ಅತ್ತಿಗೆಯನ್ನು ಕರೆತಂದಿರುವೆವು. ನೋಡಿ ಮಾತನಾಡಿಸಬಹುದು. ನಾವು ಈಗಲೇ ಬರಬೇಕೆಂದಿರಲಿಲ್ಲವಾದರೂ, ರಘುನಾಥನ ಆಹ್ವಾನಪತ್ರಿಕೆ, ನಮಗೆ ನಿನ್ನಿನ ಮಧ್ಯಾಹ್ನವೇ ಕಯ್ಸೇರಿದುದರಿಂದ ನಿಲ್ಲಲಾರದೆ ಹೊರಟುಬಂದೆವು.

ವಿರಾ—"ಎಲ್ಲವೂ ಕಾಲದಬಲದಲ್ಲಿ ನಿಂತಿರುವುವು" (ಎಂದು ಎದ್ದುಬಂದು ರಮಾಮಣಿ-ಶರಾವತಿಯರ ಮುಂಗಡೆಯಲ್ಲಿ ಕುಳಿತು ರಮಾಮಣಿಯ ಕ್ಯೆಹಿಡಿದು) "ಅಮ್ಮಾ ಕುಶಲವೆ? ನನ್ನಲ್ಲಿ ಇನ್ನೂ ಕೋಪವೆ?"

ರಮಾ—(ಕೃತಕಕೋಪದಿಂದ)-"ಕೋಪವೇಕೆ? ಹೊಟ್ಟೆಯುರಿವಮಾತಿಗೆ ಸಿಟ್ಟೇಕೆ? ನೀನೇನಮ್ಮ? ವಿರಕ್ತೆಯಾಗಿ ನಮ್ಮೆಲ್ಲರನ್ನೂ ಮರೆವಂತಾದೆ! ಹಿಂದಿನ ಮಮತೆಯಿದ್ದರೆ, ನಮ್ಮನ್ನೆಂದೂ, ಕಡೆಗಣಿಸುತ್ತಿರಲಿಲ್ಲ! ಈಗಲೂ ಮುಳುಗಿ ಹೋದುದೇನು?

ವಿರಾ:—(ಕಿರುನಗೆಯಿಂದ)—"ಅಮ್ಮ! ನಿನ್ನ ಕೋಪದ ನೆಲೆಯೇನೆಂಬುದನ್ನು ಬಲ್ಲೆನು. ಕೋಪಮಾಡು. ಇಂತಹ

ಕೋಪವೆಷ್ಟಾದರೂ ತಡೆಯಲಾದೀತು. (ಶರಾವತಿಯು ಕಡೆಗೆ ತಿರುಗಿ) "ಚಿಕ್ಕಮ್ಮ! ಇದೇನಿದು? ಮುಖವು ಕಪ್ಪಾಗಿದೆ? ಕಣ್ಣಲ್ಲಿ ನೀರು ಸೋರುತ್ತಿರುವುದೇಕೆ? ಸಂತೋಷಪಡುವ ವೇಳೆಯಲ್ಲಿ ಈ ಸಂತಾಪವೇ ಸಾಕುತಣೆ'"

**ಶರಾ:**—ಸಂತಾಪವೇ ನನ್ನ ಕರ್ಮಫಲವಾಗಿದೆ!

**ರಮಾ:**—ಕರ್ಮಫಲವೆಂದು ಪ್ರಯತ್ನವನ್ನು ಬಿಡುವುದೇನಕ್ಕ? ತಡೆಯಬೇಕು' ಇದ್ದುದರಲ್ಲಿ ಶಾಂತರಾಗಿರಬೇಕು. ಇದೋ ನೋಡಿರಿ' ನಿಮ್ಮ ಸೊಸೆ ಕ್ಷಮಾವತಿ' ಈಕೆ ಬಹು ವಿನೀತೆ! ಪ್ರಾಪಂಚಿಕ ಸ್ಥಿತಿಗತಿಗಳನ್ನು ತಿಳಿದ ಪ್ರಾಜ್ಞೆ, ನಿರಂಜನನಿಗೆ ತಕ್ಕ ಭಾರ್ಯೆ!! ಮಗ ಸೊಸೆಯರಿಬ್ಬರೂ, ನಿಮ್ಮಲ್ಲಿ ವಿಧೇಯರಾಗಿರುವವರೇ! ನಮ್ಮ ಪೂರ್ವಪುಣ್ಯದಿಂದಲೇ ಇಂತಹ ಮಗನನ್ನೂ ಸೊಸೆಯನ್ನೂ ಹೊಂದಿರುವೆವಲ್ಲದೆ ಬೇರಿಲ್ಲ. ಹೀಗಿದ್ದರೂ ಅಳುವುದೇಕೆ?

**ಶಂಕರ.**—ರಮಾ! ಅವಳಿಗೇಕೆ ಈ ಮಗನ ಹಂಬಲು! ನನ್ನ ತಲೆಯುರುಳುವವರೆಗೂ, ಅವಳೇಕೆ ಅಳುವುದನ್ನು ನಿಲ್ಲಿಸಬೇಕು? ಅಳಲಿ! ಹಳಿಯಲಿ, ಅದರಿಂದಲೇ ನಲಿಯಲಿ!!

**ಚಿದಾ:**—ಅತ್ತಿಗೆ! ಕೇಳಲಿಲ್ಲವೆ? ಅಣ್ಣನಾಡಿದುದು? ಇನ್ನೂ ಶಾಂತಿಯಾಗದೇನು? ಮೊದಲಿನ ಧನದಾಹವು ಇನ್ನಾದರೂ ಬಿಡದೇನು? ಧರ್ಮ, ನೀತಿ, ಕರ್ತವ್ಯಗಳಲ್ಲಿ-ಇನ್ನಾದರೂ ಗಮನಿಸಬಾರದೇನು? ಸುಮ್ಮನೇಕೆ ಅತ್ತು ಅತ್ತು ಸಾಯಬೇಕು?

**ಶರಾ:**—(ಕಣ್ಣೊರಸಿಕೊಂಡು)-ಇಲ್ಲವಪ್ಪ! ಇನ್ನು ಅಳುವುದಿಲ್ಲ. ನನಗೆ ಆಶೆಯೂ, ಈರ್ಷ್ಯೆಯೂ, ಅಂದೇ ನಾಶವಾಗಿದೆ.

ಆದರೂ ನಿಮ್ಮನ್ನು ನೋಡಿದ ಸಂತೋಷದಲ್ಲಿ ಹಿಂದಿನ ದುಃಖವು ನೆನಪಿಗೆ ಬಂದು ಹೀಗಾಯ್ತು. ಅಷ್ಟೆ.

**ರಮಾ**:—(ಸೊಸೆಯನ್ನು ನೋಡಿ)—"ಕ್ಷಮಾ! ಇವಳೇ ನಿನ್ನ ಗಂಡನ ನಚ್ಚಿನ ತಂಗಿ? ಇವಳೇ ನಮ್ಮ ಕುಲಕ್ಕೆ ಕಣ್ಣಾಗಿರುವ ಹೆಣ್ಮಣಿ!! ನಿನ್ನ ಸೊಗಸಿನ ನಾದಿನಿ!!

**ವಿರಾ**:—(ಕಿರುನಗೆಯಿಂದ) "ಏನಮ್ಮ! ಅತ್ತಿಗೆ! ಮರತೆಯೊ? ಹೇಗೆ?

**ಕ್ಷಮಾ**.—(ಲಜ್ಜೆಯಿಂದ)—"ನಿಮ್ಮನ್ನು ಮರೆತರೆ ನಿಮ್ಮ ಅಣ್ಣಂದಿರ ಶಾಸನವು ಸುಮ್ಮನಿರದು!

**ವಿರಾ**.—ಅದೀಗ ಸರಿಯಾದ ನುಡಿ! (ಎಂದು ಲಕ್ಷ್ಮೀದೇವಮ್ಮನನ್ನು ನೋಡಿ) ಅತ್ತೆ! ಮಹಡಿಯಮೇಲಿರುವ ಅಕ್ಕನನ್ನೂ ಚಂದ್ರಭಾಗೆಯೊಡನೆ ಕರೆಯಲಾದೀತೆ?

**ಲಕ್ಷ್ಮೀ**—ಆಗಲಿ, (ಎಂದು ಹೋಗಿ ಶಿಶುಸಹಿತೆಯಾದ ಕೃಷ್ಣಾವೇಣಿಯನ್ನೂ ಚಂದ್ರಭಾಗೆಯನ್ನೂ ಕರತಂದಳು.)

**ಕೃಷ್ಣ**.—ಶಿಶುವನ್ನು ಶಂಕರನಾಥನ ಮುಂದೆ ಮಲಗಿಸಿ, ತಾನೂ ವಂದಿಸಿಳು.

**ಶಂಕರ**—"ಅಮ್ಮ! ಇಂದಿಗಾದರೂ, ನಮ್ಮ ರಘುವಿಗೆ ಸಂತಾನ ಪ್ರಾಪ್ತಿಯಾಯ್ತಲ್ಲ?"

**ಚಿದಾ**:—ಕೃಷ್ಣವೇಣಿ! ಏನಮ್ಮ? ನಮ್ಮ ರಘುವಿಗೆ ಅನುಕೂಲೆಯಾಗಿರುವೆಯೊ? ಇಲ್ಲವೆ ಈಗಳಿನ ಹೆಂಗಸರಂತೆ ಅಭಿಮಾನವತೀರಾಜ್ಞಿಯಾಗಿ ಬೀಗಿರುವೆಯೋ?

ಕೃಷ್ಣವೇಣಿಯು ಲಜ್ಜಾ ಭಯ ಸಂಕುಚಿತಭಾವದಿಂದ ಹಿಂದಕ್ಕೆ ನಿಂದು ತಲೆಬಾಗಿ ಕುಳಿತಳ್ಳು.

ವಿರಾ:—(ಚಂದ್ರಭಾಗೆಯ ಕೈಹಿಡಿದೆಳೆದು ರಮಾಮಣಿಯಮುಂದೆ ಕುಳ್ಳಿರಿಸಿ) "ಚಂದ್ರಭಾಗೆ! ಮುಂದೆ ಸಂಬಂಧವೇನಾದರೂ ನಡೆವುದಾಗಿದ್ದರೆ, ನೀವಿಬ್ಬರೂ ಈಗಲೇ ಬಿಯಗತನವನ್ನು ತೋರ್ಪಡಿಸಬೇಕು! ಇದಕ್ಕೆಂದೇ ನಿನ್ನನ್ನು ಕರೆಯಿಸಿದುದು ?

ಚಂದ್ರ:—ಭಗವತ್ಕೃಪೆಯಿದ್ದರೆ ಸಂತೋಷವಾಗಿಯೇ ಮಾಡಬಹುದು.

ಚಿದಾ:—(ಎದ್ದುನಿಂತು)—ಅಣ್ಣಾ! ಇನ್ನು ತಡೆಮಾಡಲಾಗದು; ನಿರಂಜನನು ಮನೆಗೆ ಬಂದಿರಬಹುದು! ಇನ್ನು ಏಳಿರಿ, ಹೊರಡುವ! ಸಭಾ! ಹೊರಡು; ಮನೆಗೆ ಹೋಗಬೇಕು."

ವಿರಾ:—ಅಪ್ಪು! ಅಣ್ಣನಿನ್ನೂ ಶಾಲೆಯಿಂದ ಬಂದಿಲ್ಲ. ಆತನನ್ನು ಕೇಳದೆ ಈಗಲೇ ಹೇಗೆ ಹೊರಡಲಿ ?

ಚಿದಾ:—ನಾನು ಆತನನ್ನು ಕೇಳಿಯೇ ಬಂದಿರುವೆನು. ನಡೆ! ನಿನಗೇನೂ ಆಕ್ಷೇಪವಿಲ್ಲ. (ಲಕ್ಷ್ಮೀದೇವಮ್ಮನನ್ನು ಕುರಿತು) ಲಕ್ಷ್ಮೀದೇವಮ್ಮ! ಸೌಬಲನೂ ಮನೆಯಲ್ಲಿಲ್ಲ. ರಘುನಾಥನು ಮನೆಗೆ ಬಂದೊಡನೆ ವಿರಾಗಿಣಿಯನ್ನು ಜತೆಗೊಂಡು ಹೋದನೆಂದು ಹೇಳು. ಕೃಷ್ಣವೇಣೀ! ನೀನೂ ಹೇಳಮ್ಮ! (ಕೃಷ್ಣವೇಣಿಯು ಕಣ್ಣೀರನ್ನು ಸುರಿಸುತ್ತ ಮರುಮಾತಿಲ್ಲದೆ ನಿಂತಳು.)

ರಮಾ:—(ಶರಾವತಿಯನ್ನು ಕುರಿತು)—"ಅಕ್ಕ! ಇನ್ನೇಕೆ ವಿಳಂಬ? ಹೊರಡಿರಿ."

ಶರಾ;—ನಿರಂಜನನೇ ಬರಲಿ; ಅವನ ಜತೆಯಲ್ಲಿಯೇ ಬರುವೆನು.

ಚಿದಾ:—ನ್ಯಾಯ! ಮಗನೇ ಬಂದು ಹೇಗೆ ಕರೆಯಬೇಕೋ ಕರೆ.

ಯಲಿ. ಹೇಗಾದರೂ ಸಮ್ಮತವೇ! ಅತ್ತಿಗೆ! ಕೃಷ್ಣವೇಣಿ, ಲಕ್ಷ್ಮೀದೇವಮ್ಮ, ತುಂಗಭದ್ರೆ ಇವರೆಲ್ಲರೊಡನೆ ತಪ್ಪದೆ ಈ ರಾತ್ರಿಯೇ ಬರಬೇಕು.

ವಿರಾ,—ಅಪ್ಪಾ! ತುಂಗಭದ್ರೆಯನ್ನು ನನ್ನ ಜತೆಯಲ್ಲಿಯೇ ಕರೆತರುವೆನು.

ಚಿದಾ:—ಪರಮಸಂತೋಷ! ಹಾಗೆಯೇ ಮಾಡು. ಬೇಗನೆ ಹೊರಡು.

ವಿರಾ—ಚಂದ್ರಭಾಗೆ! ಹೊರಡಬಹುದೆ? ಅಳಕೆಯನ್ನು ಕಳುಹುವೆಯಾ?

ಚಂದ್ರ:—(ಕಿರುನಗೆಯಿಂದ)—"ಸಂದೇಹವೇನು? ಅದನ್ನೂ ಕೇಳಬೇಕೆ? ನಮ್ಮೆಲ್ಲರಮೇಲಿನ ಅಧಿಕಾರವೂ ನಿನ್ನದಾಗಿರುವಲ್ಲಿ ಇದೇಕೆ ಇದೊಂದು ಕೊಂಕುನುಡಿ?

ರಮಾ:—ಚಂದ್ರಭಾಗೆ! ಖಂಡಿತವಾಗಿ ನೀವೆಲ್ಲರೂ ಈ ರಾತ್ರಿಯೇ ಉತ್ಸವಕ್ಕೆ ಸಹಾಯಕರಾಗಿ ಬರಬೇಕಮ್ಮ!

ಚಂದ್ರ.—ಅಗತ್ಯವಾಗಿಯೂ ಬರುವೆವು. (ಎಂದು ಹೇಳಿ ಹೊರಟುಹೋದಳು.)

ವಿರಾ—ಅಕ್ಕಾ! ಏನುಹೇಳುವೆ? ಅಣ್ಣನು ಮನೆಗೆ ಬಂದರೆ ಹೇಳುವೆಯಾ?

ಕೃಷ್ಣ:—(ಗದ್ಗದಸ್ವರದಿಂದ)—ಹೇಳುವುದೇನು? ವಿರಾಗಿಣಿ! ನಿನ್ನನ್ನು ಬಿಟ್ಟಿರುವುದೆಂದರೆ ಬಹು ಕಷ್ಟವಾಗಿದೆ! ಆದರೂ ಈಗ ಮಾಡುವುದೇನು? ಅವರು ಮನೆಗೆಬಂದೊಡನೆಯೇ ನೀನು ಕೇಳಹೋಗಿರುವುದನ್ನು ಹೇಳುವೆನು.

(ಎಲ್ಲರೂ ಎದ್ದುನಿಂತರು. ವಿರಾಗಿಣಿಯು ತುಂಗೆಯನ್ನೂ ಕರೆತರುವೆನೆಂದು ಹೇಳಿ ಬಿಡದಿಯಕಡೆಗೆ ಹೊರಟುಹೋದಳು.)

॥ ಶ್ರೀಃ ॥

## ಚತುರ್ದಶ ಪರಿಚ್ಛೇದ.

---

(ಉತ್ಸವಸಮಾರಂಭ)

ಈ ರಾತ್ರಿ ನಮ್ಮ ಸಬ್ ರೆಜಿಸ್ಟ್ರಾರ್ ನಿರಂಜನರಾಯನ ಮನೆಯಲ್ಲಿ ಉತ್ಸವಾರಂಭ. ಶರಾವತಿಯೇ ಗೃಹಾಧಿಕಾರಿಣಿ: ರಮಾಮಣಿಯು, ಶರಾವತಿಯ ಸಹಕಾರಿಣಿಯಂತೆ ಉತ್ಸವಕಾರ್ಯವನ್ನು ವಿತರಣೆಯಿಂದ ನೆರವೇರಿಸುವವಳಾಗಿರುವಳು. ಲಕ್ಷ್ಮೀದೇವಮ್ಮ-ನರಸಮ್ಮ ಇವರಿಬ್ಬರೂ ಕಾರ್ಯಕಲಾಪದಲ್ಲಿ ಸಹಾಯಕರು. ಚಂದ್ರಭಾಗೆ-ಕೃಷ್ಣವೇಣಿಯರು ಕ್ಷಮಾವತಿಯು ಕೂಡ ಸರಸಸಲ್ಲಾಪ ಶೃಂಗಾರಗಳಲ್ಲಿ ನಿರತರು. ಕ್ಷಮಾವತಿ ಸಾಲಂಕೃತೆ. ನಿರಂಜನನು ಪರಮಾಹ್ಲಾದಿತನಾಗಿ ಒಮ್ಮೆ ವಿರಾಗಿಣಿಯ ಬಳಿಯಲ್ಲಿ, ಮತ್ತೊಮ್ಮೆ ಶರಾವತೀ-ರಮಾಮಣಿಯರ ಸಮ್ಮುಖದಲ್ಲಿ ಇನ್ನೊಮ್ಮೆ ತಂದೆ-ಕಿರುದಂದೆ ಮೊದಲಾದವರೆಡೆಯಲ್ಲಿ ವಿನೋದದಿಂದ ನಲಿನಲಿದಾಡುತ್ತಿರುವನು. ರಘುನಾಥನ ಉತ್ಸಾಹಕ್ಕೆ ಪರಿಮಾಣ ವಿಷ್ಟೆಂದು ಹೇಳಲಾಗುವುದಿಲ್ಲ. ನಿರಂಜನನ ಮನೆಯಲ್ಲಿ ಎಲ್ಲೆಲ್ಲಿಯೂ ತಾನೇತಾನಾಗಿ ತಿರುಗುತ್ತ, ಒಮ್ಮೆ ವಿರಾಗಿಣಿಯನ್ನು ಮುಡಿದಡಹಿ ನುಡಿಸುತ್ತ, ಮತ್ತೊಮ್ಮೆ ನಿರಂಜನನ ಬೆನ್ನುತಟ್ಟಿ ಉಬ್ಬಿಸುತ್ತ, ಉತ್ಸವಕಾರ್ಯದಲ್ಲಿ ಮುಂದಾಳಾಗಿದ್ದನು. ಮಕರಂದ-ಸೌಬಲ-ರಾಜಶೇಖರ-ಭಗವಾನಂದ-ರಮಾನಂದ ಈ ಅಯ್ವರೂ

ನಿಂತೆಡೆಯಲ್ಲಿ ನಿಲ್ಲುತ್ತಿರಲಿಲ್ಲ. ಸಾಲದುದಕ್ಕೆ ಮುರಳೀನಾಥನೂ ಪತ್ನಿಯೊಡನೆ ಬಂದು ಉತ್ಸವಕಾರ್ಯದಲ್ಲಿ ಸೇರಿದ್ದನು. ತಾರಾಮಣಿಯೂ ತಾಯ್ತಂದೆಯರೊಡನೆ ಕರೆಯಿಸಲ್ಪಟ್ಟಳು ಅಷ್ಟೇ ಅಲ್ಲ. ವಿಮಲಚಂದ್ರನು ತಾರಾಮಣಿಯನ್ನೂ, ತಾರಾಮಣಿ ವಿಮಲಚಂದ್ರನನ್ನೂ ಪರಸ್ಪರ ಕ್ಷಮಾಪ್ರಾರ್ಥನಾಪೂರ್ವಕವಾಗಿ ಪತಿಪತ್ನಿಯರ ಕರ್ತವ್ಯವನ್ನು ಕಯ್ಕೊಂಡರು. ವಿನಯಚಂದ್ರನಿಂದು ಪರಮೋತ್ಸಾಹಿ!

ಮುರಳೀನಾಥನ ಭಾರ್ಯೆ ಮೇಧಾವತಿ, ಹೆಸರಿಗೆ ತಕ್ಕಂತೆ ವಿದ್ಯಾವತಿ! ಕ್ಷಮಾವತಿಯೂ ಇವಳೂ ಸಮೀಪಬಂಧುಗಳು; ಅಲ್ಲದೆ ಸಹಾಧ್ಯಾಯಿನಿಯರು. ರೂಪ-ವಯೋ-ಗುಣ-ಶೀಲ ವಿದ್ಯಾವಿತರಣಾದಿ ಸಮಸ್ತ ಭಾಗದಲ್ಲಿಯೂ ಸಮಾನೆಯರು. ಇವರಿಬ್ಬರೂ ರಮಾಮಣಿಯ ಪಿತೃಸಂಬಂಧದ ಜ್ಞಾತಿವರ್ಗೀಯರು. ಆದುದರಿಂದಲೇ ಇವರಿಬ್ಬರೂ ಏಕದೇಹನ್ಯಾಯದಿಂದ ರಮಾಮಣಿಯ ಬಳಿಯಲ್ಲಿ ಮೆಚ್ಚಿನವರಾಗಿರುವರು. ಇಬ್ಬರೂ ಸಮಾನ ಸ್ವಭಾವ ಧರ್ಮಯುತೆಯರು. ಹಾಗೂ ಪತಿವಾಕ್ಯನಿಯೋಜಿತೆಯರೂ ಆದರೆ ಕೇಳಬೇಕೆ? ಇತ್ತ ಅತ್ತಿಗೆಯಾದ ಕ್ಷಮಾವತಿ, ಅತ್ತ ಓರಗಿತ್ತಿಯಾದ ಮೇಧಾವತಿ ಇವರಿಬ್ಬರ ಸಮಾದರದ ಮಧ್ಯೆ ವಿರಾಗಿಣಿ ನಲಿನಲಿದಾಡುತ್ತಿರಬೇಕಲ್ಲವೆ?

ವಿರಾಗಿಣಿಗೆ ಒಂದೆರಡು ಕಾರ್ಯಕಲಾಪವಲ್ಲ. ತುಂಗೆಯನ್ನು ರೀತಿನೀತಿಗಳಿಂದ ಸಂತವಿಸಬೇಕು. ಕೃಷ್ಣವೇಣಿಯನ್ನು ಸವಿನುಡಿಯಿಂದ ನಲವಡಿಸಬೇಕು. ಶಂಕರನಾಥನನ್ನು ವಿಷಯವಿಚಾರ ವಿಮರ್ಶೆಯಿಂದ ತಣಿಯಿಸಬೇಕು. ಉಳಿದವರಲ್ಲೆಂದರೆ-ವಿನೋದ, ಪರಿಹಾಸ್ಯ, ವ್ಯಂಗ್ಯೋಕ್ತಿ-ಶ್ಲೇಷೋಕ್ತಿ-ಕಠಿಣಸಮಸ್ಯೆಗಳಿಂದ ಎಲ್ಲರನ್ನೂ ಬಾಲತ್ವದಿಂದ ಕುಣಿಕುಣಿದಾಡಿಸುವುದೇ!

ಹೇಗೂ ಈ ಬಗೆಯ ಸಂತೋಷಕೂಟದ ಕೋಲಾಹಲ ದಿಂದೆಯೇ ಆ ರಾತ್ರಿಯೂ, ಮರುದಿನವೂ ಕಳೆಯಿತು. ಅಲ್ಲದೆ ಮರುದಿನವೇ ಭೂರಿಭೋಜನವೂ ವಿತರಣೆಯಿಂದ ನೆರವೇರಿತು. ರಾತ್ರಿ ವಿವಿಧ ಸಂಗೀತ, ಹರಿಕಥೆ, ಉಪನ್ಯಾಸ, ತರ್ಕ, ಹಾಸ್ಯ ತರಂಗಗಳೂ ಜರುಗಿದವು. ಮೂರನೆಯದಿನವೇ ನಡೆಯಬೇಕಾಗಿದ್ದ ವಿರಾಗಿಣಿಯ ಆನಂದಭವನ ಪ್ರವೇಶಮಹೋತ್ಸವಕ್ಕೆ ಮೊದಲಿನರಾತ್ರಿಯೇ ಎಲ್ಲರನ್ನೂ ಆಮಂತ್ರಿಸಿದುದಾಯಿತು. ವಿರಾಗಿಣಿಗೆ ನಿದ್ದೆಯಿಲ್ಲ. ಅತ್ತೆಮಾವಂದಿರ ಬಳಿ ಸೇವಿಸುತ್ತ ತನ್ನ ಅಜ್ಞಾತವಾಸದ ಅಪರಾಧಕ್ಕಾಗಿ ಕ್ಷಮೆಯನ್ನು ಕೇಳುತ್ತಿದ್ದಳು. ಮುರಳೀನಾಥನೂ ಅಲ್ಲಿಯೇ ಇದ್ದನು.

ಇಂದಿನವರೆಗೂ ನಿಗೂಢವಾಗಿದ್ದ ಹೃದ್ಗತವಿಚಾರಗಳು ಇಂದು ಹೊರಹೊರಡುತ್ತಿರುವುದರಿಂದ ಸೊಸೆಯಿಂದ ಸೇವಿಸಲ್ಪಡುತ್ತ ಕುಳಿತಿರುವ ಅತ್ತೆಮಾವಂದಿರಾದ ವೇಣುಗಂಗಾ ಹರೀಶ್ವರರ ಮನೋಧರ್ಮ-ಪರಿಸ್ಥಿತಿಯೂ, ತಾರಾಮಣಿಯ ನಿರ್ಮತ್ಸರಯುಕ್ತ ಕೃತಜ್ಞತೆಯೂ, ಮುರಳೀನಾಥನ ಧರ್ಮನಿಷ್ಠೆ, ಕರ್ತವ್ಯತತ್ಪರತೆ, ಭ್ರಾತೃವಾತ್ಸಲ್ಯಗೌರವ, ಗುರುಭಕ್ತಿಗಳ ರೀತಿಗತಿಯೂ, ಹೇಗೆ-ಎಂತು-ಎಷ್ಟರಮಟ್ಟಿಗಿದ್ದುವೆಂಬುವನ್ನು ಅಭಿಮಾನಾಂಧತೆಯಿಂದ ಜಡರಾಗಿ ಮಾತೃಹೃತ್ತಾಪಕಾರಣಭೂತರಾಗಿರುವ ಅಧುನಿಕ ಮಹಾಶಯರಲ್ಲಿ—ಅತ್ತೆಮಾವಂದಿರೂ, ಅತ್ತಿಗೆ ನಾದಿನಿಯರೂ, ಭಾವಮೈದಂದಿರೂ ಕಣ್ದೆರೆದು, ನಡೆನೋಡಿ, ಗುಣಸಂಗ್ರಹಮಾಡಿ ನಡೆಯಬೇಕಾದುದು ಅಗತ್ಯವಲ್ಲವೇ? ಅಂತಾದರಿನ್ನು ಇತ್ತ ಗಮನಿಸಲಿ.

ಸುಹೃದರೇ !

ಶೋಕಾಂಧರಾಗಿದ್ದ ಈ ವೃದ್ಧದಂಪತಿಗಳಿಗೆ ಇಂದು ಮತ್ತೆ ದೃಷ್ಟಿಲಾಭವಾದಂತಾಗಿದೆ! ಸಂತೋಷಾಶ್ಚರ್ಯಗಳಿಂದ ಕಂಪಿಸುತ್ತಿರುವವರಿಗೆ ನಿರಂಜನನ ಸ್ವಂತ ಬರೆಹದ ಕಿರುಮನೆಯೇ ವಿಶ್ರಾಂತಿ ಸ್ಥಳವಾಗಿದೆ. ಬಳಿಯಲ್ಲಿಯೇ ಮುರಳೀನಾಥ, ತಾರಾಮಣಿ, ವಿರಾಗಿಣಿ ಈ ಮೂವರೂ ಸೇವಿಸುತ್ತಿರುವರು. ಈ ಸಂಸಾರದ ಸಂವಾದದ ಸಾರಾಂಶದಲ್ಲಿ-ಮುಖ್ಯ ಮುಖ್ಯಾಂಶಗಳು ಮಾತ್ರ ಕೆಳಗೆ ವಿವರಿಸಲ್ಪಡುವುವು.

ವೇಣುಗಂಗೆ:—(ವಿರಾಗಿಣಿಯನ್ನು ನೋಡಿ) ಅಮ್ಮಾ ! ಈ ಎರಡು ಮೂರು ವರ್ಷಗಳಿಂದ ನೀನೇಕೆ ಅಲ್ಲಲ್ಲಿ ತೊಳಲುತ್ತಿದ್ದೆ ? ಅಂದೇ ನಿಮ್ಮ ತಾಯಿ ಸತ್ತಂದೇ ಏಕೆ ಬಾರದಿದ್ದೆ ? ನಾವು ನಿನ್ನನ್ನು ಅಭಿಮಾನದಿಂದ ನೋಡುವುದಿಲ್ಲವೆಂದೇ ? ಎಲ್ಲಾ ಅತ್ತೆಯರಂತೆಯೇ ನನ್ನನ್ನೂ ತಿಳಿದೆಯಾ ? ಸೊಸೆಯನ್ನು ದ್ವೇಷರೋಷಗಳಿಂದ ಕೊಲ್ಲುವ ಅತ್ತೆಯೆಂದೇ ನನ್ನನ್ನು ಭಾವಿಸಿದೆಯಾ ? ಏಕೆ ಬರಲಿಲ್ಲ ? ತಾಯಿ! ಅಂದೇ ಬಂದು ನಮ್ಮನ್ನು ಕಂಡಿದ್ದರೆ ನಮಗೆಷ್ಟು ಸಂತೋಷವಾಗುತ್ತಿದ್ದಿತು ? ಈ ಭವಣೆಯೇಕೆ ?

ವಿರಾ:—ಹೀಗೆ ಬೇರೆಬೇರೆ ಕಾರಣಗಳನ್ನು ಊಹಿಸಬಾರದು. ನಾನು ಬಾರದಿದ್ದುದಕ್ಕೆ ಕಾರಣವಿದಾವುದೂ ಅಲ್ಲ. ಆವ ಮೋರೆಯಿಂದ ನಾನಾಗಿ ನಿಮ್ಮಲ್ಲಿಗೆ ಬರಬೇಕಾಗಿತ್ತು ? ನಿಮ್ಮ ಪುತ್ರಶೋಕಸಂತಾಪಕ್ಕೆ ಈ ಅಭಾಗಿನಿಯ ಪ್ರಾರಬ್ಧಫಲವೇ ಕಾರಣವಾಗಿರುವುದು. ಇಂತಿರುವ ಮೃತ್ಯು

ಸ್ವರೂಪವು ಲಜ್ಜೆಯಿಲ್ಲದೆ ಹೇಗೆ ಬಂದು ನೋಡಬಹುದು ? ಆರಲ್ಲಿ ದ್ರೋಹಿಯೋ-ಅವರಲ್ಲಿ ಹೇಗೆ,—

ಹರೀಶ್ವರ:—(ಅಷ್ಟಕ್ಕೆ ತಡೆದು) ಹೇಳದಿರು, ಮುಂದೆ ಹೇಳದಿರು ; ಈ ನನ್ನ ಪಾಪಿಜೀವನವು ಬಹು ಕಟುತರವಾಗಿ ಕಾಣುತ್ತಿರುವುದು !! ನೀನೆಂದೂ ನಮ್ಮ ಸಂತಾಪಕ್ಕೆ ಕಾರಣಳಲ್ಲ. ಮಗನ ಮೃತ್ಯುವಿಗೆ ಸೊಸೆಯ ದೌರ್ಭಾಗ್ಯವೇ ಹೇತುವೆಂಬ ಮೂರ್ಖರೂ ನಾವಾಗಿಲ್ಲ. ನಿನ್ನಲ್ಲಿ ನೀನೇ ಹೀಗೆ ಊಹಿಸುವುದೆಂತೂ ಸರಿಯಾದುದಲ್ಲ. ಆದರೆ ಲಜ್ಜೆಯೆಂಬುದೂ, ಭಯವೆಂಬುದೂ, ಅಬಲೆಯರಿಗೆ ಹಾಗೂ ನಿನ್ನಂತಹರಿಗೆ ಅವಶ್ಯವಾಗಿರತಕ್ಕುದೇ ! ? ಲಜ್ಜಾಪರಣದಿಂದಲೇ ನಿಮ್ಮ ಧರ್ಮ ನೀತಿ ಕರ್ತವ್ಯಗಳೂ ಶೋಭಿಸಬೇಕು. ನೀನು ಇಂದಿನವರೆಗೆ ಕಾಣಿಸಿಕೊಳ್ಳದಿದ್ದುದು ಒಂದು ಬಗೆಯಲ್ಲಿ ನಮಗೆ ಸಂತಾಪಕರವಾಗಿದ್ದರೂ. ಮಿಕ್ಕ ಎಲ್ಲಾ ವಿಚಾರಗಳಾವುದರಿಂದಲೂ ನೀನು ಹೀಗೆ ಮಾಡಿದುದೇ ಸರಿಯೆಂದು ಧಾರಾಳವಾಗಿ ಹೇಳಬಲ್ಲೆನು.

ತಾಯಿ ! ಲೋಕದಲ್ಲಿ ನಿನ್ನಂತಹ ಸೊಸೆಯರನ್ನು ಪಡೆದೂ ಸಹವಾಸಿಸಲಿಕ್ಕೆ ಸುಕೃತವೇ ನೆರವಾಗಬೇಕು. ಅಂತಹ ಸುಕೃತ ವಿಶೇಷವು ಈವರೆಗೂ ನಮಗೆ ದೂರವಾಗಿದ್ದಿತಾದರೂ, ಚಿದಾನಂದನ ಸಂಸಾರಕ್ಕೂ ರಘುನಾಥನ ಭಾಗಕ್ಕೂ ಬಲವಾಗಿದ್ದುದರಿಂದ ಅದೇ ಸುಕೃತಫಲವೇ ಇಂದು ನಮಗೂ ಲಭಿಸುವಂತಾಯ್ತು. ಅದೇ ಸುಕೃತ ವಿಶೇಷವೇ ಕುಲ-ಕೀರ್ತಿ-ಧರ್ಮವೆಂಬ ತ್ರಿವಿಧಶಕ್ತಿಯನ್ನೂ ವೃದ್ಧಿಪಡಿಸುವಂತೆ ಮಾಡಿರುವುದು. ಮಗು ! ನೀನು

ವಯೋಧರ್ಮದಲ್ಲಿನ್ನೂ ಬಾಲಿಕೆಯಾಗಿದ್ದರೂ, ಜ್ಞಾನ-ಲೋಕಾನುಭವ ವಿಚಾರಗಳಲ್ಲಿ ಪೂರ್ಣಪಾಂಡಿತ್ಯವನ್ನೇ ಹೊಂದಿರುವೆ ?

**ವಿರಾ:**—(ವಿನಯದಿಂದ) ಇದೇಕೆ ಇಷ್ಟೊಂದು ಹೊಗಳಿಕೆ ? ಈ ಸ್ತುತಿಗೆ ನಾನು ಪಾತ್ರಳಲ್ಲವೆಂದು ಮತ್ತೆ ಹೇಳಬೇಕೇ ? ಗುರುಜನವೇ ಹೀಗೆ ಹೇಳತೊಡಗಿದರೆ ನಾನೇನನ್ನು ಹೇಳಬೇಕು ? ನನಗಾವುದೂ ತಿಳಿಯದು. ನನ್ನ ಕರ್ತವ್ಯದಲ್ಲಿ ಎಳ್ಳಷ್ಟನ್ನಾದರೂ ಇನ್ನೂ ನಿರ್ವಹಿಸಲರಿಯದಿರುವ ನನಗೆ ಈ ಬಹುಮಾನವೇಕೆ ? ಹಾಗೆ ನನ್ನಲ್ಲಿ ಬಾಲ್ಯಚಾಪಲ್ಯದ ತಪ್ಪಿತವೇನಾದರೂ ಸೇರಿದ್ದರೂ ಗುರುಜನವೇ ನಯಭಯದಿಂದ ಬುದ್ಧಿಗಲಿಸಬೇಕು.

**ಮುರಳೀ**—ಅಮ್ಮ ! ಅದೆಲ್ಲಾ ಹಾಗಿರಲಿ. ಹೇಗಾದರೂ ಇಂದು ನಮ್ಮಮೇಲೆ ಅದೃಷ್ಟದೇವತೆ ಪ್ರಸನ್ನವಾದಂತ ತಿಳಿದೆನು ! ಅತ್ತಿಗೆಯರನ್ನು,—ತನಗೆ ಪೂಜ್ಯರಾದ ಅಣ್ಣಂದಿರನ್ನು ಕೈಹಿಡಿದು ಮನೆಗೆ ಸೇರಿದವರನ್ನು, ಹಾಗೂ ಪತಿವಿಹೀನೆಯರಾಗಿ ದೌರ್ಭಾಗ್ಯಕ್ಕೆ ಈಡಾದವರನ್ನು, ಬಗೆಬಗೆಯಾಗಿ ಹಿಂಸಿಸಿ, ದೂಷಿಸಿ, ಆರೋಪಿಸಿ, ನರಲಿಸಿ, ನಲಿನಲಿಯುತ್ತಿರುವ ಮೈದುನರೆಂಬ ದುರ್ಮುಖರನ್ನು ನಾನು ನಿತ್ಯವೂ ನೋಡುತ್ತಿರುವೆನು. ಅಂತಹರನ್ನು ನೋಡಿ, ನುಡಿಯಿಸಿ, ಧಿಕ್ಕರಿಸುತ್ತೆಯೂ ಇರುವೆನು. ಪತಿರಹಿತೆಯಾದ ಬಳಿಕಾ ಸೊಸೆಯನ್ನು ಮೃತ್ಯುವೆಂದೇ ಬಯ್ವ ಘಾತಕಿಯರಾದ ಅತ್ತೆಯರನ್ನೂ ನೋಡಿರುವೆನು. ಅಂತಹ ಅನಾಥ ಬಾಲೆಯರ ಭವಿಷ್ಯತ್ತಿಗಾಗಿ ಪಶ್ಚಾತ್ತಾಪ ಪಡು

ತ್ತಿರುವವರಾದರೂ, ಸತಿ-ಸುತರ ನಿರ್ಬಂಧದಿಂದ ಉಸಿರೆ ತ್ತದೆ ಆದರಿಸದೆ ಮೂಕರಂತಿರುವ ಮಾವಂದಿರನ್ನೂ ತಿಳಿದಿ ರುವೆನು. ಅಷ್ಟೇ ಅಲ್ಲ! ಅಂತಹ ಅನಾಥೆಯರ ಪರವಾಗಿ ಅತ್ತಿಗೆ ನಾದಿನಿಯರಂತೂ ಹೇಳಿ ಕೇಳಲಾಗದ ಬಯ್ಗುಳಿಂದ ಕೊರಗಿಸುತ್ತಿರುವುದನ್ನೂ ಕಂಡಿರುವೆನು. ಉನ್ನತ ಪದವಿ ಯಲ್ಲಿದ್ದೂ, ಒಮ್ಮೆಯಾದರೂ ಭರ್ತೃ ವಿಹೀನಾಂಗನೆಯ ರನ್ನು ಆದರಿಸದೆ ಅವರಲ್ಲಿ ಕಾಠಿಣ್ಯವನ್ನೇ ವಹಿಸಿ, ಭಂಡ ಜೀವಿಗಳಾಗಿರುವ ತಮ್ಮ ಗಂಡಂದಿರನ್ನೂ ತಮ್ಮ ದಾರಿಗೆಳೆ ಯುತ್ತಿರುವ ಓರಗಿತ್ತಿಯರೆಂಬ ರಕ್ಕಸಿಯರನ್ನೂ ಬಲ್ಲವ ನಾಗಿರುವೆನು! ಇವರೆಲ್ಲರನ್ನೂ ಬಿಟ್ಟು ಮುಂದೆ ಬಂದರೆ, ಪತಿಯುಳ್ಳ ಬಳಿಕ್ಕಾದರೂ, ಸಮಾಧಾನವಿಲ್ಲದೆ, ಹೊಕ್ಕ ಮನೆಯ ಮೇಲೆ ಮುಳಿದು ಬೀಳುತ್ತಿರುವ ಕ್ರೂರನಾರಿಯ ರನ್ನೂ ಕಂಡು ದುಃಖಿಸುತ್ತಿರುವೆನು. ಈ ಬಗೆಯ ಪ್ರಾಪಂ ಚಿಕವ್ಯಾಪಾರದಿಂದಲೇ ನಾನು ಬೇಸತ್ತುಹೋಗಿದ್ದರೂ ನಮ್ಮ ಮನೆತನದ ವಿಚಾರದಲ್ಲಿ ತಕ್ಕಮಟ್ಟಿಗೂ ಸುಖ ಸಮಾ ಧಾನಗಳನ್ನೇ ಹೊಂದಿ-ಹೊಂದುತ್ತಿರುವೆನು.

ವಿರಾ:—(ಕಿರುನಗೆಯಿಂದ)—" ಮೇಲಿನ ಮಾತುಗಳಾವುವೂ ನನಗೆ ಸೇರಿದುವಲ್ಲ; ಅದಕ್ಕೆ ನಾನು ಉತ್ತರ ವಾದಿಯಾಗುವು ದಕ್ಕೂ ಕಾರಣವಿಲ್ಲ, ಆದರೂ, ಧರ್ಮ ಕರ್ಮ ಸೂಕ್ಷ್ಮ ಜ್ಞಾನ ದೃಷ್ಟಿ ಅವರಿಗೆ ಲೋಪವಾಗಿದ್ದರೆ, ಅಂತಹ ಕುರು ಡರನ್ನು ಕುರಿತು ಹೇಳುವುದೇನು? ಹೇಳಿದರೂ ಅವರು ಹೇಗೆ ತಿಳಿಯಬಲ್ಲರು? ಕಣ್ಣಿದ್ದರಲ್ಲವೇ ವಸ್ತುಪರಿಚಯ ವಾದೀತು? ಅದಿರಲಿ! ಆವ ತನ್ನ ಜೀವನ ಸರ್ವಸ್ವ

ವನ್ನು ಕಳೆದುಕೊಂಡಳೋ ಅವಳು, ಮತ್ತೇಕೆ ಹೆರವರ ಮೇಲೆ ತಿರುಗಿಬೀಳುವುದು? ಅದರಿಂದಾಕೆ, ಹೊಂದುವ ಲಾಭವೇನು? ಜೀವನಕ್ಕೆ ಅದೇ ಮಾರ್ಗವೇ? ತನ್ನಲ್ಲಿ ಶೀಲ-ಸತ್ಯ-ಶಾಂತಿ-ಶಕ್ತಿಗಳು ಸ್ಥಿರವಾಗಿದ್ದರೆ, ಕೈಗೂಡದಿರುವುವಾವುವು? ತನ್ನ ದೇಹವನ್ನೂ ಮತ್ತು ಇಂದ್ರಿಯಗಳನ್ನೂ ತನ್ನ ವಶದಲ್ಲಿ ನ್ಯಾಯ ನೀತಿಸ್ಥಾನದಲ್ಲಿಟ್ಟುಕೊಳ್ಳಲಾರದ ಬಳಿಕ ಮತ್ತಿನ್ನಾವುವು ಕೈವಶವಾಗಬಹುದು? ಇವೆಲ್ಲವನ್ನೂ ತಿಳಿದಾದರೂ ಸುಮ್ಮನಿರಬೇಕಲ್ಲವೆ? ಹಾಗೂ ಪತಿಯಕಡೆ ಬಾಂಧವ್ಯವೆಂಬುದು ಎಷ್ಟರ ಅಭೇದ್ಯವೆಂಬುದನ್ನು ಅವರೇಕೆ ತಿಳಿಯಲೊಲ್ಲರು?

ಪರಮೇಶ್ವರ.—(ಆನಂದ ಬಾಷ್ಪಾಕುಲಿತ ಲೋಚನನಾಗಿ ಗದ್ಗದಸ್ವರದಿಂದ) ಮಗು! ಮುಂದೆ ಹೆಚ್ಚಾಗಿ ಹೇಳದಿರು? ಮುದುಕನಾಗಿರುವ ನಾನೂ ತಿಳಿಯಹೇಳಲಾಗದಿರುವ ಬುದ್ಧಿವಾದವನ್ನು ನೀನಾಡುವುದು, ನನಗೆ ಆನಂದವಲ್ಲದಿಲ್ಲ! ಆದರೂ ಸಂತಾಪವು ಹೆಚ್ಚುತ್ತಿದೆ. ತಾಯಿ! ನೀನು ನನಗೆ ಪುತ್ರವಧು ಮಾತ್ರವಲ್ಲ. ಗತಿಸಿದ ಪುತ್ರನೂ ನೀನಾಗಿರುವೆಯೆಂದೇ ತಿಳಿದು ಅಭ್ಯುದಿತನಾಗುತ್ತಿರುವೆನು! ನೀನು, ತಾಯ್ತಂದೆಗಳ ಕುಲಕ್ಕೆ ಹೆಣ್ಣಾಗಿದ್ದರೂ, ನಮ್ಮ ಮನೆತನಕ್ಕೆ ಕಣ್ಣಿಗೂ ಮಿಗಿಲಾದ ರತ್ನವೆಂದೆಣಿಸುವೆನು!! ಸುಳ್ಳಲ್ಲ, ಸತ್ಯವಾಗಿಯೂ ಹೇಳುವೆನು. ಆ ನನ್ನ ಮಗನು ಅಳಿಯದೆ ಉಳಿದಿದ್ದರೆ ನನಗೆಷ್ಟರ ಹರ್ಷವಿದ್ದಿತೋ ಅದಕ್ಕೂ ಇಮ್ಮಡಿಯಾದ ಸಮಾಧಾನವನ್ನೇ ಈಗ ನಾನು ಹೊಂದಿರುವೆನು. ಏಕೆಂಬೆಯೋ? ಒಂದುವೇಳೆ ನೀನೂ

ಈ ಕಾಲದ ವಿಧವೆಯರಂತೆ ಪುನರ್ವಿವಾಹವೋ, ಪ್ರಾಣ ಸಂಕಟವೋ, ಪರಮತಾಚಾರವೋ ಇಲ್ಲವೇ ಸ್ವೇಚ್ಛಾವಿಹಾರವೋ ಆವುದೇ ಒಂದನ್ನು ಹಿಡಿದಿದ್ದರೂ ನಮಗದರಿಂದಾಗುತ್ತಿದ್ದ ಸುಖ, ಸಂತೋಷಗಳಾವುವು? ಶಾಶ್ವತ ನರಕಾನುಭವವೊಂದಲ್ಲವೆ? ಆದರೆ ನೀನಂತೆಸಗದೆ, ಅಂತಹ ಮಾಯಾಜಾಲಗಳೆಲ್ಲವನ್ನೂ ಪ್ರಚಂಡವಾದ ಬುದ್ಧಿ ಶಸ್ತ್ರ ಬಲದಿಂದಲೇ ಭೇದಿಸಿ, ನಿರ್ಮಲೆಯಾಗಿ ಪ್ರಕಾಶಿಸುತ್ತಿರುವ ನಿನ್ನಿಂದ ಈಗ ನಾವು ಹೊಂದಲಿರುವ ಯಶಸ್ಸೂ, ಸುಖ-ಸಂಪದಭ್ಯುದಯವೂ. ಎಂತಹುದೆಂಬುದನ್ನು ಒಂದೇ ಮಾತಿಂದ ಹೇಳಲಾದೀತೆ?

[ಇದೇವೇಳೆಯಲ್ಲಿಯೇ ರಘುನಾಥನು ಬಂದು ನಮ್ರಭಾವದಿಂದ ಕೇಳಿದನು.—"ಸ್ವಾಮಿ! ಈಗಾಗಲೇ ರಾತ್ರಿ ಮೂರನೆಯ ಪ್ರಹರವಾಗುತ್ತಿದೆ ಇನ್ನೂ ಮಲಗಿಲ್ಲವೇಕೆ? ವಿರಾಗಿಣಿಯನ್ನು ಸ್ವಲ್ಪ ಕಳುಹಿದರೆ ಅನುಕೂಲ: ನಾಳೆಗೆ ಬೇಕಾಗುವ ಸೂಚನೆ ಕೊಡಬೇಕಾಗಿದೆ?" ಹರೀಶ್ವರನು ಸಮ್ಮತಿಸಿದನು. ರಘುನಾಥನು ವಿರಾಗಿಣಿಯನ್ನು ಕರೆದೊಯ್ದನು.]

|| ಶ್ರೀಃ ||

# ಸಂಕಲ್ಪಸಿದ್ಧಿ.

ಆನಂದಮಂದಿರದಲ್ಲಿ ಇಂದು ಕೋಲಾಹಲ! ಪೌರರೆಲ್ಲರೂ ಆಮಂತ್ರಿತರಾಗಿ ನೆರೆದಿರುವರು. ಮಂದಿರವು "ಸದಾನಂದ ಮಂದಿರ" ವೆಂಬ ನಾಮಕ್ಕೆ ತಕ್ಕಂತೆ ಬಗೆಬಗೆಯಾಗಿ ಬಗೆಗೊಳ್ವ ಶೃಂಗಾರದಿಂದ ಸೊಗಯಿಸುತ್ತಿರುವುದು' ರಾಜಶೇಖರನೇ ಕಾರ್ಯದರ್ಶಿ' ಮಕರಂದನು ಪ್ರೋತ್ಸಾಹಕನು' ಸೌಬಲನು ಸಹಾಯಕನು'' ರಘುನಾಥ ಪರಮಾನಂದನೇ ಅಧ್ಯಕ್ಷನು!!' ಶಿವಾನಂದ, ನಿರಂಜನ, ಮುರಳೀನಾಥ, ವಿಮಲಚಂದ್ರ. ವಿನಯಚಂದ್ರ ಇವರು ಮುಖ್ಯಸದಸ್ಯರು. ಶಂಕರನಾಥನೇ ಮಂದಿರದಲ್ಲಿ ಬ್ರಹ್ಮವಿದ್ಯಾಬೋಧಕನು. ಬ್ರಹ್ಮಚಾರಿಣೀ ಸನ್ಯಾಸಿನಿಯಾದ ವಿರಾಗಿಣಿಯೇ ಮಂದಿರದ ವಿದ್ಯಾರ್ಥಿನಿಯರಿಗೆ ಉಪಾಧ್ಯಾಯಿನಿಯಾಗಿ ನಿಲ್ಲತಕ್ಕವಳು! ಇದಕ್ಕೆಂದೇ ಇಂದಿನ ಉತ್ಸವ ಪ್ರದರ್ಶನವೂ!! ಈ ಯುತ್ಸವಾರಂಭದಲ್ಲಿಯೇ ರಾಜಶೇಖರ ಅಳಕನಂದೆಯರ ವಿವಾಹ ಸಂಬಂಧವಾದ ವಾಙ್ನಿಶ್ಚಯವೂ ನಡೆದಿರುವುದು. ಆದರೆ ಇನ್ನೂ ಒಂದೆರಡು ವರ್ಷಾವಧಿಯುಂಟು' ಉತ್ಸವಪ್ರದರ್ಶನೋತ್ಸುಕತೆಯಿಂದ ಮಹಿಳಾಜನಾಂಗವೂ ನೆರೆದಿದೆ. ರಮಾಮಣಿ, ಚಂದ್ರಭಾಗೆ ಮೊದಲಾದವರಿಂದ ಅಭಿನಂದಿತವಾಗುತ್ತಿರುವುದು. ಬಾಲಕ ಬಾಲಿಕೆಯರ ಸಂಭ್ರಮವೆಂತೂ ವಿವರಿಸಲಳವಲ್ಲ. ಅಳಕನಂದೆಯೇ ಬಾಲಿಕಾವರ್ಗವನ್ನು ವಿಚಾರಿಸುತ್ತಿರುವಳು. ಮತ್ತೇನು?

ವಿರಾಗಿಣಿಯು ಮಾಡಬೇಕಾದ ದೈವಪ್ರಾರ್ಥನೆ, ಗುರುಜನಾಭಿ ವಂದನೆ, ಹಿತಬಂಧುವರ್ಗದಲ್ಲಿ ನಿವೇದನೆ, ಇವುಗಳನ್ನು ಯಥೋಚಿತವಾಗಿ ನೆರವೇರಿಸುವುದೇ ಸಾಯಂಕಾಲ ನಾಲ್ಕುಘಂಟೆಯಾಗಿದ್ದಿತು. ಅಷ್ಟರಲ್ಲಿಯೇ ಬಂದಿದ್ದವರೆಲ್ಲರೂ ಸುಖಭೋಜನ ತಾಂಬೂಲಾದಿಗಳಿಂದ ಸಂತೃಪ್ತರಾಗಿದ್ದರು ವಿರಾಗಿಣಿ ಮಾತ್ರ ನಿರಾಹಾರೆ.

ನಿರ್ಣಯಿಸಲ್ಪಟ್ಟ ಸುಮುಹೂರ್ತವೂ ಸನ್ನಿಹಿತವಾಯ್ತು. ವಿರಾಗಿಣಿಯೂ ಕರೆತರಲ್ಪಟ್ಟು ರಘುನಾಥ ಚಿದಾನಂದರ ಮುಂದೆ ನಿಂದು ಒಮ್ಮೆ ತಲೆಯೆತ್ತಿ ಸಭಿಕರನ್ನೆಲ್ಲಾ ನೋಡಿ ತಲೆಬಾಗಿದಳು. ರಘುನಾಥನು ಎದ್ದು ನಿಂತು ಸಭಿಕರನ್ನು ಅಭಿನಂದಿಸಿ,—"ದೇಶಬಾಂಧವರೇ! ಧರ್ಮಭಗಿನಿಯರೇ!! ಇಂದು, ನಮ್ಮೆಲ್ಲರನ್ನೂ ಒಂದೆಡೆಯಲ್ಲಿ ಸೇರುವಂತೆ ಮಾಡಿರುವ ಪರಮಾತ್ಮನನ್ನೂ ಅವ್ಯಾಜ ವಾತ್ಸಲ್ಯ ಪ್ರೇರಿತರಾಗಿ ಸಾಕ್ಷಾತ್ಕರಿಸಿರುವ ನಿಮ್ಮಗಳನ್ನೂ ಮನಃಪೂರ್ವಕವಾಗಿ ವಂದಿಸುವೆನು. ದೇಶವತ್ಸಲರಾದ ತಮ್ಮಗಳ ಸಕೃತ್ಸಹವಾಸ ಲಾಭವನ್ನು ಹೊಂದಿಸಿರುವ ಈ ಸುದಿನವನ್ನು ನಾನೆಂದೂ ಮರೆಯಲಾರೆನು. ನಿಮ್ಮಗಳ ಸಮಕ್ಷಮದಲ್ಲಿ ಸಂಭಾಷಿಸುವಂತೆ ಪ್ರೇರಿಸುತ್ತಿರುವ ನನ್ನ ಸಂತೋಷವಿಷ್ಟೇಸರಿಯೆಂದು ತಿಳಿಯಹೇಳಲಾರೆನು. ಒಟ್ಟಿನಲ್ಲಿ ಹೇಳುವೆನೇನೆಂದರೆ—

ಕೃಪೆಮಾಡಿ ತಾವೆಲ್ಲರೂ ಈ ಮಂದಿರಪ್ರವೇಶ ಮಹೋತ್ಸವವನ್ನು ನೆರೆವೇರಿಸಲು ಬಂದಿರುವಿರಿ? ಇಂತಿರುವ ನಿಮ್ಮಲ್ಲಿ ಈ ಮಂದಿರಸ್ಥಾಪನೆಯ ಸಂಕಲ್ಪವೇನೆಂಬುದನ್ನೂ, ಮುಂದೆ ನಡೆಯಬೇಕಾಗಿರುವ ಕಾರ್ಯಕ್ರಮಗಳೇನೆಂಬುದನ್ನೂ ಸಾವಧಾನದಿಂದ ಅವಧರಿಸಬೇಕಾಗಿ ಪ್ರಾರ್ಥಿಸುವೆನು!

ಬಹುಕಾಲದಿಂದ ಪ್ರಚಾರಕ್ಕೆ ಬರುತ್ತಿರುವ ಬ್ರಹ್ಮಜ್ಞಾನ ಬೋಧೆಯನ್ನು ಕುರಿತು, ನೀವೆಲ್ಲರೂ ತಿಳಿದೇ ಇರುವಿರಿ? ಬ್ರಹ್ಮ ಜ್ಞಾನಸಂಬಂಧವಾದ ವಿಶ್ವಪ್ರೀತಿ ತತ್ವವನ್ನೂ, ಪ್ರೀತಿನಿರೂಪಣಕ್ಕೆ ಸಹಕಾರಿಯಾದ ಭ್ರಾತೃಸಂಬಂಧ ಮಹತ್ವವನ್ನೂ ತಕ್ಕಷ್ಟು ವಿಚಾ ರಮಾಡಿಯೂ, ಮಾಡುತ್ತೆಯೂ ಇರುವಿರಿ! ಆದರೆ, ಈವರೆಗೆ ನಡೆ ದುಬಂದಿರುವ ವಿಚಾರ ವಿಮರ್ಶೆಯಿಂದ ಫಲವೇನಾಗಿರುವುದೆಂಬು ದನ್ನೇ ಇಲ್ಲಿ ವಿಚಾರಮಾಡತಕ್ಕುದಾಗಿದೆ. ಏಕೆಂದರೆ—

ಈವರೆಗೂ ನಡೆದ ಬೋಧೆ, ನಮ್ಮ ಪುರುಷವರ್ಗದಲ್ಲಿ ಕೆಲ ಕೆಲವರ ವಾಗ್ದ್ವಾರದಿಂದ ಮಾತ್ರವೇ ಹೊರಹೊರಟು ತಿರುತಿರು ಗುತ್ತಿರುವುದಲ್ಲದೆ ಪುರುಷಸಾಮಾನ್ಯದ ಹೃತ್ಕೋಶವನ್ನು ಮುಟ್ಟಿ ರುವುದಾಗಲೀ ಸ್ತ್ರೀವರ್ಗದ ಕರ್ಣದ್ವಾರವನ್ನಾದರೂ ಸಮೀಪಿಸಿ ರುವುದಾಗಲೀ ತಿಳಿಯುತ್ತಿಲ್ಲ. ಹೀಗಾಗಿರಲು ಕಾರಣವೇನಿರಬೇ ಕೆಂಬುದನ್ನು ವಿಚಾರಮಾಡಹೋದರೆ, ನಮ್ಮ ಭ್ರಾತೃವರ್ಗದಲ್ಲಿ ಸುಧಾರಣೆಗೆಂದು ಹೊಡೆದಾಡುತ್ತಿರುವವರಾರೋ ಅವರೇ ತಮ್ಮ ವಾಚಾಲತೆಯನ್ನು ತಮ್ಮ ನಡೆಯಲ್ಲಿಯೂ ಅನುವರ್ತಿಸಲಾರದೆ ಕೇವಲ ವಾಗಾಡಂಬರದಲ್ಲೇ ನಿಂತಿರುವುದೂ ಅವರು ತಮ್ಮತಮ್ಮ ಪೋಷ್ಯವರ್ಗಕ್ಕೆ ಸೇರಿದ ಸ್ತ್ರೀಜನಾಂಗದಲ್ಲಿ ತೋರುತ್ತಿರುವ ನಿಷ್ಠುರ, ತಿರಸ್ಕಾರಗಳೂ ಕಾರಣವೆಂದು ತಿಳಿಯಬರುತ್ತಿದೆ.

ದೇಶೋನ್ನತಿಗೆ ದೇಶೀಯರಲ್ಲಿ ಸುಖ-ಸಮಾಧಾನಗಳು ನೆಲೆ ಗೊಳ್ಳಬೇಕು. ಸುಖಸಮಾಧಾನವೆಂಬುದು ಕೇವಲ ಪುರುಷ ವರ್ಗದವರ ಪ್ರಯತ್ನೋದ್ದೇಶಕ್ಕೆ ಸಾಧ್ಯವಾಗದು. ಸ್ತ್ರೀಜನಾಂ ಗದ ಸಹಾನುಭೂತಿಯಿಲ್ಲದೆ ಸುಖಕ್ಕೆ ಅವಕಾಶವಿಲ್ಲ. ಅವರಲ್ಲಿ ಸಹಾನುಭೂತಿಯೆಂಬುದು, ಸುಶಿಕ್ಷಿತ ಸತಿಯರ ನಿಷ್ಕಲಂಕಪ್ರೇಮ

ವನ್ನೇ ಆಶ್ರಯಿಸಿರತಕ್ಕುದು ! ಅಂತಹ ನಿರ್ಮಲ ಸ್ನೇಹವೆಂಬುದು ವೃದ್ಧಿಹೊಂದಬೇಕಾದರೆ ಸ್ತ್ರೀಸಾಮಾನ್ಯದಲ್ಲಿ ವಕ್ರಿಸಿರುವ, " ಅಭಿಮಾನ, ಅಸೂಯೆ, ಆಲಸ್ಯ " ಗಳೆಂಬ ಪ್ರಬಲ ರೋಗಗಳನ್ನು ಸಮೂಲವಾಗಿ ಕಿತ್ತು ಬಿಸುಟ ಬಳಿಕ ಆರ್ಯಮಹಿಳಾಸಂಮ್ಮೇಳನವೂ ಏಳಿಗೆ ಹೊಂದುವುದಲ್ಲದೆ, ಅವರು ಧರ್ಮಕಾರ್ಯದಲ್ಲಿ ಸಹಕರಿಸುವಂತಹ ಪ್ರೇಮಮಯಪಾತ್ರೆಯರೂ ಆಗಿ ಪ್ರಕಾಶಿಸುವರು. ನಿದರ್ಶನಕ್ಕೆ ಬೇಕೆಂದು ಹೇಳುವವರು ನಮ್ಮ ವಿರಾಗಿಣಿಯನ್ನೇ ನೋಡಲಿ !

ಈಕೆ, ಬಾಲ್ಯದಿಂದ ಇಂದಿನವರೆಗೆ ಮಾಡಿದ ಅಭ್ಯಾಸವೂ, ವ್ಯಾಸಂಗವೂ ಮತ್ತು ವಿಚಾರವಿಮರ್ಶೆಯೂ ತನ್ಮೂಲಕ ಲಬ್ಧವಾಗಿರುವ ದಿವ್ಯಜ್ಞಾನವೂ ಜ್ಞಾನಪ್ರಭಾವದಿಂದಾಗಿರುವ ವಿಶ್ವಪ್ರೀತಿಯೂ, ನಮ್ಮ ಸೋದರೀವರ್ಗಕ್ಕೆ ಪರಮಾದರ್ಶ ಜೀವನವಾಗಿರುವುದು. ಅಷ್ಟೇ ಅಲ್ಲ ! ಪುರುಷ ಬಂಧುಗಳು ಕೂಡ ಜಾಗರೂಕರಾಗಿ ಕರ್ತವ್ಯದಲ್ಲಿ ನಿರತರಾಗಲು ಸಹಕರಿಸುತ್ತಿರುವರೆಂದು ಹೇಳಬಹುದು. ಪ್ರಕೃತದಲ್ಲಿ ಮೇಲೆ ವಿವರಿಸಿರುವಂತೆ, ಸ್ತ್ರೀಜನಾಭ್ಯುದಯಕ್ಕೂ ದೇಶಭಾಷೋನ್ನತಿಗೂ ತಕ್ಕಷ್ಟು ಸಾಧನವಾಗಲೆಂಬ ಉದ್ದೇಶದಿಂದ ಈ ಮಂದಿರವು ಸ್ಥಾಪಿತವಾಗಿರುವುದು. ಇಲ್ಲಿ ವ್ಯಾಸಂಗಿಸುವ ನಮ್ಮ ಸೋದರಿಯರನ್ನು ತಕ್ಕ ರೀತಿ ನೀತಿ ಮಾರ್ಗದಲ್ಲಿ ಸುಧಾರಿಸುವುದಕ್ಕಾಗಿ ವಿರಾಗಿಣಿಯನ್ನೇ ಇಲ್ಲಿಯ ಮುಖ್ಯೋಪಾಧ್ಯಾಯಿನಿಯಾಗಿಯೂ, ಮಂದಿರಾಧಿಕಾರಿಣಿಯಾಗಿಯೂ ನೆಲೆಗೊಳಿಸಬೇಕೆಂದು ನಿಶ್ಚಯಿಸಿರುವುದು. ಅಲ್ಲದೆ ಇನ್ನೂ ಜಿಜ್ಞಾಸುಗಳಾದ ಬ್ರಹ್ಮಚಾರಿಗಳೂ, ವಿಯೋಗಿನಿಯರೂ, ಅಭಾಗಿನಿಯರೂ ಬೇಕಾದರೂ ಇಲ್ಲಿಯೇ ವಿರಾಗಿಣೀ ಸಹಚರ್ಯೆಯ

ಲ್ಲಿದ್ದು, ಬ್ರಹ್ಮಜ್ಞಾನಬೋಧೆಯನ್ನು ಶ್ರೀಶಂಕರನಾಥಸ್ವಾಮಿಯಿಂದ ಹೊಂದುವುದಕ್ಕೂ ಅವಕಾಶವುಂಟು: ಅಲ್ಲದೆ ಇಲ್ಲಿರುವ ಕಾರ್ಯನಿರ್ವಾಹಕರೇ ಮೊದಲಾದವರು, ಪುರುಷ ಬಂಧುಗಳಾದರೂ, ಅವರು ತಮ್ಮ ಧರ್ಮಭಗಿನಿಯರಲ್ಲಿ ಸಹಜ ಭ್ರಾತೃಭಗಿನೀ ವಾತ್ಸಲ್ಯದಿಂದಲ್ಲದೆ ವಿಕಲ್ಪಭಾವದಿಂದ ವರ್ತಿಸತಕ್ಕವರಲ್ಲವೆಂದೂ ಹೇಳಲು ಅವ ಆಕ್ಷೇಪವೂ ಇರುವುದಿಲ್ಲ.

ಮುಖ್ಯವಿಚಾರವೇನೆಂದರೆ :—ಶಾಂತಿ-ಧೃತಿ-ಕ್ಷಮೆ-ದಮ-ಸತ್ಯ-ಶೌಚಾದಿ ಸಕಲ ಗುಣೋಪೇತವಾದ ಸತ್ವಸ್ವರೂಪವೇ ಸಾರ್ವಭೌಮ ಪದವಿಯನ್ನು ಹೊಂದತಕ್ಕುದೆಂಬುದನ್ನು ಪ್ರದರ್ಶಿಸಬೇಕಾದುದರಿಂದ ಈ ನಮ್ಮ ವಿರಾಗಿಣಿಯನ್ನು ಇಲ್ಲಿ ಈ ಮಂದಿರಾಧ್ಯಕ್ಷಳನ್ನಾಗಿ ಮಾಡಲು ತಮ್ಮೆಲ್ಲರ ಅಭಿಪ್ರಾಯವನ್ನು ಕೇಳುವೆನು, ಎಂದು ಕೈಮುಗಿದನು. ಸಭಿಕರೆಲ್ಲರೂ ಏಕವಾಕ್ಯತೆಯಿಂದ, "ಸಾಧು! ಸಾಧು!! ಪರಮಸಾಧು!!! ನಾವೆಲ್ಲರೂ ಸಮ್ಮತಿಸಿರುವೆವು. ಅವಶ್ಯವಾಗಿಯೂ ಇದು ಮಾಡತಕ್ಕುದೇ!" ಎಂದು ಹೇಳಿದರು.

**ರಘು:**—(ಚಿದಾನಂದನನ್ನು ಕುರಿತು) "ಅಯ್ಯಾ! ಇನ್ನು ನಿನ್ನ ಹಿಂದಿನ ಸಂದೇಶವನ್ನು ನೆರವೇರಿಸಬಹುದು?"

**ಚಿದಾನಂದ:**—(ತಲೆದೂಗಿ) ಎದ್ದುನಿಂತು ವಿರಾಗಿಣಿಯ ಮುಡಿದ ಡಹಿ) "ತಾಯಿ! ಇದೋ ನನಗಾಗಿ ವಹಿಸಬೇಕಾಗಿರುವ ಪದವಿ ಸಾದರದಿಂದಿದನ್ನು ಪರಿಗ್ರಹಿಸು! ನನ್ನ ಸಂಕಲ್ಪವನ್ನು ರಘುನಾಥನೇ ಸಾಫಲ್ಯಗೊಳಿಸಿದನಾದರೂ ನಿರೂಪಕ್ಕೆ ನನ್ನನ್ನೇ ಮುಂದುಮಾಡಿರುವುದರಿಂದ ಈಗ ರಘುನಾಥನ ಸಂಕಲ್ಪಸಿದ್ಧಿಗೂ, ದೇಶಬಾಂಧವರ ಅಭಿನಂದನ

ಸಾರ್ಥಕ್ಯತೆಗೂ, ನೀನೀಸ್ಥಾನವನ್ನು ಪರಿಗ್ರಹಿಸು! ಕರ್ತವ್ಯ ಕ್ಷಮತೆಯನ್ನು ವಹಿಸಿ ದಕ್ಷಳೆನ್ನಿಸು!! ಭಗವತೀ ಮಾತೃಕಟಾಕ್ಷದಿಂದ ಚಿರಕಾಲ ಪ್ರಕಾಶಿಸು."

ವಿರಾ.—(ವಿನಯದಿಂದ,) "ಅಪ್ಪಾ! ನಾನು ಕೇವಲ ಬಾಲಿಕೆ. ನನಗಾವ ಪ್ರತಿಭಾಶಕ್ತಿಯುಂಟೆಂದು ಗುರುಜನರು ಸ್ತುತಿಸಬೇಕೋ ತಿಳಿಯೆನು. ಹೇಗೂ ಈ ಸ್ತುತಿವಚನವು ಭಗವತಿಗೆ ನಿವೇದಿತವಾಗಿರಲಿ! ನನಗೆ ತಮ್ಮ ಆಜ್ಞಾವಚನವು ಶಿರೋಧಾರ್ಯವು. ಆದುದರಿಂದ ಅದನ್ನು ಇಂದು ವಹಿಸಲು ಸಂಕಲ್ಪಪೂರ್ವಕವಾಗಿ ಸಮ್ಮತಿಸುವೆನು ಮುಂದೆಯೂ ತಮ್ಮ ಶಾಸನಬಲವೇ ನನ್ನನ್ನು ಕೃತಾರ್ಥಳನ್ನಾಗಿ ಮಾಡುತ್ತಿರಲೆಂದೂ ಪ್ರಾರ್ಥಿಸುತ್ತಿರುವೆನು" (ಎಂದು ನಿಯಮಿತ ಸ್ಥಾನದಲ್ಲಿ ಕೈಯಿರಿಸಿ ನಿಂದಳು.)

ರಘು:—(ಸಂಭ್ರಮದಿಂದ) ಇಂದೇ ಸಂಕಲ್ಪಸಿದ್ಧಿಯಿಂದ ಧನ್ಯನಾದೆನು? ಇಂದೇ ಕೃತಕೃತ್ಯನೆನಿಸಿದೆನು!! ಈಗಲೇ ಭಗವತ್ಕೃಪಾಪಾತ್ರನಾದೆನು. ಹೇ ಭಗವನ್! ಈ ದಯಾವರ್ಷವೇ ಸ್ಥಿರವಾಗಿರಲಿ.

ಮತ್ತೊಂದು ಪ್ರಾರ್ಥನೆ—

ಹರಿರ್ದದಾತಿಭದ್ರಾಣಿ | ಮಾಂಗಲ್ಯಸ್ತುತಿಸಂಸ್ತುತಃ ||
ಕರೋತ್ಯಖಿಲರೂಪೈಸ್ತು | ರಕ್ಷಾಮಕ್ಷತಶಕ್ತಿಭೃತ್ ||

(ಮಾಂ ವಿ ಸ್ತೋತ್ರಂ, ೫೦)

ಸಭಿಕರೆಲ್ಲರ ಕರತಾಡದೊಡನೆ "ಧನ್ಯ" ಸತ್ವಸ್ವರೂಪ! ಧನ್ಯಧನ್ಯ!! ಎಂಬ ಧನ್ಯವಾದದಿಂದ ಮಂದಿರವೇ ನಲಿನಲಿದಾಡಿತು

ಕೃಷ್ಣಾರ್ಪಣಮಸ್ತು.